ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಕರಾವಳಿಯಲ್ಲೀಗ ಕಂಬಳದ ಋತು. ಅದರ 'ಸೆಲೆಬ್ರಿಟಿ'ಗಳ ಲೋಕದಲ್ಲೊಂದು ಸುತ್ತು



ಕ್ಯಾನ್ಸರ್ ಜಾಗೃತಿ ಜಾಥಾಗೆ ಅಮೋಘ ಬೆಂಬಲ 7
ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭರವಸೆ
'ಕನಸು ಕಾಣುವ ಕಾಲ ಕಾಂಗ್ರೆಸ್‌ಗೆ ಮುಗಿದಿದೆ' 5
'ಅಲ್ಪಸಂಖ್ಯಾತರ ಅಭಿವೃದ್ಧಿಗೆ ₹ 10 ಸಾವಿರ ಕೋಟಿ' 5

ಕಾಡಿನ ಒತ್ತುವರಿಗೆ ನಲುಗಿದ ವನ್ಯಜೀವಿಗಳು

ಸಂಘರ್ಷ ಸಾಕು; ಸಂರಕ್ಷಣೆ ಬೇಕು

38,724 ಚ.ಕಿ.ಮೀ ಕರ್ನಾಟಕದ ಒಟ್ಟು ಅರಣ್ಯ ಪ್ರದೇಶ	20.19% ರಾಜ್ಯದ ಶೇಕಡವಾರು ಅರಣ್ಯ	90 ಸಾವಿರ ಎಕರೆ– ಕಾಡಂಚಿನಲ್ಲಿ ಒತ್ತುವರಿಯಾಗಿರುವ ಕಂದಾಯ ಜಮೀನು (ಕೊಡಗು, ಚಿಕ್ಕಮಗಳೂರು, ಹಾಸನ)	1,15,089 ಎಕರೆ ಮೂರು ಎಕರೆಗಿಂತ ಕಡಿಮೆ ಒತ್ತುವರಿಯಾಗಿರುವ ಅರಣ್ಯ ಜಮೀನು

ಮಾಹಿತಿ: ಭಾರತೀಯ ಅರಣ್ಯ ಸರ್ವೇಕ್ಷಣಾ ಸಂಸ್ಥೆ, ಕಂದಾಯ ಹಾಗೂ ಅರಣ್ಯ ಇಲಾಖೆ

• ಕೆ.ಎಚ್. ಓಬಳೇಶ್

ಬೆಂಗಳೂರು: ರಾಜ್ಯದಲ್ಲಿ ಗುಣಮಟ್ಟ ಕಳೆದುಕೊಂಡಿರುವ ಅರಣ್ಯಗಳು ಹಾಗೂ ಛಿದ್ರಗೊಂಡಿರುವ ಪ್ರಾಣಿಗಳ ನೆಲೆಗಳಿಂದ ಮಾನವ–ವನ್ಯಜೀವಿಗಳ ನಡುವೆ ಸಂಘರ್ಷ ತಾರಕಕ್ಕೇರಿದೆ. ಮುಂದಿನ ಪೀಳಿಗೆಗೂ ಹುಲಿ, ಚಿರತೆ, ಆನೆ, ಕರಡಿಯಂತಹ ಪ್ರಾಣಿಗಳನ್ನು ಉಳಿಸುವ ಬದಲು ಅವುಗಳ ಬಗ್ಗೆ ಅಪನಂಬಿಕೆ, ಭಯ ಹುಟ್ಟಿಸುವ ವಾತಾವರಣ ಸೃಷ್ಟಿಯಾಗಿದೆ. ಇದಕ್ಕೆ ವನ್ಯಜೀವಿಗಳ ಸಂರಕ್ಷಣೆ ಬಗ್ಗೆ ಆಳುವವರು ತಳೆದಿರುವ ಕುರುಡು ಧೋರಣೆಯೇ ಕಾರಣ.

ಕಾಡು ಉಸಿರಾಡಲು ಅದಕ್ಕೆ ಮತ್ತಷ್ಟು ಜಾಗ ಬೇಕು. ಇದಕ್ಕಾಗಿ ಕಾಡಂಚಿನ ಕುರುಚಲು ಪ್ರದೇಶ, ಕಂದಾಯ ಜಮೀನನ್ನು ಕಾಪು ವಲಯಗಳನ್ನಾಗಿ(ಬಫರ್ ಜೋನ್) ಪರಿವರ್ತಿಸಬೇಕು. ಒತ್ತುವರಿ ಜಮೀನಿನ

ಒಳನೋಟ
ಮಾನವ–ವನ್ಯಜೀವಿ ಸಂಘರ್ಷ
ಪ್ರತಿಕ್ರಿಯಿಸಿ: 9606038256
feedback@prajavani.co.in

ತೆರವೂ ನಡೆಯಬೇಕು. ಆದರೆ, ಈ ಕುರಿತು ರಾಜ್ಯ ಸರ್ಕಾರದ್ದು ದ್ವಂದ್ವ ನೀತಿ. ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಯ ಕಾಡಂಚಿನಲ್ಲಿ ಒತ್ತುವರಿಯಾಗಿರುವ ಸುಮಾರು 90 ಸಾವಿರ ಎಕರೆ ಕಂದಾಯ ಜಮೀನನ್ನು ಒತ್ತುವರಿದಾರರಿಗೆ 30 ವರ್ಷ ಗುತ್ತಿಗೆ ನೀಡಲು ಹೊರಟಿರುವ ಕಂದಾಯ ಸಚಿವ ಆರ್.ಅಶೋಕ ಧೋರಣೆಯೂ ಇದಕ್ಕೊಂದು ತಾಜಾ ನಿದರ್ಶನ.

1978ರ ಏಪ್ರಿಲ್ 27ರಂದು ಸುಪ್ರೀಂ ಕೋರ್ಟ್ ನೀಡಿರುವ ಆದೇಶದನ್ವಯ ಹೆಚ್ಚುವರಿ ಅರಣ್ಯ ಭೂಮಿಯ ಒತ್ತುವರಿಗೆ ಅವಕಾಶವಿಲ್ಲ. ರಾಜ್ಯದಲ್ಲಿ ಈ ಆದೇಶದ ಬಳಿಕವೂ 3 ಎಕರೆಗಿಂತ(ಒತ್ತುವರಿ ಮತ್ತು ಪಟ್ಟಾ ಭೂಮಿ ಸೇರಿ) ಕಡಿಮೆ ಒತ್ತುವರಿ ಮಾಡಿಕೊಂಡಿರುವ 86,352 ಪ್ರಕರಣಗಳಿದ್ದು, ಒಟ್ಟು 1,15,089.26 ಎಕರೆ ಒತ್ತುವರಿಯಾಗಿದೆ.

'ಈ ಒತ್ತುವರಿದಾರರನ್ನು ಒಕ್ಕಲೆಬ್ಬಿಸಬಾರದು. ಅವರಿಗೆ ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಪ್ಯಾಕೇಜ್ ಕಲ್ಪಿಸುವ ಬಗ್ಗೆ ಪರಿಶೀಲಿಸಲಾಗುವುದು' ಎಂದು ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು, ಪಿಸಿಸಿಎಫ್(ಅರಣ್ಯ ಪಡೆ)ಗೆ ಪತ್ರ ಬರೆದಿದ್ದಾರೆ.



ಸಕಲೇಶಪುರದಲ್ಲಿ ಇತ್ತೀಚೆಗೆ ನಡೆದ ಆನೆ ಕಾರ್ಯಾಚರಣೆ

6ನೇ ಪುಟ ನೋಡಿ

ಚಿರತೆ ಪುನರ್ವಸತಿಗೆ ಗುಜರಾತ್ ಸೂತ್ರ




ಗುಜರಾತ್‌ನ ಜಾಮ್‌ನಗರದಲ್ಲಿ ಚಿರತೆಗಳಿಗಾಗಿಯೇ ಪುನರ್ವಸತಿ ಕೇಂದ್ರ ತೆರೆಯಲಾಗಿದೆ. 'ಗ್ರೀನ್ಸ್ ಜಿಯಾಲಾಜಿಕಲ್ ರೆಸ್ಕ್ಯೂ ಆ್ಯಂಡ್ ರಿಯಾಬಿಲಿಟೇಷನ್ ಕಿಂಗ್‌ಡಂ' ಹೆಸರಿನ ಈ ಕೇಂದ್ರ ರಿಲಯನ್ಸ್ ಇಂಡಸ್ಟ್ರಿಯ ಉಸ್ತುವಾರಿಯಲ್ಲಿದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿ(ಪಿಪಿಪಿ) ರೂಪಿಸಿರುವ ದೇಶದ ಮೊದಲ ಪುನರ್ವಸತಿ ಕೇಂದ್ರ ಇದು.

ಇದೇ ಮಾದರಿಯಲ್ಲಿ ಕರ್ನಾಟಕದಲ್ಲೂ ಕೇಂದ್ರ ತೆರೆಯಲು ನಿರ್ಧರಿಸಲಾಗಿದೆ. ಅಧಿಕಾರಿಗಳ ತಂಡ ಅಲ್ಲಿಗೆ ಭೇಟಿ ನೀಡಿ ಅಧ್ಯಯನವನ್ನೂ ನಡೆಸಿದೆ. ಶೀಘ್ರವೇ, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು.

ಬನ್ನೇರುಘಟ್ಟದಲ್ಲಿ ಸದ್ಯಕ್ಕೆ 42 ಚಿರತೆಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಇಲ್ಲಿ ಒಟ್ಟಾರೆ 110 ಚಿರತೆಗಳಿಗೆ ನೆಲೆ ಕಲ್ಪಿಸಲು ಸಿದ್ಧತೆ ನಡೆದಿದೆ. ಕೇಂದ್ರದ 2011ರ ಮಾರ್ಗಸೂಚಿಯನ್ವಯ ಚಿರತೆ ಸೆರೆಗೆ ಪರಿಣತರ ತಂಡ ರಚಿಸಲಾಗಿದೆ. ಮೈಸೂರು, ಮಂಡ್ಯ, ರಾಮನಗರ ಜಿಲ್ಲೆ ಒಳಗೊಂಡಂತೆ ಚಿರತೆ ಕಾರ್ಯಪಡೆ ರಚಿಸಲಾಗಿದೆ.

ಕುಮಾರ್ ಪುಷ್ಕರ್, ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)

ಕಾಡು ವಿಸ್ತರಣೆಯೇ ಪರಿಹಾರ



ಕಾಡಂಚಿನವರೆಗೂ ಮಾನವನ ಚಟುವಟಿಕೆಗಳು ವಿಸ್ತರಿಸಿವೆ. ಇದು ಸಂಘರ್ಷ ತಂದೊಡ್ಡಿದೆ. ಪಾಳುಬಿದ್ದ ಕಂದಾಯ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿ ಕಾಡು ವಿಸ್ತರಿಸುವ ಕೆಲಸವಾಗಬೇಕಿದೆ.

ವಂಶಾಭಿವೃದ್ಧಿಯೇ ಜೀವಸಂಕುಲದ ಅಂತಿಮ ಗುರಿ. ಇದಕ್ಕಾಗಿ ಅವುಗಳಿಗೆ ಕಾಡು ಅತ್ಯಗತ್ಯ. ಜೈವಿಕ ಒತ್ತಡದಿಂದ ಪ್ರತ್ಯೇಕ ನೆಲೆಯ ಹುಡುಕಾಟ ನಡೆಸುವ ಹುಲಿಗಳಿಗೆ ಹೊಸ ಕಾಡುಗಳಿಲ್ಲ. ಕಾಫಿ ತೋಟಗಳು, ಅರಣ್ಯದಂಚಿನ ಪಾಳುಬಿದ್ದ ಜಮೀನುಗಳೇ ಆವಾಸವಾಗುತ್ತಿವೆ. ಕಣ್ಣುಬಿಟ್ಟ ಹುಲಿ ಮರಿಗಳಿಗೆ ಕಾಫಿ ತೋಟ, ಪಾಳು ಜಮೀನುಗಳೇ ಕಾಡುಗಳಂತೆ ಭಾಸವಾಗುತ್ತಿವೆ! ಬೆಟ್ಟಗುಡ್ಡಗಳಲ್ಲಿ ನೆಲೆ ಕಳೆದುಕೊಂಡ ಚಿರತೆ ಮರಿಗಳಿಗೆ ಕಬ್ಬಿನ ಗದ್ದೆಗಳೇ ಕಾಡಿನಂತೆ ಕಾಣುತ್ತಿವೆ. ಮಾನವನ ತಿಳಿವಳಿಕೆಗೆ ನಿಲುಕುವ ಅರಣ್ಯದ ಗಡಿ, ಬೇಲಿಯು ಹುಲಿ, ಚಿರತೆ, ಆನೆ, ಕರಡಿಗಳಿಗೆ ಅರ್ಥವಾಗುವುದಿಲ್ಲ. ಈ ಸತ್ಯ ಸರ್ಕಾರಕ್ಕೂ ತಿಳಿಯುತ್ತಿಲ್ಲ.


ಕೃಪಾಕರ, ವನ್ಯಜೀವಿ ತಜ್ಞ

ಒಳ ಪುಟ
ಮಗು ನಿರೀಕ್ಷೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತ ದಂಪತಿ 8

ಚಿನಕುರಳಿ

ಪ್ರಕಾಶ್ ಶೆಟ್ಟಿ





ವಾಣಿ ಜಯರಾಂ

ಖ್ಯಾತ ಗಾಯಕಿ ವಾಣಿ ಜಯರಾಂ ಇನ್ನಿಲ್ಲ

ಚೆನ್ನೈ (ಪಿಟಿಐ): ಖ್ಯಾತ ಹಿನ್ನೆಲೆ ಗಾಯಕಿ, ಪದ್ಮ ಭೂಷಣ ಪ್ರಶಸ್ತಿ ಪುರಸ್ಕೃತೆ ವಾಣಿ ಜಯರಾಂ (77) ಅವರು ಇಲ್ಲಿಯ ಅಪಾರ್ಟ್‌ಮೆಂಟ್‌ನಲ್ಲಿ ಶನಿವಾರ ನಿಧನರಾದರು.

ಅವರು ಹಿಂದಿಯ ಪ್ರಸಿದ್ಧ ಗೀತೆ 'ಬೋಲೆ ರೆ ಪಪೀಹರ' ಸೇರಿ 19 ಭಾಷೆಗಳಲ್ಲಿ 10,000ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಗಾಯನಕ್ಕಾಗಿ ಅವರು ಮೂರು ಬಾರಿ ರಾಷ್ಟ್ರಪ್ರಶಸ್ತಿ ಪಡೆದಿದ್ದಾರೆ.

ವಾಣಿ ಅವರು ಇಲ್ಲಿಯ ಅಪಾರ್ಟ್‌ಮೆಂಟ್‌ನಲ್ಲಿ ಒಬ್ಬರೇ ವಾಸವಿದ್ದರು. ಮನೆಗೆಲಸದ ಸಹಾಯಕಿ ಶನಿವಾರ ಅವರ ಮನೆಯ ಕರೆಗಂಟೆಯನ್ನು ಹಲವು ಬಾರಿ ಒತ್ತಿದರೂ ಬಾಗಿಲು ತೆರೆಯದಿದ್ದಾಗ, ಆಕೆ ವಾಣಿ ಸಂಬಂಧಿಗೆ ವಿಷಯ ತಿಳಿಸಿದ್ದಾರೆ. ಸಂಬಂಧಿಗಳ ಸಮ್ಮುಖದಲ್ಲಿ ಪೊಲೀಸರು ಮನೆ ಬಾಗಿಲು ಒಡೆದಾಗ ಅವರು ಮೃತಪಟ್ಟಿರುವುದು ತಿಳಿದುಬಂತು. ಕುಸಿದು ಬಿದ್ದು ಅವರು ಮೃತಪಟ್ಟಿರಬೇಕು ಎಂದು ಪೊಲೀಸರು ಶಂಕಿಸಿದ್ದಾರೆ.

ವಾಣಿ ಅವರ ಪತಿ ಜಯರಾಂ ಅವರು 2018ರಲ್ಲಿ ಮೃತಪಟ್ಟಿದ್ದರು. ಅವರಿಗೆ ಮಕ್ಕಳಿರಲಿಲ್ಲ.

ನುಡಿ ನಮನ 8

ಪ್ರಧಾನ್: ಬಿಜೆಪಿ ರಾಜ್ಯ ಚುನಾವಣಾ ಉಸ್ತುವಾರಿ

ನವದೆಹಲಿ (ಪಿಟಿಐ): ಮುಂಬರುವ ಕರ್ನಾಟಕ ವಿಧಾನಸಭೆ ಚುನಾವಣೆಗೆ ತನ್ನ ಉಸ್ತುವಾರಿಯನ್ನಾಗಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ಸಹ ಉಸ್ತುವಾರಿಯನ್ನಾಗಿ ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅವರನ್ನು ಬಿಜೆಪಿ ನೇಮಿಸಿದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಸಲಹೆಯಂತೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಶನಿವಾರ ಈ ನೇಮಕದ ಆದೇಶವನ್ನು ಹೊರಡಿಸಿದ್ದಾರೆ. ಈ ಆದೇಶ ತಕ್ಷಣದಿಂದಲೇ ಜಾರಿಗೆ ಬರಲಿದೆ.

ಜಾಮಿಯಾ ನಗರ ಹಿಂಸಾಚಾರ: ಖುಲಾಸೆ

ನವದೆಹಲಿ: ಜಾಮಿಯಾ ನಗರ ಹಿಂಸಾಚಾರ ಪ್ರಕರಣದಲ್ಲಿ ವಿದ್ಯಾರ್ಥಿ ಕಾರ್ಯಕರ್ತರಾದ ಶರ್ಜೀಲ್ ಇಮಾಮ್ ಮತ್ತು ಆಸಿಫ್ ಇಕ್ಬಾಲ್ ತನ್ಹಾ ಸೇರಿದಂತೆ 11 ಜನರನ್ನು ದೆಹಲಿ ನ್ಯಾಯಾಲಯ ಶನಿವಾರ ಖುಲಾಸೆಗೊಳಿಸಿದೆ. 8

ಮತ್ತೊಂದು ಚೀನಿ ಶಂಕಿತ ಬೇಹುಗಾರಿಕೆ ಬಲೂನ್ ಪತ್ತೆ

ವಾಷಿಂಗ್ಟನ್ (ಪಿಟಿಐ): ಲ್ಯಾಟಿನ್ ಅಮೆರಿಕದಲ್ಲಿ ಚೀನಾದ ಮತ್ತೊಂದು ಶಂಕಿತ ಬೇಹುಗಾರಿಕೆಯ ಬಲೂನು ಹಾರಾಟ ನಡೆಸುತ್ತಿದೆ ಎಂದು ಪೆಂಟಗನ್ ತಿಳಿಸಿದೆ. 9

ಭಾರತದ ವರ್ಚಸ್ಸಿಗೆ ಧಕ್ಕೆ ಇಲ್ಲ: ನಿರ್ಮಲಾ

ಮುಂಬೈ (ಪಿಟಿಐ/ರಾಯಿಟರ್ಸ್): ಅದಾನಿ ಸಮೂಹವು ₹20 ಸಾವಿರ ಕೋಟಿ ಮೊತ್ತದ ಎಫ್‌ಪಿಒ ರದ್ದು ಮಾಡಿರುವುದರಿಂದ ಭಾರತದ ಆರ್ಥಿಕ ವರ್ಚಸ್ಸು ಕಡಿಮೆ ಆಗಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ಹೇಳಿದ್ದಾರೆ. 9

ಸಭಾಭವನ ನಿರ್ಮಾಣಕ್ಕೆ ಸಂಸದರ ನಿಧಿ ಬಳಕೆ

• ಪವನ್ ಕುಮಾರ್ ಎಚ್.

ಹುಬ್ಬಳ್ಳಿ: ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ (ಎಂಪಿಎಲ್‌ಎಡಿ) ನಿಧಿಯಲ್ಲಿ ಕೇಂದ್ರ ಸರ್ಕಾರ ನೀಡಿರುವ ಶೇ 70ರಷ್ಟು ಅನುದಾನವನ್ನು ರಾಜ್ಯದ ಬಹುತೇಕ ಲೋಕಸಭಾ ಸದಸ್ಯರು ಸಮುದಾಯ ಭವನಗಳನ್ನು ನಿರ್ಮಾಣ ಮಾಡಲು ಬಳಸಿದ್ದಾರೆ.

ಕೇಂದ್ರದ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು (ಎಂಎಸ್‌ಪಿಐ) 2016ರಲ್ಲಿ ಹೊರಡಿಸಿದ ಮಾರ್ಗಸೂಚಿಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಸಮುದಾಯಗಳಿಗೆ ಅಗತ್ಯವಿರುವ ಕಾಮಗಾರಿಗಳಿಗೆ ಪ್ರತಿ ವರ್ಷ ₹5 ಕೋಟಿ ಬಳಕೆ ಮಾಡಿಕೊಳ್ಳಲು ಅವಕಾಶ ನೀಡಿದೆ. ಸ್ವಚ್ಛ ಭಾರತ ಯೋಜನೆಯ ಧ್ಯೇಯೋದ್ದೇಶ, ಶಾಲೆ ಮತ್ತು ಸಾರ್ವಜನಿಕ ಶೌಚಾಲಯ ನಿರ್ಮಾಣ, ಮಳೆನೀರು ಸಂಗ್ರಹ ವ್ಯವಸ್ಥೆ, ಕೌಶಲ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆಗೆ ಹೆಚ್ಚು ಒತ್ತು ನೀಡಲು ಸೂಚಿಸಿದೆ. ಆದರೆ, ಹೆಚ್ಚಿನ ಸಂಸದರು ಸಮುದಾಯ ಭವನಗಳನ್ನು ನಿರ್ಮಿಸುತ್ತಿದ್ದಾರೆ.

2019–2022ರವರೆಗೆ ರಾಜ್ಯದ ಸಂಸದರಿಗೆ ಕೇಂದ್ರ ಸರ್ಕಾರ ₹336 ಕೋಟಿ ಬಿಡುಗಡೆ ಮಾಡಬೇಕಿತ್ತು. ಆದರೆ, ₹220 ಕೋಟಿ ಮಾತ್ರ ಬಿಡುಗಡೆ ಮಾಡಿದೆ. ಅದರಲ್ಲಿ 6,855 ಕಾಮಗಾರಿಗಳಿಗೆ ಸಂಸದರು ಶಿಫಾರಸು ಮಾಡಿದ್ದು, 6,493 ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ. ರಾಜ್ಯದ 28 ಸಂಸದರ ಪೈಕಿ 15 ಸಂಸದರು ಶೇ 40ಕ್ಕಿಂತ ಕಡಿಮೆ ಅನುದಾನ ಬಳಸಿದ್ದಾರೆ. ಆರು ಸಂಸದರು ಶೇ 50ಕ್ಕಿಂತ ಹೆಚ್ಚು ಅನುದಾನ ಬಳಕೆ ಮಾಡಿಕೊಂಡಿದ್ದಾರೆ.

ಕೋವಿಡ್ ಕಾರಣದಿಂದ ಕೇಂದ್ರ ಸರ್ಕಾರ 2020ರಲ್ಲಿ ಎಂಪಿಎಲ್‌ಎಡಿ ನಿಧಿ ಬಿಡುಗಡೆ ಮಾಡಿರಲಿಲ್ಲ. 'ಗ್ರಾಮಗಳಲ್ಲಿ ಸಮುದಾಯ ಭವನಗಳ ನಿರ್ಮಾಣಕ್ಕೆ ಮತದಾರರಿಂದ ಒತ್ತಡ ಬರುತ್ತವೆ. ಅವರ ಬೇಡಿಕೆಗಳಿಗೆ ಇಲ್ಲ ಎನ್ನಲು ಸಾಧ್ಯವಿಲ್ಲ. ಎಂಪಿಎಲ್‌ಎಡಿ ನಿಧಿಯನ್ನು ವಿವಿಧ ಅಭಿವೃದ್ಧಿ ಕಾರ್ಯಗಳಿಗೂ ಬಳಸಿದ್ದೇನೆ' ಎಂದು ಕೊಪ್ಪಳ ಸಂಸದ ಸಂಗಣ್ಣ ಕರಡಿ ಹೇಳಿದರು.

'ಸುಪ್ರೀಂ'ಗೆ ಐವರ ನೇಮಕ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ಗೆ ಐವರು ನೂತನ ನ್ಯಾಯಮೂರ್ತಿಗಳ ನೇಮಕಕ್ಕೆ ಕೇಂದ್ರ ಸರ್ಕಾರ ಶನಿವಾರ ಅನುಮತಿ ನೀಡಿದೆ.

ರಾಜಸ್ಥಾನ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಂಕಜ್ ಮಿತ್ತಲ್, ಪಟ್ನಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜಯ್ ಕರೋಲ್, ಮಣಿಪುರ ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಪಿ.ವಿ. ಸಂಜಯ್ ಕುಮಾರ್, ಪಟ್ನಾ ಹೈಕೋರ್ಟ್ ನ್ಯಾಯಮೂರ್ತಿ ಅಹ್ಸಾನುದ್ದೀನ್ ಅಮಾನುಲ್ಲಾ, ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಮನೋಜ್ ಮಿಶ್ರಾ ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕಗೊಂಡಿದ್ದಾರೆ ಎಂದು ಕಾನೂನು ಸಚಿವ ಕಿರಣ್ ರಿಜಿಜು ಟ್ವೀಟ್ ಮಾಡಿದ್ದಾರೆ. ಕಳೆದ ವರ್ಷ ಡಿ. 13ರಂದು ಕೊಲಿಜಿಯಂ ನ್ಯಾಯಮೂರ್ತಿಗಳ ಹೆಸರನ್ನು ಶಿಫಾರಸು ಮಾಡಿತ್ತು.

ನ್ಯಾಯಮೂರ್ತಿಗಳು ಸೋಮವಾರ ಅಧಿಕಾರ ವಹಿಸಿಕೊಳ್ಳುವ ಸಾಧ್ಯತೆಯಿದೆ. ಐವರು ನೂತನ ನ್ಯಾಯಮೂರ್ತಿಗಳ ನೇಮಕದೊಂದಿಗೆ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳ ಸಂಖ್ಯೆ 32 ತಲುಪಲಿದೆ. ಇನ್ನೂ ಇಬ್ಬರು ನ್ಯಾಯಮೂರ್ತಿಗಳ ನೇಮಕಾತಿಗೆ ಅವಕಾಶ ಇದೆ. ಪ್ರಸ್ತುತ ಮುಖ್ಯ ನ್ಯಾಯಮೂರ್ತಿ ಸೇರಿದಂತೆ 27 ನ್ಯಾಯಮೂರ್ತಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಇ–ಕೋರ್ಟ್ ಯೋಜನೆ 3ನೇ ಹಂತಕ್ಕೆ ₹ 7 ಸಾವಿರ ಕೋಟಿ ಅನುದಾನ: ಸಿಜೆಐ

ನವದೆಹಲಿ (ಪಿಟಿಐ): '2023–24ರ ಕೇಂದ್ರ ಬಜೆಟ್‌ನಲ್ಲಿ ಇ–ಕೋರ್ಟ್ ಯೋಜನೆಯ ಮೂರನೇ ಹಂತಕ್ಕೆ ₹ 7 ಸಾವಿರ ಕೋಟಿ ಪ್ರಸ್ತಾವಿತ ಹಂಚಿಕೆಯು ನ್ಯಾಯಾಂಗದ ದಕ್ಷತೆಯನ್ನು ಹೆಚ್ಚಿಸುವುದರ ಜತೆಗೆ ನ್ಯಾಯಾಲಯಗಳು ಪ್ರತಿಯೊಬ್ಬ ನಾಗರಿಕನನ್ನೂ ತಲುಪುವುದನ್ನು ಖಾತ್ರಿಪಡಿಸುತ್ತದೆ' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಶನಿವಾರ ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನ 73ನೇ ಸಂಸ್ಥಾಪನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೋವಿಡ್– 19 ಸಾಂಕ್ರಾಮಿಕದ ಸಂದರ್ಭದಲ್ಲಿ ಜನರನ್ನು ತಲುಪುವ ಸಲುವಾಗಿ ನ್ಯಾಯಾಲಯದ ಪ್ರಕ್ರಿಯೆಗಳಿಗಾಗಿ ಸುಪ್ರೀಂ ಕೋರ್ಟ್ ವಿಡಿಯೊ ಕಾನ್ಫರೆನ್ಸ್ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. 2020ರ ಮಾರ್ಚ್ 23ರಿಂದ 2022ರ ಅಕ್ಟೋಬರ್ 30ರ ತನಕ ಸುಪ್ರೀಂ ಕೋರ್ಟ್ ವಿಡಿಯೊ ಕಾನ್ಫರೆನ್ಸ್ ಮೂಲಕ 3.37 ಲಕ್ಷ ಪ್ರಕರಣಗಳನ್ನು ಆಲಿಸಿದೆ' ಎಂದಿದ್ದಾರೆ.

ದಂಡ ಪಾವತಿಸಲು ಮುಗಿಬಿದ್ದ ಜನ • ₹ 4.77 ಲಕ್ಷ ಪ್ರಕರಣ ಇತ್ಯರ್ಥ

ಎರಡೇ ದಿನದಲ್ಲಿ ₹13.81 ಕೋಟಿ ದಂಡ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇ 50ರಷ್ಟು ರಿಯಾಯಿತಿ ಘೋಷಿಸಿದ್ದರಿಂದ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಜನರು ಮುಗಿಬೀಳುತ್ತಿದ್ದು, ಎರಡು ದಿನಗಳಲ್ಲಿ ₹ 13.81 ಕೋಟಿ ದಂಡ ಸಂಗ್ರಹವಾಗಿದೆ.

ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿದ್ದ ಪ್ರಸ್ತಾವನೆ ಒಪ್ಪಿದ್ದ ರಾಜ್ಯ ಸರ್ಕಾರ, ಸಂಚಾರ ನಿಯಮ ಉಲ್ಲಂಘನೆಯ ಇ–ಚಲನ್ ಪ್ರಕರಣಗಳ ದಂಡ ಪಾವತಿ ಮೇಲೆ ರಿಯಾಯಿತಿ ನೀಡಿ ಫೆ. 2ರಂದು ಆದೇಶ ಹೊರಡಿಸಿತ್ತು. ಫೆ. 3ರಿಂದ ದಂಡ ಸಂಗ್ರಹ ಪ್ರಕ್ರಿಯೆ ಆರಂಭವಾಗಿದ್ದು, ರಿಯಾಯಿತಿ ದಂಡ ಪಾವತಿಸಲು ಫೆ. 11 ಕೊನೆ ದಿನವಾಗಿದೆ.

ನಗರದ ಸಂಚಾರ ಪೊಲೀಸ್ ಠಾಣೆಗಳು, ಸಂಚಾರ ನಿರ್ವಹಣಾ ಕೇಂದ್ರ (ಟಿಎಂಸಿ) ಹಾಗೂ ಕರ್ನಾಟಕ ಒನ್- ಬೆಂಗಳೂರು ಒನ್ ಕೇಂದ್ರಗಳಲ್ಲಿ ಶುಕ್ರವಾರದಿಂದಲೇ ಜನರು ದಂಡ ಪಾವತಿಸುತ್ತಿದ್ದಾರೆ. ಶನಿವಾರವೂ ಎಲ್ಲ ಕಡೆ ಜನರ ಸರದಿ ಸಾಲು ಕಂಡುಬಂತು.

ಇನ್ಫೆಂಟ್ರಿ ರಸ್ತೆಯಲ್ಲಿರುವ ಟಿಎಂಸಿಯಲ್ಲಿ ದಂಡ ಪಾವತಿಸಲು ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರು. ಕಂಪ್ಯೂಟರ್‌ಗಳ ಕೊರತೆಯಿಂದಾಗಿ ದಂಡ ಪ್ರಕ್ರಿಯೆ ನಿಧಾನಗತಿಯಲ್ಲಿ ಸಾಗಿತ್ತು. ಜನರ ಸರದಿಯೂ ಹೆಚ್ಚಾಗಿತ್ತು. ಎಎಸ್‌ಐ ಹಾಗೂ ಪಿಎಸ್‌ಐಗಳು ಕೇಂದ್ರಕ್ಕೆ ಬಂದು ತಮ್ಮ ಬಳಿಯ ಉಪಕರಣ ಸಹಾಯದಿಂದ ದಂಡ ಸಂಗ್ರಹಿಸಿದರು.


ಹೆಚ್ಚು ದಂಡ ಬಾಕಿ ಉಳಿಸಿಕೊಂಡಿದ್ದ ದ್ವಿಚಕ್ರ ವಾಹನ ಸವಾರರೊಬ್ಬರಿಂದ ಶನಿವಾರ ದಂಡ ಸಂಗ್ರಹಿಸಿದ ಪೊಲೀಸರು, ರಶೀದಿ ನೀಡಿದರು

ಆನ್‌ಲೈನ್ ಮೂಲಕ ದಂಡ ಪಾವತಿಸಲು ಹೆಚ್ಚು ಜನರು ಆಸಕ್ತಿ ತೋರಿಸುತ್ತಿದ್ದಾರೆ. ಕರ್ನಾಟಕ ಒನ್ ಹಾಗೂ ಪೇಟಿಎಂ ಆ್ಯಪ್ ಮೂಲಕ ಹೆಚ್ಚಿನ ದಂಡ ಸಂಗ್ರಹವಾಗಿದೆ.

ಪೊಲೀಸರ ಬಳಿ ಜನ: ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ಪತ್ತೆಗಾಗಿ ಜನರು ರಸ್ತೆಯಲ್ಲಿ ನಿಲ್ಲುತ್ತಿದ್ದರು. ವಾಹನಗಳನ್ನು ತಡೆದು ದಂಡ ಸಂಗ್ರಹಿಸುತ್ತಿದ್ದರು. ರಿಯಾಯಿತಿ ಘೋಷಿಸಿದ ದಿನದಿಂದ ಜನರೇ ಪೊಲೀಸರ ಬಳಿ ಬಂದು ದಂಡ ಕಟ್ಟುತ್ತಿದ್ದಾರೆ.

‘ರಸ್ತೆಯಲ್ಲಿ ವಾಹನ ಅಡ್ಡಗಟ್ಟಿದಾಗ ಜನರು ಬೈಯುತ್ತಿದ್ದರು. ಇದೀಗ, ಜನರೇ ಉತ್ಸಾಹದಿಂದ ದಂಡ ಪಾವತಿಸುತ್ತಿದ್ದಾರೆ. ರಿಯಾಯಿತಿಯಿಂದ ದಂಡ ಸಂಗ್ರಹದ ರೂಪವೇ ಬದಲಾಗಿದೆ’ ಎಂದು ಸಹಾಯಕ ಸಬ್ ಇನ್‌ಸ್ಪೆಕ್ಟರ್ ಒಬ್ಬರು ಹೇಳಿದರು.

‘ವಾಹನ ಮೌಲ್ಯ ಮೀರಿದ್ದ ಪ್ರಕರಣಗಳೂ ಇತ್ಯರ್ಥ’

‘ಹಲವು ಬಾರಿ ಸಂಚಾರ ನಿಯಮ ಉಲ್ಲಂಘಿಸಿದ್ದಾಗಿ ಕೆಲ ವಾಹನಗಳಿಗೆ ಮೌಲ್ಯಕ್ಕಿಂತ ಹೆಚ್ಚು ದಂಡ ವಿಧಿಸಲಾಗಿತ್ತು. ಮಾಲೀಕರು, ರಸ್ತೆಯಲ್ಲಿ ವಾಹನ ಚಲಾಯಿಸುವುದನ್ನೇ ಬಿಟ್ಟಿದ್ದರು. ಕೆಲವರು, ಪೊಲೀಸರ ಕಣ್ತಪ್ಪಿಸಿ ಓಡಾಡುತ್ತಿದ್ದರು. ಇಂಥ ಹಲವು ಮಾಲೀಕರು, ರಿಯಾಯಿತಿ ಸೌಲಭ್ಯ ಪಡೆದುಕೊಂಡು ದಂಡ ಪಾವತಿಸುತ್ತಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ದ್ವಿಚಕ್ರ ವಾಹನವೊಂದರ ಮೇಲೆ ₹ 24,000 ದಂಡವಿತ್ತು. ವಾಹನದ ಮೌಲ್ಯ ಅಂದಾಜು ₹20 ಸಾವಿರ. ರಿಯಾಯಿತಿ ಘೋಷಣೆಯಾಗುತ್ತಿದ್ದಂತೆ ಮಾಲೀಕರು, ₹ 12 ಸಾವಿರ ಪಾವತಿ ಮಾಡಿದ್ದಾರೆ’ ಎಂದೂ ತಿಳಿಸಿದರು.

12 ದೇವಸ್ಥಾನಗಳಲ್ಲಿ ‘ಸ್ವಚ್ಛ ಮಂದಿರ ಅಭಿಯಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ಅಧೀನದ ದೇವಾಲಯಗಳ ಪರಿಸರದಲ್ಲಿ ಸ್ವಚ್ಛತೆ ಕಾಪಾಡುವ ಉದ್ದೇಶದಿಂದ ಮುಜರಾಯಿ ಇಲಾಖೆ ‘ಸ್ವಚ್ಛ ಮಂದಿರ ಅಭಿಯಾನ’ ಹಮ್ಮಿಕೊಂಡಿದೆ. ಈ ಮೂಲಕ ಶೂನ್ಯ ತ್ಯಾಜ್ಯ ದೇವಸ್ಥಾನಗಳನ್ನಾಗಿ ಪರಿವರ್ತಿಸಲಾಗುವುದು.

ಇದೇ 10 ರಂದು ಶ್ರೀರಂಗಪಟ್ಟಣದ ನಿಮಿಷಾಂಬ ದೇವಸ್ಥಾನದಲ್ಲಿ ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಅವರು ಈ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಎಂದು ಇಲಾಖೆ ಆಯುಕ್ತೆ ರೋಹಿಣಿ ಸಿಂಧೂರಿ ತಿಳಿಸಿದ್ದಾರೆ.

ಮುಜರಾಯಿ ಅಧೀನದ ದೇವಾಲಯಗಳಲ್ಲಿ ಹೆಚ್ಚುತ್ತಿರುವ ಘನ ತ್ಯಾಜ್ಯ ನಿರ್ವಹಣೆಯ ಸಮಸ್ಯೆಯನ್ನು ಈ ಯೋಜನೆಯ ಮೂಲಕ ಪರಿಣಾಮಕಾರಿಯಾಗಿ ನಿರ್ವಹಿಸಲಾಗುವುದು. ಮೊದಲ ಹಂತದಲ್ಲಿ ರಾಜ್ಯದ ಪ್ರಮುಖ 12 ದೇವಸ್ಥಾನಗಳಲ್ಲಿ ಈ ಅಭಿಯಾನಕ್ಕೆ ನಡೆಸಲಾಗುವುದು. ನಿಮಿಷಾಂಬ ದೇವಸ್ಥಾನದ ಜತೆಗೆ ಉಳಿದ 11 ದೇವಸ್ಥಾನಗಳಲ್ಲಿ ಈ ಅಭಿಯಾನಕ್ಕೆ ವರ್ಚುವಲ್ ಮೂಲಕ ಚಾಲನೆ ನೀಡಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.



ದೇವಸ್ಥಾನದ ಆವರಣಗಳಲ್ಲಿ ನಿರ್ಮಾಣಗೊಂಡಿರುವ ಘನತ್ಯಾಜ್ಯ ನಿರ್ವಹಣಾ ಘಟಕ

ದೇವಸ್ಥಾನಗಳಲ್ಲಿ ಸ್ವಚ್ಛ ಪರಿಸರವಿಲ್ಲದೇ ಭಕ್ತರು ತೊಂದರೆ ಅನುಭವಿಸುತ್ತಿದ್ದರು. ‘ಸ್ವಚ್ಛ ಮಂದಿರ ಅಭಿಯಾನ’ ದಡಿ ದೇವಾಲಯಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ಸಂಗ್ರಹಿಸುವುದು, ಸಾಗಿಸುವುದು, ಸಂಸ್ಕರಿಸುವುದು ಮತ್ತು ವಿಲೇವಾರಿ ಮಾಡಲು ಅಗತ್ಯ ವ್ಯವಸ್ಥೆ ಮಾಡಲಾಗುವುದು. ಮೂಲದಲ್ಲೇ ತ್ಯಾಜ್ಯವನ್ನು ಪ್ರತ್ಯೇಕಿಸಲಾಗುವುದು. ಈ ಮೂಲಕ ದೇವಸ್ಥಾನಗಳನ್ನು ಸುಸ್ಥಿರ ಸಂಸ್ಥೆ ಮತ್ತು ಶೂನ್ಯ ತ್ಯಾಜ್ಯ ಆವರಣವಾಗಿ ಮಾಡುವ ಗುರಿ ಹೊಂದಲಾಗಿದೆ ಎಂದು ಅವರು ಹೇಳಿದ್ದಾರೆ.

ಮೊದಲ ಹಂತದ ದೇವಸ್ಥಾನಗಳು–

- ನಿಮಿಷಾಂಬ ದೇವಾಲಯ, ಗಂಜಾಂ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
- ಬನಶಂಕರಿ ದೇವಾಲಯ, ಕರಿಯಪ್ಪ ರಸ್ತೆ, ಬೆಂಗಳೂರು ನಗರ ಜಿಲ್ಲೆ
- ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ
- ರೇವಣ ಸಿದ್ಧೇಶ್ವರ ದೇವಾಲಯ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ
- ಕಬ್ಬಾಳಮ್ಮ ದೇವಾಲಯ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ
- ಕೆಂಗಲ್ ಆಂಜನೇಯ ಸ್ವಾಮಿ ದೇವಾಲಯ, ರಾಮನಗರ ಜಿಲ್ಲೆ
- ರಂಗನಾಥಸ್ವಾಮಿ ದೇವಾಲಯ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
- ಚೆನ್ನಕೇಶವಸ್ವಾಮಿ ದೇವಾಲಯ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ
- ದುರ್ಗಾ ಪರಮೇಶ್ವರಿ ದೇವಾಲಯ, ಮಂದಾರ್ತಿ, ದಕ್ಷಿಣ ಕನ್ನಡ ಜಿಲ್ಲೆ
- ಗುರು ತಿಪ್ಪೇರುದ್ರಸ್ವಾಮಿ ದೇವಾಲಯ, ನಾಯಕನಹಟ್ಟಿ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ
- ಲಕ್ಷ್ಮಿನರಸಿಂಹಸ್ವಾಮಿ ದೇವಾಲಯ, ದೇವರಾಯನ ದುರ್ಗ, ತುಮಕೂರು ಜಿಲ್ಲೆ
- ಪೊಳಲಿ ರಾಜರಾಜೇಶ್ವರಿ ದೇವಾಲಯ, ದಕ್ಷಿಣ ಕನ್ನಡ ಜಿಲ್ಲೆ

ನಿಧನ ವಾರ್ತೆ

ಎನ್‌.ಆರ್‌. ಮಠದ




ಬೆಂಗಳೂರು: ಸ್ವಾತಂತ್ರ್ಯ ಹೋರಾಟಗಾರ, ರಾಜಾಜಿನಗರ 5ನೇ ಬ್ಲಾಕ್ ನಿವಾಸಿಯಾಗಿದ್ದ ಶತಾಯುಷಿ ಎನ್.ಆರ್. ಮಠದ ಶನಿವಾರ ಮಧ್ಯಾಹ್ನ ರಾಜಾಜಿನಗರದ ಅನನ್ಯ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಅವರು ಉಸಿರಾಟದ ತೊಂದರೆಯಿಂದ ಆಸ್ಪತ್ರೆಗೆ ದಾಖಲಾಗಿದ್ದರು.

ಅವರು ತಮ್ಮ 3 ಮಕ್ಕಳು, ಮೊಮ್ಮಕ್ಕಳು ಮತ್ತು ಮರಿಮಕ್ಕಳನ್ನು ಅಗಲಿದ್ದಾರೆ.

ಇವರು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದವರಾಗಿದ್ದು, 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಇವರೂ ಸೇರಿ ಕುಟುಂಬದ 7 ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಸ್ವಾತಂತ್ರ್ಯಕ್ಕಾಗಿ ಜೈಲುವಾಸ ಅನುಭವಿಸಿದ್ದರು. ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ 2 ವರ್ಷ ಕಾರಾಗೃಹ ವಾಸವನ್ನು ಮಠದ ಅವರು ಅನುಭವಿಸಿದ್ದರು. ನಂತರ ಸೇವಾದಳ ಸಂಘಟನೆಯ ಕರ್ನಾಟಕ ರಾಜ್ಯದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದರು.

ಸ್ವಾತಂತ್ರ್ಯದ ನಂತರವೂ ರಾಷ್ಟ್ರ ನಿರ್ಮಾಣದ ಕೆಲಸದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಇವರು ಗಾಂಧೀಜಿಯವರ ಕನಸಿನ ಪಾನ ನಿಷೇಧವನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಸರ್ಕಾರದ ಕೆಲಸದಲ್ಲಿ ಮುಂದಾಳತ್ವ ವಹಿಸಿದ್ದರು.ಮಠದ ಅವರ ಅಂತಿಮ ಸಂಸ್ಕಾರವು ಭಾನುವಾರ ಬೆಳಿಗ್ಗೆ 11ಕ್ಕೆ ಹರಿಶ್ಚಂದ್ರ ಘಾಟಿನಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಸಾಯಿದತ್ತ ಭಟ್




ಬೈಂದೂರು (ಉಡುಪಿ ಜಿಲ್ಲೆ): ಬೆಂಗಳೂರನ್ನು ಫ್ಲೆಕ್ಸ್ ಮುಕ್ತ ನಗರಿಯನ್ನಾಗಿಸಲು ಪ್ರಯತ್ನಿಸಿದ್ದ ಹಾಗೂ ಕಾನೂನು ಹೋರಾಟದ ಮೂಲಕ ಬಿಡಿಎಗೆ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಉಳಿಸಿಕೊಟ್ಟ ಸಾಮಾಜಿಕ ಕಾರ್ಯಕರ್ತ ಸಾಯಿದತ್ತ ಭಟ್ ಬೈಂದೂರು ಹೃದಯಾಘಾತದಿಂದ ಶನಿವಾರ ನಿಧನರಾದರು.

ಕ್ರಿಕೆಟ್ ಆಟಗಾರರಾಗಿದ್ದ ಸಾಯಿದತ್ತ ಭಟ್, ಇಲ್ಲಿನ ವಿಕ್ರಮ್ ಸ್ಪೋರ್ಟ್ಸ್ ಕ್ಲಬ್ ತಂಡದಲ್ಲಿ ಆಲ್‌ರೌಂಡ್ ಆಟದ ಮೂಲಕ 80ರ ದಶಕದಲ್ಲಿ ಮಿಂಚಿದ್ದರು. ವೀಕ್ಷಕ ವಿವರಣೆಕಾರರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ವಿಕ್ರಮ್ ಸ್ಪೋರ್ಟ್ಸ್ ಕ್ಲಬ್‌ನ ಪ್ರಧಾನ ಕಾರ್ಯದರ್ಶಿ, ಲಾವಣ್ಯ ಕಲಾವೃಂದದ ಪೋಷಕ, ಬೈಂದೂರು ಜೇಸಿ ಅಧ್ಯಕ್ಷರೂ ಆಗಿದ್ದರು.

ಜಮೀನಿಗೆ ಸಂಬಂಧಿಸಿದ ದೂರುಗಳ ವಿಚಾರಣೆ ಮಾಡಲು ಮತ್ತು ಬಿಡಿಎ ಆಸ್ತಿಗಳ ಬಗ್ಗೆ ತನಿಖೆ ನಡೆಸಲು ಯಶಸ್ವಿ ಹೋರಾಟ ಮಾಡಿದ್ದ ಅವರು ವಿವಾದಿತ, ಸ್ವಯಂಘೋಷಿತ ದೇವಮಾನವ ಆಸಾರಾಂ ಬಾಪು ಆಶ್ರಮದ ವಿರುದ್ಧ ಕಾನೂನು ಹೋರಾಟದಲ್ಲಿ ಗೆಲುವು ಸಾಧಿಸಿ, ಕೋಟ್ಯಂತರ ರೂಪಾಯಿ ಮೌಲ್ಯದ ಭೂಮಿಯನ್ನು ಬಿಡಿಎಗೆ ಉಳಿಸಿಕೊಟ್ಟಿದ್ದರು. ಬಿಬಿಎಂಪಿಯ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದಾರೆ.

ಕೆ. ಸಿದ್ದೇಗೌಡ



ಬೆಂಗಳೂರು: ‘ಪ್ರಜಾವಾಣಿ’– ‘ಡೆಕ್ಕನ್ ಹೆರಾಲ್ಡ್’ ಪ್ರೊಡಕ್ಷನ್ ವಿಭಾಗದಲ್ಲಿ ಆಪರೇಟರ್ ಆಗಿದ್ದ ಕೆ. ಸಿದ್ದೇಗೌಡ (61) ಅವರು ಶನಿವಾರ ನಿಧನ ಹೊಂದಿದರು.

ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಕನಕಪುರ ತಾಲ್ಲೂಕಿನ ಸಾತನೂರು ಹೋಬಳಿಯ ಅರೆಕಟ್ಟೆದೊಡ್ಡಿ ಗ್ರಾಮದಲ್ಲಿ ಭಾನುವಾರ (ಫೆ. 5) ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಡಾ.ಶಿವಶರಣಪ್ಪ ಜಿ. ಯಲಗೋಡ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪಶುವೈದ್ಯಕೀಯ ಸಂಘದ 2023–25ನೇ ಸಾಲಿಗೆ ನಡೆದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಡಾ. ಶಿವಶರಣಪ್ಪ ಜಿ. ಯಲಗೋಡ ಆಯ್ಕೆಯಾಗಿದ್ದಾರೆ.

ಡಾ.ಶ್ರೀಧರ ಮೂರ್ತಿ ಟಿ.ಎಸ್. (ಉಪಾಧ್ಯಕ್ಷ), ಡಾ.ರಾಮಚಂದ್ರಯ್ಯ ಎಂ.(ಪ್ರಧಾನ ಕಾರ್ಯದರ್ಶಿ), ಡಾ.ಚನ್ನಪ್ಪ ಎಸ್. ನಿಂಬಾಳ(ಕೋಶಾಧಿಕಾರಿ), ಡಾ. ತಿಪ್ಪಣ್ಣ(ಕಾರ್ಯದರ್ಶಿ) ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವ್ಯವಸ್ಥಾಪಕ ನಿರ್ದೇಶಕರ ಸಹಿ ನಕಲು ಮಾಡಿದ್ದ ಪ್ರಕರಣ

ಬಿಎಂಟಿಸಿ: 18 ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರ ಸಹಿ ನಕಲು ಮಾಡಿದ್ದ ಪ್ರಕರಣ ಬಯಲಾದ ಬೆನ್ನಲ್ಲೇ ಸಂಸ್ಥೆಯ ಕೇಂದ್ರ ಕಚೇರಿಯ ಪ್ರಮುಖ ಹುದ್ದೆಯಲ್ಲಿದ್ದ 18 ಅಧಿಕಾರಿಗಳನ್ನು ಸಾಮೂಹಿಕವಾಗಿ ವರ್ಗಾವಣೆ ಮಾಡಿ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ ಆದೇಶ ಹೊರಡಿಸಿದ್ದಾರೆ.

ವಿಭಾಗೀಯ ಸಂಚಾರ ಅಧಿಕಾರಿ(ಸಂಚಾರ ವಾಣಿಜ್ಯ ಶಾಖೆ) ಆಗಿದ್ದ ಶ್ಯಾಮಲಾ ಮುದ್ದೋಡಿ ಅವರನ್ನು ಪಶ್ಚಿಮ ವಲಯದ ವಿಭಾಗೀಯ ಸಂಚಾರ ಅಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ. ಸಹಾಯಕ ಸಂಚಾರ ಅಧೀಕ್ಷಕಿ(ಸಂಚಾರ ವಾಣಿಜ್ಯ ಶಾಖೆ) ಟಿ. ಅನಿತಾ ಅವರನ್ನು ಉತ್ತರ ವಲಯದ ಘಟಕ- 26ಕ್ಕೆ, ಸಂಚಾರ ನಿರೀಕ್ಷಕ (ಸಂಚಾರ ವಾಣಿಜ್ಯ ಶಾಖೆ) ಸತೀಶ್ ಅವರನ್ನು ಉತ್ತರ ವಲಯ ಘಟಕ- 30ಕ್ಕೆ ವರ್ಗಾಯಿಸಲಾಗಿದೆ.

ಸಹಾಯಕ ಸಂಚಾರ ನಿರೀಕ್ಷಿಕರಾಗಿದ್ದ ವಿ. ಗುಣಶೀಲ, ಸಂಚಾರ ನಿಯಂತ್ರಕ (ಸಂಚಾರ ವಾಣಿಜ್ಯ ಶಾಖೆ) ಲಕ್ಷ್ಮೀನಾರಾಯಣ, ಸಹಾಯಕ ಲೆಕ್ಕಿಗ ಗಣಪಯ್ಯ ಪಾಟೀಲ, ಸಹಾಯಕಿಯರಾದ ಎಸ್. ಸುದೇವಿ ಮತ್ತು ಬಿ.ಎಸ್. ಲತಾ, ಕಿರಿಯ ಸಹಾಯಕ ಪ್ರಸನ್ನಕುಮಾರ ಅಂಗಡಿ, ಕುಶಲಕರ್ಮಿ ಎಸ್.ಬಿ. ಪರಮೇಶ್ವರ ಅವರನ್ನು ವರ್ಗಾವಣೆ ಮಾಡಲಾಗಿದೆ.

ವಿಭಾಗೀಯ ಸಂಚಾರ ಅಧಿಕಾರಿ (ಪಶ್ಚಿಮ ವಲಯ) ಎಸ್.ವಿ. ಪ್ರತಿಮಾ ಅವರನ್ನು ಕೇಂದ್ರ ಕಚೇರಿಯ ವಿಭಾಗೀಯ ಸಂಚಾರ ಅಧಿಕಾರಿಯಾಗಿ(ಸಂಚಾರ ವಾಣಿಜ್ಯ ಶಾಖೆ), ಘಟಕ- 26ರಲ್ಲಿ ಸಹಾಯಕ ಸಂಚಾರ ಅಧೀಕ್ಷಕರಾಗಿದ್ದ ಮೋಹನ್ ಬಾಬು ಅವರನ್ನು ಸಹಾಯಕ ಸಂಚಾರ ಅಧೀಕ್ಷಕ(ಸಂಚಾರ ವಾಣಿಜ್ಯ ಶಾಖೆ) ಹುದ್ದೆಗೆ, ಶಾಂತಿನಗರ ಟಿಟಿಎಂಸಿಯಲ್ಲಿ ಸಂಚಾರ ನಿಯಂತ್ರಕರಾಗಿರುವ ರಮೇಶ್ ಅವರನ್ನು ಸಂಚಾರ ನಿಯಂತ್ರಕ (ಸಂಚಾರ ವಾಣಿಜ್ಯ ಶಾಖೆ) ಹುದ್ದೆಗೆ, ಘಟಕ- 30ರ ಸಂಚಾರ ನಿರೀಕ್ಷಕಿ ಚೇತನಾ ಅವರನ್ನು ಸಂಚಾರ ನಿರೀಕ್ಷಕಿಯಾಗಿ (ಸಂಚಾರ ವಾಣಿಜ್ಯ ಶಾಖೆ) ವರ್ಗಾವಣೆ ಮಾಡಲಾಗಿದೆ.

ಕಚೇರಿ ಸಹಾಯಕ ಜಿ.ಕಾರ್ತಿಕ, ಎನ್. ಮುನಿರಾಜ, ಸಹಾಯಕ ಸಂಚಾರ ನಿರೀಕ್ಷಕಿ (ಸಂಚಾರ ಕಾರ್ಯಾಚರಣೆ) ಪವಿತ್ರಾ ಅವರನ್ನು ವರ್ಗಾವಣೆ ಮಾಡಲಾಗಿದೆ. ಇನ್ನೂ ಸ್ಥಳ ನಿಯೋಜನೆ ಮಾಡಿಲ್ಲ. ನಿರ್ವಾಹಕಿ- 10051 ಎಸ್. ಮಂಜುಳಾ ಅವರನ್ನು ಒಒಡಿ ಹಿಂಪಡೆದು, ಮೂಲ ಹುದ್ದೆ ಘಟಕ- 13ರಲ್ಲಿ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಏರ್ ಶೋ: ಮಾಂಸ ಮಾರಾಟ ನಿಷೇಧ

ಬೆಂಗಳೂರು: ಯಲಹಂಕ ವಾಯು ನೆಲೆಯಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಮಟ್ಟದ 'ಏರೋ ಇಂಡಿಯಾ–2023' ಪ್ರದರ್ಶನದ ಅಂಗವಾಗಿ 10 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಮಾಂಸ ಮಾರಾಟವನ್ನು ಫೆ.20ರವರೆಗೆ ಬಿಬಿಎಂಪಿ ನಿಷೇಧಿಸಿದೆ. ಅಲ್ಲದೇ, ಮಾಂಸಾಹಾರಿ ಹೋಟೆಲ್ ತೆರೆಯಲು ಷರತ್ತುಬದ್ಧ ಅನುಮತಿ ನೀಡಿದೆ.

ಫೆ.13ರಿಂದ 17ರವರೆಗೆ ನಡೆಯಲಿರುವ ಪ್ರದರ್ಶನದ ಸಂದರ್ಭದಲ್ಲಿ ಹಕ್ಕಿಗಳ ಹಾರಾಟ ತಡೆಯುವ ಸಲುವಾಗಿ ವಿಂಗ್ ಕಮಾಂಡರ್ ಅವರ ಮನವಿಯಂತೆ ಈ ಕ್ರಮ ಕೈಗೊಳ್ಳಲಾಗಿದೆ. ಮಾಂಸಾಹಾರಿ ಹೋಟೆಲ್‌ಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಾರ್ವಜನಿಕವಾಗಿ ಬಿಸಾಡದೆ ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ನಿಯಮ ಉಲ್ಲಂಘಿಸಿದರೆ ಬಿಬಿಎಂಪಿ ಕಾಯ್ದೆ ಮತ್ತು ಭಾರತೀಯ ಏರ್‌ಕ್ರಾಫ್ಟ್ ನಿಯಮಗಳ ಪ್ರಕಾರ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದೆ.

ಇಂಡಿಯಾ ಎನರ್ಜಿ ವೀಕ್‌ಗೆ 1,500 ವಿದ್ಯಾರ್ಥಿಗಳು

ಬೆಂಗಳೂರು: ಬೆಂಗಳೂರು ಅಂತರ ರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಫೆ.6ರಿಂದ 8ರವರೆಗೆ ನಡೆಯುವ 'ಇಂಡಿಯಾ ಎನರ್ಜಿ ವೀಕ್ 2023' ಅಂಗವಾಗಿ ಫೆ.6ರಂದು ಹಮ್ಮಿಕೊಂಡಿರುವ ಇ–20 ಇಂಧನ ರ‍್ಯಾಲಿಯಲ್ಲಿ ವಿಶ್ವವಿದ್ಯಾಲಯ ಹಾಗೂ ಶಿಕ್ಷಣ ಸಂಸ್ಥೆಗಳಿಂದ 1,500 ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲು ಕ್ರಮ ಕೈಗೊಳ್ಳಬೇಕು ಎಂದು ಉನ್ನತ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಆಯೋಜಿಸಿರುವ ಈ ಕಾರ್ಯಕ್ರಮವನ್ನು ಪ್ರಧಾನಿ ನರೇಂದ್ರಮೋದಿ ಉದ್ಘಾಟಿಸುವರು. ಬಿಐಇಸಿ ಮುಂಭಾಗದಿಂದ ನೀಲಕಂಠ ಪಾರ್ಕ್‌ವರೆಗೆ 42 ಕಿ.ಮೀ. ರ‍್ಯಾಲಿ ಸಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.

ಸಾಮಾಜ ಸೇವೆಯಲ್ಲಿ ಸಾರ್ಥಕತೆಯನ್ನ ಮೆರೆದ ರಶ್ಮಿರವಿಕಿರಣ್

ಕ್ಷೇತ್ರದ ಜನರ ಒತ್ತಾಸೆ ರಾಜಕೀಯಕ್ಕೆ ಪಾದರ್ಪಣೆ

ನಾನಾ ರೀತಿಯ ಸಮಾಜಸೇವೆಗಳನ್ನ ಉದ್ದೇಶವಿರಿಸಿಕೊಂಡೆ ಮಾಡುವುದು ಇವತ್ತಿನ ಕಾಲಮಾನದಲ್ಲಿ ಸಹಜವಾಗಿಬಿಟ್ಟಿದೆ.ಈಬಗ್ಗೆ ನಾಗರೀಕರಿಗೂ ಜನಸೇವೆ ಮಾಡುವವರ ಉದ್ದೇಶ ಸ್ಪಷ್ಟವಾಗಿಯೇ ತಿಳಿದಿರುತ್ತೆ.ಸಮಾಜದಲ್ಲಿ ಹಾಸುಹೊಕ್ಕಾಗಿರುವ ಅಸಮಾನತೆಗಳಲ್ಲಿ ಆರ್ಥಿಕ ಅಸಮಾನತೆ,ಶೈಕ್ಷಣಿಕ ಅಸಮಾನತೆ,ಸಮಾಜಿಕ ಅಸಮಾನತೆ ಇವೆಲ್ಲವೂ ಶತ ಶತಮಾನಗಳಿಂದ ತಾಂಡವವಾಡುತ್ತ ಸಮಾಜದಲ್ಲಿ ಅಸಮಾನತೆಯ ಕಂದಕ ಏರ್ಪಟ್ಟು ಸಮಾಜದಲ್ಲಿನ ಸ್ವಾಸ್ಥ್ಯಕ್ಕೆ ಕೊಡಲಿಪೆಟ್ಟು ಬಿದ್ದಂತಾಗಿರುವುದು ಕೂಡ ಸುಳ್ಳಲ್ಲ.

ಸಮಾಜಿಕ ಅಸಮಾನತೆಯನ್ನ,ಮೌಢ್ಯವನ್ನ ತೊಡೆದು ನಾಗರೀಕರೆಲ್ಲರೂ ಸುಖ ಸಂತೋಷಗಳಿಂದಿರಲು ಶತ,ಶತಮಾನಗಳಿಂದಲೂ ಸಮಾಜಸುಧಾರಕರು,ಮಹಾತ್ಮರು,ಸಂತರು ತಮ್ಮದೇ ಆದ ರೀತಿಯಲ್ಲಿ ಜನರನ್ನ ಎಚ್ಚರಿಸಿ ಸಮಾಜದ ಸ್ವಾಸ್ಥ್ಯಕ್ಕೆ ಕಾರಣಕರ್ತರಾಗಿ ಸಮಾಜಸೇವೆಯ ಶ್ರೇಷ್ಟಸೇವೆ ಎಂದು ಹೇಳಿದ್ದಾರೆ,ಶಿಕ್ಷಣ ಮನುಕುಲದ ಸಂಜೀವಿನಿ ಎಂದು ಭೋದಿಸಿದ್ದಾರೆ. ಅದರಂತೆ ಕಾಲ ಕಾಲಕ್ಕೆ ಹಿರಿಯರು,ಸಂತರು ತೋರಿದ ಮಾರ್ಗದಲ್ಲೇ ನಡೆದು ಎಲೆಮರೆಯ ಕಾಯಿಯಂತೆ ಸಮಾಜದ ಏಳಿಗೆಗೆ,-ನೊಂದವರ,ಅಸಹಾಯಕರ,ದೀನ,ದಲಿತ ಹಾಗೂ ಅಶಕ್ತರ ಏಳಿಗೆಗೆ ದುಡಿಯುತ್ತ ,ಅವರೆಲ್ಲರಿಗೂ ಎಲ್ಲಾ ರೀತಿಯಲ್ಲೂ ಸಹಾಯ ಹಸ್ತಚಾಚುತ್ತ ತಮ್ಮ ಬದುಕಿನಲ್ಲಿ ಸಾರ್ಥಕತೆಯನ್ನ ಕಂಡು ಯಾವುದೇ ಪ್ರಚಾರ ಹಾಗೂ ಯಾವುದೇ ಲಾಭದ ಲೆಕ್ಕಾಚಾರವಿಲ್ಲದೆ ತಮ್ಮಷ್ಟಕ್ಕೆ ತಾವು ಇಂದಿಗೂ ಸೇವಾಕೈಂಕಾರ್ಯದಲ್ಲಿ ತೊಡಗಿರುವ ಶ್ರೀಮತಿ ರಶ್ಮಿ ರವಿಕಿರಣ್ ಇಂದು ನಮ್ಮೆಲ್ಲರ ನಡುವೆ ಮಾದರಿಯಾಗಿ ನಿಲ್ಲುತ್ತಾರೆ,

ಮೇಯರ್ ಆಗಿದ್ದ ಸಿ.ಎಂ. ನಾಗರಾಜ್ ಅವರ ಸೊಸೆ ರಶ್ಮಿರವಿಕಿರಣ್



ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೆ ಛಾಪು ಮೂಡಿಸಿ ಬೆಂಗಳೂರಿಗರಿಗೆ ಚಿರಪರಿಚಿತರಾಗಿದ್ದ ಸಿ.ಎಂ.ನಾಗರಾಜ್ ಅವರ ಸೇವೆ ಹಾಗೂ ಸಮಾಜದ ಬಗೆಗಿದ್ದ ಕಾಳಜಿಯನ್ನ ನೋಡಿಯೇ ಕಾಂಗ್ರೆಸ್ ಪಕ್ಷ ಅವರನ್ನ ಕೈಬೀಸಿ ಕರೆದು ಪಾಲಿಕೆಗೆ ಸ್ಪರ್ಧಿಸಲು ಅನುವುಮಾಡಿಕೊಟ್ಟಿತ್ತು.ರಾಜಕೀಯದ ಬಗ್ಗೆ ಒಂದಿಷ್ಟು ಯೋಚಿಸದೇ ಇದ್ದ ನಾಗರಾಜ್ ಅವರನ್ನ ರಾಜಕೀಯವೇ ಹುಡುಕಿಬಂದಿತ್ತು,ಹಾಗಾಗಿ ಅವರು ಪಾಲಿಕೆಯ ಚುನಾವಣೆಯಲ್ಲಿ ಸ್ಪರ್ಧಿಸಿ ನಗರದ ಮೇಯರ್ ಕೂಡ ಆಗಿ ಬೆಂಗಳೂರಿನ ಅಭಿವೃದ್ದಿಗೆ ಸಾಕಷ್ಟು ಗುರುತರವಾದ ಕೆಲಸಮಾಡಿ ಸೈ ಎನಿಸಿದ್ದರು.

ಅಂತೆಯೆ ಮಾವನವರು ತಮ್ಮನ್ನ ಸಾಮಾಜಿಕ ಸೇವೆಗಳಲ್ಲಿ ತೊಡಗಿಸಿಕೊಂಡು, ಸೇವಾ ಮನೋಭಾವದಿಂದ ಜನರ ಸಂಕಷ್ಟಕ್ಕೆ ಸ್ಪಂಧಿಸುತ್ತಿದ್ದ ಕಾರ್ಯವೈಖರಿಯನ್ನ ಕಣ್ಣಾರೆಕಂಡಿದ್ದ ರಶ್ಮಿರವಿಕಿರಣ್ ನಿಧಾನವಾಗಿ ತನಗರಿವಿಲ್ಲದೆ ಸಮಾಜಸೇವೆಯಲ್ಲಿ ತಮ್ಮನ್ನ ತೊಡಗಿಸಿಕೊಂಡು,ಎಲೆಮರೆಯ ಕಾಯಿಯಂತೆ ಸಮಾಜಸೇವೆಯಲ್ಲಿ ಸಾಕಷ್ಟು ಗುರುತರವಾದ ಕೆಲಸಗಳನ್ನ ಮಾಡಿ,ನೊಂದವರ,ಅಸಹಾಯಕರ,ದೀನ ದಲಿತರ ಮನಗೆಲ್ಲುವ ಮೂಲಕ ಮಾನವೀಯತೆಯ ಸಾಕಾರವಾಗಿ ಹೊರಹೊಮ್ಮಿದರು.

ಶೈಕ್ಷಣಿಕ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಅದ್ವಿತೀಯ ಸೇವೆ

ಪತಿ ರವಿಕಿರಣ್ ರ ನಂತರ ಈಸ್ಟ್ ವೆಸ್ಟ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷೆಯಾದ ರಶ್ಮಿ ರವಿಕಿರಣ್ ತಮ್ಮ ವಿದ್ಯಾಸಂಸ್ಥೆಯಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ನೀಡಿ ಮಕ್ಕಳನ್ನ ದೇಶದ ಉತ್ತಮ ಪ್ರಜೆಗಳನ್ನಾಗಿಸುವ ನಿಟ್ಟಿನಲ್ಲಿ ಶ್ರಮಿಸುತ್ತ ತಮ್ಮ ಶಾಲೆಯಲ್ಲದೆ ಇತರೆ ಶಾಲಾ ಬಡ ಅಶಕ್ತ ಮಕ್ಕಳಿಗೆ ನೋಟ್ ಬುಕ್ ಜೊತೆ ನಾನಾ ರೀತಿಯ ಸಹಾಯ ಮಾಡಿ ತಮ್ಮ ಔದರ್ಯ ಮೆರೆದಿದ್ದಾರೆ



ಮಹಿಳಾ ಸಬಲೀಕರಣಕ್ಕೆ ಪಣ ತೊಟ್ಟದಿಟ್ಟ ಮಹಿಳೆ

ಮಹಿಳೆಯರನ್ನ ಎಲ್ಲಾ ರಂಗಗಳಲ್ಲೂ ಸಬಲೀಕರಣಗೊಳಿಸುವ ಕೈಂಕಾರ್ಯಗೊಂಡು,ಅಶಕ್ತ ಮಹಿಳೆಯರಿಗೆ ಟೈಲರಿಂಗ್ ತರಬೇತಿ ,ಇಂಗ್ಲೀಷ್ ಕಲಿಕಾ ತರಬೇತಿ ಮೊಬೈಲ್ ರಿಪೇರಿ,ಅಡುಗೆ ತರಬೇತಿ,ಯೋಗ ತರಬೇತಿ ಹೀಗೆ ಹಲವು ತರಬೇತಿಗಳನ್ನ ನೀಡಿ ಮಹಿಳೆಯರು ಸ್ವಾವಲಂಬಿಗಳಾಗಿ ಬದುಕನ್ನ ರೂಪಿಸಿಕೊಳ್ಳಲು ಪ್ರಮುಖ ಪಾತ್ರವಹಿಸಿದರು

ರಶ್ಮಿರವಿಕಿರಣ್

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಹಿರಿಯ ಶಿಕ್ಷಕರು ಹಾಗೂ ಹಿರಿಯ ನಾಗರೀಕರಿಗೆ ಸನ್ಮಾನ

ಶಿಕ್ಷಕರು ನಿರೀಕ್ಷೆಗೂ ಮೀರಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡಿ ಸಭ್ಯ ನಾಗರೀಕರನ್ನಾಗಿ ಮಾಡುವ ನಿಟ್ಟಿನಲ್ಲಿ ಪ್ರಧಾನಪಾತ್ರ ವಹಿಸುತ್ತಾರೆ, ಆದರೆ ಪ್ರತಿಯಾಗಿ ಏನನ್ನೂ ಅಪೇಕ್ಷಿಸುವುದಿಲ್ಲ

ಸಮಾಜ ಕೂಡ ಅವರನ್ನ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ

ಹೀಗಾಗಿ ಅದನ್ನೆಲ್ಲ ಗಮನಿಸಿದ ರಶ್ಮಿ, ಅವರನ್ನ ಸೇವೆಯನ್ನ ಪರಿಗಣಿಸಿ ಅವರಿಗೆ ಒಂದು ವೇದಿಕೆ ಹುಟ್ಟಹಾಕಿ ಅವರನ್ನ ಸನ್ಮಾನಿಸಿ ಅವರೊಂದಿಗೆ ಹಿರಿಯ ನಾಗರೀಕರನ್ನೂ ಸನ್ಮಾನಿಸಿ,ಗೌರವ ಸಮರ್ಪಣೆ ಸಲ್ಲಿಸಿ ಅವರ ಸಂತೋಷದಲ್ಲಿ ಭಾಗಿಯಾಗಿದರು

ಕೋವಿಡ್ ಕಾಲದಲ್ಲಿ ಸ್ಪಂದಿಸಿದ ರಶ್ಮಿರವಿಕಿರಣ್

ಆರೋಗ್ಯವೇ ಮಹಾಭಾಗ್ಯ ಎಂಬ ತತ್ವದಲ್ಲಿ ನಂಬಿಕೆಯಿರಿಸಿದ್ದ ರಶ್ಮಿ ಜನರಿಗೆ ಆರೋಗ್ಯದ ಬಗ್ಗೆ ಅರಿವುಮೂಡಿಸುವ ಸಲುವಾಗಿ ಕ್ಯಾನ್ಸರ್ ನಂತ ಮಾರಣಾಂತಿಕ ರೋಗಗಳ ಬಗ್ಗೆ ಜಾಗೃತಿಪಡಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನ ಹಮಿಕೊಂಡು ಯಶಸ್ವಿಯಾಗಿದ್ದಾರೆ, ಕೋವಿಡ್ ಸಮಯದಲ್ಲಿ ಆಶಕ್ತ ನಾಗರೀಕರಿಗೆ ಆಹಾರ ಸಾಮಗ್ರಿಗಳ ಕಿಟ್ಟಗಳನ್ನು ನೀಡುನ ಮೂಲಕ ಸಹಾಯ ಹಸ್ತ ಚಾಚಿ, ಸಾವಿರಾರು ಜನರಿಗೆ ಉಚಿತವಾಗಿ ಮಾಸ್ಕ್ ಹಾಗೂ ಕೋವಿಡ್ ಲಸಿಕೆಗಳನ್ನ ನೀಡಿಸಿದರು. ಹಾಗೆ ರಕ್ತದಾನ ಶಿಬಿರ,ನೇತ್ರದಾನ ಶಿಬಿರ,ನೇತ್ರ ಪರೀಕ್ಷೆ,ಹೀಗೆ ಅನೇಕ ಜನಹಿತ ಶಿಬಿರಗಳ ನಡೆಸುವ ಮೂಲಕ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದರು

ನೆರೆ ಸಂತ್ರಸ್ಥರಿಗೆ ಪರಿಹಾರ

ಜನಸೇವೆಯೇ ಜನಾರ್ಧನ ಸೇವೆ ಎಂಬ ತತ್ವಕ್ಕೆ ಬದ್ದರಾಗಿರುವ ರಶ್ಮಿ ರವಿಕಿರಣ್ ರವರು ಕೊಡಗು, ಉತ್ತರಕರ್ನಾಟಕ ನೆರೆ ಹಾವಳಿಗೆ ತುತ್ತಾದ ಸಂದರ್ಭದಲ್ಲಿ ಸಂತ್ರಸ್ಥರಿಗೆ ಅಗತ್ಯವಿರುವ ಆಹಾರ, ಔಷಧಿ ಸೇರಿದಂತೆ ಅವಶ್ಯವಿರುವ ಎಲ್ಲಾ ರೀತಿಯ ಸಾಮಾಗ್ರಿಗಳನ್ನ ನೀಡುವ ಮೂಲಕ ಸೇವಾಬದ್ದತೆಯನ್ನ ಪ್ರದರ್ಶಿಸಿದರು.ಹಾಗೆ ಹಗಲಿರುಳು ಎಲ್ಲಾ ಕಾಲದಲ್ಲೂ

ರಾಜಕೀಯ ಮನ್ವಂತರಕ್ಕೆ ಮುನ್ನುಡಿ ಬರೆಯಲಿದ್ದಾರ ರಶ್ಮಿ?

ನಿಸ್ವಾರ್ಥ ಸೇವೆ ಹಾಗೂ ಮಾನವೀಯ ಅಂತ:ಕರಣವನ್ನೊಳಗೊಂಡಿರುವ ರಶ್ಮಿರವಿಕಿರಣ್ ಯಾವುದೇ ಅಧಿಕಾರ,ಪ್ರಚಾರಕ್ಕಾಗಿ ಸಮಾಜಸೇವೆಯಲ್ಲಿ ತೊಡಗದೆ ಕೇವಲ ತನ್ನ ಆತ್ಮತೃಪ್ತಿಗಾಗಿಯೆ ಈ ಸೇವೆ ಎಂದೇಳುತ್ತ ಪ್ರಚಾರ ಹಾಗೂ ರಾಜಕೀಯದಿಂದ ಮಾರುದೂರ ಉಳಿದು ತನ್ನ ಪಾಡಿಗೆ ತಾನಿದ್ದ ರಶ್ಮಿರವಿಕಿರಣ್ ರಾಜಕೀಯಕ್ಕೆ ಬಂದರೆ ಸಾಕಷ್ಟು ಸೇವೆ ಮಾಡಬಹುದು,ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನ ಅರ್ಹರಿಗೆ ನೀಡಬಹುದು,ಕ್ಷೇತ್ರದ ಸಮಗ್ರ ಅಭಿವೃದ್ದಿಗೆ ದುಡಿಯಬಹುದೆಂಬ ಆಸೆಯಿಂದ ಮಲ್ಲೇಶ್ವರಂ ಕ್ಷೇತ್ರದ ನಾಗರೀಕರು ರಶ್ಮಿರವಿಕಿರಣ್ ರಾಜಕೀಯಕ್ಕೆ ಬರಬೇಕೆಂದು ಬಯಸುತ್ತಿದ್ದಾರೆ ಹಾಗಾಗಿ ರಶ್ಮಿ ರಾಜಕೀಯಕ್ಕೆ ಬಂದರೆ ರಾಜಕಾರಣದಲ್ಲೊಂದು ನವಮನ್ವಂತರಕ್ಕೆ ಕಾರಣವಾಗಬಹುದೇನೊ!



ರವಿಕಿರಣ್

ದೇಶದ ರಕ್ಷಣೆಗೆ ಶ್ರಮಿಸುತ್ತ ಪ್ರಾಣಾರ್ಪಣೆ ಮಾಡಿದ ಯೋಧರಿಗೆ ನಮನ ಸಲ್ಲಿಸಿ ಅವರ ಕುಟುಂಬಗಳನ್ನ ಸಂತೈಸಿ ಧೈರ್ಯ ತುಂಬುವ ಮೂಲಕ ಅವರಿಗೆ ನೆರವಿನ ಸಹಾಯ ಹಸ್ತ ಚಾಚುವ ಮೂಲಕ ಮಡಿದ ಯೋಧರಿಗೆ ಮೆಣದಬತ್ತಿ ಹಚ್ಚುವ ಮೂಲಕ ಸ್ಮರಿಸಿ ಸಾರ್ಥಕತೆಯ ಭಾವಕ್ಕೆ ಒಳಗಾದರು

ನಾಡು,ನುಡಿ ಹಾಗೂ ಮಾತೃಭಾಷೆಯ ಅಭಿಮಾನ

ಕನ್ನಡ ನಾಡು ನುಡಿಯ ಬಗ್ಗೆ ಅಪಾರ ಕಾಳಜಿ ಹೊಂದಿರುವ ಇವರು ಕನ್ನಡ ರಾಜ್ಯೋತ್ಸವ ಆಚರಿಸುವ ಯುವಕರಿಗೆ ಕಿರಣ್ ಫೌಂಡೇಷನ್ ವತಿಯಿಂದ ಪ್ರೋತ್ಸಾಹ ನೀಡುತ್ತ ಯುವಕರ ಪ್ರೀತಿ ಪಾತ್ರರಾಗಿದ್ದಾರೆ

ಪ್ರಶಸ್ತಿ ಸಮ್ಮಾನಗಳು

ಇವರ ವಿಶಿಷ್ಟ ನಿಸ್ವಾರ್ಥ ಸೇವೆಯನ್ನ ಪರಿಗಣಿಸಿ ನಾನಾ ಸಂಘ ಸಂಸ್ಥೆಗಳು ನಾನಾ ರೀತಿಯ ಬಿರುದುಗಳನ್ನ ನೀಡಿ ಸನ್ಮಾನಿಸಿವೆ

ಹಲವು ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ,ಆದರೆ ಪ್ರಶಸ್ತಿ, ಸನ್ಮಾನ, ಬಿರುದುಗಳಿಗಿಂತ ಜನತೆಯ ಪ್ರೀತಿ ಆಶಿರ್ವಾದವೇ ಮುಖ್ಯ ಎಂದು ವಿನಮ್ರರಾಗಿ ಹೇಳುತ್ತಾರೆ.

ಜೈಲುಹಕ್ಕಿಗಳ ಕುಟುಂಬಗಳಿಗೆ ಸಾಂತ್ವನದೊಂದಿಗೆ ಸಹಾಯ ಹಸ್ತ

ನಾನಾ ಕಾರಣಗಳಿಗೆ ಜೈಲು ಪಾಲಾದವರ ಕುಟುಂಬಲು ಆರ್ಥಿಕ ಸಮಸ್ಯೆಯಿಂದಾಗಿ ಮಕ್ಕಳಿಗೆ ಶಿಕ್ಷಣ ನೀಡಲು ಅಸಹಾಯರಾಗಿ ಒದ್ದಾಡುವಾಗ ಅವರಿಗೆ ನಾನಿದ್ದೇನೆ ಎಂದು ಅವರ ಕುಟುಂಬಳಿಗೆ ಧೈರ್ಯ ತುಂಬಿ ,ಅವರ ಮಕ್ಕಳ ಶಿಕ್ಷಣದ ಸಂಪೂರ್ಣ ಖರ್ಚನ್ನ ತಾನೇ ವಹಿಸಿಕೊಂಡು ಮಾನವೀತೆಯ ಸಾಕರ ಮೂರ್ತಿಯಾಗಿ ನೊಂದವರ ಕಣ್ಣಗಳಲ್ಲಿ ಕಂಡಿದ್ದು ಸುಳ್ಳಲ್ಲ. ಹಾಗೆ ಸಾಂಸ್ಕೃತಿಕ,ಧಾರ್ಮಿಕ ಕ್ಷೇತ್ರಕ್ಕೂಅಪಾರ ಕೊಡುಗೆಯನ್ನ ನೀಡಿರುವ ರಶ್ಮಿ ಹಲವು ದೇವಾಲಯಗಳ ಪುನ:ಶ್ಚೇತನಕ್ಕೆ ಪ್ರೋತ್ಸಾಹ ನೀಡಿದ್ದಾರೆ, ಹಬ್ಬದ ಸಂದರ್ಭಗಳಲ್ಲಿ ನಾಗರೀಕರಿಗೆ ಉಡುಗೋರೆಗಳನ್ನ ನೀಡುವ ಮೂಲಕ ಪ್ರತಿವರುಷ ಗಣೇಶದ ಹಬ್ಬದ ಪ್ರಯುಕ್ತ ಸಾವಿರಾರು ಜನರಿಗೆ ಪರಿಸರ ಸ್ನೇಹಿ ಮಣ್ಣಿನ ಗಣಪತಿಮೂರ್ತಿಗಳನ್ನ ಹಾಗೂ ದೀಪಾವಳಿಯಲ್ಲಿ ಸಾವಿರಾರು ಮಣ್ಣಿನ ಹಣತೆಗಳನ್ನ ಜನತೆಗೆ ನೀಡಿದ್ದಾರೆ,ತುಳಸಿ ಹಬ್ಬದಲ್ಲಿ ಒಂದು ಲಕ್ಷಕ್ಕೂ ಅಧಿಕ ತುಳಸಿ ಗಿಡಗಳನ್ನ ಜನತೆ ನೀಡಿ ಪರಿಸರ ಕಾಳಜಿಯನ್ನ ಮೆರೆದಿದ್ದಾರೆ

ಕಾಂಗ್ರೆಸ್ ಪಕ್ಷದ ವತಿಯಿಂದ ಮಲ್ಲೇಶ್ವರಂ ಕ್ಷೇತ್ರದಲ್ಲಿ ಸ್ಪರ್ಧಿಸಲು ನಿರ್ಧಾರ

ಹಾಗೆ ನೋಡಿದರೆ ರಾಜಕೀಯಕ್ಕೆ ಬರುವುದನ್ನ ಕನಸು ಮನಸ್ಸಿನಲ್ಲೂ ಎಣಿಸದೇ ತಮ್ಮ ಪಾಡಿಗೆ ಇದ್ದ ರಶ್ಮಿರವಿಕಿರಣ್ ಇಂದು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಅರ್ಜಿ ಹಾಕಿದ್ದಾರೆ ಎಂದರೆ ಅದಕ್ಕೆ ಕಾರಣ ಮಲ್ಲೇಶ್ವರಂ ಕ್ಷೇತ್ರದ ನಾಗರೀಕರು.

ನಾನಾ ರೀತಿಯ ಸಮಾಜಸೇವೆಯಲ್ಲಿ ತೊಡಗಿಸಿಕೊಂಡು ಕೆರೆಯ ನೀರನ್ನ ಕೆರೆಗೆ ಚೆಲ್ಲಿ ಎಂಬ ನಾಣ್ಣುಡಿಯಂತೆ ತಾವು ಗಳಿಸಿದ್ದರಲ್ಲಿ ಸಮಾಜಕ್ಕೊಂದಿಷ್ಟು ನೀಡಬೇಕು ಅದರಲ್ಲೂ ಬಡ ಮತ್ತು ಅಸಹಾಯಕ ವರ್ಗಕ್ಕೆ ಸೇವೆ ಮಾಡಬೇಕೆಂಬ ಹಪಹಪಿಯಿಂದ ರಶ್ಮಿ ರವಿಕಿರಣ್ ಹತ್ತಾರು ಸೇವಕಾರ್ಯಗಳಲ್ಲಿ ತೊಡಗಿಸಿಕೊಂಡು ಯಾವುದೇ ರೀತಿಯ ಪ್ರತಿಪಲಾಪೇಕ್ಷೆಯನ್ನ ಬಯಸದೇ ತಾವು ಗಳಿಸಿದ ಸ್ವಂತ ಹಣದಿಂದಲೇ ಸೇವೆಗೆ ತೊಡಗಿಸಿಕೊಂಡು ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದ ರಶ್ಮಿಯವರನ್ನ ಈ ಬಾರಿ ಬರಲಿರುವ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವಂತೆ ನಾಗರೀಕರು ಒತ್ತಾಯ ಹೇರಿದ ಕಾರಣ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಸಜ್ಜಾಗಿದ್ದಾರೆ.

ಹೈಕಮಾಂಡ್ ಸೂಚನೆಯಂತೆ ನಡೆಯುವೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ರಶ್ಮಿ ಇಚ್ಚಿಸಿದರೂ ಹೈಕಮಾಂಡ್ ತೀರ್ಮಾನಕ್ಕೆ ಬದ್ದ ಎಂದು ಹೇಳುವ ರಶ್ಮಿ ಹೈಕಮಾಂಡ್ ಸೂಚನೆಯಂತೆ ನಡೆಯಲು ನಿರ್ದರಿಸಿದ್ದಾರೆ

ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಚ್‌.ಎಸ್‌. ಸಚ್ಚಿದಾನಂದ ಮೂರ್ತಿ ಮನವಿ

‘ಬ್ರಾಹ್ಮಣತ್ವ ಉಳಿಸಲು ಒಂದಾಗಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ರಾಹ್ಮಣತ್ವ ಉಳಿಯಬೇಕಾದರೆ ಬ್ರಾಹ್ಮಣ ಸಮುದಾಯದವರೆಲ್ಲರೂ ಆಂತರಿಕ ಕಚ್ಚಾಟಗಳನ್ನು ಬಿಟ್ಟು ಸಂಘಟಿತರಾಗಬೇಕು’ ಎಂದು ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಚ್‌.ಎಸ್‌. ಸಚ್ಚಿದಾನಂದ ಮೂರ್ತಿ ತಿಳಿಸಿದರು.

ಚಿತ್ಪಾವನ ಸಮಾಜ ನಗರದಲ್ಲಿ ಶನಿವಾರ ಹಮ್ಮಿಕೊಂಡ ಸಮಾಜದ ‘ಸುವರ್ಣ ಸಂಭ್ರಮ’ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

‘ಬ್ರಾಹ್ಮಣ ಸಮುದಾಯದಲ್ಲಿ ಹಲವು ಉಪಜಾತಿಗಳಿದ್ದು, ಅವುಗಳ ನಡುವೆ ಆಂತರಿಕ ಕಚ್ಚಾಟ ನಡೆಯುತ್ತಲೇ ಇರುತ್ತದೆ. ಬ್ರಾಹ್ಮಣ ಸಮಾಜದಲ್ಲಿರುವ ಮಠಗಳಲ್ಲಿ ಒಂದು ಮಠವನ್ನು ಕಂಡರೆ ಮತ್ತೊಂದು ಮಠಕ್ಕೆ ಆಗದಿರುವುದು ವಿಪರ್ಯಾಸ. ರಾಜ್ಯದಲ್ಲಿ 42.5 ಲಕ್ಷ ಮಂದಿ ಬ್ರಾಹ್ಮಣರಿದ್ದಾರೆ. 21 ವಿಧಾನಸಭೆ ಕ್ಷೇತ್ರಗಳ ಚುನಾವಣೆಯಲ್ಲಿ ಬ್ರಾಹ್ಮಣರು ನಿರ್ಣಾಯಕ ಪಾತ್ರ ವಹಿಸುತ್ತಾರೆ. ನಮ್ಮೊಳಗಿನ ಕಚ್ಚಾಟದಿಂದ ‘ಆಟಕ್ಕುಂಟು ಲೆಕ್ಕಕ್ಕಿಲ್ಲ’ ಎಂಬಂತಾಗಿದೆ ನಮ್ಮ ಸ್ಥಿತಿ’ ಎಂದು ಬೇಸರ ವ್ಯಕ್ತಪಡಿಸಿದರು.

‘ಬ್ರಾಹ್ಮಣರು ರಾಜಕೀಯವಾಗಿ ಸಂಘಟಿತವಾಗಬೇಕು. ನಮ್ಮ ಹಕ್ಕು ಮತ್ತು ಸವಲತ್ತುಗಳನ್ನು ಸಂಘಟನೆ ಮೂಲಕ ಕೇಳಬೇಕು. ದೇಶದ ಸ್ವಾತಂತ್ರ್ಯಕ್ಕಾಗಿ ವೀರ್ ಸಾವರ್ಕರ್, ಚಂದ್ರಶೇಖರ್ ಅಜಾದ್ ಸೇರಿ ಹಲವು ಬ್ರಾಹ್ಮಣರು ಹೋರಾಟ ಮಾಡಿದ್ದಾರೆ. ಇಂತಹ ಸಮುದಾಯ ಈಗ ತುಳಿತಕ್ಕೆ ಒಳಗಾಗಿದೆ’ ಎಂದರು.

ವಿಧಾನ ಪರಿಷತ್ತಿನ ಸದಸ್ಯ ಪ್ರತಾಪ್ ಸಿಂಹ ನಾಯಕ್, ‘ಸ್ವಾತಂತ್ರ್ಯ ಹೋರಾಟದಲ್ಲಿ ಚಿತ್ಪಾವನ ಸಮುದಾಯದವರ ಕೊಡುಗೆಯನ್ನು ಮರೆಯಲು ಸಾಧ್ಯವಿಲ್ಲ. ಭಾರತದಲ್ಲೀಗ ಹಲವು ಬದಲಾವಣೆ ಕಾಣುತ್ತಿದ್ದೇವೆ. ಅಯೋಧ್ಯೆಯಲ್ಲಿ ನಡೆದ ರಾಮ ಮಂದಿರ ಹೋರಾಟದಲ್ಲಿ ನಾನು ಸಹ ಭಾಗವಹಿಸಿದ್ದೆ. ಅಲ್ಲಿ ಈಗ ರಾಮಮಂದಿರ ನೋಡಿದಾಗ ಮನಸ್ಸಿಗೆ ಸಂತೋಷವಾಗುತ್ತದೆ’ ಎಂದು ಹೇಳಿದರು.

ಎಡನೀರು ಮಠದ ಸಚ್ಚಿದಾನಂದಭಾರತೀ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.



ಸಮಾರಂಭದಲ್ಲಿ ಯಕ್ಷಗಾನ ವಿದ್ವಾಂಸ ಪ್ರಭಾಕರ ಜೋಶಿ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಚಿತ್ಪಾವನ ಸಮಾಜದ ಅಧ್ಯಕ್ಷ ಎಂ.ಗಣಪತಿ ಜೋಶಿ, ಸದಸ್ಯೆ ನಂದಿನಿ ಜೋಶಿ, ಅಖಿಲ ಕರ್ನಾಟಕ ಚಿತ್ಪಾವನ ಬ್ರಾಹ್ಮಣ ಸಂಘದ ಅಧ್ಯಕ್ಷ ಗೋವಿಂದ ಎನ್‌. ಫಡಕೆ ಮತ್ತು ಚಿತ್ಪಾವನ ಸಮಾಜದ ಗೌರವಾಧ್ಯಕ್ಷ ವಿಷ್ಣು ಡೋಂಗ್ರೆ ಇದ್ದಾರೆ – ಪ್ರಜಾವಾಣಿ ಚಿತ್ರ

‘ಮುಖಂಡರಿಂದ ಅಪಪ್ರಚಾರ’

ನೆಲಮಂಗಲ: ಶ್ರೀನಿವಾಸ್ ಅವರನ್ನು ವಿಧಾನಸಭಾ ಚುನಾವಣೆಗೆ ಅಭ್ಯರ್ಥಿ ಎಂದು ಕೆಲವು ಕಾಂಗ್ರೆಸ್ ಮುಖಂಡರು ಅಪಪ್ರಚಾರ ಮಾಡುವ ಮೂಲಕ ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಗೋಪಿ ಕಿಡಿಕಾರಿದರು.

ಸ್ಥಳೀಯ ಮೂಲ ಕಾಂಗ್ರೆಸ್ಸಿಗರಲ್ಲೇ 10ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದಾರೆ. ಹೈಕಮಾಂಡ್‌ನಿಂದ ಅಭ್ಯರ್ಥಿ ಘೋಷಣೆ ಆಗಿಲ್ಲ. ಆದರೂ ವೀಕ್ಷಕರಾಗಿ ಬಂದಂತಹ ಶ್ರೀನಿವಾಸ್ ಅವರಿಂದ ತಾಲ್ಲೂಕಿನಾದ್ಯಂತ ಕಾರ್ಯಕ್ರಮಗಳನ್ನು ಆಯೋಜಿಸಿ ಉಡುಗೊರೆಗಳನ್ನು ಕೊಡಿಸುತ್ತಿದ್ದಾರೆ. ಇವರೇ ಮುಂದಿನ ಅಭ್ಯರ್ಥಿ ಎಂದು ತಾಲ್ಲೂಕು ಅಧ್ಯಕ್ಷರು, ಜಿಲ್ಲಾ ಅಧ್ಯಕ್ಷರು ಹಾಗೂ ಕೆಲವು ಮುಖಂಡರು ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಆರೋಪಿಸಿದರು.

ಮುಖಂಡ ಚೌಡಯ್ಯ ಮಾತನಾಡಿ, ಹಿರಿಯ ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರ ಕಡೆಗಣನೆ ಆಗುತ್ತಿದೆ ಎಂದರು. ಯುವ ಘಟಕದ ರಾಜ್ಯ ಕಾರ್ಯದರ್ಶಿ ಯೋಗೇಶ್‌ಗೌಡ, ಪೆಮ್ಮನಹಳ್ಳಿ ದೇವರಾಜು, ಗ್ರಾಮ ಪಂಚಾಯಿತಿ ಸದಸ್ಯರಾದ ಸಂತೋಷ್, ಜಗದೀಶ್, ಮೂರ್ತಿ, ಆರ್‌.ಉಮಾ ಶಂಕರ್, ನರಸಿಂಹಮೂರ್ತಿ,ಶ್ರೀನಿವಾಸ್‌ಇದ್ದರು.

ಕೆಜಿಎಫ್ ಬಾಬು ಸಹೋದರಿ ಮನೆಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ಯೂಸುಫ್ ಷರೀಫ್ ಅಲಿಯಾಸ್ ಕೆಜಿಎಫ್ ಬಾಬು ಸಹೋದರಿ ಶಾಹೀನ್ ತಾಜ್ ಮನೆಯಲ್ಲಿ ಶುಕ್ರವಾರ ರಾತ್ರಿ ಬೆಂಕಿ ಅವಘಡ ಸಂಭವಿಸಿದ್ದು, ಪೀಠೋಪಕರಣ ಹಾಗೂ ಇತರೆ ವಸ್ತುಗಳು ಸುಟ್ಟಿವೆ.

ಘಟನೆ ಸಂಬಂಧ ಸಂಪಂಗಿ ರಾಮನಗರ ಠಾಣೆಗೆ ದೂರು ನೀಡಿರುವ ಶಾಜೀನ್ ತಾಜ್, ‘ರಾಜಕೀಯ ದ್ವೇಷದಿಂದ ನನ್ನ ಮನೆಗೆ ಪೆಟ್ರೋಲ್ ಎರಚಿ ಬೆಂಕಿ ಹಚ್ಚಲಾಗಿದೆ. ಆರ್‌.ವಿ. ಯುವರಾಜ್ ಹಾಗೂ 10 ಮಂದಿ ಮೇಲೆ ಅನುಮಾನವಿದೆ’ ಎಂದಿದ್ದಾರೆ. ಇದರನ್ವಯ ಯುವರಾಜ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಶಾಹೀನ್ ತಾಜ್ ಅವರು ಕೆ.ಎಸ್. ಗಾರ್ಡನ್‌ನಲ್ಲಿರುವ ಮನೆಯಲ್ಲಿ 25 ವರ್ಷಗಳಿಂದ ವಾಸವಿದ್ದಾರೆ. ಶುಕ್ರವಾರ ತಡರಾತ್ರಿ ಏಕಾಏಕಿ ಮನೆಗೆ ಬೆಂಕಿ ಹೊತ್ತಿಕೊಂಡಿತ್ತು, ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಕೆಜಿಎಫ್ ಬಾಬುವನ್ನು ಕ್ಷೇತ್ರ ಬಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ, ಕೊಲೆ ಮಾಡುತ್ತೇನೆ’ ಎಂಬುದಾಗಿ ಯುವರಾಜ್ ಹಾಗೂ ಇತರರು ಬೆದರಿಕೆಯೊಡ್ಡಿದ್ದರೆಂದು ಶಾಹೀನ್ ದೂರಿದ್ದಾರೆ. ಆದರೆ, ಬೆಂಕಿ ಹೊತ್ತಿಕೊಳ್ಳಲು ಕಾರಣವೇನು? ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ’ ಎಂದು ತಿಳಿಸಿದರು.

ತೇಜೋವಧೆಗಾಗಿ ಸುಳ್ಳು ಆರೋಪ: ತಮ್ಮ ವಿರುದ್ಧದ ಆರೋಪಕ್ಕೆ ಸಂಬಂಧಪಟ್ಟಂತೆ ಪೊಲೀಸರಿಗೆ ಪ್ರತಿದೂರು ನೀಡಿರುವ ಆರ್‌.ವಿ. ಯುವರಾಜ್, ‘ನನಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ. ಕೆಜಿಎಫ್ ಬಾಬು ಸುಳ್ಳು ಹೇಳಿಕೊಂಡು ರಾಜಕಾರಣ ಮಾಡುತ್ತಿದ್ದಾರೆ. ನನ್ನ ತೇಜೋವಧೆಗಾಗಿ ಪಿತೂರಿ ನಡೆಸಿ ಈ ರೀತಿ ಆರೋಪ ಮಾಡಲಾಗಿದೆ. ತಪ್ಪಿತಸ್ಥರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಿ’ ಎಂದಿದ್ದಾರೆ.

ಶ್ರೀನಿವಾಸ ಕಲ್ಯಾಣೋತ್ಸವ

ಪೀಣ್ಯ ದಾಸರಹಳ್ಳಿ: ಪೀಣ್ಯ 2ನೇ ಹಂತದ ಜಿ.ಕೆ.ಡಬ್ಲ್ಯು ಲೇಔಟ್ ಬಳಿಯ ಮುನಿಗಂಗಪ್ಪ ಮೈದಾನದಲ್ಲಿ ಫೆ.12ರಂದು ಸಂಜೆ 5ರಿಂದ ರಾತ್ರಿ 8ರ ತನಕ ಶ್ರೀನಿವಾಸ ಕಲ್ಯಾಣೋತ್ಸವ ನಡೆಯಲಿದೆ.

‘ಕಲ್ಯಾಣೋತ್ಸವಕ್ಕೆ ಉಚಿತ ಪ್ರವೇಶದ ಪಾಸ್‌ಗಳನ್ನು ಪೀಣ್ಯ 2ನೇ ಹಂತದ ಬಿಜೆಪಿ ಕಚೇರಿ ಹಾಗೂ ಮಲ್ಲಸಂದ್ರದ ಏಕತಾ ಭವನದಲ್ಲಿ ಪಡೆಯಬಹುದು. ಪಾಸ್ ಪಡೆದ ಮಹಿಳೆಯರಿಗೆ ಸೀರೆ, ಪುರುಷರಿಗೆ ಸಮವಸ್ತ್ರ ನೀಡಲಾಗುವುದು ಎಂದು ದಾಸರಹಳ್ಳಿ ಮಂಡಲ ಬಿಜೆಪಿ ಅಧ್ಯಕ್ಷ ಎನ್. ಲೋಕೇಶ್ ಗೌಡ ತಿಳಿಸಿದರು.

ಸುಲಿಗೆ ಪ್ರಕರಣ: ಇಬ್ಬರ ಬಂಧನ

ಬೆಂಗಳೂರು:ಜನರನ್ನು ಅಡ್ಡಗಟ್ಟಿ ಚಾಕು ತೋರಿಸಿ ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕಲಾಸಿಪಾಳ್ಯ ಪೊಲೀಸರು ಬಂಧಿಸಿದ್ದಾರೆ. ‘ಕಾಟನ್‌ಪೇಟೆ ಸಿದ್ದಾರ್ಥನಗರದ ಮೊಹಮ್ಮದ್ ಯೂನೂಸ್ (35), ಮೊಹಮ್ಮದ್ ಫಯಾಜ್ (20) ಬಂಧಿತರು. ಇವರಿಂದ ₹ 7.20 ಲಕ್ಷ ಮೌಲ್ಯದ 25 ಮೊಬೈಲ್, 4 ದ್ವಿಚಕ್ರ ವಾಹನ, ₹45,000 ನಗದು ಜಪ್ತಿ ಮಾಡಲಾಗಿದೆ.

ಸ್ಯಾಂಕಿ ಮೇಲ್ಸೇತುವೆಗೆ ಕಾಂಗ್ರೆಸ್ ವಿರೋಧ

ಬೆಂಗಳೂರು: ಸ್ಯಾಂಕಿ ಕೆರೆ ಪಕ್ಕದ ರಸ್ತೆ ವಿಸ್ತರಣೆ ಹಾಗೂ ಮೇಲ್ಸೇತುವೆ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿರುವ ಕಾಂಗ್ರೆಸ್, ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ಬಹಿರಂಗಪಡಿಸುವಂತೆ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹಾಗೂ ಕೆಪಿಸಿಸಿ ಸಂವಹನಾ ವಿಭಾಗದ ಅಧ್ಯಕ್ಷ ಪ್ರಿಯಾಂಕ್ ಖರ್ಗೆ, ರಸ್ತೆ ವಿಸ್ತರಣೆ ಯೋಜನೆಯನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ರಸ್ತೆ ವಿಸ್ತರಿಸಿದರೆ ಕೆರೆಗೆ ತೊಂದರೆಯಾಗಲಿದೆ. ಅಲ್ಲಿ 100–150 ವರ್ಷದ ಹಳೆಯ ಮರಗಳಿವೆ. 80 ಕ್ಕೂ ಹೆಚ್ಚು ಪ್ರಭೇದದ ವಲಸೆ ಪಕ್ಷಿಗಳ ಮೇಲೆ ಪರಿಣಾಮ ಬೀರಲಿದೆ. ಸರ್ಕಾರ ಉದ್ದೇಶಿಸಿರುವ ಯೋಜನೆ ಬಫರ್ ವಲಯದಲ್ಲಿದ್ದು, ಯೋಜನೆ ಅನುಷ್ಠಾನ ಮಾಡಿದರೆ ಹಸಿರು ನ್ಯಾಯಾಧೀಕರಣದ ತೀರ್ಪುಗಳನ್ನು ಉಲ್ಲಂಘಿಸಿದಂತಾಗುತ್ತದೆ ಎಂದು ಹರಿಪ್ರಸಾದ್ ಪ್ರತಿಪಾದಿಸಿದರು.

ಈ ಭಾಗದಲ್ಲಿನ ಸುಗಮ ಸಂಪರ್ಕಕ್ಕಾಗಿ ಭಾಷ್ಯಂ ವೃತ್ತದಿಂದ ಮಲ್ಲೇಶ್ವರದ 18ನೇ ಅಡ್ಡರಸ್ತೆವರೆಗೂ ರಸ್ತೆ ಅಗಲೀಕರಣದ ಜತೆಗೆ ನಾಲ್ಕು ಪಥದ ಮೇಲ್ಸೇತುವೆ ನಿರ್ಮಿಸುತ್ತಿದ್ದಾರೆ. ಇದು ಜನೋಪಕಾರಿ ಯೋಜನೆಯಾಗಿದ್ದರೆ, ಜನರ ಅಭಿಪ್ರಾಯ ಸಂಗ್ರಹಿಸಬೇಕಿತ್ತು. ಈ ಯೋಜನೆ ಬೇಡ ಎಂದು 22 ಸಾವಿರ ನಿವಾಸಿಗಳು ಸಹಿ ಹಾಕಿ, ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಎರಡು ಸಾವಿರ ಮಕ್ಕಳು ಬಿಬಿಎಂಪಿಗೆ ಮನವಿ ಮಾಡಿದ್ದಾರೆ. ಮುಂದಿನ ಪೀಳಿಗೆಗಾಗಿ ಈ ಯೋಜನೆ ಎನ್ನುತ್ತೀರಿ. ಮಕ್ಕಳೇ ಬೇಡ ಎನ್ನುತ್ತಿದ್ದಾರೆ. ಅವರ ಮನವಿ ತಿರಸ್ಕರಿಸಿ ಈ ಯೋಜನೆ ಮಾಡಲು ಮುಂದಾಗಿರುವುದೇಕೆ ಎಂದು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಜಿ. ಹಳ್ಳಿ ಶಿವರಾಮ್ ವಿರುದ್ಧ ಎಫ್‌ಐಆರ್


ಶಸ್ತ್ರಚಿಕಿತ್ಸೆ ಬಳಿಕ ನಾಯಿಗಳ ಸಾವು

• ಎಚ್.ಎಂ. ಚೈತನ್ಯ ಸ್ವಾಮಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಒಳಗಾದ ಬೀದಿನಾಯಿಗಳು ಅನುಮಾನಾಸ್ಪದ ರೀತಿಯಲ್ಲಿ ಮೃತಪಡುತ್ತಿದ್ದು, ಕರ್ತವ್ಯಲೋಪ ಎಸಗಿದ ಆರೋಪದಡಿ ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಜಿ. ಹಳ್ಳಿ ಶಿವರಾಮ್ ವಿರುದ್ಧ ಕಾಟನ್‌ಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಪಶು ಸಂಗೋಪನಾ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಯ ಪ್ರಾಣಿ ಹಿಂಸೆ ತಡೆ ನಿರೀಕ್ಷಕಿ ನವಿನಾ ಕಾಮತ್ ಅವರು ದೂರು ನೀಡಿದ್ದಾರೆ. ಬೆಂಗಳೂರು ನಗರ ದಕ್ಷಿಣ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಎಂ.ಜಿ. ಹಳ್ಳಿ ವಿರುದ್ಧ ಫೆ. 2ರಂದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.



ಸೋಂಕಿನಿಂದ ಬಳಲುತ್ತಿರುವ ನಾಯಿ

'4 ತಿಂಗಳಿನಲ್ಲಿ 85 ನಾಯಿಗಳ ಸಾವು'

'2022ರ ಅಕ್ಟೋಬರ್‌ನಿಂದ 2023ರ ಜನವರಿ ಅಂತ್ಯದವರೆಗೆ ಒಟ್ಟು 85 ಬೀದಿನಾಯಿಗಳು ಮೃತಪಟ್ಟಿರುವ ಬಗ್ಗೆ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶಸ್ತ್ರಚಿಕಿತ್ಸೆ ಬಳಿಕ ಕಾಯಿಲೆ ಕಾಣಿಸಿಕೊಂಡು ನಾಯಿಗಳು ಸಾಯುತ್ತಿವೆ. ಉಸ್ತುವಾರಿ ಅಧಿಕಾರಿಗಳ ನಿರ್ಲಕ್ಷ್ಯವೂ ಎದ್ದು ಕಾಣುತ್ತಿವೆ. ನಾಯಿಗಳ ಸಾವಿನ ಸಂಬಂಧ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದ್ದು, ಆರೋಪಿತ ಸಹಾಯಕ ನಿರ್ದೇಶಕನನ್ನು ಸದ್ಯದಲ್ಲೇ ವಿಚಾರಣೆ ನಡೆಸಲಾಗುವುದು' ಎಂದು ಮೂಲಗಳು ತಿಳಿಸಿವೆ.

'ಚಾಮರಾಜಪೇಟೆಯಲ್ಲಿರುವ ನಗರ ಪಶು ವೈದ್ಯಕೀಯ ಆಸ್ಪತ್ರೆಯಲ್ಲಿ ಬೀದಿನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಲಾಗುತ್ತಿದೆ. ಈ ಶಸ್ತ್ರಚಿಕಿತ್ಸೆ ವೇಳೆಯಲ್ಲೇ ಸೋಂಕು ತಗುಲುತ್ತಿರುವ ಅನುಮಾನವಿದೆ. ಹೀಗಾಗಿ, ಶಸ್ತ್ರಚಿಕಿತ್ಸೆ ಬಳಿಕ ಬಿಡುಗಡೆಗೊಳಿಸುವ ನಾಯಿಗಳು, ಕೆಲವೇ ದಿನಗಳಲ್ಲಿ ಮೃತಪಡುತ್ತಿರುವುದಾಗಿ ದೂರುದಾರರು ಆರೋಪಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದೂರಿನ ವಿವರ: 'ಡಾ. ಎಂ.ಜಿ. ಹಳ್ಳಿ ಶಿವರಾಮ್ ಅವರ ನೇತೃತ್ವದಲ್ಲಿ ಬೀದಿನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಲಾಗುತ್ತಿದೆ. ಇಂಥ ಶಸ್ತ್ರಚಿಕಿತ್ಸೆಗೆ ಒಳಗಾದ ನಾಯಿಗಳು ಕೆಲವೇ ವಾರಗಳಲ್ಲಿ ಸಾಯುತ್ತಿರುವ ಬಗ್ಗೆ ದೂರುಗಳು ಬಂದಿವೆ' ಎಂದು ನವಿನಾ ಕಾಮತ್ ದೂರಿನಲ್ಲಿ ಹೇಳಿದ್ದಾರೆ.

'ಶಸ್ತ್ರಚಿಕಿತ್ಸೆಗೂ ಮುನ್ನ ನಾಯಿಗಳಿಗೆ ರೋಗ ನಿರೋಧಕ ಚುಚ್ಚುಮದ್ದು ನೀಡಬೇಕೆಂಬ ನಿಯಮವಿದೆ. ಶಸ್ತ್ರಚಿಕಿತ್ಸೆ ವೇಳೆ ಈ ನಿಯಮ ಉಲ್ಲಂಘನೆಯಾಗಿದೆ. ಬಿಬಿಎಂಪಿ ದಕ್ಷಿಣ ವಲಯದಲ್ಲಿರುವ ಬಹುತೇಕ ನಾಯಿಗಳು, ಕೋರೆ ಹಲ್ಲು ಕಾಯಿಲೆಯಿಂದ ತತ್ತರಿಸುತ್ತಿವೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ನಾಯಿಗಳ ಸಾವಿನ ಬಗ್ಗೆ ಡಾ. ಎಂ.ಜಿ.ಹಳ್ಳಿ ಶಿವರಾಮ್ ಅವರಿಗೆ ಹಲವು ಬಾರಿ ಮಾಹಿತಿ ನೀಡಲಾಗಿದೆ. ಸೂಕ್ತ ಲಸಿಕೆ ಕೊಡಿಸುವಂತೆಯೂ ಮನವಿ ಮಾಡಲಾಗಿದೆ. ಆದರೆ, ಯಾವುದಕ್ಕೂ ಅವರು ಸ್ಪಂದಿಸಿಲ್ಲ. ತಮಗೆ ವಹಿಸಿದ್ದ ಕರ್ತವ್ಯ ನಿರ್ವಹಣೆ ಮಾಡುವಲ್ಲಿ ಅವರು ವಿಫಲರಾಗಿದ್ದಾರೆ. ಹೀಗಾಗಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದೂ ನವಿನಾ ಕಾಮತ್ ದೂರಿನಲ್ಲಿ ಆಗ್ರಹಿಸಿದ್ದಾರೆ.

ಆನ್‌ಲೈನ್ ಸ್ನೇಹಿತನ ಜೊತೆ ಪತ್ನಿ ಪರಾರಿ: ಪತಿ ದೂರು

ಬೆಂಗಳೂರು: 'ಆನ್‌ಲೈನ್‌ನಲ್ಲಿ ಪರಿಚಯವಾದ ವ್ಯಕ್ತಿಯ ಜೊತೆ ಪತ್ನಿ ಪರಾರಿಯಾಗಿದ್ದು, ಅವಳನ್ನು ಹುಡುಕಿ ಕೊಡಿ' ಎಂದು ಪತಿಯೊಬ್ಬರು ಯಶವಂತಪುರ ಠಾಣೆಗೆ ದೂರು ನೀಡಿದ್ದಾರೆ.

ಸ್ಥಳೀಯ ನಿವಾಸಿಯಾಗಿರುವ 39 ವರ್ಷದ ವ್ಯಕ್ತಿ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮಹಿಳೆ ಪತ್ತೆಗಾಗಿ ಹುಡುಕಾಟ ಆರಂಭಿಸಿದ್ದಾರೆ.

'ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಏಜೆನ್ಸಿಯೊಂದರಲ್ಲಿ ಕೆಲಸ ಮಾಡುತ್ತಿರುವ ದೂರುದಾರ, ಜಾರ್ಖಂಡ್‌ನ ಯುವತಿಯನ್ನು 9 ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪತಿಯೇ ಪತ್ನಿಗೆ ಮೊಬೈಲ್ ಕೊಡಿಸಿದ್ದರು. ಹಲವು ಸಾಮಾಜಿಕ ಮಾಧ್ಯಮಗಳ ಆ್ಯಪ್‌ಗಳಲ್ಲಿ ಖಾತೆ ತೆರೆದಿದ್ದ ಪತ್ನಿ, ವಿಡಿಯೊ ಹಾಗೂ ಫೋಟೊ ಅಪ್‌ಲೋಡ್ ಮಾಡುತ್ತಿದ್ದರು. ಅವರ ಫೋಟೊಗಳಿಗೆ ದೆಹಲಿಯ ದೀಪಕ್ ಎಂಬುವರು ಕಾಮೆಂಟ್ ಮಾಡುತ್ತಿದ್ದರು. ದೂರುದಾರರ ಪತ್ನಿಗೆ ಸಂದೇಶ ಕಳುಹಿಸಲಾರಂಭಿಸಿದ್ದ ದೀಪಕ್, ಆತ್ಮೀಯವಾಗಿ ಮಾತನಾಡುತ್ತಿದ್ದರು. ಪತ್ನಿ ಸಹ ದೀಪಕ್ ಜೊತೆ ಚಾಟಿಂಗ್ ಮಾಡಲಾರಂಭಿಸಿದ್ದರು. ಇಬ್ಬರ ನಡುವೆ ಸಲುಗೆ ಸಹ ಬೆಳೆದಿತ್ತು. ಪರಸ್ಪರ ವಿಡಿಯೊ ಕರೆ ಸಹ ಮಾಡುತ್ತಿದ್ದರು' ಎಂದು ಮೂಲಗಳು ಹೇಳಿವೆ

'ಇತ್ತೀಚೆಗೆ ದೆಹಲಿಯಿಂದ ಬೆಂಗಳೂರಿಗೆ ಬಂದಿದ್ದ ದೀಪಕ್, ದೂರುದಾರರ ಪತ್ನಿಯನ್ನು ಭೇಟಿಯಾಗಿದ್ದರು. ಈ ಸಂಗತಿ ಗೊತ್ತಾಗುತ್ತಿದ್ದಂತೆ ತಮ್ಮ ಪತ್ನಿಗೆ ದೂರುದಾರ ತಾಕೀತು ಮಾಡಿದ್ದರು. ಜ. 26ರಂದು ನೀರಿನಲ್ಲಿ ಮೊಬೈಲ್ ಎಸೆದಿದ್ದ ಪತ್ನಿ, ಅಂದೇ ಮನೆ ಬಿಟ್ಟು ಹೋಗಿದ್ದಾರೆ. ದೀಪಕ್ ಜೊತೆಯಲ್ಲಿ ಪತ್ನಿ ತೆರಳಿರುವುದಾಗಿ ದೂರುದಾರರು ಹೇಳುತ್ತಿದ್ದಾರೆ. ದೀಪಕ್ ಎಲ್ಲಿದ್ದಾರೆ? ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಚಿತ್ರಾವಳಿ



ಕಾನೂನು ಕಾಲೇಜು ವಿದ್ಯಾರ್ಥಿಗಳ ರಾಜ್ಯಮಟ್ಟದ ಮಾದರಿ ಅಧಿವೇಶನ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಕಾನೂನು ಸಚಿವ ವಿ. ಮಾಧುಸ್ವಾಮಿ ಪ್ರಶಸ್ತಿ ವಿತರಿಸಿದರು. ಸರ್ಕಾರದ ವಿಶೇಷ ಕಾರ್ಯದರ್ಶಿ ಎಸ್‌.ಕೆ. ಜಗದೀಶ್, ಕಿಲ್ಪಾರ್ ಸಂಸ್ಥೆಯ ನಿರ್ದೇಶಕ ದ್ವಾರಕಾನಾಥ್ ಬಾಬು, ಸಂಶೋಧಕ ರೇವಯ್ಯ ಒಡೆಯರ್ ಇದ್ದರು. ಐದು ವಲಯಗಳಲ್ಲಿ ವಿಜೇತರಾದ ಒಟ್ಟು 50 ವಿದ್ಯಾರ್ಥಿಗಳು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು



'ನಾರ್ಕೊ ಗಾಡ್' ಕೃತಿಯನ್ನು ಹಿರಿಯ ಸಾಹಿತಿ ಎಚ್‌.ಎಸ್‌.ಶಿವಪ್ರಕಾಶ್ ಬಿಡುಗಡೆ ಮಾಡಿದರು. ಗ್ರಾ.ಪಂ. ಅಧ್ಯಕ್ಷ ಪುರುಷೋತ್ತಮ, ಹಿರಿಯ ಸಾಹಿತಿ ಎಲ್‌.ಎನ್‌.ಮುಕುಂದರಾಜು, ಸಚಿವ ಎಸ್‌.ಟಿ.ಸೋಮಶೇಖರ್, ಕೃತಿಯ ಸಂಪಾದಕ ಎನ್‌.ಶಂಭು ನಾಗರಾಜಮೂರ್ತಿ, ಎಂ.ಎಸ್‌.ಆಶಾದೇವಿ, ಶೈಲಜ ಸೋಮಣ್ಣ, ಎಸ್‌.ಜಿ.ತುಂಗಾರೇಣುಕ, ಕೆ.ವಿ.ನಾಗರಾಜಮೂರ್ತಿ ಇದ್ದಾರೆ

ಅಹವಾಲು ತೋಡಿಕೊಂಡ ಜನ: ಸಚಿವ ಎಸ್‌.ಟಿ. ಸೋಮಶೇಖರ್ ಸಮಾಧಾನದ ಉತ್ತರ

ಸೌಕರ್ಯ ಕೊರತೆ: ಪರಿಹಾರದ ಆಶಾಕಿರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡಾವಣೆಗೆ ರಸ್ತೆಯೇ ಇಲ್ಲ, ಇದ್ದರೂ ಡಾಂಬರ್ ಕಂಡಿಲ್ಲ, ಬೀದಿ ದೀಪಗಳಿಲ್ಲ, ಹಾವುಗಳ ಕಾಟ ತಪ್ಪಿಲ್ಲ... ಹೀಗೆ ಹತ್ತು ಹಲವು ದೂರು–ದುಮ್ಮಾನಗಳನ್ನು ಹೊತ್ತು ಬಂದಿದ್ದ ಯಶವಂತಪುರ ವಿಧಾನಸಭಾ ಕ್ಷೇತ್ರದ ಜನರಿಗೆ ಕೊಂಚ ಸಮಾಧಾನ ದೊರೆಯಿತು.

ಜನಸ್ಪಂದನ
ಸಿಟಿಜ಼ನ್ಸ್ ಫಾರ್ ಚೇಂಜ್

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳು ‘ಚೇಂಜ್ ಮೇಕರ್ಸ್ ಆಫ್ ಕನಕಪುರ ರೋಡ್’ ಸಹಯೋಗದಲ್ಲಿ ತುರಹಳ್ಳಿ ರಸ್ತೆಯಲ್ಲಿರುವ ಶೋಭ ಫಾರೆಸ್ಟ್ ವ್ಯೂ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಶನಿವಾರ ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮವು ಸರ್ಕಾರಿ ಕಚೇರಿಗಳಿಗೆ ಅಲೆದು ಸುಸ್ತಾಗಿದ್ದ ಮತ್ತು ಅಧಿಕಾರಿಗಳ ನಿರ್ಲಕ್ಷ್ಯದಿಂದ ಬೇಸತ್ತಿದ್ದ ಜನರಲ್ಲಿ ಆಶಾಭಾವ ಮೂಡಿಸಿತು.

ಹೆಮ್ಮಿಗೆಪುರ, ತುರಹಳ್ಳಿ, ವಾಜರಹಳ್ಳಿ, ಬನಶಂಕರಿ 6ನೇ ಹಂತ, ಮಲ್ಲಸಂದ್ರ ಮತ್ತು ಸುತ್ತಮುತ್ತಲ ನಿವಾಸಿಗಳು ತಮ್ಮ ಅಹವಾಲು ಹಿಡಿದು ಬಂದಿದ್ದರು. ನಾಗರಿಕರು ಹೊತ್ತು ಬಂದಿದ್ದ ಸಮಸ್ಯೆಗಳನ್ನು ಮೂರು ಗಂಟೆಗಳಿಗೂ ಹೆಚ್ಚು ಕಾಲ ತಾಳ್ಮೆಯಿಂದ ಆಲಿಸಿದ ಈ ಕ್ಷೇತ್ರದ ಶಾಸಕರೂ ಆಗಿರುವ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್, ಕೆಲ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸುವ ಪ್ರಯತ್ನ ಮಾಡಿದರು.

ಗಂಭೀರ ಸಮಸ್ಯೆಗಳನ್ನು ಜನ ಹಂಚಿಕೊಂಡಾಗ, ಅವುಗಳನ್ನು ಪರಿಹರಿಸದ ಅಧಿಕಾರಿಗಳನ್ನು ಬಹಿರಂಗವಾಗಿಯೇ ತರಾಟೆಗೆ ತೆಗೆದುಕೊಂಡರು. ಸಭೆ ಮುಗಿದ ಕೂಡಲೇ ಸ್ಥಳಕ್ಕೆ ಹೋಗಿ ಸಮಸ್ಯೆ ಬಗೆಹರಿಸಿದ ವರದಿ ನೀಡಬೇಕು ಎಂದು ತಾಕೀತು ಮಾಡಿದರು.

ಬನಶಂಕರಿ 6ನೇ ಹಂತದಲ್ಲಿ ಮೂಲಸೌಕರ್ಯ ಕೊರತೆ, ಬಿಡಿಎ ಅನುಮೋದಿತ ಬಡಾವಣೆಗಳಲ್ಲಿ ಯಾವುದೇ ಸೌಕರ್ಯ ಇಲ್ಲದಿರುವುದು, ಬಿಡಿಎ ಮತ್ತು ಬಿಬಿಎಂಪಿ ನಡುವಿನ ಸಮನ್ವಯದ ಕೊರತೆಯಿಂದ ರೋಸಿ ಹೋಗಿರುವ ನಿವಾಸಿಗಳು ತಮ್ಮ ಅಸಮಾಧಾನ ಹೊರ ಹಾಕಿದರು. ಎಲ್ಲರನ್ನೂ ಸಮಾಧಾನಪಡಿಸಿ ಹಂತ–ಹಂತವಾಗಿ ಸಮಸ್ಯೆಗಳನ್ನು ಬಗೆಹರಿಸುವ ಭರವಸೆಯನ್ನು ಸಚಿವರು ನೀಡಿದರು.

ಜನಸ್ಪಂದನ ಸಭೆ ಪೂರ್ಣಗೊಳ್ಳುವ ಮುನ್ನ ಪಕ್ಷದ ಪ್ರಮುಖ ಸಭೆಯಲ್ಲಿ ಭಾಗವಹಿಸಬೇಕಿದ್ದ ಕಾರಣಕ್ಕೆ ಹೊರಡಲು ಸಚಿವರು ಸಿದ್ಧರಾದರು. ಆದರೆ, ಜನರ ಮನವಿಗೆ ಸ್ಪಂದಿಸಿ ಮತ್ತೊಂದು ಗಂಟೆ ಕುಳಿತು ಎಲ್ಲರ ಪ್ರಶ್ನೆಗಳಿಗೆ ಕಿವಿಯಾದರು.



ಜನಸ್ಪಂದನ ಕಾರ್ಯಕ್ರಮದಲ್ಲಿ ಸಚಿವ ಎಸ್‌.ಟಿ. ಸೋಮಶೇಖರ್ ಮಾತನಾಡಿದರು. (ಎಡದಿಂದ) ಬಿಬಿಎಂಪಿ ರಾಜಕಾಲುವೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪೂರ್ಣಿಮಾ, ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ ರಾಜಣ್ಣ, ಬೆಸ್ಕಾಂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕುಮಾರ ನಾಯಕ್, ಬಿಬಿಎಂಪಿ ವಿಶೇಷ ಆಯುಕ್ತ ರೆಡ್ಡಿ ಶಂಕರ್ ಬಾಬು, ನ್ಯಾಯಾಂಗ ಬಡಾವಣೆಯ ಪ್ರೊ.ಸತ್ಯನಾರಾಯಣ, ಸಂಚಾರ ನಿರೀಕ್ಷಕ ಮಂಜುನಾಥ್, ಕಾರ್ಯಪಾಲಕ ಎಂಜಿನಿಯರ್ ಎಂ.ಎ.ಆರೀಫ್, ತಲಘಟ್ಟಪುರ ಪೊಲೀಸ್ ಇನ್‌ಸ್ಪೆಕ್ಟರ್ ಎನ್. ಜಗದೀಶ್, ಕೆಎಸ್ಎಫ್ಎಸ್ ಎಚ್.ಎಸ್.ಸುನೀಲ್‌ಕುಮಾರ್, ಜಲಮಂಡಳಿ ಕಾರ್ಯಪಾಲಕ ಎಂಜಿನಿಯರ್ ದಿವ್ಯಶ್ರೀ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಜಯಪ್ರಕಾಶ್ ಇದ್ದರು



ತುರಹಳ್ಳಿ ರಸ್ತೆಯಲ್ಲಿರುವ ಶೋಭ ಫಾರೆಸ್ಟ್ ವ್ಯೂವ್ ಅಪಾರ್ಟ್‌ಮೆಂಟ್‌ಗೆ ಕಾವೇರಿ ನೀರಿನ ಸಂಪರ್ಕ ಕೊಡಿಸಲಾಯಿತು. ಸಚಿವ ಎಸ್‌.ಟಿ.ಸೋಮಶೇಖರ್ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ನಿವಾಸಿಗಳು, ಅಧಿಕಾರಿಗಳು ಇದ್ದರು

ಹಂತಹಂತವಾಗಿ ಮೂಲ ಸೌಕರ್ಯಗಳ ಅಭಿವೃದ್ಧಿ

ಕೋವಿಡ್ ಅವಧಿಯಲ್ಲಿನ ಹಣಕಾಸು ಸಮಸ್ಯೆಗಳಿಂದಾಗಿ ವಿವಿಧ ಬಡಾವಣೆಗಳ ಅಭಿವೃದ್ಧಿ ಕಾರ್ಯಗಳು ವಿಳಂಬವಾಗಿವೆ. ಈಗ ಸಾಕಷ್ಟು ಅನುದಾನ ದೊರಕುತ್ತಿದ್ದು, ಹಂತಹಂತವಾಗಿ ಮೂಲಸೌಕರ್ಯಗಳನ್ನು ಅನುಷ್ಠಾನಗೊಳಿಸಲಾಗುವುದು ಎಂದು ಸಚಿವ ಎಸ್‌.ಟಿ.ಸೋಮಶೇಖರ್ ಭರವಸೆ ನೀಡಿದರು.

‘ಜನರ ಸಮಸ್ಯೆಗಳಿಗೆ ವೇದಿಕೆ ಒದಗಿಸಿರುವ ‘ಪ್ರಜಾವಾಣಿ’ ಕಾರ್ಯ ಅನನ್ಯ. ನಿತ್ಯವೂ ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗುವ ಕುಂದುಕೊರತೆ, ಜನಪರ ಸುದ್ದಿಗಳನ್ನು ನೋಡಿಯೇ ಹಲವು ಸಮಸ್ಯೆಗಳನ್ನು ಬಗೆಹರಿಸಿದ್ದೇವೆ. ಅಧಿಕಾರಿಗಳು ಪ್ರತಿ ವಾರ್ಡ್‌ಗೂ ಭೇಟಿ ನೀಡಿ, ಅಲ್ಲಿನ ನಾಗರಿಕ ಸಂಘಟನೆಗಳ ಜತೆಗೆ ಚರ್ಚಿಸಬೇಕು. ಸಮಸ್ಯೆಗಳನ್ನು ಆಲಿಸಬೇಕು. ಎಲ್ಲವನ್ನೂ ಶಾಸಕರು, ಸಚಿವರು ಗಮನಿಸುವವರೆಗೆ ಸುಮ್ಮನಿರಬಾರದು. ಅಧಿಕಾರಿಗಳು ತಮ್ಮ ಕಾರ್ಯದಲ್ಲಿ ವಿಫಲವಾದಾಗ ಸಮಸ್ಯೆಗಳು ಬೆಳೆಯುತ್ತಾ ಹೋಗುತ್ತವೆ’ ಎಂದರು.

ವಾರ್ಡ್‌ಗಳ ಅಭಿವೃದ್ಧಿಗೆ ಮುಖ್ಯಮಂತ್ರಿ ಅನುದಾನದಲ್ಲಿ ₹ 200 ಕೋಟಿ ದೊರೆತಿದೆ. ತೀವ್ರ ಸಮಸ್ಯೆ ಇರುವ ಬಡಾವಣೆಗಳಿಗೆ ಆದ್ಯತೆಯ ಮೇಲೆ ಹಂಚಿಕೆ ಮಾಡಲಾಗಿದೆ. ಇನ್ನೂ ₹ 200 ಕೋಟಿ ದೊರೆಯುತ್ತದೆ. ಕನಕಪುರ ರಸ್ತೆ, ಮಾಗಡಿ ರಸ್ತೆ ಸೇರಿ ಕ್ಷೇತ್ರದ ಹಲವು ಬಡಾವಣೆಗಳಲ್ಲಿ ಕಾಮಗಾರಿಗಳು ನಡೆಯುತ್ತಿವೆ. ಯುಜಿಡಿಗೆ ₹ 108 ಕೋಟಿ ಬಳಸಲಾಗುತ್ತಿದೆ. ಕೆಲ ಗ್ರಾಮೀಣ, ನಗರ, ಪಟ್ಟಣ ಪ್ರದೇಶಗಳವರೆಗೂ ಮೆಟ್ರೊ ಸೇವೆ ವಿಸ್ತರಣೆಯಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕಾವೇರಿ ನೀರು ಪೂರೈಕೆ ಪೈಪ್‌ಲೈನ್ ಕಾಮಗಾರಿ ಸಾಗುವ ಮಾರ್ಗದಲ್ಲಿನ ಸಂಚಾರಕ್ಕೆ ಅಡ್ಡಿಯಾಗಿದೆ. ಗುಂಡಿ, ದೂಳುಗಳಿಂದ ಸಾಕಷ್ಟು ಕಿರಿಕಿರಿಯಾಗಿದೆ. ಫೆಬ್ರುವರಿ ಅಂತ್ಯದ ಒಳಗೆ ಯೋಜನೆ ಪೂರ್ಣಗೊಳಿಸಲಾಗುವುದು. ನಂತರ ಆ ಮಾರ್ಗದ ರಸ್ತೆಗಳನ್ನು ಸರಿಪಡಿಸಲಾಗುವುದು. ಅಲ್ಲಿಯವರೆಗೆ ಸಂಚಾರ ದಟ್ಟಣೆಯಾಗುವ ಸ್ಥಳಗಳಲ್ಲಿ ಸಂಚಾರ ಪೊಲೀಸರು ನಿಗಾವಹಿಸಬೇಕು ಎಂದು ಸೂಚಿಸಿದರು.

ಹೋರಾಟಗಾರರ ಪ್ರಕರಣ ವಾಪಸ್: ನಾಗರಿಕ ಸಮಸ್ಯೆಗಳ ವಿರುದ್ಧ ಧ್ವನಿಯೆತ್ತಿ, ಹೋರಾಟ ಮಾಡಿದವರ ಮೇಲೆ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ. ತಕ್ಷಣ ಅಂತಹ ಪ್ರಕರಣಗಳನ್ನು ವಾಪಸ್ ಪಡೆಯಬೇಕು ಎಂದು ಸಚಿವ ಸೋಮಶೇಖರ್ ಸೂಚಿಸಿದರು.

ಮೂರು ನಾಮದ ಮಲ್ಲಸಂದ್ರ


2007ರಲ್ಲಿ ಬಿಬಿಎಂಪಿಗೆ ಸೇರ್ಪಡೆಯಾದ 110 ಹಳ್ಳಿಗಳ ಪಟ್ಟಿಯಲ್ಲಿ ಕೈಬಿಟ್ಟಿದ್ದ ಮಲ್ಲಸಂದ್ರ ಗ್ರಾಮವನ್ನು ಈಗ ಬಿಬಿಎಂಪಿಗೆ ಸೇರಿಸುವ ಮೂಲಕ 111 ಹಳ್ಳಿಗಳನ್ನು ಸೇರ್ಪಡೆ ಮಾಡಿದಂತಾಗಿದೆ. ಮೂಲ ಸೌಕರ್ಯದ ವಿಷಯದಲ್ಲಿ ಮೂರು ನಾಮ(111) ಆಗಬಾರದು ಎಂದು ನಿವಾಸಿ ಉಪೇಂದ್ರ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಎಸ್‌.ಟಿ.ಸೋಮಶೇಖರ್ ಅವರು, ‘111 ಹಳ್ಳಿಗಳನ್ನು ಸೇರ್ಪಡೆ ಮಾಡಿದರೆ ಮೂರು ನಾಮ ಆಗಲಿದೆ ಎಂಬ ಕಾರಣಕ್ಕೆ ಹಿಂದೆ ಆಡಳಿತ ನಡೆಸಿದವರು ಮಲ್ಲಸಂದ್ರವನ್ನು ಕೈಬಿಟ್ಟಿದ್ದರು. ಈಗ ಸೇರ್ಪಡೆ ಮಾಡಲಾಗಿದೆ. ಒಳಚರಂಡಿ, ಕಾವೇರಿ ನೀರು ಪೂರೈಸುವ ಕಾಮಗಾರಿ ಈಗ ಆರಂಭವಾಗಿದೆ. ಕಾಮಗಾರಿ ಪೂರ್ಣಗೊಳ್ಳುವ ತನಕ ಜನ ಸಹಿಸಿಕೊಳ್ಳಬೇಕು’ ಎಂದು ಮನವಿ ಮಾಡಿದರು.



ವಾಣಿ ಕಿಶೋರ್, ತಲಘಟ್ಟಪುರ
- **ಮನೆಗಳಿಗೆ ಖಾತೆ ಕೊಡಲು ಸತಾಯಿಸುತ್ತಾರೆ. ಆದರೆ, ವಾಣಿಜ್ಯ ಮಳಿಗೆಗಳಿಗೆ ಪರವಾನಗಿ ನೀಡುತ್ತಾರೆ. ಮೂಲ ಸೌಕರ್ಯಗಳೂ ಇಲ್ಲ.**

ಸಚಿವ ಸೋಮಶೇಖರ್: ಕೆಲ ಬಡಾವಣೆಗಳಲ್ಲಿ ತಕರಾರು ಇದೆ. ಹಾಗಾಗಿ, ಸಮಸ್ಯೆಯಾಗಿದೆ. ಬಿಡಿಎಯಿಂದ ಬಿಬಿಎಂಪಿಗೆ ಹಸ್ತಾಂತರವಾದ ನಂತರ ಖಾತೆಗಳು ಆಗಲಿವೆ. ತಕರಾರು ಇಲ್ಲದ ರಸ್ತೆಗಳನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ.



ರಾಮೇಗೌಡ, ಬಾಲಾಜಿ ಲೇಔಟ್
- **ಎಂಟು ತಿಂಗಳ ಹಿಂದೆಯೇ ಹಣ ಕಟ್ಟಿಸಿಕೊಂಡಿದ್ದಾರೆ. ನೀರಿನ ಕಂದಾಯವನ್ನೂ ಕಟ್ಟುತ್ತಿದ್ದೇವೆ. ವಾರದಲ್ಲಿ ಒಂದು ದಿನವೂ ನೀರು ಸಿಗುತ್ತಿಲ್ಲ.**

ವಿನಯ್, ಎಂಜಿನಿಯರ್: ಸದ್ಯ ವಾರದಲ್ಲಿ ಒಂದು ದಿನ ಸಮರ್ಪಕವಾಗಿ ನೀರು ಪೂರೈಸಲಾಗುವುದು. ಎರಡು ತಿಂಗಳ ಒಳಗೆ ಸಮಸ್ಯೆ ಸಂಪೂರ್ಣ ಬಗೆಹರಿಸಲಾಗುವುದು.



ಗಾಯತ್ರಿ, ಪೂರ್ವ ಐಸ್‌ಲ್ಯಾಂಡ್ ಅಪಾರ್ಟ್‌ಮೆಂಟ್
- **ರಸ್ತೆ ಗುಂಡಿಯಲ್ಲಿ ಬಿದ್ದು ಆಸ್ಪತ್ರೆಗೆ ₹1.50 ಲಕ್ಷ ಖರ್ಚು ಮಾಡಿದ್ದೇನೆ. ನನ್ನದಲ್ಲದ ತಪ್ಪಿಗೆ ಆದ ತೊಂದರೆಗೆ ಪರಿಹಾರ ಕೊಡುವವರು ಯಾರು?**

ಸಚಿವ ಎಸ್‌.ಟಿ.ಸೋಮಶೇಖರ್: ಬಿಪಿಎಲ್ ಕಾರ್ಡ್ ಇದ್ದರೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಕೊಡಿಸುತ್ತೇನೆ. ನೀವು ತೀವ್ರ ತೊಂದರೆಯಲ್ಲಿದ್ದ ಕಾರ್ಡ್ ಇಲ್ಲದಿದ್ದರೂ ನನ್ನ ಸ್ವಂತ ಹಣ ನೀಡುತ್ತೇನೆ.

ಜನಸ್ಪಂದನದಲ್ಲಿ ಕೇಳಿಬಂದ ಕೆಲವು ಅಹವಾಲುಗಳು



ಅಂಬುಜಾ, ಎಲ್‌ಐಸಿ ಲೇಔಟ್
- **ನಮ್ಮ ಬಡಾವಣೆಯಲ್ಲಿ ನಿರ್ಮಿಸಿರುವ ಕಾಂಕ್ರಿಟ್ ನಾಲೆಗೆ ರಸ್ತೆ ಪಕ್ಕದ ಚರಂಡಿಗಳಿಂದ ನೀರು ಹರಿದುಹೋಗಲು ಜಾಗವನ್ನೇ ಬಿಟ್ಟಿಲ್ಲ. ಮಳೆ ಬಂದರೆ ನೀರು ಬಡಾವಣೆಗೆ ತುಂಬಿಕೊಳ್ಳುವ ಆತಂಕ ಇದೆ.**

ಬಿಡಿಎ ಅಧಿಕಾರಿ: ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಪರಿಹರಿಸಲಾಗುವುದು.



ಧನಂಜಯ ಪದ್ಮನಾಭಾಚಾರ್, ಅಧ್ಯಕ್ಷ, ಕರ್ನಾಟಕ ಮನೆ ಗ್ರಾಹಕರ ವೇದಿಕೆ
- **ಅಪಾರ್ಟ್‌ಮೆಂಟ್ ಬಳಸುವ ಗ್ರಾಹಕರ ಸಂಖ್ಯೆ 10 ಲಕ್ಷವಿದೆ. ದೊಡ್ಡ ಮೊತ್ತದ ಹಣ ಪಾವತಿಸಿ, ಅಪಾರ್ಟ್‌ಮೆಂಟ್ ಖರೀದಿಸಿದರೂ, ಭೂಮಿಯ ಹಕ್ಕು ಮಾಲೀಕರಿಗೇ ಸೇರಿರುತ್ತದೆ. ಈ ಬಗ್ಗೆ ಸೂಕ್ತ ಕಾನೂನು ರಚಿಸಬೇಕು.**

ಸಚಿವ ಸೋಮಶೇಖರ್: ಈ ಸಮಸ್ಯೆ ಐದು ದಶಕಗಳಿಂದ ಇದೆ. ಸರ್ಕಾರ ಕಾನೂನಿಗೆ ತಿದ್ದುಪಡಿ ತರಲಿದೆ.

‘ಫ್ಲೆಕ್ಸ್ ಅಳವಡಿಸಿದರೆ ಕಠಿಣ ಕ್ರಮ’

ಬೆಂಗಳೂರು: ನಿಷೇಧ ಇದ್ದರೂ ನಗರದಲ್ಲಿ ಫ್ಲೆಕ್ಸ್ ಅಳವಡಿಕೆ ಹೆಚ್ಚುತ್ತಿದ್ದು, ಪ್ರತಿ ವಲಯದಲ್ಲೂ ಕನಿಷ್ಠ 10 ಪ್ರಕರಣ ದಾಖಲಿಸಲು ಸೂಚನೆ ನೀಡಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು. ‘ರಾಜಕೀಯ ಪಕ್ಷಗಳು, ಧಾರ್ಮಿಕ ಕಾರ್ಯಕ್ರಮಗಳು, ಹುಟ್ಟುಹಬ್ಬ ಆಚರಣೆ ಮಾಡುವವರು ರಸ್ತೆ ಬದಿಯಲ್ಲಿ ಫ್ಲೆಕ್ಸ್ ಅಳವಡಿಸುತ್ತಿದ್ದಾರೆ. ಇವರಿಗೆ ತಿಳಿವಳಿಕೆ ನೀಡಿದರೆ ಸಾಕಾಗುವುದಿಲ್ಲ. ಕ್ರಿಮಿನಲ್ ಪ್ರಕರಣ ದಾಖಲಿಸಲು ವಲಯ ಅಧಿಕಾರಿಗಳಿಗೆ ತಿಳಿಸಿದ್ದೇನೆ’ ಎಂದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಹಿಮ್ಸ್‌ನಲ್ಲಿ ಬೋಧಕರ ಕೊರತೆ: ಜೆಡಿಎಸ್ ಪ್ರಶ್ನೆ

150 ವಿದ್ಯಾರ್ಥಿಗಳ ಭವಿಷ್ಯದಲ್ಲಿ ಆಟವಾಡಲು ಅಧಿಕಾರ ಕೊಟ್ಟವರ್ಯಾರು?

ಪ್ರಜಾವಾಣಿ ವಾರ್ತೆ

ಹಾವೇರಿ: ಇಲ್ಲಿಯ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ವಿದ್ಯಾರ್ಥಿಗಳು ದಾಖಲಾಗಿ ಒಂದೂವರೆ ತಿಂಗಳಾದರೂ ಪ್ರಾಧ್ಯಾಪಕ ಮತ್ತು ಸಹ ಪ್ರಾಧ್ಯಾಪಕರನ್ನು ಸರ್ಕಾರ ನೇಮಕಾತಿ ಮಾಡಿಲ್ಲ. 150 ವಿದ್ಯಾರ್ಥಿಗಳ ಭವಿಷ್ಯದಲ್ಲಿ ಆಟವಾಡಲು ನಿಮಗೆ ಅಧಿಕಾರ ಕೊಟ್ಟವರು ಯಾರು ಮುಖ್ಯಮಂತ್ರಿಗಳೇ? ಎಂದು ಜೆಡಿಎಸ್ ತನ್ನ ಟ್ವಿಟ್ಟರ್ ಖಾತೆಯಲ್ಲಿ ಪ್ರಶ್ನಿಸಿದೆ.

ಪ್ರಜಾವಾಣಿಯಲ್ಲಿ ಫೆ.4ರಂದು ಪ್ರಕಟವಾದ ‘150 ವೈದ್ಯಕೀಯ ವಿದ್ಯಾರ್ಥಿಗಳ ಭವಿಷ್ಯ ಅತಂತ್ರ’ ಶೀರ್ಷಿಕೆಯ ವಿಶೇಷ ವರದಿಯ ಪ್ರತಿಯನ್ನು ಲಗತ್ತಿಸಿ, ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

ವೈದ್ಯರಾಗಬೇಕು ಎಂಬ ಕನಸಿರುವ ಪ್ರತಿಭಾವಂತ ಬಡ ವಿದ್ಯಾರ್ಥಿಗಳು ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸೇರುತ್ತಾರೆ. ಸರಿಯಾದ ಕಟ್ಟಡವಿಲ್ಲದೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೆಡಿಕಲ್ ಕಾಲೇಜು ನಡೆಯುತ್ತಿದೆ. ಖಾಸಗಿ ವೈದ್ಯಕೀಯ ಕಾಲೇಜಿನಿಂದ ಲಂಚ ಪಡೆದು ಬಡ ಪ್ರತಿಭಾವಂತ ಮಕ್ಕಳು ವೈದ್ಯರಾಗದಂತೆ ದಂಧೆ ನಡೆಸುತ್ತಿದ್ದೀರಾ? ಎಂದು ಖಾರವಾಗಿ ಪ್ರಶ್ನಿಸಿದೆ.


Janata Dal Secular
@JanataDal_S

ವೈದ್ಯರಾಗಬೇಕು ಎಂಬ ಕನಸಿರುವ ಪ್ರತಿಭಾವಂತ ಬಡ ವಿದ್ಯಾರ್ಥಿಗಳು ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸೇರುತ್ತಾರೆ. ಆದರೆ ಕಾಲೇಜಿಗೆ ದಾಖಲಾಗಿ ಒಂದುವರೆ ತಿಂಗಳಾದರೂ @BJP4Karnataka ಸರ್ಕಾರ ಪ್ರಾಧ್ಯಾಪಕ ಹಾಗೂ ಸಹ ಪ್ರಾಧ್ಯಾಪಕರನ್ನು ನೇಮಕಾತಿ ಮಾಡಿಲ್ಲ.
1/3

Translate Tweet

ಪ್ರಜಾವಾಣಿ
ಹಾವೇರಿಯ ಹಿಮ್ಸ್‌ನಲ್ಲಿ ಬೋಧಕರ ಕೊರತೆಯಿಂದ ನಡೆಯದ ಪಾಠ
150 ವೈದ್ಯಕೀಯ ವಿದ್ಯಾರ್ಥಿಗಳ ಭವಿಷ್ಯ ಅತಂತ್ರ
ವಿದ್ಯಾರ್ಥಿಗಳಿಗೆ ತಾತ್ಕಾಲಿಕ ವ್ಯವಸ್ಥೆ
ಪ್ರಜಾವಾಣಿ ವಿಶೇಷ

ಟ್ವಿಟ್ಟರ್‌ನಲ್ಲಿ ಜೆಡಿಎಸ್ ಮಾಡಿರುವ ಪೋಸ್ಟ್

ಬಜೆಟ್‌ನಲ್ಲಿ ಘೋಷಿಸುವಂತೆ ಜಲಾನಯನ ಇಲಾಖೆ ಪ್ರಸ್ತಾವ

ಅಂತರ್ಜಲ ಹೆಚ್ಚಿಸುವ ‘ಜಲನಿಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರಪೀಡಿತ ಪ್ರದೇಶದಲ್ಲಿ ಮಳೆ ನೀರು ಸಂಗ್ರಹದ ಮೂಲಕ ಅಂತರ್ಜಲ ಹೆಚ್ಚಿಸುವ ಉದ್ದೇಶದ ‘ಜಲನಿಧಿ’ ಯೋಜನೆ ಜಾರಿಗೊಳಿಸಲು ಜಲಾನಯನ ಅಭಿವೃದ್ಧಿ ಇಲಾಖೆ ಸಿದ್ಧತೆ ನಡೆಸಿದೆ.

ಇದೇ ತಿಂಗಳು ಮಂಡಿಸಲಿರುವ ಬಜೆಟ್‌ನಲ್ಲಿ ‘ಜಲನಿಧಿ’ ಯೋಜನೆಯನ್ನು ಘೋಷಿಸುವಂತೆಯೂ ಇಲಾಖೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದೆ.

ಈ ಯೋಜನೆಯಡಿ ರಾಜ್ಯದ ಬರಪೀಡಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ 100 ತಾಲ್ಲೂಕುಗಳ ಮೂರು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಳೆ ನೀರು ಸಂಗ್ರಹಿಸಬಹುದು. ಯೋಜನೆಯಡಿ ಸಣ್ಣ ಕೆರೆಗಳು, ಆಳವಿಲ್ಲದ ಸಣ್ಣ ಬಾವಿಗಳು, ಕಲ್ಯಾಣಿಗಳನ್ನು ನಿರ್ಮಿಸಬಹುದು. ಇದರಿಂದ ನೀರಿನ ಸುಸ್ಥಿರತೆಯನ್ನೂ ಕಾಪಾಡಿಕೊಳ್ಳಬಹುದು ಎಂದು ಇಲಾಖೆ ಪ್ರತಿಪಾದಿಸಿದೆ.

ಕರ್ನಾಟಕದ ಐದನೇ ಮೂರು ಭಾಗ ಬರಪೀಡಿತವಾಗಿದೆ. ಕಳೆದ ಎರಡು ದಶಕಗಳಲ್ಲಿ 15 ವರ್ಷ ಬರ ಕಾಡಿತ್ತು. ಹೀಗಾಗಿ ಈ ಪ್ರದೇಶದಲ್ಲಿ ಅಂತರ್ಜಲ ಕುಸಿದು ಹೋಗಿದೆ. ಆದರೆ ಈ ಪ್ರದೇಶಗಳಲ್ಲಿ ನೀರಿನ ಬೇಡಿಕೆ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಹೆಚ್ಚಾಗುತ್ತಲೇ ಇದೆ. ‘ಜಲನಿಧಿ ಯೋಜನೆಯ ಮೂಲಕ ಅಂತರ್ಜಲ ಹೆಚ್ಚುವುದರ ಜತೆಗೆ ಬೇಸಿಗೆಯಲ್ಲೂ ನೀರು ಲಭ್ಯವಾಗುವಂತೆ ಮಾಡುವುದಾಗಿದೆ’ ಎಂದು ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತ ಎಂ.ವಿ.ವೆಂಕಟೇಶ್ ತಿಳಿಸಿದ್ದಾರೆ.

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ (ಪಿಎಂಕೆಎಸ್‌ವೈ) 2.0 ಅಡಿ 57 ತಾಲ್ಲೂಕುಗಳಲ್ಲಿ ಮಳೆ ನೀರು ಸಂಗ್ರಹ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಅಲ್ಲದೆ, ಬರ ತಡೆಗಾಗಿ ಜಲಾನಯನ ಅಭಿವೃದ್ಧಿ ಯೋಜನೆಯಡಿ 100 ತಾಲ್ಲೂಕುಗಳನ್ನು ಮತ್ತು ಕೃಷಿಯ ಸ್ಥಿತಿ ಸ್ಥಾಪಕತ್ವಕ್ಕಾಗಿ ಜಲಾನಯನ ಪುನರುಜ್ಜೀವಗೊಳಿಸಲು 20 ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆದರೆ, ಈ ಯೋಜನೆಗಳಡಿ ಬರಪೀಡಿತವಾದ ಎಲ್ಲ ಪ್ರದೇಶಗಳನ್ನು ಒಳಪಡಿಸಲು ಸಾಧ್ಯವಾಗಿಲ್ಲ. ಕ್ಲಸ್ಟರ್ ಹಂತದಲ್ಲಿ ಮಾತ್ರ ಜಾರಿ ಆಗಿದೆ. ರಾಜ್ಯ ಸರ್ಕಾರ ಪ್ರಾಯೋಜಿತ ಜಲನಿಧಿ ಯೋಜನೆಯಡಿ ಎಲ್ಲ ಕಡೆಗಳಲ್ಲೂ ಮಳೆ ನೀರು ಸಂಗ್ರಹ ಮಾಡಬಹುದಾಗಿದೆ ಎಂದು ಅವರು ಹೇಳಿದ್ದಾರೆ.

ನಗರದಲ್ಲಿ ಇಂದು

ಚಿತ್ಪಾವನ ಸಮಾಜದ ಸುವರ್ಣ ಸಂಭ್ರಮ: ಕರ್ನಾಟಕ ರಾಜ್ಯದ ಚಿತ್ಪಾವನ ಸಂಘಗಳ ಪದಾಧಿಕಾರಿಗಳ ಸಭೆ, ಅಧ್ಯಕ್ಷತೆ: ಗೋವಿಂದ ಎನ್. ಫಡಕೆ, ವಾಣ–ವಸೆ ಚಿತ್ಪಾವನ ಹಬ್ಬಗಳು, ‘ಇದಂ ಬ್ರಾಹ್ಮ್ಯಂ ಇದಂ ಕ್ಷಾತ್ರಂ’ ನೃತ್ಯ ನಾಟಕ: ನೂಪುರ ತಂಡ, ಆಯೋಜನೆ: ಚಿತ್ಪಾವನ ಸಮಾಜ, ಸ್ಥಳ: ಗುರುನರಸಿಂಹ ಸಭಾ ಭವನ, ರಾಮಕೃಷ್ಣ ಮಠದ ಎದುರು, ಬಸವನಗುಡಿ ರಸ್ತೆ, ಬೆಳಿಗ್ಗೆ 9ರಿಂದ

ವಿಶ್ವೇಶ್ವರ ಭಟ್ ಅನುವಾದಿಸಿದ ಅನುಪಮ್ ಖೇರ್ ಅವರ ‘ಇಂದಿನ ದಿನವೇ ಶುಭ ದಿನವು’, ಕಿರಣ್ ಉಪಾಧ್ಯಾಯ ಅವರ ‘ಪರದೇಶವಾಸಿ’, ರಾಧಾಕೃಷ್ಣ ಎಸ್. ಭಡ್ತಿ ಅವರ ‘ಸುಪ್ತ ಸಾಗರ’ ಪುಸ್ತಕ ಬಿಡುಗಡೆ: ಅತಿಥಿಗಳು: ನಿರಂಜನ್ ವಾನಳ್ಳಿ, ಜಿ.ಬಿ. ಹರೀಶ್, ರೋಹಿತ್ ಚಕ್ರತೀರ್ಥ, ಅಧ್ಯಕ್ಷತೆ: ಕೃಷ್ಣ ದೀಕ್ಷಿತ್, ಆಯೋಜನೆ: ವಿಶ್ವವಾಣಿ ಪುಸ್ತಕ, ಸ್ಥಳ: ಶ್ರೀಕೃಷ್ಣರಾಜ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಆರ್.ಕೆ. ಪದ್ಮನಾಭ ಅವರಿಗೆ ‘ಸನ್ಮಿತ್ರ ಸಂಗೀತ ಸುಧಾರತ್ನ’ ಬಿರುದು ಹಾಗೂ ಸನ್ಮಾನ, ಬೆಂ. ಶ್ರೀ. ರವೀಂದ್ರ ಅವರ ‘ಪದ್ಮನಾದ’ ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಆಯೋಜನೆ: ಎಸ್‌ಬಿಐ ಗೆಳೆಯರ ಬಳಗ, ಸ್ಥಳ: ಪತ್ತಿ ಸಭಾಂಗಣ, ರಾಮಮಂದಿರ, ಎನ್. ಆರ್. ಕಾಲೊನಿ, ಬೆಳಿಗ್ಗೆ 10

‘ಅಕ್ಷರೋತ್ಸವ’ ಉದ್ಘಾಟನೆ: ಬಿ.ಆರ್. ಲಕ್ಷ್ಮಣ ರಾವ್, ಅಧ್ಯಕ್ಷತೆ: ಅಕ್ಕೈ ಪದ್ಮಶಾಲಿ, ಅತಿಥಿಗಳು: ಕೆ. ರಾಜಕುಮಾರ್, ಸುಜಾತ ರವೀಶ್, ವಿಜಯ್ ಕುಮಾರ್, ಪ್ರಾಸ್ತಾವಿಕ ನುಡಿ: ದೀಕ್ಷಿತ್ ನಾಯರ್, ‘ಗಳಗನಾಥ ಅಕ್ಷರಶ್ರೀ’ ಪ್ರಶಸ್ತಿ ಪುರಸ್ಕೃತರು: ಸುನಿಲ್ ಕುಮಾರ್, ಪೂರ್ಣಿಮಾ ನಾಗೇಶ ಬಾರೀಮನಿ, ಆಯೋಜನೆ: ಅಕ್ಷರ ಚಪ್ಪರ, ಸ್ಥಳ: ರೋಟರಿ ಸಭಾಂಗಣ(ಪಶ್ಚಿಮ), ಮಲ್ಲೇಶ್ವರ, 10ರಿಂದ

‘ಸ್ಪಾರ್ಕ್ ಬಿಲ್ಲವ 11ನೇ ಬಿಲ್ಲವ ವೃತ್ತಿಪರರ, ಉದ್ಯಮಿಗಳ ಸಮ್ಮೇಳನ–2023: ಉದ್ಘಾಟನೆ: ಜಗದೀಶ್, ಅಧ್ಯಕ್ಷತೆ: ಸದಾನಂದ ಪೂಜಾರಿ, ಅತಿಥಿಗಳು: ಅಜಯ್, ಮಹೇಶ್ ಕುಮಾರ್, ಮಮತಾ ಪೂಜಾರಿ, ಸೂರ್ಯಕಾಂತ್ ಸುವರ್ಣ, ಅನ್ವಿತಾ ಸಾಗರ್, ಶೋಭರಾಜ್ ಪಾವೂರ್, ಆಯೋಜನೆ: ಬಿಲ್ಲವ ಅಸೋಸಿಯೇಷನ್ ಬೆಂಗಳೂರು, ಸ್ಥಳ: ಬಿಲ್ಲವ ಭವನ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10

‘ಕ್ಯಾಮರಾ ಕುವೆಂಪು’ ಪುಸ್ತಕದ ಬಗ್ಗೆ ಕೃಪಾಕರ ಸೇನಾನಿ ಅವರೊಂದಿಗೆ ಸಂವಾದ: ಭಾಗವಹಿಸುವವರು: ಎಸ್.ಎನ್. ನಾಗರಾಜ ರೆಡ್ಡಿ, ಕೆ.ವೈ ನಾರಾಯಣಸ್ವಾಮಿ, ಡಾ. ಹಿಮಾಂಶು ಅಕ್ಕಮಹಾದೇವಿ, ಆಯೋಜನೆ: ಅವಿರತ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10

‘ಜೀವಬಿಂಬ’ ಡಿ.ಸಿ. ನಾಗೇಶ್ ನೆನಪು ಪುಸ್ತಕ ಬಿಡುಗಡೆ: ಅತಿಥಿಗಳು: ಟಿ.ಎಸ್. ನಾಗಾಭರಣ, ದೇವರಾಜ್, ಭಾವನಾ ರಾಮಣ್ಣ, ಆರ್. ಶ್ರೀಧರ್, ಆಯೋಜನೆ: ಕರ್ನಾಟಕ ಚಲನಚಿತ್ರ ಪತ್ರಕರ್ತರ ಸಂಘ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

‘ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿ’ ಪ್ರದಾನ: ಎಚ್.ಎಸ್. ವೆಂಕಟೇಶಮೂರ್ತಿ, ಪ್ರಶಸ್ತಿ ಪುರಸ್ಕೃತರು: ಆರ್. ಪೂರ್ಣಿಮಾ, ಅತಿಥಿಗಳು: ಕೆ. ಸತ್ಯನಾರಾಯಣ, ಭಾರತಿ ಹೆಗಡೆ, ಆಯೋಜನೆ: ಸುಂದರ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ಸಭಾಂಗಣ, ಬಸವನಗುಡಿ, ಬೆಳಿಗ್ಗೆ 11

‘ಕೆ.ವಿ. ತಿರುಮಲೇಶ್ ನೆನಪು’: ಭಾಗವಹಿಸುವವರು: ಎಂ.ಎಸ್. ಶ್ರೀರಾಮ್, ಜಯಂತ್ ಕಾಯ್ಕಿಣಿ, ಪ್ರತಿಭಾ ನಂದಕುಮಾರ್, ವಿವೇಕ ಶಾನಭಾಗ, ಎಚ್.ಎಸ್. ಶಿವಪ್ರಕಾಶ್, ಮಮತಾ ಸಾಗರ್, ಅಭಿನವ ರವಿಕುಮಾರ್, ಮಂಜುನಾಥ ವಿ. ಕಲ್ಲದೇವರ್, ಆಯೋಜನೆ: ಬಹುವಚನ, ಸ್ಥಳ: ಸುಚಿತ್ರಾ ನಾಣಿ ಅಂಗಳ, ಬನಶಂಕರಿ 2ನೇ ಹಂತ, ಬೆಳಿಗ್ಗೆ 11

ಉಪನ್ಯಾಸ ಕಾರ್ಯಕ್ರಮ: ‘ಶಾಸನ ಅಧ್ಯಯನದ ಕ್ಷೇತ್ರ ಸಮೀಕ್ಷೆಯಲ್ಲಿನ ಅನುಭವಗಳು’: ದೇವರಕೊಂಡಾರೆಡ್ಡಿ, ‘ಧಾರ್ಮಿಕ ಸ್ಥಿತ್ಯಂತರಗಳಲ್ಲಿ ಪ್ರಭಾವಿ ಮಹಿಳೆಯರು’: ಸಂಧ್ಯಾ ವಿ., ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿಯ ಶತಮಾನೋತ್ಸವ ಸಭಾಂಗಣ, ನೃಪತುಂಗ ರಸ್ತೆ, ಬೆಳಿಗ್ಗೆ 11

ಮಾಜಿ ಮಹಾಪೌರ ನಾಡೋಜ ಡಾ. ಜಿ. ನಾರಾಯಣ ಜನ್ಮಶತಮಾನೋತ್ಸವ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ವಿ. ಸುನಿಲ್ ಕುಮಾರ್, ‘ಡಾ. ಜಿ. ನಾರಾಯಣ ಸಂಸ್ಕೃತಿ ಪ್ರಶಸ್ತಿ’ ಪ್ರದಾನ: ಟಿ. ತಿಮ್ಮೇಗೌಡ, ಪ್ರಶಸ್ತಿ ಪುರಸ್ಕೃತರು: ವೂಡೇ.ಪಿ. ಕೃಷ್ಣ, ರಾಮಣ್ಣ ಕೋಡಿಹೊಸಹಳ್ಳಿ, ಆರೋಗ್ಯಪ್ಪ, ಫಿಲೋಮಿನ ರಾಜ್, ಅತಿಥಿ: ಸಂತೋಷ ಹಾನಗಲ್ಲ, ಉಪಸ್ಥಿತಿ: ವ.ಚ. ಚನ್ನೇಗೌಡ, ನಾ. ಗೋಪಾಲಕೃಷ್ಣ, ರಫಾಯಲ್ ರಾಜ್, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಅಖಿಲ ಕರ್ನಾಟಕ ಕಥೋಲಿಕ್ ಕ್ರೈಸ್ತರ ಕನ್ನಡ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

ಶಾಸ್ತ್ರೀಯ ಸಂಗೀತೋತ್ಸವ: ಭರತನಾಟ್ಯ: ಇಂಚರಾ ಎಚ್.ಜಿ., ಕೃತಿ ಎಂ. ಹೊಸಟ್ಟಿ, ಶೋಭಾರಾಣಿ ಬೋಳಾರ್ ಮತ್ತು ತಂಡ, ಕೂಚಿಪುಡಿ ಮತ್ತು ಭಾರತೀಯ ಜಾನಪದ ನೃತ್ಯ: ಧರಣಿ ಕಶ್ಯಪ್ ಮತ್ತು ತಂಡ, ಸ್ಥಳ: ಪದ್ಮಿನಿ ರಾವ್ ಪರಂಪರಾ ಸಭಾಂಗಣ, ಸಂಜೆ 6.10

ನೈಷಧಂ ಎಸ್ಸೆ ಅವರ ‘ಒಂದು ಯುಗಾಂತ’ ಮತ್ತು ‘ಜನ ಆಡಿಬಿಡುತ್ತಾರೆ’ ಪುಸ್ತಕಗಳ ಬಿಡುಗಡೆ: ಪಿ.ವಿ. ನಾರಾಯಣ, ಮಹಾಬಲಮೂರ್ತಿ ಕೊಡ್ಲಕೆರೆ, ಅಧ್ಯಕ್ಷತೆ: ಆರ್. ಲಕ್ಷ್ಮೀ ನಾರಾಯಣ, ಆಯೋಜನೆ: ನೃತ್ಯ ಸಂಜೀವಿನಿ ಅಕಾಡೆಮಿ, ಸ್ಥಳ: ಬಿ.ಎಂ. ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4.15

‘171ನೇ ಹುಣ್ಣಿಮೆ ಹಾಡು’: ‘ವಿರಹ ಪ್ರೇಮ ಕಾವ್ಯದ ಕಹಿಬರಹ’, ಗಾಯನ: ಮಧು ಮನೋಹರನ್ ಮತ್ತು ತಂಡ, ಮೋಹನ್ ಕೃಷ್ಣ, ಶೃತಿ ರಾಘವೇಂದ್ರನ್, ಮುರುಗನ್ ಪಾಂಡವಪುರ, ಆಯೋಜನೆ ಮತ್ತು ಸ್ಥಳ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಕಾಡುಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30

ಭರತನಾಟ್ಯ ಪ್ರದರ್ಶನ: ತೇಜಸ್ವಿನಿ ಜಿ.ಎನ್., ಯಶಸ್ವಿನಿ ಜಿ.ಎನ್., ಅತಿಥಿಗಳು: ಸೀತಾ ಗುರುಪ್ರಸಾದ್, ಭುವನ ಜಿ. ಪ್ರಸಾದ್, ಆಯೋಜನೆ: ಭರತಾಂಜಲಿ ನಾಟ್ಯ ಶಾಲೆ, ಸೇವಾ ಸದನ, ಮಲ್ಲೇಶ್ವರ, ಸಂಜೆ 6.05



ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಬೇಸರ

‘ಪ್ರಶಸ್ತಿಗಳು ಮೌಲ್ಯ ಕಳೆದುಕೊಳ್ಳುತ್ತಿವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತ್ತೀಚಿನ ದಿನಗಳಲ್ಲಿ ಅಯೋಗ್ಯರೂ ಪ್ರಶಸ್ತಿಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇದರಿಂದಾಗಿ ರಾಜ್ಯೋತ್ಸವ ಸೇರಿ ವಿವಿಧ ಪ್ರಶಸ್ತಿಗಳು ಮೌಲ್ಯ ಕಳೆದು ಕೊಳ್ಳುತ್ತಿವೆ’ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್ ಬೇಸರ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ನಗರದಲ್ಲಿ ಶನಿವಾರ ಹಮ್ಮಿಕೊಂಡ ಸಮಾರಂಭದಲ್ಲಿ ಸಾಹಿತಿ ಗುರುಪಾದ ಮರಿಗುದ್ದಿ ಅವರಿಗೆ ‘ಕಾವ್ಯಾನಂದ ಪುರಸ್ಕಾರ’ ಪ್ರದಾನ ಮಾಡಿದರು. ಈ ಪುರಸ್ಕಾರವು ₹ 50 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ.

‘ವ್ಯಕ್ತಿಗಳಿಂದ ಪ್ರಶಸ್ತಿಯ ಮೌಲ್ಯ ಹೆಚ್ಚಬೇಕು. ಈಗ ಪ್ರತಿ ವಾರ ಒಂದಲ್ಲ ಒಂದು ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿ ನೀಡುವವರು ಹಾಗೂ ಸ್ವೀಕರಿಸುವವರಿಗೆ ಗೌರವ ಹಾಗೂ ಅಭಿಮಾನ ಇರಬೇಕು. ಆದರೆ, ಅನರ್ಹರೂ ಪ್ರಶಸ್ತಿ ಪಡೆದುಕೊಳ್ಳುತ್ತಿದ್ದಾರೆ. ಅವರು ಪ್ರಶಸ್ತಿಗೆ ಪಡುವಷ್ಟು ಪರಿಶ್ರಮವನ್ನು ಬೇರೆ ಕೆಲಸಕ್ಕೆ ಹಾಕಿದ್ದರೆ ಸಮಾಜಕ್ಕೆ ಒಳ್ಳೆಯದಾಗುತ್ತಿತ್ತು’ ಎಂದು ಹೇಳಿದರು.

‘ಯಾವುದೇ ಕ್ಷೇತ್ರ ಅಥವಾ ವೃತ್ತಿಯಲ್ಲಿ ಮಾನವೀಯ ಅನುಕಂಪ ಅಳವಡಿಸಿಕೊಂಡು ಕೆಲಸ ಮಾಡಿದಾಗ ಸಮಾಜಕ್ಕೆ ಒಳ್ಳೆಯದಾಗುತ್ತದೆ. ಶಾಲಾ–ಕಾಲೇಜು, ವಿಶ್ವವಿದ್ಯಾಲಯಗಳಿಂದ ಪುಸ್ತಕಗಳನ್ನು ಓದುವವರ ಸಂಖ್ಯೆ ಇತ್ತೀಚೆಗೆ ಜಾಸ್ತಿಯಾಗಿದೆ. ಆದರೆ, ಬಹುತೇಕರಿಗೆ ಏನು ಓದಬೇಕು ಎನ್ನುವುದು ತಿಳಿದಿಲ್ಲ’ ಎಂದು ತಿಳಿಸಿದರು.

ಪ್ರಶಸ್ತಿ ಪುರಸ್ಕೃತ ಗುರುಪಾದ ಮರಿಗುದ್ದಿ, ‘ನಾನು ವಾಸವಿರುವ ಸ್ಥಳದಿಂದ ಮಹಾರಾಷ್ಟ್ರ 2 ಕಿ.ಮೀ. ದೂರದಲ್ಲಿದೆ. ರಾಜ್ಯದ ಗಡಿಭಾಗದಲ್ಲಿ ವಾಸವಿರುವ ನನಗೆ, ಮಲೆನಾಡಿನ ಕವಿ ಕುವೆಂಪು ಅವರ ಬಗ್ಗೆ ವಿಶೇಷ ಆಸಕ್ತಿ ಮೂಡಿತು. ಅವರ ಎಲ್ಲ ಕೃತಿಗಳಲ್ಲಿ ನಿಸರ್ಗ ಪ್ರೀತಿ, ವೈಚಾರಿಕತೆ, ಅಧ್ಯಾತ್ಮವನ್ನು ಕಾಣಬಹುದು. ಅವರ ವಿಶ್ವಮಾನವ ತತ್ವವನ್ನು ನಾವು ಪಾಲಿಸಬೇಕು’ ಎಂದು ಹೇಳಿದರು.

ಗುರುಪಾದ ಮರಿಗುದ್ದಿ ಅವರ ‘ಪೊದೆಯಿಂದಿಳಿದ ಎದೆಯ ಹಕ್ಕಿ’ ಕೃತಿ ಬಗ್ಗೆ ಮಾತನಾಡಿದ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ‘ಕುವೆಂಪು ಅವರ ದೈತ್ಯ ಕೆಲಸಕ್ಕೆ ಈ ಕೃತಿ ಅಭಿನಂದನಾ ಗ್ರಂಥವಾಗಿದೆ. 175 ಪುಟಗಳ ಕೃತಿಯಲ್ಲಿ ಕುವೆಂಪು ಅವರ ಬದುಕನ್ನು ಪರಿಚಯಿಸುವ ಕೆಲಸ ಮಾಡಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಗುರುಪಾದ ಮರಿಗುದ್ದಿ ಅವರಿಗೆ ‘ಕಾವ್ಯಾನಂದ ಪುರಸ್ಕಾರ’ ನೀಡಿ ಗೌರವಿಸಲಾಯಿತು. (ಎಡದಿಂದ) ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ಅಧ್ಯಕ್ಷೆ ವಿಜಯಾ ನಂದೀಶ್ವರ, ನ್ಯಾ. ಶಿವರಾಜ್ ವಿ. ಪಾಟೀಲ್, ಬೈರಮಂಗಲ ರಾಮೇಗೌಡ, ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ವ್ಯವಸ್ಥಾಪಕ ಟ್ರಸ್ಟಿ ಪ್ರಸನ್ನಕುಮಾರ್ ಪುರಾಣಿಕ, ಮತ್ತು ವಿಮರ್ಶಕ ಬಸವರಾಜ ಕಲ್ಗುಡಿ ಇದ್ದಾರೆ – ಪ್ರಜಾವಾಣಿ ಚಿತ್ರ

ಅದಾನಿ ಸಂಪತ್ತು ವೃದ್ಧಿಗೆ ಮೋದಿ ಕಾರಣ: ಬಿಕೆಸಿ

ಬೆಂಗಳೂರು: ಅದಾನಿ ಸಮೂಹದ ಸಂಪತ್ತು ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಲು ಪ್ರಧಾನಿ ನರೇಂದ್ರ ಮೋದಿ ಅವರೇ ಕಾರಣ ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಆಪಾದಿಸಿದರು.

ಕೆಪಿಸಿಸಿ ಸಂವಹನ ವಿಭಾಗದ ಅಧ್ಯಕ್ಷ ಪ್ರಿಯಾಂಕ್ ಖರ್ಗೆ ಜತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 2013ರ ಸೆಪ್ಟೆಂಬರ್ ವೇಳೆಗೆ ಅದಾನಿ ಸಂಪತ್ತು ಅಂಬಾನಿ ಸಂಪತ್ತಿನಷ್ಟಿತ್ತು. ಮೋದಿ ಅವರು ಅಧಿಕಾರಕ್ಕೆ ಬಂದ ಒಂದು ವರ್ಷದಲ್ಲೇ ಸಂಪತ್ತು ಹೆಚ್ಚಾಯಿತು. ಮೋದಿ ಅವರು ಪ್ರಧಾನಿ ಆಗಲಿದ್ದಾರೆ ಎಂದು ಹೇಳಿದ ತಕ್ಷಣವೇ ಅದಾನಿ ಗ್ರೂಪ್ ಷೇರುಗಳು ಗಗನಕ್ಕೇರಿದ್ದಲ್ಲದೇ, ಅವರ ಸಂಪತ್ತಿನ ಮೌಲ್ಯ ₹60 ಸಾವಿರ ಕೋಟಿಗೆ ಏರಿದ್ದಾಗಿ ಮಾಧ್ಯಮಗಳು ವಿವರಿಸಿದ್ದವು ಎಂದು ಅವರು ಹೇಳಿದರು.

2014ರ ಲೋಕಸಭೆ ಚುನಾವಣೆ ಮುನ್ನ ಮೋದಿ ಅವರು ಅದಾನಿ ಅವರ ಚಾರ್ಟೆಡ್ ವಿಮಾನದಲ್ಲಿ ದೇಶದಾದ್ಯಂತ ಪ್ರವಾಸ ಮಾಡಿದರು. ಚುನಾವಣೆಯಲ್ಲಿ ಮೋದಿಯವರು ಗೆದ್ದಾಗ ಪ್ರಮಾಣ ವಚನ ಸ್ವೀಕರಿಸಲು ಅಹಮದಾಬಾದ್‌ನಿಂದ ದೆಹಲಿಗೆ ಅದಾನಿ ಅವರ ಖಾಸಗಿ ವಿಮಾನದಲ್ಲಿ ಹೋಗಿದ್ದರು. ಮೋದಿ ಪ್ರಧಾನಿಯಾದ ಬಳಿಕ ಮಾಡಿದ ಬಹುತೇಕ ಎಲ್ಲ ವಿದೇಶ ಪ್ರವಾಸಗಳಿಗೆ ಅದಾನಿ ಅವರನ್ನು ಖಾಸಗಿ ಅತಿಥಿಯನ್ನಾಗಿ ಕರೆದುಕೊಂಡು ಹೋಗಿದ್ದಾರೆ. ಇದರ ಪರಿಣಾಮವಾಗಿ ಅದಾನಿ ಅವರು ಆಸ್ಟ್ರೇಲಿಯಾದಲ್ಲಿ ಗಣಿಗಾರಿಕೆಗೆ ಅನುಮತಿ ಪಡೆದರು ಎಂದು ಅವರು ಹೇಳಿದರು.

ಶ್ರೀಲಂಕಾ ಸಮುದ್ರ ತೀರದಲ್ಲಿ ಇಂಧನ ಉತ್ಪಾದನೆ ಅವಕಾಶವನ್ನು ಅದಾನಿಗೆ ನೀಡಬೇಕು ಎಂದು ಕೇಂದ್ರ ಸರ್ಕಾರ ಅಲ್ಲಿನ ಸರ್ಕಾರಕ್ಕೆ ಶಿಫಾರಸು ಮಾಡಿತು. ಬಂಡವಾಳಶಾಹಿಗಳ ಪರವಾಗಿ ಸರ್ಕಾರ ನಿಲ್ಲುವುದು ಅಪಾಯಕಾರಿ. ಈ ವಿಚಾರದಲ್ಲಿ ನಿವೃತ್ತ ನ್ಯಾಯಮೂರ್ತಿಗಳು, ಪ್ರತಿಷ್ಠಿತ ಕಾರ್ಪೊರೇಟ್, ಪ್ರಭಾವಿ ವ್ಯಕ್ತಿಗಳನ್ನೊಳಗೊಂಡ ನಾಗರಿಕ ನ್ಯಾಯಮಂಡಳಿ ರಚಿಸಿ ಅದರಿಂದ ತನಿಖೆ ಮಾಡಿಸಬೇಕು ಎಂದು ಆಗ್ರಹಿಸಿದರು.

ಅದಾನಿ ಸಮೂಹದ ಆಸ್ತಿ ₹ 8200 ಕೋಟಿಯಿಂದ ₹9.94 ಲಕ್ಷ ಕೋಟಿ ಆಗಲು ಕಾರಣ ಏನು ಎಂಬುದು ಬಹಿರಂಗವಾಗಬೇಕಿದೆ. ಅದಾನಿಯಂತಹ ಉದ್ಯಮ ಸಮೂಹ ರಕ್ಷಿಸಲು ಪ್ರಧಾನಿ ಅವರು ಮುಂದಾಗಿರುವುದು ದೇಶದ ಇತಿಹಾಸದಲ್ಲೇ ಮೊದಲು ಎಂದು ಪ್ರಿಯಾಂಕ್ ಖರ್ಗೆ ಅವರು ಹೇಳಿದರು.

ಶಿವಣ್ಣಗೆ ತಡೆಯೊಡ್ಡಲು ಜೆಡಿಎಸ್, ಬಿಜೆಪಿ ತಂತ್ರ

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕ್ಷೇತ್ರ ಸ್ಥಿತಿ–ಗತಿ

ಆನೇಕಲ್: ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ವಿಧಾನಸಭಾ ಕ್ಷೇತ್ರದಲ್ಲಿ (ಮೀಸಲು) ಎರಡು ಅವಧಿಗಳಿಂದಲೂ ಕಾಂಗ್ರೆಸ್ ಶಾಸಕ ಬಿ.ಶಿವಣ್ಣ ಅವರ ಹಿಡಿತದಲ್ಲಿದ್ದು, ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಇವರ ಗೆಲುವಿನ ಓಟವನ್ನು ಕಟ್ಟಿ ಹಾಕಲು ಜೆಡಿಎಸ್ ಮತ್ತು ಬಿಎಸ್‌ಪಿ ತಂತ್ರಗಾರಿಕೆ ರೂಪಿಸುತ್ತಿವೆ.

ಬಿಜೆಪಿ ಭದ್ರಕೋಟೆಯಾಗಿದ್ದ ಆನೇಕಲ್ ಕ್ಷೇತ್ರವನ್ನು 2013 ಮತ್ತು 2018ರಲ್ಲಿ ಕಾಂಗ್ರೆಸ್ ಶಾಸಕ ಶಿವಣ್ಣ ಅವರು ತಮ್ಮ ಕೈವಶ ಮಾಡಿಕೊಂಡಿದ್ದಾರೆ. ಇವರ ಹ್ಯಾಟ್ರಿಕ್ ಗೆಲುವು ತಡೆಯಲು ಬಿಜೆಪಿಯಿಂದ ಆಕಾಂಕ್ಷಿಗಳು ಉತ್ಸುಕರಾಗಿದ್ದಾರೆ. ಜೆಡಿಎಸ್ ಮತ್ತು ಬಿಎಸ್‌ಪಿ ಕೂಡ ತಮ್ಮದೇ ತಂತ್ರ ಹೆಣೆಯುತ್ತಿವೆ.

ಕೇಂದ್ರ ಸಚಿವ ಆನೇಕಲ್‌ನ ಎ.ನಾರಾಯಣಸ್ವಾಮಿ ಅವರು ನಾಲ್ಕು ಬಾರಿ ಈ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಎಲ್ಲಾ ಚುನಾವಣೆಗಳಲ್ಲಿಯೂ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಪೈಪೋಟಿ ಏರ್ಪಟ್ಟಿತ್ತು.


ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಮು, ಟಿ.ವಿ. ಬಾಬು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಹುಲ್ಲಹಳ್ಳಿ ಶ್ರೀನಿವಾಸ್, ಬಂಡಾಪುರ ರಾಮಚಂದ್ರ, ಬಿಜೆಪಿ ಯುವ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಸಂದೀಪ್, ಮುಖಂಡರಾದ ಪಟಾಪಟ್ ಶ್ರೀನಿವಾಸ್, ಮಂಜುನಾಥ್ ಮದ್ದೂರಪ್ಪ, ಬಿ.ವೈ.ರವಿಚಂದ್ರ ಬಿಜೆಪಿ ಆಕಾಂಕ್ಷಿಗಳು.

ತಾಲ್ಲೂಕಿನ ಎಲ್ಲೆಡೆ ಗೋಡೆ ಬರಹ, ಬ್ಯಾನರ್‌ಗಳು, ಕಟೌಟ್‌ಗಳು ವಿವಿಧ ಕಾರ್ಯಕ್ರಮಗಳ ಮೂಲಕ ಪ್ರಚಾರ ಮಾಡುತ್ತಿದ್ದಾರೆ. ಕ್ಷೇತ್ರದಲ್ಲಿ ತಮ್ಮದೇ ನೆಲೆ ಹೊಂದಿರುವ ಜೆಡಿಎಸ್ ಈ ಬಾರಿ ಕೆ.ಪಿ.ರಾಜು ಅವರನ್ನು ಕಣಕ್ಕಿಳಿಸುತ್ತಿದೆ. ಕ್ಷೇತ್ರದೆಲ್ಲೆಡೆ ಪ್ರಚಾರದಲ್ಲಿ ನಡೆಸುತ್ತಿದ್ದಾರೆ.

ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ ನೆಲೆ ವಿಸ್ತರಿಸಿಕೊಳ್ಳುತ್ತಿರುವ ಬಿಎಸ್‌ಪಿ ಚಿನ್ನಪ್ಪ ವೈ.ಚಿಕ್ಕಹಾಗಡೆ ಅವರನ್ನು ಅಭ್ಯರ್ಥಿ ಎಂದು ಘೋಷಿಸಿದೆ. ಇವರ ನೇತೃತ್ವದಲ್ಲಿ ವಿವಿಧ ವರ್ಗಗಳನ್ನು ಒಗ್ಗೂಡಿಸಿ ಚುನಾವಣೆ ತಂತ್ರ ರೂಪಿಸುತ್ತಿದ್ದಾರೆ. ಎಎಪಿ ಪಕ್ಷದಿಂದ ಮುನೇಶ್, ವಿಸಿಕೆ ಪಕ್ಷದಿಂದ ಎಂ.ಸಿ.ಹಳ್ಳಿ ವೇಣು ಚುನಾವಣೆಗೆ ಸ್ಪರ್ಧಿಸಲು ಸಜ್ಜಾಗಿದ್ದಾರೆ.

ಬಿಜೆಪಿಯಲ್ಲಿ 8 ಆಕಾಂಕ್ಷಿಗಳು: ಬಿಜೆಪಿಯಲ್ಲಿ 8ಕ್ಕೂ ಹೆಚ್ಚು ಆಕಾಂಕ್ಷಿಗಳು ತಮ್ಮದೇ ಆದ ಪ್ರಭಾವ ಬಳಸಿ ಟಿಕೆಟ್ ಪಡೆಯಬೇಕೆಂಬ ಉಮೇದಿನಲ್ಲಿದ್ದಾರೆ. ಈ ನಡುವೆ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಅವರು ಸ್ಪರ್ಧಿಸುವರು ಎಂಬ ಮಾತುಗಳು ಕೇಳಿಬರುತ್ತಿವೆ.

ಆನೇಕಲ್ ವಿಧಾನಸಭಾ ಕ್ಷೇತ್ರ



ಬಿ.ಶಿವಣ್ಣ, ಹಾಲಿ ಶಾಸಕರು (ಕಾಂಗ್ರೆಸ್)



ಹಾಲಿ ಮತದಾರರ ವಿವರ

1,97,745 ಪುರುಷರು

1,78,299 ಮಹಿಳೆಯರು

79 ತೃತೀಯ ಲಿಂಗಿಗಳು

3,76,123 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	1,13,894	1,05,464	52,593
ಬಿಜೆಪಿ	1,05,267	65,282	62,455
ಜೆಡಿಎಸ್	ಬಿಎಸ್‌ಪಿಗೆ ಬೆಂಬಲ	7,307	18,477
ಬಿಎಸ್‌ಪಿ	2,004	1,365	2,932

ಸುದ್ದಿ 2 ನಿಮಿಷ

‘ಗ್ರಾಮ ಸಹಾಯಕರನ್ನು ಡಿ ದರ್ಜೆ ನೌಕರರನ್ನಾಗಿ ಪರಿಗಣಿಸಿ’

ಬೆಂಗಳೂರು: ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಗ್ರಾಮ ಸಹಾಯಕರನ್ನು ಡಿ ದರ್ಜೆ ನೌಕರರನ್ನಾಗಿ ಪರಿಗಣಿಸಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಕಂದಾಯ ಇಲಾಖೆ ಗ್ರಾಮ ಸಹಾಯಕರ ಕೇಂದ್ರ ಸಂಘ ಒತ್ತಾಯಿಸಿದೆ.

‘ರಾಜ್ಯದಾದ್ಯಂತ 10,450 ಜನ ಗ್ರಾಮ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದು, ₹13 ಸಾವಿರ ವೇತನ ನೀಡಲಾಗುತ್ತಿದೆ. ಸೇವಾ ಭದ್ರತೆಯನ್ನು ಒದಗಿಸಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಆರೋಗ್ಯ ಭದ್ರತೆಯನ್ನೂ ಕಲ್ಪಿಸಿಲ್ಲ. ಕಡಿಮೆ ಗೌರವಧನದಲ್ಲಿ ಜೀವನ ನಡೆಸುವುದು ಕಷ್ಟವಾಗಿದೆ. ಚುನಾವಣೆಗಳ ವೇಳೆ ಹೆಚ್ಚಿನ ಕೆಲಸ ಮಾಡಿಸುತ್ತಾರೆ. ರಾತ್ರಿ ವೇಳೆಯೂ ಕೆಲಸ ಮಾಡಿಸಲಾಗುತ್ತಿದೆ. ಆದರೆ, ಅದಕ್ಕೆ ತಕ್ಕಂತೆ ಸೌಲಭ್ಯ ಸಿಗುತ್ತಿಲ್ಲ. ಬೆಲೆ ಏರಿಕೆಯ ಸಂದರ್ಭದಲ್ಲಿ ಕುಟುಂಬ ನಿರ್ವಹಣೆ ಮಾಡುವುದು ಕಷ್ಟವಾಗುತ್ತಿದೆ’ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಚ್.ಎನ್ ದೇವರಾಜು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಶಾಸಕ ಅಖಂಡ ಸೋದರಿ ಗಗನ ಸುಕನ್ಯಾ ಎಎಪಿಗೆ



ಬೆಂಗಳೂರು: ಪುಲಕೇಶಿ ನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸ್ ಮೂರ್ತಿ ಅವರ ಸಹೋದರಿ ಗಗನ ಸುಕನ್ಯಾ ಅವರು ಆಮ್ ಆದ್ಮಿ ಪಾರ್ಟಿ ಸೇರ್ಪಡೆಯಾದರು.

ಪಕ್ಷದ ರಾಜ್ಯ ಅಧ್ಯಕ್ಷ ಪೃಥ್ವಿ ರೆಡ್ಡಿ ಮಾತನಾಡಿ, ‘ಗಗನ ಸುಕನ್ಯಾ ಅವರು ಜನರ ಕಷ್ಟಗಳಿಗೆ ನಿರಂತರವಾಗಿ ನೆರವಾಗುತ್ತಾ ಬಂದಿದ್ದಾರೆ. ಕೋವಿಡ್ ವೇಳೆ ಪಡಿತರ ಕಿಟ್ ವಿತರಣೆ ನೀಡಿ ಬಡವರಿಗೆ ನೆರವಾಗಿದ್ದಾರೆ. ಕೆಜಿಎಫ್ ವಿಧಾನಸಭಾ ಕ್ಷೇತ್ರದ ನೂರಾರು ಶಾಲೆಗಳಿಗೆ ಕ್ರೀಡಾ ಸಾಮಗ್ರಿಗಳು, ಬ್ಯಾಗ್‌ಗಳು, ನೋಟ್ ಪುಸ್ತಕಗಳನ್ನು ವಿತರಿಸಿದ್ದಾರೆ’ ಎಂದು ಹೇಳಿದರು.

ಪಕ್ಷ ಸೇರಿ ಮಾತನಾಡಿದ ಗಗನ ಸುಕನ್ಯಾ, ‘ಕೋಲಾರ ಜಿಲ್ಲೆಯಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ರಾಜಕಾರಣಿಗಳು ಗೆಲುವು ಸಾಧಿಸಿ, ಅವರು ಮಾತ್ರ ಅಭಿವೃದ್ಧಿ ಆಗಿದ್ದಾರೆಯೇ ವಿನಾ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಿಲ್ಲ. ಕೋಲಾರ ಜಿಲ್ಲೆಯ ಜನಸಾಮಾನ್ಯರಿಗೆ ಗುಣಮಟ್ಟದ ಮೂಲ ಸೌಕರ್ಯಗಳು ದೊರೆಯಬೇಕು. ಇಲ್ಲಿನ ಸರ್ಕಾರಿ ಶಾಲೆಗಳು, ಆಸ್ಪತ್ರೆಗಳು ಅಭಿವೃದ್ಧಿ ಆಗಬೇಕು’ ಎಂದು ಹೇಳಿದರು.

ಅದಾನಿ ಬಿಕ್ಕಟ್ಟಿನ ಆತಂಕ ಅನಗತ್ಯ: ಪಿಯೂಷ್ ಗೋಯಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅದಾನಿ ಸಮೂಹದ ಬಿಕ್ಕಟ್ಟನ್ನು ಸೂಕ್ತವಾಗಿ ನಿಭಾಯಿಸಲಾಗುತ್ತಿದೆ. ಜನರು ಆತಂಕ ಪಡುವ ಅಗತ್ಯವಿಲ್ಲ. ವಂಚನೆಯ ಆರೋಪಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದರು.

ಭಾರತದ ಹಣಕಾಸು ಮಾರುಕಟ್ಟೆಗಳು ವಿಶ್ವದಲ್ಲೇ ಉತ್ತಮವಾಗಿ ನಿಯಂತ್ರಿಸಲ್ಪಡುವ ಮಾರುಕಟ್ಟೆಗಳ ಸಾಲಿನಲ್ಲಿವೆ. ಹಿಂಡನ್ ಬರ್ಗ್ ಮಾಡಿದ ವಂಚನೆ ವರದಿಯ ನಂತರ ಅದಾನಿ ಸಮೂಹದ ಷೇರುಗಳ ಮೌಲ್ಯ ಕುಸಿದಿದೆ. ಯಾವುದೇ ವ್ಯಕ್ತಿ, ಜನರ ಸಂಪತ್ತಿನ ನಷ್ಟವಾಗಿಲ್ಲ. ಷೇರುಗಳ ಏರಿಳಿತ ಸಹಜ. ಇದು ಹೂಡಿಕೆ ಮಾರುಕಟ್ಟೆ ನಿಯಮದ ಭಾಗ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ವಿಶ್ವದ ಷೇರು ಮಾರುಕಟ್ಟೆಗಳು ಎಂದೂ ಸ್ಥಿರವಾಗಿರುವುದಿಲ್ಲ. ಭಾರತೀಯ ಹಣಕಾಸು ಸಂಸ್ಥೆಗಳು ತಮ್ಮ ಹಣ ಸಂಪೂರ್ಣವಾಗಿ ಸುರಕ್ಷಿತವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಎಲ್‌ಐಸಿ ಹಾಗೂ ಎಸ್‌ಬಿಐ ಸಹ ಆತಂಕದಿಂದ ಹೊರಬಂದಿವೆ. ವರದಿಯ ಆರೋಪಗಳ ಕುರಿತು ಪರಿಶೀಲಿಸಲಾಗುತ್ತಿದೆ. ಸೆಬಿ ಕ್ರಮಗಳ ಕುರಿತು ಅದರ ಅಧಿಕಾರಿಗಳೇ ಮಾತನಾಡಬೇಕು. ಅದಾನಿ ಬಿಕ್ಕಟ್ಟು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಸಂಸತ್ ಕಲಾಪ ಹಾಳು ಮಾಡುತ್ತಿರುವುದು ದುರದೃಷ್ಟಕರ ಎಂದರು.

ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ಅವರನ್ನು ಕಡೆಗಣಿಸಿಲ್ಲ. ಅವರ ಅನುಭವವನ್ನು ಪಕ್ಷ ಸೂಕ್ತವಾಗಿ ಬಳಸಿಕೊಳ್ಳಲಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕಾರು ಡಿಕ್ಕಿ: ಎಂಬಿಎ ವಿದ್ಯಾರ್ಥಿನಿಗೆ ಗಾಯ

ಬೆಂಗಳೂರು: ಮೈಸೂರು ರಸ್ತೆಯಲ್ಲಿರುವ ಆರ್.ವಿ. ಕಾಲೇಜು ಎದುರು ಸ್ವಾತಿ (21) ಎಂಬುವವರಿಗೆ ಕಾರು ಡಿಕ್ಕಿ ಹೊಡೆದಿದ್ದು, ತೀವ್ರ ಗಾಯಗೊಂಡಿರುವ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಹುಬ್ಬಳ್ಳಿಯ ಸ್ವಾತಿ, ನಗರದ ಬಿಐಎಂಎಸ್ ಕಾಲೇಜಿನ ಎಂಬಿಎ ವಿದ್ಯಾರ್ಥಿನಿ. ಪಟ್ಟಣಗೆರೆಯ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ನೆಲೆಸಿದ್ದರು. ಫೆ. 2ರಂದು ಮಧ್ಯಾಹ್ನ ಆರ್.ವಿ. ಕಾಲೇಜು ಎದುರು ರಸ್ತೆ ದಾಟುತ್ತಿದ್ದ ವೇಳೆ ಕಾರು ಡಿಕ್ಕಿ ಹೊಡೆದಿದೆ’ ಎಂದು ಕೆಂಗೇರಿ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ರಸ್ತೆಯಲ್ಲಿ ಹಾರಿ ಬಿದ್ದಿದ್ದ ಸ್ವಾತಿಯವರ ತಲೆ, ಕೈ–ಕಾಲು ಹಾಗೂ ದೇಹದ ಹಲವು ಭಾಗಗಳಿಗೆ ತೀವ್ರ ಪೆಟ್ಟು ಬಿದ್ದಿದೆ. ಸ್ಥಳೀಯರೇ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಸ್ವಾತಿ ಅವರಿಗೆ ತೀವ್ರ ನಿಗಾ ಘಟಕದಲ್ಲಿ ವೈದ್ಯರು ಚಿಕಿತ್ಸೆ ನೀಡುತ್ತಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ’ ಎಂದರು.

‘ಅಪಘಾತದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಾರು ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ವಿಚಾರಣೆ ನಡೆಸಲಾಗುತ್ತಿದೆ.

ಕರ್ನಾಟಕ ವಿಧಾನಸಭೆ ಚುನಾವಣೆ ಪ್ರಣಾಳಿಕೆ ಬಿಡುಗಡೆ

‘ಆಡಳಿತ ಪಕ್ಷದ ಸ್ವಾರ್ಥಕ್ಕೆ ಪ್ರಜಾಪ್ರಭುತ್ವ ಬಲಹೀನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮ್ಮ ಸ್ವಾರ್ಥಕ್ಕಾಗಿ ಆಡಳಿತ ಪಕ್ಷಗಳು ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಬಲಹೀನಗೊಳಿಸುತ್ತಿವೆ’ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ವಿಷಾದಿಸಿದರು.

ನಗರದಲ್ಲಿ ಶನಿವಾರ ಪ್ರಜಾಪ್ರಭುತ್ವ ಮತ್ತು ಕೋಮು ಸೌಹಾರ್ದತೆಗಾಗಿ ವೇದಿಕೆ ಆಯೋಜಿಸಿದ್ದ ಕರ್ನಾಟಕ ವಿಧಾನಸಭೆ ಚುನಾವಣೆ ಪ್ರಣಾಳಿಕೆ–2023 ಬಿಡುಗಡೆ ಹಾಗೂ ದುಂಡು ಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

‘ರಾಜಕೀಯ ಪ್ರಭುತ್ವದೊಂದಿಗೆ ಆರ್ಥಿಕ, ಸಾಮಾಜಿಕ ಪ್ರಭುತ್ವವು ಒಗ್ಗೂಡಬೇಕು ಎಂಬುದು ಬಿ.ಆರ್. ಅಂಬೇಡ್ಕರ್ ಅವರ ಆಶಯವಾಗಿತ್ತು. ಆದರೆ, ರಾಜಕೀಯದ ಜತೆಗೆ ಆರ್ಥಿಕ, ಸಾಮಾಜಿಕ ವ್ಯವಸ್ಥೆ ಇಂದಿಗೂ ಸಮೀಕರಿಸಿಲ್ಲ. ನ್ಯಾಯಾಂಗ ವ್ಯವಸ್ಥೆಯನ್ನೂ ವ್ಯವಸ್ಥಿತವಾಗಿ ದುರ್ಬಲ ಮಾಡಲಾಗುತ್ತಿದೆ’ ಎಂದರು.

ಹಿರಿಯ ವಕೀಲ ರವಿವರ್ಮ ಕುಮಾರ್, ‘ಆರೋಪಿ ಸ್ಥಾನದ ವ್ಯಕ್ತಿಗಳೇ ಕಾನೂನು ರಚಿಸುವ ಸ್ಥಾನದಲ್ಲಿದ್ದಾರೆ. ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ವ್ಯಕ್ತಿ ವಿರುದ್ಧ ಇನ್ನೂ ಎಫ್‌ಐಆರ್ ಆಗಿಲ್ಲ. ಇಂತಹ ವ್ಯವಸ್ಥೆಯ ಮೇಲೆ ಎಷ್ಟು ದಿನ ನಂಬಿಕೆ ಇಟ್ಟುಕೊಳ್ಳುವುದು’ ಎಂದು ಪ್ರಶ್ನಿಸಿದರು.



ನಗರದಲ್ಲಿ ಶನಿವಾರ ಪ್ರಜಾಪ್ರಭುತ್ವ ಮತ್ತು ಕೋಮು ಸೌಹಾರ್ದತೆಗಾಗಿ ವೇದಿಕೆ ಕರ್ನಾಟಕ ಅಧ್ಯಯನ ವಿಭಾಗ ಆಯೋಜಿಸಿದ್ದ ದುಂಡುಮೇಜಿನ ಸಭೆಯಲ್ಲಿ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅವರು ಕರ್ನಾಟಕ ವಿಧಾನಸಭೆ ಚುನಾವಣೆಯ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು. ಪ್ರೊ. ರವಿವರ್ಮ ಕುಮಾರ್, ಪ್ರೊ.ಎ.ಆರ್.ವಾಸವಿ, ಎಂ.ಜಿ. ದೇವಸಹಾಯಂ ಮತ್ತು ಅರವಿಂದ್ ನರೈನ್ ಇದ್ದಾರೆ – ಪ್ರಜಾವಾಣಿ ಚಿತ್ರ

‘ಚುನಾವಣೆ ಆಯೋಗವು ಪಾರದರ್ಶಕವಾಗಿ ಚುನಾವಣೆ ನಡೆಸುವುದರಲ್ಲಿ ಎಡವಿದೆ. ಆಳುವ ವರ್ಗಕ್ಕೆ ಅನುಕೂಲಕರ ದಿನಾಂಕ ಘೋಷಿಸುತ್ತಿದೆ. ಸಿಬಿಐ, ಇ.ಡಿ ಹಾಗೂ ಪೊಲೀಸರು ಆಳುವ ವರ್ಗಕ್ಕೆ ಶಾಮೀಲಾಗಿದ್ದಾರೆ’ ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಎಂ.ಜಿ. ದೇವಸಹಾಯಂ ಮಾತನಾಡಿ, ‘ಪಾರದರ್ಶಕವಾಗಿ ಚುನಾವಣೆ ನಡೆಯದಿದ್ದರೆ ಪ್ರಜಾಪ್ರಭುತ್ವ ವ್ಯವಸ್ಥೆಯ ಬೇರು ಸಡಿಲಗೊಳ್ಳಲಿದೆ. ಚುನಾವಣೆ ನೀತಿ ಸಂಹಿತೆ ಉಲ್ಲಂಘನೆಯಿಂದ ಹಿಡಿದು ಹಣ ಹಂಚಿಕೆ, ಜಾತಿ ವ್ಯವಸ್ಥೆ ಚುನಾವಣೆ ವೇಳೆ ಮುನ್ನೆಲೆಗೆ ಬರುತ್ತವೆ’ ಎಂದರು.

ಜಮಾತೆ ಇಸ್ಲಾಮಿ ಹಿಂದ್‌ನ ರಾಜ್ಯ ಅಧ್ಯಕ್ಷ ಡಾ.ಬೆಳಗಾಮಿ ಮಹಮ್ಮದ್ ಸಾದ್, ‘ಹಿಜಾಬ್, ಟಿಪ್ಪು, ಹಲಾಲ್, ವ್ಯಾಪಾರ ಹಾಗೂ ಧರ್ಮದ ಹೆಸರಿನಲ್ಲಿ ಸಮಾಜವನ್ನು ವಿಭಜಿಸಿ ಚುನಾವಣೆಯಲ್ಲಿ ಲಾಭ ಮಾಡಿಕೊಳ್ಳಲಾಗುತ್ತಿದೆ’ ಎಂದು ವಿಷಾದಿಸಿದರು.

ಪಿಯುಸಿಎಲ್‌ನ ಅರವಿಂದ್ ನರೈನ್, ಎ.ಆರ್.ವಾಸವಿ ಮಾತನಾಡಿದರು.

ಸಾಕು ತಾಯಿ ಕೊಂದು ಜೈಲಿಗೆ: ಹೊರಬಂದು ತಂದೆಗೆ ಬೆದರಿಕೆ

ಬೆಂಗಳೂರು: ಸಾಕು ತಾಯಿ ಕೊಂದ ಆರೋಪದಡಿ ಜೈಲಿಗೆ ಹೋಗಿ ಜಾಮೀನು ಮೇಲೆ ಹೊರಬಂದು ಸಾಕು ತಂದೆಗೂ ಬೆದರಿಕೆಯೊಡ್ಡಿದ್ದ ಆರೋಪಿ ಉತ್ತಮ್ ಕುಮಾರ್ (27) ಎಂಬುವವರನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಅಶ್ವತ್ಥನಗರ ನಿವಾಸಿ ಉತ್ತಮ್ ಕುಮಾರ್, ಮನೆ ಬಾಡಿಗೆ ಹಣ ಸಂಗ್ರಹ ವಿಚಾರವಾಗಿ ಸಾಕು ತಂದೆ ಮಂಜುನಾಥ್ ಅವರಿಗೆ ಮಾರಕಾಸ್ತ್ರ ತೋರಿಸಿ ಬೆದರಿಕೆಯೊಡ್ಡಿದ್ದ. ಸ್ಥಳಕ್ಕೆ ಹೋಗಿದ್ದ ಹೊಯ್ಸಳ ಗಸ್ತು ವಾಹನದ ಪೊಲೀಸರ ವಿರುದ್ಧವೂ ಹರಿಹಾಯ್ದು, ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಂಜುನಾಥ್ ದಂಪತಿಗೆ ಮಕ್ಕಳಿರಲಿಲ್ಲ. ಹೀಗಾಗಿ, ಉತ್ತಮ್ ಕುಮಾರ್‌ನನ್ನು ದತ್ತು ತೆಗೆದುಕೊಂಡಿದ್ದರು. ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದ ಆರೋಪಿ, ಸಾಕು ತಂದೆ–ತಾಯಿ ಇಬ್ಬರಿಗೂ ನಿತ್ಯ ಕಿರುಕುಳ ನೀಡುತ್ತಿದ್ದ. 2018ರಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ಸಾಕು ತಾಯಿ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿದ್ದ.’

‘ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಉತ್ತಮ್‌ಕುಮಾರ್, ಒಂದೂವರೆ ವರ್ಷದ ಹಿಂದೆ ಜಾಮೀನು ಮೇಲೆ ಹೊರ ಬಂದಿದ್ದ. ಪುನಃ ತಂದೆಗೆ ಕಿರುಕುಳ ನೀಡಲಾರಂಭಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಂಜುನಾಥ್ ಅವರ ಹೆಸರಿನಲ್ಲಿ ಕೆಲ ಮನೆಗಳಿದ್ದು, ಅವುಗಳನ್ನು ಬಾಡಿಗೆಗೆ ನೀಡಲಾಗಿದೆ. ಮನೆ ಬಾಡಿಗೆಯ ಸಂಪೂರ್ಣ ಹಣವನ್ನು ತನಗೆ ನೀಡುವಂತೆ ಉತ್ತಮ್‌ಕುಮಾರ್ ಒತ್ತಾಯಿಸುತ್ತಿದ್ದ. ಇದೇ ವಿಚಾರವಾಗಿ ತಂದೆಗೆ ಮಾರಕಾಸ್ತ್ರ ತೋರಿಸಿ ಬೆದರಿಸಿದ್ದ. ಬಾಡಿಗೆದಾರ ಮನೋಹರ್ ಬಳಿ ಹೋಗಿದ್ದ ಆರೋಪಿ, ತನಗೇ ಬಾಡಿಗೆ ನೀಡುವಂತೆ ತಾಕೀತು ಮಾಡಿದ್ದ. ಅವರಿಗೂ ಮಾರಕಾಸ್ತ್ರ ತೋರಿಸಿದ್ದ. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋದ ಸಿಬ್ಬಂದಿ ಆರೋಪಿಯನ್ನು ವಶಕ್ಕೆ ಪಡೆದಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಸಿವಿಲ್ ಎಂಜಿನಿಯರಿಂಗ್ ವಿಭಾಗ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೋಗದಲ್ಲಿ ‘ಸ್ವಚ್ಛ ಭಾರತ ಅಭಿಯಾನಕ್ಕಾಗಿ ಘನತ್ಯಾಜ್ಯ ನಿರ್ವಹಣೆ’ ವಿಚಾರಸಂಕಿರಣಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು. ಸಂಸ್ಥೆಯ ಕಾರ್ಯದರ್ಶಿ ಗಾಳಿಸ್ವಾಮಿ, ಪ್ರಾಂಶುಪಾಲ ಬಿ.ಜಿ. ಪ್ರಸಾದ್, ಕಾರ್ಯಕ್ರಮದ ಸಂಚಾಲಕ ಎಚ್.ಕೆ. ರಾಮರಾಜು, ಕಾರ್ತಿಕ್ ಎಂ, ಪ್ರಮೋದ್ ಬಿ.ವಿ., ಇದ್ದರು.

‘25 ವರ್ಷದ ಅಭಿವೃದ್ಧಿಗೆ ಅಡಿಪಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರದ ‘ಅಮೃತಕಾಲ’ ಬಜೆಟ್ ಮುಂದಿನ 25 ವರ್ಷ ರಾಷ್ಟ್ರದ ಅಭಿವೃದ್ಧಿಗೆ ಅಡಿಪಾಯ ಆಗಲಿದೆ’ ಎಂದು ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪಿಯೂಷ್ ಗೋಯಲ್ ಹೇಳಿದರು.

ನಗರದಲ್ಲಿ ಶನಿವಾರ ಬಿಜೆಪಿ ವತಿಯಿಂದ ಆಯೋಜಿಸಿದ್ದ ‘ಅಮೃತಕಾಲ’ ಬಜೆಟ್ ಕುರಿತು ಸಂವಾದದಲ್ಲಿ ಅವರು ಮಾತನಾಡಿದರು.

‘ಗ್ರಾಮೀಣ ಪ್ರದೇಶದ ಪ್ರತಿ ಮನೆಗೂ ಸೌಲಭ್ಯ ತಲುಪಿಸುವಂತೆ ಯೋಜನೆ ರೂಪಿಸಲಾಗಿದೆ. ₹ 10 ಲಕ್ಷ ಕೋಟಿಯನ್ನು ನೇರವಾಗಿ ಮೂಲಸೌಕರ್ಯಕ್ಕೆ ವಿನಿಯೋಗಕ್ಕೆ ಯೋಜನೆ ರೂಪಿಸಲಾಗಿದೆ. ಭಾರತವು ಸೂಪರ್ ಪವರ್ ದೇಶವಾಗಿ ಹೊರಹೊಮ್ಮುತ್ತಿದೆ. ರಫ್ತು ಪ್ರಮಾಣದಲ್ಲೂ ಮುಂಚೂಣಿಯಲ್ಲಿದೆ. ಮಾರ್ಚ್ ವೇಳೆಗೆ ಇನ್ನಷ್ಟು ವೇಗ ಪಡೆದುಕೊಳ್ಳಲಿದೆ’ ಎಂದು ಬಣ್ಣಿಸಿದರು.

‘ವಿಶ್ವದಲ್ಲಿ ಭಾರತದ ಆರ್ಥಿಕತೆಯು ವೇಗವಾಗಿ ಮುನ್ನುಗ್ಗುತ್ತಿದೆ. ಆರ್ಥಿಕತೆಯಲ್ಲಿ 8ರಿಂದ 3ನೇ ಸ್ಥಾನಕ್ಕೆ ತಲುಪುತ್ತಿದ್ದೇವೆ’ ಎಂದು ಹೇಳಿದರು.

‘ಆಯವ್ಯಯ ಎಂದರೆ ಬರೀ ಭರವಸೆ, ಯೋಜನೆ ಪ್ರಕಟಣೆ ಅಲ್ಲ. ಅದು ಯೋಜನೆಗಳ ಅನುಷ್ಠಾನಕ್ಕಿರುವ ದಾರಿ. ಈ ವರ್ಷಗಳಲ್ಲಿ ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿ, ಎಲ್ಲ ವರ್ಗದ ಜನರ ಅಭಿವೃದ್ಧಿಗೆ ಅನುದಾನ ನೀಡಿ ದೇಶದಲ್ಲಿ ಬದಲಾವಣೆ ತರಲಾಗಿದೆ’ ಎಂದರು.



ನಗರದಲ್ಲಿ ಶನಿವಾರ ಬಿಜೆಪಿ ಆಯೋಜಿಸಿದ್ದ ಕೇಂದ್ರದ ‘ಅಮೃತ ಕಾಲ’ ಬಜೆಟ್ ಕುರಿತು ಸಂವಾದದಲ್ಲಿ (ಎಡದಿಂದ) ಅಶ್ವತ್ಥನಾರಾಯಣ್, ಕೇಂದ್ರ ಸಚಿವ ಪಿಯೂಷ್ ಗೋಯಲ್ ಹಾಗೂ ಸಂಸದ ಪಿ.ಸಿ.ಮೋಹನ್ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ದೇಶದ ಪ್ರಮುಖ 125 ನಗರಗಳು ಕೆಲವೇ ತಿಂಗಳಲ್ಲಿ 5‘ಜಿ’ ಇಂಟರ್‌ನೆಟ್ ಸೌಲಭ್ಯ ಪಡೆದುಕೊಳ್ಳಲಿವೆ

ಪಿಯೂಷ್ ಗೋಯಲ್, ಕೇಂದ್ರ ಸಚಿವ

‘ಬಿಜೆಪಿ ಅಧಿಕಾರಕ್ಕೆ ಬಂದಾಗ ಶೇ 50ರಷ್ಟು ಜನರಿಗೆ ಶೌಚಾಲಯದ ಸೌಲಭ್ಯ ಇರಲಿಲ್ಲ. ದೇಶದಲ್ಲಿ 7 ಕೋಟಿ ಶೌಚಾಲಯ ನಿರ್ಮಿಸಲಾಗಿದೆ. ಗ್ರಾಮೀಣ ಪ್ರದೇಶದ 3.50 ಕೋಟಿ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. 10 ಕೋಟಿ ಮನೆಗಳಿಗೆ ಗ್ಯಾಸ್ ಸಂಪರ್ಕ ಕಲ್ಪಿಸಲಾಗಿದೆ. ಈಗ ಶೇ 99ರಷ್ಟು ಮನೆಗಳಲ್ಲಿ ಗ್ಯಾಸ್ ಸಂಪರ್ಕವಿದೆ’ ಎಂದು ಹೇಳಿದರು.

‘ಪ್ರತಿಯೊಬ್ಬರೂ ಸ್ವಂತ ಸೂರು ಹೊಂದಬೇಕು ಎಂಬ ಉದ್ದೇಶದಿಂದ ಬಜೆಟ್‌ನಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ ಹೆಚ್ಚಿನ ಅನುದಾನ ಮೀಸಲಿರಿಸಲಾಗಿದೆ. ಹೆದ್ದಾರಿ ನಿರ್ಮಾಣ, ಡಿಜಿಟಲ್ ಇಂಡಿಯಾಕ್ಕೆ ಒತ್ತು ನೀಡಲಾಗುವುದು’ ಎಂದು ಹೇಳಿದರು.

ಸಂಸದ ಪಿ.ಸಿ.ಮೋಹನ್ ಮಾತನಾಡಿ, ‘ಬಜೆಟ್ ಗಾತ್ರವು ₹ 45 ಲಕ್ಷ ಕೋಟಿ ಆಗಿದ್ದು, ಸರ್ವ ಕ್ಷೇತ್ರಕ್ಕೂ ಸಮವಾದ ನ್ಯಾಯ ಕಲ್ಪಿಸಿದೆ. ದೇಶದಲ್ಲಿ 80 ಕೋಟಿ ಜನರಿಗೆ ಉಚಿತ ಪಡಿತರ ವಿತರಿಸಲಾಗುತ್ತಿದೆ. ಯುಪಿಎ ಅವಧಿಯಲ್ಲಿ ರಾಜ್ಯದ ರೈಲ್ವೆಗೆ ಬರೀ ₹ 1 ಸಾವಿರ ಕೋಟಿ ನೀಡಲಾಗುತ್ತಿತ್ತು. ಬಿಜೆಪಿ ₹ 7,561 ಕೋಟಿ ನೀಡಿದೆ’ ಎಂದರು.

ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ರೋಗ, ಚಿಕಿತ್ಸೆ ಬಗ್ಗೆ ವೈದ್ಯರಿಂದ ಅರಿವು

ನಗರದ ವಿವಿಧೆಡೆ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬದಲಾದ ಜೀವನ ಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ, ಧೂಮಪಾನದಂತಹ ವ್ಯಸನ, ವಾಯುಮಾಲಿನ್ಯ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಈ ಕಾಯಿಲೆಯನ್ನು ಬೇಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಗುಣಪಡಿಸಲು ಸಾಧ್ಯ’ ಎಂದು ಇಲ್ಲಿನ ವೈದ್ಯರು ಜಾಗೃತಿ ಮೂಡಿಸಿದರು.

ಆರೋಗ್ಯ ಇಲಾಖೆ, ವಿವಿಧ ಆಸ್ಪತ್ರೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದವು. ವಾಕಥಾನ್, ಬೈಕ್ ರ್‍ಯಾಲಿ, ಉಪನ್ಯಾಸ, ವಿಚಾರಸಂಕಿರಣ, ಗುಣಮುಖರಿಗೆ ಸನ್ಮಾನ ಸೇರಿ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಆರೋಗ್ಯ ಇಲಾಖೆ ವಿಕಾಸಸೌಧದ ಗಾಂಧಿ ಪ್ರತಿಮೆಯಿಂದ, ಕಂಠೀರವ ಕ್ರೀಡಾಂಗಣದವರೆಗೆ ಹಮ್ಮಿಕೊಂಡಿದ್ದ ವಾಕಥಾನ್‌ಗೆ ಸಚಿವ ಡಾ.ಕೆ. ಸುಧಾಕರ್ ಚಾಲನೆ ನೀಡಿದರು. ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ವಾಕಥಾನ್‌ನಲ್ಲಿ ಭಾಗವಹಿಸಿ, ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿದರು.

ನಿಯಮಿತವಾಗಿ ಆರೋಗ್ಯ ತಪಾಸಣೆ, ಆರೋಗ್ಯಕರ ಆಹಾರ ಸೇವನೆ, ತಂಬಾಕು ಸೇವನೆಗೆ ಕಡಿವಾಣ ಸೇರಿ ವಿವಿಧ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವಂತೆ ಸಾರ್ವಜನಿಕರಲ್ಲಿ ಆರೋಗ್ಯ ಕಾರ್ಯಕರ್ತರು ಮನವಿ ಮಾಡಿಕೊಂಡರು. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯೂ ವಾಕಥಾನ್ ನಡೆಸಿತು. ಲಾಲ್‌ಬಾಗ್‌ನಲ್ಲಿ ನಡಿಗೆದಾರರಿಗೆ ಜಾಗೃತಿ ಮೂಡಿಸಿದ ಕಿದ್ವಾಯಿ ಸಂಸ್ಥೆಯ ವೈದ್ಯಕೀಯ ವಿದ್ಯಾರ್ಥಿಗಳು, ಸಂಸ್ಥೆಯವರೆಗೂ ಜಾಗೃತಿ ಮೂಡಿಸುತ್ತಾ ಹೆಜ್ಜೆ ಹಾಕಿದರು.



ವಿಕಾಸಸೌಧದ ಗಾಂಧಿ ಪ್ರತಿಮೆ ಮುಂಭಾಗ ಆರೋಗ್ಯ ಇಲಾಖೆ ಸಿಬ್ಬಂದಿ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿದರು. ಡಾ.ಕೆ. ಸುಧಾಕರ್ ಇದ್ದಾರೆ

ಮುಖ್ಯಾಂಶಗಳು

- ಕ್ಯಾನ್ಸರ್‌ನಿಂದ ಗುಣಮುಖರಾದವರಿಗೆ ಸನ್ಮಾನ
- ವಿಕಾಸಸೌಧದಿಂದ ಕಂಠೀರವ ಕ್ರೀಡಾಂಗಣದವರೆಗೆ ವಾಕಥಾನ್

ಫುಟ್ಬಾಲ್ ಆಟ: ಎಚ್‌ಸಿಜಿ ಆಸ್ಪತ್ರೆ ವತಿಯಿಂದ ಆಯೋಜಿಸಿದ ವಾಕಥಾನ್‌ಗೆ ಚಲನಚಿತ್ರ ನಟಿ ಮಾಲಾಶ್ರೀ ಹಾಗೂ ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ ಚಾಲನೆ ನೀಡಿದರು. ಶಂಕರ ಕಣ್ಣಿನ ಆಸ್ಪತ್ರೆಯಲ್ಲಿ ಫುಟ್ಬಾಲ್ ಆಟ ಆಡಿಸಲಾಯಿತು. ಅಂಧರು ಮತ್ತು ಕಣ್ಣಿಗೆ ಪಟ್ಟಿ ಕಟ್ಟಿಕೊಂಡವರನ್ನು ಒಳಗೊಂಡ ನಾಲ್ಕು ತಂಡಗಳನ್ನು ರಚಿಸಲಾಗಿತ್ತು.

ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ಮತ್ತು ರೋಗದಿಂದ ಬಳಲುತ್ತಿರುವವರಲ್ಲಿ ವಿಶ್ವಾಸ ಮೂಡಿಸಲು ರಾಜರಾಜೇಶ್ವರಿ ನಗರದ ಸ್ಪರ್ಶ್ ಆಸ್ಪತ್ರೆಯು 5 ಕಿ.ಮೀ. ವಾಕಥಾನ್ ನಡೆಸಿತು. ‘ಅಧ್ಯಯನದ ಪ್ರಕಾರ 2022ರಲ್ಲಿ 14 ಲಕ್ಷಕ್ಕೂ ಹೆಚ್ಚು ಹೊಸ ಕ್ಯಾನ್ಸರ್ ಪ್ರಕರಣಗಳು ದೇಶದಲ್ಲಿ ಪತ್ತೆಯಾಗಿವೆ. ಶ್ವಾಸಕೋಶ ಮತ್ತು ಸ್ತನ ಕ್ಯಾನ್ಸರ್ ಹೆಚ್ಚಿನವರಲ್ಲಿ ಕಾಣಿಸಿಕೊಳ್ಳುತ್ತಿದೆ. ಕ್ಯಾನ್ಸರ್ ಕುರಿತ ಆತಂಕ ಮತ್ತು ಮೌಢ್ಯವನ್ನು ತೊಡೆದು ಹಾಕಬೇಕು’ ಎಂದು ವೈದ್ಯರು ಹೇಳಿದರು.

ಮಣಿಪಾಲ್, ಆಸ್ಟರ್, ನಾರಾಯಣ ಹೆಲ್ತ್, ಅಪೋಲೊ, ಬಿಜಿಎಸ್ ಸೇರಿ ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿಯೂ ಕ್ಯಾನ್ಸರ್ ದಿನವನ್ನು ಆಚರಿಸಿ, ರೋಗದ ಬಗ್ಗೆ ಅರಿವು ಮೂಡಿಸಲಾಯಿತು.

‘ಕ್ಯಾನ್ಸರ್ ಸಾಮಾನ್ಯ ಕಾಯಿಲೆ’

ಕ್ಯಾನ್ಸರ್ ಕಾಯಿಲೆಯನ್ನು ಆರಂಭದಲ್ಲಿಯೇ ಪತ್ತೆ ಹಚ್ಚುವ ಉದ್ದೇಶದಿಂದ ಫೋರ್ಟಿಸ್ ಆಸ್ಪತ್ರೆ ‘ಪ್ರಿವೆಂಟಿವ್ ಆಂಕೊಲಾಜಿ ವಿಭಾಗ’ವನ್ನು ಪ್ರಾರಂಭಿಸಿದೆ. ಈ ವಿಭಾಗವನ್ನು ನಟಿ ಪೂಜಾ ಗಾಂಧಿ ಉದ್ಘಾಟಿಸಿದರು. ‘ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ಸಾಮಾನ್ಯ ಕಾಯಿಲೆಗಳಲ್ಲಿ ಒಂದಾಗಿದೆ. ಕ್ಯಾನ್ಸರ್ ಬಗ್ಗೆ ಜನರಿಗೆ ಜಾಗೃತಿ ಇಲ್ಲದ ಕಾರಣ ಕೊನೆ ಹಂತಕ್ಕೆ ತಲುಪುವವರೆಗೂ ಈ ಬಗ್ಗೆ ಎಚ್ಚೆತ್ತುಕೊಳ್ಳುವುದಿಲ್ಲ. ಆರಂಭದಲ್ಲಿಯೇ ಕ್ಯಾನ್ಸರ್ ಪತ್ತೆ ಹಚ್ಚುವುದರಿಂದ ಸೂಕ್ತ ಚಿಕಿತ್ಸೆ ಪಡೆದು, ಗುಣಮುಖರಾಗಬಹುದು’ ಎಂದು ಪೂಜಾಗಾಂಧಿ ಅವರು ಹೇಳಿದರು.

ಫೋರ್ಟಿಸ್ ಆಸ್ಪತ್ರೆಯ ವೈದ್ಯೆ ಡಾ.ನಿತಿ ರೈಝಾದ, ‘ಕ್ಯಾನ್ಸರ್ ತಡೆಗಟ್ಟುವುದು ಅತ್ಯಂತ ಅವಶ್ಯಕ. ಹೀಗಾಗಿ, ಆಸ್ಪತ್ರೆಯಲ್ಲಿ ನೂತನ ವಿಭಾಗವನ್ನು ತೆರೆಯಲಾಗಿದೆ. ಈ ವಿಭಾಗದಲ್ಲಿ ಎಲ್ಲಾ ಬಗೆಯ ಕ್ಯಾನ್ಸರ್‌ನನ್ನು ಪತ್ತೆಹಚ್ಚುವ ಅತ್ಯಾಧುನಿಕ ತಂತ್ರಜ್ಞಾನಗಳನ್ನೂ ಅಳವಡಿಸಿಕೊಳ್ಳಲಾಗಿದೆ’ ಎಂದು ಅವರು ಹೇಳಿದರು.

ಬಿಜೆಪಿ ವಿಶೇಷ ಕಾರ್ಯಕಾರಿಣಿ ಸಭೆಯಲ್ಲಿ ಬಿ.ಎಸ್‌. ಯಡಿಯೂರಪ್ಪ ಹೇಳಿಕೆ

‘ಕನಸು ಕಾಣುವ ಕಾಲ ಕಾಂಗ್ರೆಸ್‌ಗೆ ಮುಗಿದಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಕನಸು ಕಾಣುವ ಕಾಲ ಮುಗಿದಿದೆ. ಅವರು ಅಧಿಕಾರಕ್ಕೆ ಬರುವುದಿಲ್ಲ. ಬಿಜೆಪಿ ಸ್ವಂತ ಬಲದಿಂದ ಅಧಿಕಾರಕ್ಕೆ ಬರಲಿದೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಅರಮನೆ ಮೈದಾನದಲ್ಲಿ ಶನಿವಾರ ನಡೆದ ಬಿಜೆಪಿ ರಾಜ್ಯ ವಿಶೇಷ ಕಾರ್ಯಕಾರಿಣಿ ಸಭೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

‘ಕಾಂಗ್ರೆಸ್‌ನಲ್ಲಿ ಅತೃಪ್ತಿ, ಅಸಮಾಧಾನ ತುಂಬಿ ತುಳುಕುತ್ತಿದೆ. ಪರಮೇಶ್ವರ, ಮುನಿಯಪ್ಪ ಅಸಮಾಧಾನಗೊಂಡಿದ್ದಾರೆ. ನಮ್ಮಲ್ಲಿ ಯಾವುದೇ ಗೊಂದಲವಿಲ್ಲ. ಒಗ್ಗಟ್ಟಿನಿಂದ ಇದ್ದೇವೆ. ರಾಜ್ಯಾಧ್ಯಕ್ಷರು, ಮುಖ್ಯಮಂತ್ರಿ, ನಾನು ಮತ್ತು ಅರುಣ್‌ಸಿಂಗ್ ಮೂರು ತಂಡಗಳಲ್ಲಿ ಯಾತ್ರೆ ಮಾಡುತ್ತೇವೆ’ ಎಂದು ಹೇಳಿದರು.

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

‘ಕಾಂಗ್ರೆಸ್ ಪಕ್ಷದಲ್ಲಿ ನಾಯಕರು ಯಾರು? ರಾಹುಲ್ ಗಾಂಧಿ ನಾಯಕರೇ’ ಎಂದು ಪ್ರಶ್ನಿಸಿದ ಯಡಿಯೂರಪ್ಪ, ‘ವಿಶ್ವ ಮೆಚ್ಚಿದ ಮಹಾನ್ ನಾಯಕ ನರೇಂದ್ರ ಮೋದಿ, ಅಮಿತ್ ಶಾ ಅವರು ನಮ್ಮ ಜತೆ ಇರುವಾಗ ಕರ್ನಾಟಕ ಸೇರಿ ಮುಂಬರುವ ಎಲ್ಲ ಚುನಾವಣೆಗಳಲ್ಲೂ ಬಿಜೆಪಿ ಜಯಭೇರಿ ಬಾರಿಸುವುದು ನಿಶ್ಚಿತ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮಸ್ಯೆಗಳನ್ನು ಅರಿತು ಬಗೆಹರಿಸುವುದರ ಜತೆಗೆ ಚುನಾವಣೆಯಲ್ಲಿ ಎಲ್ಲ ಸಮುದಾಯಗಳನ್ನು ಒಟ್ಟಿಗೆ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಸಬೇಕು ಎಂದರು.

ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಮಾತನಾಡಿ, ಸಿದ್ದರಾಮಯ್ಯ ಆಡಳಿತದಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಗೆ ಇನ್ನಿಲ್ಲದಂತೆ ಪ್ರೋತ್ಸಾಹ ನೀಡಿ, ಹಿಂದೂಗಳನ್ನು ಕಡೆಗಣಿಸಿದ್ದರು. ಇದರ ಪರಿಣಾಮ ಹಿಂದೂ ಕಾರ್ಯಕರ್ತರ ಹತ್ಯೆ ನಿರಂತರವಾಗಿ ನಡೆದಿತ್ತು. ಅಲ್ಲದೇ, ಹಿಂದೂಗಳ ಅವಹೇಳನ ಮಾಡುತ್ತಾ ಬಂದಿದ್ದಾರೆ. ಇದರ ಪರಿಣಾಮ ಕಾಂಗ್ರೆಸ್ ಪಕ್ಷ ನೆಲಕಚ್ಚುವ ಸ್ಥಿತಿ ಬಂದಿದೆ ಎಂದರು.

ರಾಜ್ಯದಲ್ಲಿ ಯಡಿಯೂರಪ್ಪ ಮತ್ತು ಬೊಮ್ಮಾಯಿ ಸರ್ಕಾರವು ರೈತರು, ಮಹಿಳೆಯರು, ಜನಸಾಮಾನ್ಯರು ಸೇರಿ ಸರ್ವರ ಅಭ್ಯುದಯಕ್ಕಾಗಿ ಕೆಲಸ ಮಾಡಿದೆ. ಇದನ್ನು ಜನರಿಗೆ ತಲುಪಿಸಿದರೆ 150 ಸ್ಥಾನಗಳನ್ನು ಗೆಲ್ಲುವುದು ಖಚಿತ ಎಂದು ಅವರು ಹೇಳಿದರು.

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಕರ್ನಾಟಕದ ಸಹ ಉಸ್ತುವಾರಿ ಡಿ.ಕೆ. ಅರುಣಾ, ಶಾಸಕ ಜಗದೀಶ ಶೆಟ್ಟರ್, ಸಂಸದ ಡಿ.ವಿ.ಸದಾನಂದ ಗೌಡ, ರಾಜ್ಯ ಪದಾಧಿಕಾರಿಗಳು, ಎಲ್ಲ ಜಿಲ್ಲೆಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಭಾಗವಹಿಸಿದ್ದರು.

‘ಕಾಂಗ್ರೆಸ್ ಬೀದಿ ಕಾಳಗ ಆರಂಭ’

ಕಾಂಗ್ರೆಸ್ ಪಕ್ಷದ ಬಸ್ ಯಾತ್ರೆ ಜೊತೆಗೇ ಮುಖ್ಯಮಂತ್ರಿ ಸ್ಥಾನಕ್ಕಾಗಿ ಹೋರಾಟ ತಾರಕಕ್ಕೇರಿದೆ. ಜಿ.ಪರಮೇಶ್ವರ ಮತ್ತು ಮುನಿಯಪ್ಪ ಅವರ ಅಸಮಾಧಾನದಿಂದ ಕಾಂಗ್ರೆಸ್ ಬಸ್ ಪಂಕ್ಚರ್ ಆಗುತ್ತಿದೆ. ಕಾಂಗ್ರೆಸ್ ಕಾಳಗ ಬೀದಿ ಕಾಳಗವಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಕಾಂಗ್ರೆಸ್‌ನ ಮುಖ್ಯಮಂತ್ರಿ ಆಕಾಂಕ್ಷಿ ಅಭ್ಯರ್ಥಿಯೊಬ್ಬರಿಗೆ ಕ್ಷೇತ್ರದ ಹುಡುಕಾಟ ಇನ್ನೂ ಮುಗಿದಿಲ್ಲ. ಮತ್ತೊಂದೆಡೆ ಜೆಡಿಎಸ್‌ನ ಪಂಚರತ್ನ ಯಾತ್ರೆ ವಿಜಯಪುರ ತಲುಪುವಾಗ ಹಾಸನದಲ್ಲಿ ಮನೆಯೊಳಗೆ ಜಗಳ ಆರಂಭವಾಗಿದೆ. ಹೀಗಾಗಿ ಜನರಿಗೆ ಬಿಜೆಪಿಯ ಮೇಲೆ ವಿಶ್ವಾಸ ಹೆಚ್ಚಾಗಿದೆ ಎಂದು ಅವರು ಹೇಳಿದರು.

21.01 ಲಕ್ಷ ಮನೆಗಳ ಸಂಪರ್ಕ

ಬೂತ್ ಮಟ್ಟದ ವಿಜಯ ಸಂಕಲ್ಪ ಅಭಿಯಾನದಲ್ಲಿ 38,272 ಬೂತ್‌ಗಳ ವ್ಯಾಪ್ತಿಯಲ್ಲಿ 21.01 ಲಕ್ಷಗಳ ಮನೆಗಳನ್ನು ಸಂಪರ್ಕಿಸಲಾಗಿದೆ ಎಂದು ಅಭಿಯಾನದ ಸಂಚಾಲಕರೂ ಆಗಿದ್ದ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು. ವಿಜಯ ಸಂಕಲ್ಪ ಅಭಿಯಾನದ ಭಾಗವಾಗಿ 12.37 ಲಕ್ಷ ಮನೆಗಳ ಮೇಲೆ,4.55 ಲಕ್ಷ ವಾಹನಗಳ ಮೇಲೆ ಬಿಜೆಪಿ ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿದೆ. 1.88 ಲಕ್ಷಕ್ಕೂ ಹೆಚ್ಚು ಗೋಡೆ ಬರಹಗಳನ್ನು ಮತ್ತು 14,500 ಡಿಜಿಟಲ್ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ ಎಂದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗಣ್ಯರು ಡಮರುಗ ಬಾರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು

ಕಾನೂನು ತಜ್ಞರೊಂದಿಗೆ ಚರ್ಚಿಸಿ ಹಾಲುಮತ ಎಸ್ಟಿಗೆ ಸೇರಿಸಲು ಕ್ರಮ: ಸಿ.ಎಂ ಬೊಮ್ಮಾಯಿ

ಮೈಲಾರ (ವಿಜಯನಗರ): ಹಾಲುಮತ ಸಮಾಜದ ಕುಲಶಾಸ್ತ್ರೀಯ ಅಧ್ಯಯನ ವರದಿಯಲ್ಲಿ ಸಣ್ಣಪುಟ್ಟ ತಿದ್ದುಪಡಿ ಆದ ನಂತರ, ವರದಿ ನನ್ನ ಕೈಸೇರಿದ ನಂತರ ಕಾನೂನು ತಜ್ಞರೊಂದಿಗೆ ಚರ್ಚಿಸಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಹೂವಿನಹಡಗಲಿ ತಾಲ್ಲೂಕಿನ ಮೈಲಾರದಲ್ಲಿ ₹10 ಕೋಟಿಯಲ್ಲಿ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಿಂದ ನಿರ್ಮಿಸಿದ ಏಳುಕೋಟಿ ವಸತಿ ನಿಲಯ ಉದ್ಘಾಟಿಸಿದ ನಂತರ ಮಾತನಾಡಿ, ‘ಕುಲಶಾಸ್ತ್ರೀಯ ಅಧ್ಯಯನ ಅಂತಿಮ ಹಂತದಲ್ಲಿದೆ.ಈ ಹಿಂದೆ ಎರಡು ಸಲ ವರದಿ ಕಳಿಸಿದಾಗ ಕೇಂದ್ರದಿಂದ ವಾಪಸ್ ಬಂದಿತ್ತು. ಈ ಸಲ ಬಹಳ ಕಾಳಜಿ ವಹಿಸಿ ಸರ್ಕಾರ ಅದರ ಮೇಲೆ ಸೂಕ್ತ ಕ್ರಮ ಜರುಗಿಸಲಿದೆ’ ಎಂದು ಹೇಳಿದರು.

ಮೈಲಾರದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ₹5 ಕೋಟಿ ಅನುದಾನ ಕೊಡಲು ತೀರ್ಮಾನ ತೆಗೆದುಕೊಂಡಿರುವೆ. ನಮ್ಮ ಸರ್ಕಾರದ ಅವಧಿಯಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಾಕಷ್ಟು ಅನುದಾನ ಕೊಟ್ಟು ಕಾಗಿನೆಲೆ, ಬಾಡ ಕ್ಷೇತ್ರ ಗಳನ್ನು ಅಭಿವೃದ್ಧಿಪಡಿಸಿದ್ದಾರೆ ಎಂದರು.

ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಮಾತನಾಡಿ, ಹಾಲುಮತ ಸಮಾಜದ ಕುಲಶಾಸ್ತ್ರೀಯ ಅಧ್ಯಯನ ವರದಿ ಸಿ.ಎಂ. ಮುಂದಿದೆ. ಅವರು ಆದಷ್ಟು ಶೀಘ್ರ ಕೇಂದ್ರಕ್ಕೆ ವರದಿ ಕಳುಹಿಸಿ ಕುರುಬರನ್ನು ಎಸ್ಟಿ ಪಟ್ಟಿಗೆ ಸೇರಿಸಲು ಶಿಫಾರಸು ಮಾಡಬೇಕೆಂದು ಕೋರಿದರು.

ಅಖಂಡ ಕರ್ನಾಟಕದ ಕುರುಬರನ್ನು ಎಸ್ಟಿಗೆ ಸೇರಿಸಲು ಮುಂದಿನ ತಿಂಗಳೊಳಗೆ ಶಿಫಾರಸು ಮಾಡಬೇಕು. ನಾವು ಸರ್ಕಾರಕ್ಕೆ ಮುಜುಗರ ಉಂಟು ಮಾಡುವುದಿಲ್ಲ ಎಂದರು.

ಹೈದರಾಬಾದ್‌ನ ವ್ಯಾದಿ ನಿವಾರಣಾಶ್ರಮದ ಸಾಯಿಕುಮಾರ ಬಾಬಾ, ಸಚಿವರಾದ ಗೋವಿಂದ ಕಾರಜೋಳ, ಸಿ.ಸಿ. ಪಾಟೀಲ, ಎಂ.ಟಿ.ಬಿ.ನಾಗರಾಜ, ಬೈರತಿ ಬಸವರಾಜ, ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಕೆ.ಎಸ್. ಈಶ್ವರಪ್ಪ, ಆರ್. ಶಂಕರ್, ನೆಹರು ಓಲೇಕಾರ್, ಅರುಣಕುಮಾರ್ ಪೂಜಾರ, ಸಂಸದ ವೈ.ದೇವೇಂದ್ರಪ್ಪ, ಕೃಷಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ. ವಿರೂಪಾಕ್ಷಪ್ಪ, ಮೈಲಾರ ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗಪ್ಪ ದೇವರಗುಡ್ಡ ಇದ್ದರು.

ಗ್ರಾಮೀಣ ಪತ್ರಕರ್ತರಿಗೂ ಉಚಿತ ಬಸ್ ಪಾಸ್: ಮುಖ್ಯಮಂತ್ರಿ ಘೋಷಣೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ಸೌಲಭ್ಯ ನೀಡಲು ಬಜೆಟ್‌ನಲ್ಲಿ ಅಗತ್ಯ ಅನುದಾನ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ನಗರದ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಆಯೋಜಿರುವ ಪತ್ರಕರ್ತರ 37ನೇ ರಾಜ್ಯ ಸಮ್ಮೇಳನವನ್ನು ಶನಿವಾರ ಉದ್ಘಾಟಿಸಿ, ಪತ್ರಕರ್ತರ ಬೇಡಿಕೆಗಳ ಮನವಿ ಸ್ವೀಕರಿಸಿ ಅವರು ಮಾತನಾಡಿದರು.

ನಿವೃತ್ತ ಪತ್ರಕರ್ತರಿಗೆ ಮಾಸಾಶನ ಹೆಚ್ಚಳಕ್ಕೆ ಅನುದಾನ ಒದಗಿಸಲಾಗುವುದು ಹಾಗೂ ಪತ್ರಿಕೆಗಳಿಗೆ ನೀಡುವ ಸರ್ಕಾರಿ ಜಾಹೀರಾತುಗಳ ದರ ಪರಿಷ್ಕರಣೆ ಮಾಡಲಾಗುವುದು. ಪತ್ರಕರ್ತರನ್ನು ಯಶಸ್ವಿನಿ ಯೋಜನೆ ಸೇರ್ಪಡೆಗೂ ಕ್ರಮಕೈಗೊಳಲಾಗುವುದು, ನಗರ, ಪಟ್ಟಣಗಳ ವಸತಿ ಯೋಜನೆಯಲ್ಲಿ ಪತ್ರಕರ್ತರಿಗೆ ನಿವೇಶನ ಮೀಸಲಿಡಲು ಆದ್ಯತೆ ನೀಡಲಾಗುವುದು ಎಂದರು.

ವಿಧಾನ ಪರಿಷತ್‌ಗೆ ಹಿರಿಯ ಪತ್ರಕರ್ತರ ನೇಮಕ ಮಾಡಬೇಕು ಎಂಬ ಸಂಘದ ಬೇಡಿಕೆಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ವಿಧಾನ ಪರಿಷತ್‌ಗೆ ನೇಮಕವಾಗಲು ನಮ್ಮಲ್ಲೇ ಪೈಪೋಟಿ ಬಹಳ ಇದೆ. ಆದರೂ, ಅವಕಾಶ ನೀಡಲು ಯೋಚಿಸಲಾಗುವುದು’ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ‘ಪತ್ರಕರ್ತರು, ರಾಜಕಾರಣಿಗಳು ವಿಶ್ವಾಸ ಕಳೆದುಕೊಂಡಿದ್ದಾರೆ. ಓದುಗರು, ಕೇಳುಗರು, ನೋಡುಗರ ವಿಶ್ವಾಸ ಗಳಿಸುವತ್ತ ಪತ್ರಕರ್ತರು ಗಮನ ಹರಿಸಬೇಕಿದೆ’ ಎಂದು ಕಿವಿಮಾತು ಹೇಳಿದರು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ‘ಯೂಟ್ಯೂಬ್ ಚಾನಲ್‌ಗಳ ಹಾವಳಿಯಿಂದ ನೈಜ ಪತ್ರಕರ್ತರು ಕಳೆದುಹೋಗುವ ಸಂದರ್ಭ ಒದಗಿ ಬಂದಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

ಸಚಿವ ಗೋವಿಂದ ಕಾರಜೋಳ ಸಮ್ಮೇಳನದ ಸ್ಮರಣ ಸಂಚಿಕೆ ಬಿಡುಗಡೆ ಮಾತನಾಡಿದರು. ವಸ್ತು ಪ್ರದರ್ಶನವನ್ನು ಶಾಸಕ ಬಸನಗೌಡ ಪಾಟೀಲ ಯತ್ನಾಳ, ವ್ಯಂಗ್ಯಚಿತ್ರಗಳ ಪ್ರದರ್ಶನವನ್ನು ಸಚಿವ ಮುರುಗೇಶ ನಿರಾಣಿ, ಛಾಯಾಚಿತ್ರ ಪ್ರದರ್ಶನವನ್ನು ಸಚಿವ ಸಿ.ಸಿ.ಪಾಟೀಲ ಉದ್ಘಾಟಿಸಿದರು.

ವಿಜಯಪುರ ಜ್ಞಾನ ಯೋಗಾಶ್ರಮದ ಅಧ್ಯಕ್ಷ ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಸಂಸದ ರಮೇಶ ಜಿಗಜಿಣಗಿ, ಶಾಸಕರಾದ ಎ.ಎಸ್.ಪಾಟೀಲ ನಡಹಳ್ಳಿ, ರಮೇಶ ಭೂಸನೂರ, ಸೋಮನಗೌಡ ಪಾಟೀಲ ಸಾಸನೂರ, ವಿಜುಗೌಡ ಪಾಟೀಲ, ಅಪ್ಪು ಪಟ್ಟಣಶೆಟ್ಟಿ, ಎಸ್.ಕೆ.ಬೆಳ್ಳುಬ್ಬಿ, ಪತ್ರಕರ್ತರ ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೋಶ, ಜಿಲ್ಲಾ ಘಟಕದ ಅಧ್ಯಕ್ಷ ಸಂಗಮೇಶ ಚೂರಿ, ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಡಿ.ಆನಂದಕುಮಾರ್, ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ಶಿಂಧೆ ಇದ್ದರು.

ದಾವಣಗೆರೆಯಲ್ಲಿ ಮುಂದಿನ ಸಮ್ಮೇಳನ

ವಿಜಯಪುರ: ಮುಂದಿನ ವರ್ಷ ದಾವಣಗೆರೆಯಲ್ಲಿ ಪತ್ರಕರ್ತರ 38ನೇ ರಾಜ್ಯ ಸಮ್ಮೇಳನ ನಡೆಸಲು ಸಮಾವೇಶದಲ್ಲಿ ತೀರ್ಮಾನಿಸಲಾಯಿತು.

‘ಅಲ್ಪಸಂಖ್ಯಾತರ ಅಭಿವೃದ್ಧಿಗೆ ₹ 10 ಸಾವಿರ ಕೋಟಿ’

ಪ್ರಜಾವಾಣಿ ವಾರ್ತೆ

ಬೀದರ್: ‘ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅಲ್ಪಸಂಖ್ಯಾತರ ಅಭಿವೃದ್ಧಿಗೆ ₹ 10 ಸಾವಿರ ಕೋಟಿ ಹಾಗೂ ಕಲ್ಯಾಣ ಕರ್ನಾಟಕದ 41 ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ ₹ 5 ಸಾವಿರ ಕೋಟಿ ಕೊಡಲಾಗುವುದು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭರವಸೆ ನೀಡಿದರು.

ಕಾಂಗ್ರೆಸ್ ‘ಪ್ರಜಾಧ್ವನಿ ಯಾತ್ರೆ’ ಪ್ರಯುಕ್ತ ನಗರದಲ್ಲಿ ಶನಿವಾರ ಆಯೋಜಿಸಿದ್ದ ಬೀದರ್ ಹಾಗೂ ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಸಾರ್ವಜನಿಕ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ರಾಜ್ಯದಲ್ಲಿ ಶೇ 24.1ರಷ್ಟು ಎಸ್‌ಸಿ, ಎಸ್‌ಟಿ ಸಮುದಾಯದವರಿದ್ದಾರೆ. ಅವರ ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾನೂನು ಮಾಡಿ ಹಣ ಕಾಯ್ದಿರಿಸಲಾಯಿತು. ಕಾಂಗ್ರೆಸ್ ಕೊನೆಯ ಬಜೆಟ್ ಮಂಡಿಸಿದಾಗ ಪರಿಶಿಷ್ಟರ ಅನುದಾನ ₹ 30 ಸಾವಿರ ಕೋಟಿ ಇತ್ತು. ಬಿಜೆಪಿ ₹ 11 ಸಾವಿರ ಕೋಟಿ ಮಾತ್ರ ಖರ್ಚು ಮಾಡಿದೆ’ ಎಂದು ಹೇಳಿದರು.

‘ಬಿಜೆಪಿ ಸರ್ಕಾರ ಅಲ್ಪಸಂಖ್ಯಾತರನ್ನು ದ್ವೇಷಿಸಿಕೊಂಡೇ ರಾಜಕೀಯ ಮಾಡುತ್ತಿದೆ. ನೂರಾರು ವರ್ಷಗಳಿಂದ ನಡೆದು ಬಂದ ಆಜಾನ್‌ಗೆ ವಿರೋಧ ವ್ಯಕ್ತಪಡಿಸುತ್ತಿದೆ. ಸಂತೆ, ಜಾತ್ರೆಗಳಲ್ಲಿ ಅಲ್ಪಸಂಖ್ಯಾತರು ವ್ಯಾಪಾರ ಮಾಡದಂತೆ ತಡೆಯುತ್ತಿದೆ. ವ್ಯಾಪಾರ ವಹಿವಾಟು ನಡೆಸುವವರಿಗೆ ನಿರ್ಬಂಧ ವಿಧಿಸಿದರೆ ಅವರ ಹೊಟ್ಟೆ ಹೇಗೆ ತುಂಬಬೇಕು’ ಎಂದು ಪ್ರಶ್ನಿಸಿದರು.

ಬಿಜೆಪಿಯವರು ಮತಗಳನ್ನೇ ಕದಿಯುತ್ತಾರೆ: ಡಿಕೆಶಿ ವ್ಯಂಗ್ಯ

ಮಾಲೂರು (ಕೋಲಾರ): ‘ಚಿನ್ನ, ಚಪ್ಪಲಿ ಕದಿಯೋದನ್ನು ನಾವೆಲ್ಲಾ ನೋಡಿದ್ದೇವೆ. ಆದರೆ, ಬಿಜೆಪಿಯವರು ಮತಗಳನ್ನೇ ಕದಿಯುತ್ತಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವ್ಯಂಗ್ಯವಾಡಿದ್ದಾರೆ.

ಕಾಂಗ್ರೆಸ್ ಕಚೇರಿ ಆವರಣದಲ್ಲಿ ಶನಿವಾರ ಪ್ರಜಾಧ್ವನಿ ಯಾತ್ರೆ ಮತ್ತು ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಅಡುಗೆ ಅನಿಲದ ಬೆಲೆ ಹತ್ತು ಪೈಸೆ ಹೆಚ್ಚಾದಾಗ ಯಡಿಯೂರಪ್ಪ ಹಾಗೂ ಶೋಭಾ ಕರಂದ್ಲಾಜೆ ಅವರು ತಲೆ ಮೇಲೆ ಸಿಲಿಂಡರ್, ಸ್ಟೌ ಇಟ್ಟುಕೊಂಡು ಓಡಾಡಿದ್ರು. ಗುಜರಾತ್ ಮುಖ್ಯಮಂತ್ರಿಯಾಗಿದ್ದ ಮೋದಿ, ‘ಮತ ಹಾಕುವಾಗ ಗ್ಯಾಸ್ ಸಿಲಿಂಡರ್ ಬೆಲೆ ಜ್ಞಾಪಕ ಮಾಡಿಕೊಂಡು ಮತ ಹಾಕಿ’ ಎಂದು ಹೇಳಿದ್ದರು. ಈಗ ಗ್ಯಾಸ್ ಸಿಲಿಂಡರ್, ಹಾಲು, ಬೇಳೆ, ಎಣ್ಣೆ ಬೆಲೆ ಹೆಚ್ಚಾಗಿದೆ. ಅವರೆಲ್ಲ ಏಕೆ ಸುಮ್ಮನಿದ್ದಾರೆ’ ಎಂದು ಪ್ರಶ್ನಿಸಿದರು.



ಸಕಲೇಶಪುರ ತಾಲ್ಲೂಕಿನ ಉದೇವಾರ ಗ್ರಾಮದಲ್ಲಿ ಸೆರೆ ಹಿಡಿದ ಕಾಡಾನೆಯನ್ನು ಕ್ರೇನ್ ಸಹಾಯದಿಂದ ಲಾರಿಗೆ ಹತ್ತಿಸಲು ನಡೆಸಿದ ಕಾರ್ಯಾಚರಣೆಯ ನೋಟ



ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ವಲಯದ ಭೈರಾಪುರದಲ್ಲಿ ಕಾಡಾನೆಗಳಿಂದ ಹಾನಿಗೀಡಾಗಿರುವ ಬಾಳೆ ಹಾಗೂ ಅಡಿಕೆ ಗಿಡಗಳು

ಸಂಘರ್ಷ ಸಾಕು; ಸಂರಕ್ಷಣೆ ಬೇಕು

ಒಂದನೇ ಪುಟದಿಂದ..

ಈ ಪತ್ರಕ್ಕೆ ಉತ್ತರಿಸಿರುವ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಅರಣ್ಯ ಪಡೆ) ಅವರು, 'ಒತ್ತುವರಿ ಪ್ರಕರಣಗಳಿಗೆ ಸಂಬಂಧಿಸಿದಂತೆ 2017ರಲ್ಲಿಯೇ ಒಂದು ಬಾರಿ ಆರ್ಥಿಕ ಪುನರ್ವಸತಿ ಪ್ಯಾಕೇಜ್ ನೀಡಲಾಗಿದೆ.

ಮತ್ತೆ ವಿಶೇಷ ಭೂ ಪುನರ್ವಸತಿ ಪ್ಯಾಕೇಜ್ ಪರಿಗಣಿಸಿದರೆ ₹ 12,952.80 ಕೋಟಿ ಬೇಕಿದೆ. ಬದಲಿಗೆ ಪರ್ಯಾಯ ಜಮೀನು ಒದಗಿಸಬೇಕಾಗುತ್ತದೆ' ಎಂದು ತಿಳಿಸಿದ್ದಾರೆ.

'ಆದರೆ, ಇಲಾಖೆಯಲ್ಲಿ ಪರ್ಯಾಯ ಜಮೀನು ಮತ್ತು ಅನುದಾನವಿಲ್ಲ. ಪುನರ್ವಸತಿ ಮತ್ತು ಪುನರ್ ಪ್ಯಾಕೇಜ್ ಕಲ್ಪಿಸಲು ಸೂಕ್ತ ಪ್ರಾಧಿಕಾರ ರಚಿಸಬೇಕು. ಆಗಷ್ಟೇ ಅತಿಕ್ರಮಿಸಿರುವ ಅರಣ್ಯ ಭೂಮಿ ಮೇಲೆ ಕ್ರಮಕೈಗೊಳ್ಳಲು ಇಲಾಖೆಗೆ ಅನುಕೂಲವಾಗುತ್ತದೆ' ಎಂದು ಕೋರಿದ್ದು, ಒತ್ತುವರಿ ತೆರವು ಕಾರ್ಯ ನನೆಗುದಿಗೆ ಬಿದ್ದಿದೆ.

ವನ್ಯಜೀವಿ ಸಂರಕ್ಷಣಾ ನಿಯಮಗಳ ಪರಿಣಾಮಕಾರಿ ಜಾರಿಯಿಂದ ಕಾಡು ಪ್ರಾಣಿಗಳ ಸಂತತಿ ವೃದ್ಧಿಸಿದೆ. ಆದರೆ, ಇದಕ್ಕೆ ಪೂರಕವಾಗಿ ಕಾಡಂಚಿನ ಅನುಪಯುಕ್ತ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿ ಕಾಡು ವಿಸ್ತರಿಸಲು ಸರ್ಕಾರಕ್ಕೆ ಮನಸ್ಸಿಲ್ಲ. ವನ್ಯಜೀವಿಗಳಿಗೆ ಮೀಸಲಿಟ್ಟ ಕಾಡುಗಳೂ ಸುಸ್ಥಿತಿಯಲ್ಲಿಲ್ಲ. ಇದು ಸಂಘರ್ಷವನ್ನು ಉಲ್ಬಣಗೊಳಿಸಿದೆ.

ನಾಗರಹೊಳೆ, ಬಂಡೀಪುರದ ಸುತ್ತ ಮುತ್ತ ಹುಲಿ ಸಂಘರ್ಷ ಹೆಚ್ಚಿದೆ. ಇಲ್ಲಿ ಅವುಗಳ ಸಂಖ್ಯೆ ಆ ಪ್ರದೇಶಗಳ ಸಾಮರ್ಥ್ಯಕ್ಕಿಂತ ಹೆಚ್ಚಾಗಿದೆ. ಹಾಗಾಗಿ, ಹುಲಿಗಳು ನಾಗರಹೊಳೆಯ ಉತ್ತರಕ್ಕೆ ಮತ್ತು ಪಶ್ಚಿಮಕ್ಕಿರುವ ಕಾಫಿ ತೋಟಗಳಲ್ಲಿಯೂ ಜೀವಿಸಲು ಮತ್ತು ಬೇಟೆಯಾಡಲು ಪ್ರಾರಂಭಿಸಿವೆ. ಹಾಗಾಗಿಯೇ, ಕೊಡಗಿನಲ್ಲಿ ಜಾನುವಾರುಗಳ ಹತ್ಯೆ ನಿರಂತರವಾಗಿದೆ.

ಹಾಗೆಯೇ ನಾಗರಹೊಳೆಯ ಪೂರ್ವ ಮತ್ತು ಬಂಡೀಪುರದ ಉತ್ತರಕ್ಕಿರುವ ಒಣಭೂಮಿಗಳಲ್ಲೂ ಆಗಾಗ್ಗೆ ಕಾಣಿಸಿಕೊಳ್ಳುತ್ತಿವೆ. ಅಲ್ಲಿ ಸಾಮಾನ್ಯವಾಗಿ ವಯಸ್ಸಾಗಿರುವ, ಗಾಯಗೊಂಡಿರುವ ಅಥವಾ ತಮ್ಮ ವ್ಯಾಪ್ತಿಯನ್ನು ಇತರೆ ಪ್ರಾಯದ ಹುಲಿಗಳಿಗೆ ಕಳೆದುಕೊಂಡಿರುವ ವ್ಯಾಘ್ರಗಳು ಕಂಡುಬರುತ್ತವೆ. ಬಿಆರ್‌ಟಿ ವ್ಯಾಪ್ತಿಯ ಹುಲಿಗಳದ್ದೂ ಇದೇ ಸ್ಥಿತಿ. ಭದ್ರಾ ಹಾಗೂ ಕಾಳಿ ಹುಲಿ ರಕ್ಷಿತಾರಣ್ಯದಲ್ಲಿ ಬಲಿಪ್ರಾಣಿಗಳ ಸಾಂದ್ರತೆ ಕಡಿಮೆಯಿದೆ. ಆಹಾರ ಹುಡುಕಿಕೊಂಡು ಹೊರಬರುವ ಹುಲಿಗಳಿಗೆ ಜಾನುವಾರುಗಳು ಬಲಿಯಾಗುತ್ತಿವೆ. ಕಾಳಿ ಸಂರಕ್ಷಿತ ಪ್ರದೇಶದೊಳಗೆ ಜನವಸತಿ ಇದ್ದು, ಸಂಘರ್ಷಕ್ಕೆ ಎಡೆಮಾಡಿಕೊಟ್ಟಿದೆ.

ವಿದೇಶಿ ಕಳೆ ಸಸ್ಯಗಳ ಹಾವಳಿ: ಅರಣ್ಯದ ಗಿರಿಕಂದರ, ಇಳಿಜಾರು ಪ್ರದೇಶದಲ್ಲಿ ಬೆಳೆಯುವ ಹುಲ್ಲು ಬಹುತೇಕ ಪ್ರಾಣಿಗಳಿಗೆ ಆಹಾರದ ಮೂಲ.

ವರ್ಷ	ಬೆಳೆ ಹಾನಿ ಪ್ರಕರಣ	ಜಾನುವಾರು ಸಾವು	ಗಾಯಗೊಂಡವರು	ಜೀವ ಹಾನಿ
2015-16	21,150	1,731	164	47
2016-17	18,985	2,077	130	49
2017-18	27,525	2,862	204	35
2018-19	19,913	2,637	144	26
2019-20	20,951	2,149	122	50
2020-21	24,740	3,019	195	37
2021-22	6,010	1,280	56	27
2022ರ ಡಿಸೆಂಬರ್ ಅಂತ್ಯಕ್ಕೆ	12,634	1,887	83	12

ಕಾಡಾನೆಗಳಿಗೆ ಹುಲ್ಲು, ಬಿದಿರು ಮುಖ್ಯ ಆಹಾರ. ಆದರೆ ಹುಲಿ ರಕ್ಷಿತಾರಣ್ಯಗಳು, ವನ್ಯಜೀವಿಧಾಮಗಳಲ್ಲಿ ಪೊದೆ ಸಸ್ಯವಾದ ಲಂಟಾನಾ ಶೇ 50ರಷ್ಟು ಹಬ್ಬಿದೆ. ಇದರಿಂದ ಕಾಡಿನ ಸಸ್ಯ ಸಂಯೋಜನೆ ಪಲ್ಲಟಗೊಂಡಿದೆ.

ಲಂಟಾನಾದ ಸಸ್ಯಕ್ಷಾರ ಗುಣ ಹುಲ್ಲಿನ ಬೆಳವಣಿಗೆಗೆ ಮಾರಕ. ಇದು ತನ್ನ ಪ್ರಭುತ್ವ ವಿಸ್ತರಿಸಲು 'ಟಾನಿಸ್' ಹಾಗೂ 'ಫಿನಾಲಿಕ್' ಎಂಬ ರಾಸಾಯನಿಕವನ್ನೂ ಸ್ರವಿಸುತ್ತದೆ. ಈ ಪರದೇಶಿ ಕಳೆ ವಿರುದ್ಧ ಸ್ಥಳೀಯ ಸಸ್ಯಗಳಿಗೆ ಸ್ಪರ್ಧಿಸುವುದಿರಲಿ, ಕಾದಾಟ ನಡೆಸುವುದೂ ತಿಳಿದಿಲ್ಲ. ನಿತ್ರಾಣಗೊಂಡ ಅವು ತಮ್ಮ ಅಸ್ತಿತ್ವವನ್ನು ಬಿಟ್ಟುಕೊಡುತ್ತಿವೆ. ಇದು ಸಸ್ಯಗಳನ್ನು ಅವಲಂಬಿಸಿರುವ ಪ್ರಾಣಿಗಳ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿದೆ. ಆನೆಯಂತಹ ದೈತ್ಯಪ್ರಾಣಿಯ ಆಹಾರ ಕ್ರಮದಲ್ಲೂ ಏರುಪೇರಾಗಿದೆ. ಹಾಗಾಗಿಯೇ, ಅರಣ್ಯದಲ್ಲಿ ಮೇವಿನ ಕೊರತೆಯಿಂದ ಕಾಡಾನೆಗಳು ರೈತರ ಹೊಲಗಳತ್ತ ಲಗ್ಗೆ ಇಡುತ್ತಿವೆ.

ವಿವಿಧ ಬಳ್ಳಿಗಳು, ಗಿಡಮೂಲಿಕೆಗಳು, ಹುಲ್ಲು ಅವಲಂಬಿಸಿ ಜೀವಿಸುವ ಮೊಲ, ಜಿಂಕೆ, ಕಡವೆ, ಕರಡಿಗಳ ಆಹಾರದ ಮೂಲಕ್ಕೆ ಲಂಟಾನಾ, ಕರಿಕಡ್ಡಿ (ಯುಪಟೋರಿಯಾ), ಸೆನ್ನಾ ಸ್ಪೆಕ್ಟಾಬಿಲಿಸ್ ಕಳೆ ಸಸ್ಯಗಳು ಪೆಟ್ಟು ನೀಡಿವೆ. ಇದರಿಂದ ಅರಣ್ಯದಲ್ಲಿ ಬಲಿಪ್ರಾಣಿಗಳ ಸಾಂದ್ರತೆ ಕಡಿಮೆಯಾಗುತ್ತಿದೆ. ಇವುಗಳನ್ನು ತಿಂದು ಬದುಕುವ ಹುಲಿ, ಚಿರತೆಯಂತಹ ಮಾಂಸಾಹಾರಿ ಪ್ರಾಣಿಗಳ ಆಹಾರದ ಸರಪಳಿ ತುಂಡಾಗಿದೆ. ಮತ್ತೊಂಡೆದೆ ಕಾಡಂಚಿನ ಗ್ರಾಮಗಳಲ್ಲಿ ಕಳ್ಳಬೇಟೆಗೆ ಕಡಿವಾಣ ಬಿದ್ದಿಲ್ಲ.

'ಪ್ರಾಣಿಗಳಿಗೆ ಕಾಡಿನಲ್ಲಿಯೇ ಮೇವಿಗೆ ಕೊರತೆಯಾಗದಂತೆ ಸರ್ಕಾರ ವ್ಯವಸ್ಥೆ ರೂಪಿಸಬೇಕು' ಎಂದು ಒತ್ತಾಯಿಸುತ್ತಾರೆ ರಾಮನಗರದ ರೈತ ಸಿ. ಪುಟ್ಟಸ್ವಾಮಿ.

ಆನೆ ಕಾರಿಡಾರ್ ಅಸ್ತವ್ಯಸ್ತ: ಕಾಡುಪ್ರಾಣಿಗಳ ನಡುವಿನ ಸಂಘರ್ಷ ತಡೆಗಟ್ಟುವಲ್ಲಿ ಆನೆ ಮೊಗಸಾಲೆ(ಕಾರಿಡಾರ್)ಗಳದ್ದು ನಿರ್ಣಾಯಕ ಪಾತ್ರ. ವನ್ಯಜೀವಿಗಳ ಸಂತಾನಾಭಿವೃದ್ಧಿ, ಛಿದ್ರಗೊಂಡಿರುವ ಅವುಗಳ ನೆಲೆ ಒಗ್ಗೂಡಿಸಲು ಇವುಗಳ ಪಾತ್ರ ಹಿರಿದು. ಆದರೆ, ಬಹುತೇಕ ಕಾರಿಡಾರ್‌ಗಳು ಅಭಿವೃದ್ಧಿ ಹೆಸರಿನಲ್ಲಿ ಗುಣಮಟ್ಟ ಕಳೆದುಕೊಂಡಿವೆ.

ರಾಜ್ಯದಲ್ಲಿ ಕರಡಿಕಲ್‌–ಮಹದೇಶ್ವರ, ಥಳೀ (ತಮಿಳುನಾಡು–ಕರ್ನಾಟಕದ ನಡುವೆ ಸಂಪರ್ಕ), ಎಡೆಯರಹಳ್ಳಿ–ದೊಡ್ಡಸಂಪಿಗೆ, ಚಾಮರಾಜನಗರ–ತಲಮಲೈ (ಪರ್ಯಾಯ ಹೆಸರು: ಪುಣಜನೂರು–ಕೋಳಿಪಾಳ್ಯ), ಚಾಮರಾಜನಗರ–ತಲಮಲೈ–ಮೂಡಳ್ಳಿ (ಪರ್ಯಾಯ ಹೆಸರು: ತಲಮಲೈ–ಮೂಡಳ್ಳಿ) ಹಾಗೂ ಕಣಿಯನಪುರ ಪರಿಸರವನ್ನು ಆನೆ ಮೊಗಸಾಲೆ ಎಂದು ಗುರುತಿಸಲಾಗಿದೆ. ಕಾಡಾನೆಗಳಷ್ಟೇ ಈ ಪಥಗಳನ್ನು ಬಳಸುವುದಿಲ್ಲ. ಹುಲಿ, ಚಿರತೆ, ಕರಡಿ, ಜಿಂಕೆ, ಕಾಟಿ, ಸೀಳುನಾಯಿಗಳೂ ಬಳಸುತ್ತವೆ.

ಋತುಮಾನಕ್ಕೆ ಅನುಗುಣವಾಗಿ ಪ್ರಾಣಿಗಳು ನೀರು, ನೆರಳು, ಆಹಾರಕ್ಕಾಗಿ ಕಾಡಿನಿಂದ ಕಾಡಿಗೆ ಸಂಚರಿಸಲು ಇವು ಮಹತ್ವಪೂರ್ಣವಾಗಿವೆ. ಆದರೆ, ಬಹುತೇಕ ಕಡೆಯಲ್ಲಿ ಕಾರಿಡಾರ್‌ಗಳು ಕೃಷಿ ಭೂಮಿಯಾಗಿ ಪರಿವರ್ತನೆಗೊಂಡಿವೆ. ಕೆಲವೆಡೆ ಇವುಗಳ ಪಕ್ಕದಲ್ಲಿಯೇ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಚಾಮರಾಜನಗರ ಜಿಲ್ಲೆಯ ಪುಣಜನೂರು–ಕೋಳಿಪಾಳ್ಯ ಕಾರಿಡಾರ್ ಇದಕ್ಕೊಂದು ಉದಾಹರಣೆ.

ಅಕ್ಷಾಂಶ, ರೇಖಾಂಶಗಳನ್ನು ಬರೆದಂತೆ ಈ ಪಥಗಳಲ್ಲಿ ಹೆದ್ದಾರಿಗಳು ನಿರ್ಮಾಣವಾಗಿವೆ. ಅಕ್ರಮ ಕಲ್ಲುಕ್ವಾರಿ ಗಣಿಗಾರಿಕೆ ಎಲ್ಲೆ ಮೀರಿದೆ. ಕಾರಿಡಾರ್ ಬಳಿಯ ಹಳ್ಳಿಗಳಲ್ಲಿ ಜಾನುವಾರು ಸಾಕಾಣಿಕೆ, ಉರುವಲು, ಸೊಪ್ಪು ಸಂಗ್ರಹ ಮಿತಿಮೀರಿದೆ. ಮೊಗಸಾಲೆ ಬಳಿಗೆ ದನ–ಕರು, ಜನರು ತೆರಳಿದಾಗ ಪ್ರಾಣಿಗಳು ಮುಖಾಮುಖಿಯಾಗಿ ಸಂಘರ್ಷ ಏರ್ಪಡುವುದು ಸಹಜ. ಆದರೆ, ಹಿಂದಿನ ಸಾಲಿನ ರಾಜ್ಯ ಬಜೆಟ್‌ನಲ್ಲಿ ಕಾರಿಡಾರ್‌ಗಳನ್ನು ಬಲವರ್ಧನೆಗೊಳಿಸಲು ಘೋಷಿಸಿದ್ದ ಯೋಜನೆ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ.

ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಕೊಡಗಿನ ಕಾಫಿ ತೋಟಗಳಲ್ಲಿ ಕಾಡಾನೆಗಳ ಹಾವಳಿ ಉಲ್ಬಣಿಸಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ ಐದು ವರ್ಷದಲ್ಲಿ ಆನೆಗಳ ದಾಳಿಗೆ 11 ಮಂದಿ ಸಾವಿಗೀಡಾಗಿರುವುದೇ ಇದಕ್ಕೆ ಸಾಕ್ಷಿ.

'ಅರಣ್ಯದಂಚಿನ ಕೃಷಿ ಭೂಮಿಯಲ್ಲಿ ಆಗಿರುವ ಬೆಳೆ ಪರಿವರ್ತನೆಯೂ ಸಂಘರ್ಷಕ್ಕೆ ಕಾರಣವಾಗಿದೆ' ಎನ್ನುತ್ತಾರೆ ನಾಗರಹೊಳೆ ಹುಲಿ ಯೋಜನೆಯ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ.

ಪುನರ್ವಸತಿ ಕೇಂದ್ರ ಭರ್ತಿ: ಜನರ ಒತ್ತಾಯಕ್ಕೆ ಚಿರತೆಗಳನ್ನು ಹಿಡಿದು ಬೇರೆಡೆ ತೆಗೆದುಕೊಂಡು ಹೋಗಿ ಬಿಡಲಾಗುತ್ತಿದೆ. ಇದು ಹೆಚ್ಚು ಸಂಘರ್ಷಕ್ಕೆ ಅನುವು ಮಾಡಿಕೊಟ್ಟಿದೆ. ಎಲ್ಲಾ ಚಿರತೆಗಳನ್ನು ಹಿಡಿಯುವುದು ಅನವಶ್ಯಕ. ಜನರಲ್ಲಿ ಅರಿವು ಮೂಡಿಸುವುದು ಬಹುಮುಖ್ಯ. ಇದಕ್ಕೆ ಸಾರ್ವಜನಿಕರು ಕೂಡ ಸಹಕರಿಸಬೇಕಿದೆ. ಆದರೆ, ಮಾನವ ಹತ್ಯೆ ಅಥವಾ ಜನರನ್ನು ಗಾಯಗೊಳಿಸುವ ಚಿರತೆಗಳನ್ನು ಹಿಡಿದರೆ ಅವುಗಳನ್ನು ಹಿಂದಿರುಗಿ ಬಿಡಬಾರದು. ಪುನರ್ವಸತಿ ಕೇಂದ್ರಗಳಲ್ಲಿಯೇ ಇಡಬೇಕು.

ರಾಜ್ಯದಲ್ಲಿ ಪ್ರತಿವರ್ಷ 100ರಿಂದ 150 ಚಿರತೆಗಳನ್ನು ಸೆರೆ ಹಿಡಿಯಲಾಗುತ್ತಿದೆ. ಅವುಗಳಿಗೆ ಸೂಕ್ತ ನೆಲೆ ಕಲ್ಪಿಸುವುದು ಅರಣ್ಯ ಇಲಾಖೆಗೆ ಸವಾಲಾಗಿದೆ. ವಯಸ್ಸಾದ, ತೀವ್ರ ಗಾಯಗೊಂಡ ಚಿರತೆಗಳಷ್ಟೇ ಬನ್ನೇರುಘಟ್ಟ ಪುನರ್ವಸತಿ ಕೇಂದ್ರದಲ್ಲಿ ಬಿಡಲಾಗುತ್ತಿದೆ. ಉಳಿದವುಗಳನ್ನು ಬಂಡೀಪುರ, ಬಿಆರ್‌ಟಿ, ಮಲೆಮಹದೇಶ್ವರಬೆಟ್ಟ, ಕಾವೇರಿ ವನ್ಯಜೀವಿಧಾಮ, ನಾಗರಹೊಳೆ, ಕುದುರೆಮುಖ ಅರಣ್ಯಕ್ಕೆ ಬಿಡಲಾಗಿದೆ.

ಈಗಾಗಲೇ ಮೈಸೂರು, ಬನ್ನೇರುಘಟ್ಟದ ಪುನರ್ವಸತಿ ಕೇಂದ್ರಗಳು ಭರ್ತಿಯಾಗಿವೆ. ಹೊಸದಾಗಿ ಹಿಡಿಯುವ ಚಿರತೆಗಳಿಗೆ ನೆಲೆ ಇಲ್ಲದಾಗಿದೆ. ಹಾಗಾಗಿಯೇ, ಗುಜರಾತ್ ಮಾದರಿಯಲ್ಲಿ ಪುನರ್ವಸತಿ ಕೇಂದ್ರಗಳ ಸ್ಥಾಪನೆಗೆ ಅರಣ್ಯ ಇಲಾಖೆ ಮುಂದಾಗಿದೆ.

ಕರಡಿ ಹಾವಳಿ: ಹೊಸಪೇಟೆ(ವಿಜಯನಗರ) ಜಿಲ್ಲೆಯ ದರೋಜಿ ಮತ್ತು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ತಿಮ್ಲಾಪುರದಲ್ಲಿ ಕರಡಿಧಾಮಗಳಿವೆ. ಕಲ್ಲುಕ್ವಾರಿ ಗಣಿಗಾರಿಕೆ ಮೇಲೆ ನಿರ್ಬಂಧ ಹೇರಿ ವಾಸಕ್ಕೆ ಪೂರಕ ವಾತಾವರಣ ಸೃಷ್ಟಿಸಿರುವುದರಿಂದ ದರೋಜಿಯಲ್ಲಿ ಕರಡಿ ಸಂಘರ್ಷ ಕಡಿಮೆಯಾಗಿದೆ.

ಆದರೆ, ತುಮಕೂರು ಜಿಲ್ಲೆಯ ಮಧುಗಿರಿ, ಕೊರಟಗೆರೆ, ಪಾವಗಡ, ಶಿರಾ ತಾಲ್ಲೂಕಿನ ಸ್ಥಿತಿ ಇದಕ್ಕಿಂತ ಭಿನ್ನವಾಗಿದೆ. ತಿಮ್ಲಾಪುರ ಕರಡಿಧಾಮ ಘೋಷಣೆಯಾಗಿ ಹಲವು ವರ್ಷಗಳೇ ಕಳೆದಿದ್ದರೂ ಈವರೆಗೂ ಕರಡಿಗಳಿಗೆ ಪೂರಕವಾದ ವಾತಾವರಣ ಸೃಷ್ಟಿಸಿಲ್ಲ. ಈ ಭಾಗದಲ್ಲಿ 160ಕ್ಕೂ ಹೆಚ್ಚು ಕರಡಿಗಳಿವೆ ಎಂದು ಅಂದಾಜಿಸಲಾಗಿದೆ. ಗುಣಮಟ್ಟ ಕಳೆದುಕೊಂಡಿರುವ ಕುರುಚಲು ಕಾಡುಗಳಲ್ಲಿ ವರ್ಷಪೂರ್ತಿ ಆಹಾರ ಸಿಗುತ್ತಿಲ್ಲ. ಹಾಗಾಗಿ, ಅವು ಗ್ರಾಮಗಳತ್ತ ಸುಳಿಯುತ್ತಿವೆ.


ರಾಜ್ಯದಲ್ಲಿ ಕಾಡುಪ್ರಾಣಿಗಳ ಉಳಿವು ಅವುಗಳ ಸಂಘರ್ಷ ತಡೆಗಟ್ಟುವುದರ ಮೇಲೆ ನಿಂತಿದೆ. ಆದರೆ, ಸಂಘರ್ಷ ತಡೆಗಟ್ಟುವುದು ಸುಲಭದ ಮಾತಲ್ಲ. ಸಿಬ್ಬಂದಿ ಕೊರತೆ ನೀಗಿಸಿ ಅರಣ್ಯ ಇಲಾಖೆಯಲ್ಲಿ ಸಂಘರ್ಷ ತಡೆಗಾಗಿಯೇ ಪ್ರತ್ಯೇಕ ವಿಭಾಗ ರಚಿಸುವ ತುರ್ತಿದೆ.

ಪೂರಕ ಮಾಹಿತಿ: ಕೆ.ಜೆ. ಮರಿಯಪ್ಪ, ಆರ್. ಜಿತೇಂದ್ರ, ಶಶಿಕಾಂತ ಎಸ್. ಶೆಂಬೆಳ್ಳಿ, ಸೂರ್ಯನಾರಾಯಣ ವಿ., ಕೆ.ಎಸ್. ಗಿರೀಶ, ಚಿದಂಬರ ಪ್ರಸಾದ, ಸಚ್ಚಿತ್ ಹುಣಸೂರು, ಬಿ.ಜೆ. ಧನ್ಯಪ್ರಸಾದ್, ಚಂದ್ರಹಾಸ ಹಿರೇಮಳಲಿ

700ಕ್ಕೂ ಹೆಚ್ಚು ಗ್ರಾಮಗಳಲ್ಲಿ ಚಿರತೆ ಸಂಘರ್ಷ

ರಾಜ್ಯದಲ್ಲಿ ಸುಮಾರು 2,500 ಚಿರತೆಗಳಿದ್ದು, 700ಕ್ಕೂ ಹೆಚ್ಚು ಗ್ರಾಮಗಳಲ್ಲಿ ಸಂಘರ್ಷವಿದೆ. ರಾಮನಗರ, ತುಮಕೂರು, ಮಂಡ್ಯ, ಮೈಸೂರು, ಹಾಸನ ಜಿಲ್ಲೆಯಲ್ಲಿ ರಾಜ್ಯದ ಶೇ 50ಕ್ಕಿಂತ ಹೆಚ್ಚು ಸಂಘರ್ಷ ದಾಖಲಾಗುತ್ತಿದೆ.

ಚಿರತೆಯೊಂದಕ್ಕೆ ಪ್ರತಿದಿನ 4 ಕೆ.ಜಿಯಷ್ಟು ಮಾಂಸ ಬೇಕು. ಅವುಗಳ ನೈಸರ್ಗಿಕ ಆವಾಸ ಸ್ಥಾನಗಳು ಛಿದ್ರಗೊಂಡಿವೆ. ಇವುಗಳ ಉಳಿವಿಗೆ ಅವಶ್ಯವಾದ ಬಲಿಪ್ರಾಣಿಗಳ ಅತಿಯಾದ ಬೇಟೆಯೂ ಸಂಘರ್ಷ ಹೆಚ್ಚುತ್ತಿರುವುದಕ್ಕೆ ಬಹುಮುಖ್ಯ ಕಾರಣವಾಗಿದೆ.



ಬೋನಿಗೆ ಬಿದ್ದ ಚಿರತೆ

ಅವು ಸಣ್ಣಪುಟ್ಟ ಕಾಡುಗಳು, ಹಳ್ಳಿಗಳ ಸುತ್ತಮುತ್ತ ಮನುಷ್ಯನಿಗೆ ಸುಳಿವಿಲ್ಲದಂತೆ ಜೀವಿಸುತ್ತವೆ. 'ಕೆಲವು ಮಾಧ್ಯಮಗಳು ಚಿರತೆ ಕಂಡುಬಂದರೆ ಸಿನಿಮೀಯ ರೀತಿಯಲ್ಲಿ ಬಿಂಬಿಸಿ ಅವುಗಳನ್ನು ಖಳನಾಯಕರ ಹಾಗೆ ಮಾಡಿಬಿಟ್ಟಿವೆ. ಅವುಗಳ ಬಗ್ಗೆ ಸುದ್ದಿಗಳನ್ನು 'ಕ್ರೈಂ ಸ್ಟೋರಿ'ಯ ಹಾಗೆ ಬಿತ್ತರಿಸಲಾಗುತ್ತಿದೆ. ಇದು ಜನರನ್ನು ಹೆಚ್ಚು ಗಾಬರಿಗೊಳಿಸುತ್ತದೆ; ಸಂಘರ್ಷವಿಲ್ಲದಿದ್ದರೂ ಅಲ್ಲಿ ಸಂಘರ್ಷವನ್ನು ಹುಟ್ಟುಹಾಕುತ್ತದೆ' ಎನ್ನುತ್ತಾರೆ ವನ್ಯಜೀವಿ ವಿಜ್ಞಾನಿ ಸಂಜಯ್ ಗುಬ್ಬಿ.

ನಾಡದೇವಿ ಚಿತ್ರ ಅಧಿಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರ ಕಲಾವಿದ ಕೆ. ಸೋಮಶೇಖರ್ ಅವರು ಸಿದ್ಧಪಡಿಸಿರುವ 'ನಾಡದೇವಿ'ಯ ಚಿತ್ರವನ್ನು ಅಧಿಕೃತವೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿದೆ.

ನಾಡದೇವಿ ಚಿತ್ರವನ್ನು ಆಯ್ಕೆ ಮಾಡುವ ಸಂಬಂಧ ಈ ಹಿಂದೆ ಲಲಿತ ಕಲಾ ಅಕಾಡೆಮಿ ಅಧ್ಯಕ್ಷರಾಗಿದ್ದ ಡಿ. ಮಹೇಂದ್ರ ಅಧ್ಯಕ್ಷತೆಯಯಲ್ಲಿ ಸಮಿತಿ ರಚಿಸಲಾಗಿತ್ತು. ರಾಜ್ಯದ ಸಾಂಪ್ರದಾಯಿಕ ಕಲೆ ಹಾಗೂ ನಾಡಗೀತೆಯಲ್ಲಿರುವ ಕೆಲವು ಅಂಶಗಳನ್ನು ಸಾಂಕೇತಿಕವಾಗಿ ಬಿಂಬಿಸುವ, ಸೋಮಶೇಖರ್ ಅವರು ರಚಿಸಿದ 'ನಾಡದೇವಿ'ಯ ಚಿತ್ರವನ್ನು ಅಧಿಕೃತಗೊಳಿಸುವಂತೆ ಸಮಿತಿ ಶಿಫಾರಸು ಮಾಡಿತ್ತು. ಈ ಶಿಫಾರಸಿಗೆ ಸರ್ಕಾರ ಅಧಿಕೃತ ಅನುಮೋದನೆ ನೀಡಿದೆ.



ಅಧಿಕೃತಗೊಂಡಿರುವ ನಾಡದೇವಿ ಚಿತ್ರ

ಅಧಿಕೃತಗೊಳಿಸಿರುವ ನಾಡದೇವಿ ಚಿತ್ರದ ಹಿಂದೆ ಕರ್ನಾಟಕದ ನಕ್ಷೆ ಹಾಗೂ ಬಾವುಟ ಇದೆ. ಕಾಲಿಗೆ ಆಸರೆಯಾಗಿ ಕೆಳಗೆ ತಾವರೆ (ಕಮಲ) ಹೂವು ಇದೆ.

ಬಿಜೆಪಿ ಶಾಸಕ ಗೂಳಿಹಟ್ಟಿ ಆರೋಪ

'ನೀರಾವರಿ: ₹22,200 ಕೋಟಿ ಟೆಂಡರ್ ಅಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ನೀರಾವರಿ ನಿಗಮಗಳಲ್ಲಿ ₹22,200 ಕೋಟಿ ಮೊತ್ತದ ಟೆಂಡರ್ ಅಕ್ರಮ ನಡೆದಿದ್ದು, ಟೆಂಡರ್‌ಗಳನ್ನು ಕೂಡಲೇ ರದ್ದುಪಡಿಸಬೇಕು ಎಂದು ಹೊಸದುರ್ಗ ಕ್ಷೇತ್ರದ ಬಿಜೆಪಿ ಶಾಸಕ ಹಾಗೂ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಗೂಳಿಹಟ್ಟಿ ಶೇಖರ್ ಆಗ್ರಹಿಸಿದ್ದಾರೆ.

ಅಕ್ರಮದ ಕುರಿತು ಜಲಸಂಪನ್ಮೂಲ ಇಲಾಖೆ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿಗೆ ಫೆ.3ರಂದು ದೂರು ನೀಡಿರುವ ಅವರು, ಕಾಮಗಾರಿಗಳ ಕಾರ್ಯಾದೇಶ ರದ್ದುಪಡಿಸಿ ಮರು ಟೆಂಡರ್ ಕರೆಯಬೇಕು ಎಂದು ಒತ್ತಾಯಿಸಿದ್ದಾರೆ. ಗೂಳಿಹಟ್ಟಿ ಸಲ್ಲಿಸಿರುವ ಪತ್ರ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಕೃಷ್ಣಾಭಾಗ್ಯ ಜಲ ನಿಗಮ, ಕಾವೇರಿ ನೀರಾವರಿ ನಿಗಮ ಹಾಗೂ ವಿಶ್ವೇಶ್ವರಯ್ಯ ಜಲ ನಿಗಮಗಳಲ್ಲಿ ನಿಗದಿತ ಕಾಮಗಾರಿಗಳ ಟೆಂಡರ್ ನೀಡುವ ಮುನ್ನವೇ ಅಕ್ರಮ ಕೂಟ ಮಾಡಿಕೊಳ್ಳಲಾಗಿದೆ. ಎಲ್ಲ ನಿಗಮಗಳ ಆಡಳಿತ ಮಂಡಳಿಗಳ ಸಭೆಯನ್ನು ಒಂದೇ ನಡೆಸಿ ₹18 ಸಾವಿರ ಕೋಟಿ ಮೊತ್ತದ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ನಿಯಮ ಪಾಲಿಸದೇ ತರಾತುರಿಯಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಸಿ, ಕಾರ್ಯಾದೇಶ ನೀಡಲಾಗಿದೆ. ಅಕ್ರಮ ಕೂಡಾವಳಿಯೇ ತರಾತುರಿಗೆ ಕಾರಣಕ್ಕೆ ಎಂದು ದೂರಿದ್ದಾರೆ.

ವಿಶ್ವೇಶ್ವರಯ್ಯ ಜಲ ನಿಗಮದಡಿ ₹4,200 ಕೋಟಿ ಮೊತ್ತದ ಕಾಮಗಾರಿಗಳ ಟೆಂಡರ್ ಪೂರ್ಣಗೊಳಿಸಲಾಗಿದೆ. ಪಾರದರ್ಶಕತೆಯನ್ನು ಕಾಯ್ದುಕೊಳ್ಳದೇ, ಸಾವಿರಾರು ಕೋಟಿ ಮೊತ್ತದ ಟೆಂಡರ್ ಪ್ರಕ್ರಿಯೆಯನ್ನು ಕೇವಲ 7 ದಿನಗಳಲ್ಲಿ ಅಂತಿಮಗೊಳಿಸಲಾಗಿದೆ. ಅಕ್ರಮಕ್ಕೆ ದಾರಿ ಮಾಡಿಕೊಡುವ ಉದ್ದೇಶದಿಂದ ಈ ಆತುರ ತೋರಲಾಗಿದೆ ಎಂದರು.

ಭದ್ರಾ ಮೇಲ್ದಂಡೆ ಯೋಜನೆಯಡಿ ಹನಿ ನೀರಾವರಿ ಪದ್ಧತಿ ಅಳವಡಿಸುವ ಹಾಗೂ ಹೊಸದುರ್ಗ, ಕಡೂರು, ಜಗಳೂರು ಮತ್ತಿತರ ತಾಲ್ಲೂಕುಗಳಿಗೆ ಪೈಪ್‌ಗಳ ಮೂಲಕ ಕೆರೆಗಳನ್ನು ತುಂಬಿಸುವ ಕಾಮಗಾರಿ ನಡೆಯುತ್ತಿದೆ. ಕಳಪೆ ಪೈಪ್ ಪೂರೈಸಲಾಗಿದ್ದು, ಕಾಮಗಾರಿ ಕೂಡ ಕಳಪೆಯಿಂದ ಕೂಡಿದೆ ಎಂದು ದೂರಿದ್ದಾರೆ.

ಕನ್ನಡ ಸಂಸ್ಕೃತಿ ಇಲಾಖೆ ಅಧಿಕಾರಿ ಅಮಾನತು

ಬಳ್ಳಾರಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಾಯೋಜಕತ್ವದ ಕಾರ್ಯಕ್ರಮಗಳಿಗೆ ಲಂಚ ಕೊಡುವಂತೆ ಕೇಳಿದ ಆರೋಪದ ಮೇಲೆ ಇಲಾಖೆಯ ಬಳ್ಳಾರಿ ಜಿಲ್ಲೆಯ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣವರ ಅವರನ್ನು ಶುಕ್ರವಾರ ಅಮಾನತು ಮಾಡಲಾಗಿದೆ.



ಸಿದ್ದಲಿಂಗೇಶ್ ರಂಗಣ್ಣವರ

ಪ್ರಾಯೋಜಕತ್ವದ ಯೋಜನೆಯಡಿ ಎರಡೆರಡು ಕಾರ್ಯಕ್ರಮಗಳನ್ನು ಪಡೆದ ಕಲಾವಿದರಿಂದ ಸಿದ್ದಲಿಂಗೇಶ್ ರಂಗಣ್ಣವರ ₹ 10 ಸಾವಿರ ಲಂಚಕ್ಕೆ ಬೇಡಿಕೆ ಇಡುತ್ತಾರೆ. ಇಲಾಖೆಯ ಜಂಟಿ ನಿರ್ದೇಶಕರಿಗೆ ಹಣ ತಲುಪಿಸಬೇಕು. ಹೀಗಾಗಿ, ಎರಡೆರಡು ಕಾರ್ಯಕ್ರಮ ಪಡೆದವರಿಂದ ಹಣ ಕೊಡಿಸುವಂತೆ ಕಲಾವಿದರೊಬ್ಬರನ್ನು ಮೊಬೈಲ್‌ನಲ್ಲಿ ಕೇಳಿದ್ದಾರೆ ಎನ್ನಲಾದ ಸಂಭಾಷಣೆ ಶುಕ್ರವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಇಲಾಖೆಯ ಮಹಿಳಾ ಉದ್ಯೋಗಿಯೊಬ್ಬರು, ಕಡೇ ಪಕ್ಷ ₹ 8 ಸಾವಿರವನ್ನಾದರೂ ತಲುಪಿಸುವಂತೆ ಈ ಕಲಾವಿದನಿಗೆ ದುಂಬಾಲು ಬೀಳುತ್ತಾರೆ. ಅವರ ಸಂಭಾಷಣೆಯೂ ಇದೇ ಆಡಿಯೋದಲ್ಲಿದೆ ಎಂದು ಹೇಳಲಾಗಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಪ್ರಕಾಶ ಜಿ.ಟಿ. ನಿಟ್ಟಾಲಿ ಈ ಅಮಾನತು ಆದೇಶ ಹೊರಡಿಸಿದ್ದಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 5-2-1998

● ಜನತಾದಳ ತೊರೆದ ಶಾಣಪ್ಪ

ಬೆಂಗಳೂರು, ಫೆ. 4– ಜನತಾದಳದ ಸಂಸದೀಯ ಮಂಡಲಿಯ ಅಧ್ಯಕ್ಷ, ಮಾಜಿ ಸಚಿವ, ದಲಿತ ಮುಖಂಡ ಹಾಗೂ ವಿಧಾನಪರಿಷತ್ ಸದಸ್ಯ ಕೆ.ಬಿ. ಶಾಣಪ್ಪ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಇಂದು ರಾಷ್ಟ್ರೀಯ ನವನಿರ್ಮಾಣ ವೇದಿಕೆ ಸೇರಿದರು.

ಗವಿಗಂಗಾಧರೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ನಡೆದ ಲೋಕಶಕ್ತಿ ಪಕ್ಷದ ಚುನಾವಣಾ ಪ್ರಚಾರ ಉದ್ಘಾಟನಾ ಸಮಾರಂಭದಲ್ಲಿ ಅವರು ವೇದಿಕೆಯನ್ನು ಸೇರಿದರು.

50 ವರ್ಷಗಳ ಹಿಂದೆ

ಸೋಮವಾರ, 5-2-1973

● ಪೈಗೆ ಭಾರಿ ಎಂಜಿನಿಯರಿಂಗ್, ಮಿಶ್ರಾಗೆ ರೈಲ್ವೆ ಖಾತೆ

ನವದೆಹಲಿ, ಫೆ. 4– ಪ್ರಧಾನಮಂತ್ರಿ ಇಂದಿರಾಗಾಂಧಿ ಅವರು ಇಂದು ಕೇಂದ್ರ ಸಂಪುಟದಲ್ಲಿ ಬದಲಾವಣೆಗಳನ್ನು ಪ್ರಕಟಿಸಿದರು. ಕೆಲವರು ಹೊಸ ಸಚಿವರ ನೇಮಕದ ಜೊತೆಗೆ ಟಿ.ಎ. ಪೈ, ಉಮಾಶಂಕರ ದೀಕ್ಷಿತ್ ಮತ್ತು ಎಲ್. ಎನ್. ಮಿಶ್ರಾ ಅವರುಗಳ ಖಾತೆಗಳಲ್ಲಿ ಬದಲಾವಣೆ ಮಾಡಲಾಗಿದೆ.

ರೈಲ್ವೆ ಸಚಿವ ತೋನ್ಸೆ ಅನಂತ ಪೈ ಅವರಿಗೆ ಹೆವಿ ಎಂಜಿನಿಯರಿಂಗ್ ಖಾತೆಯನ್ನು ವಹಿಸಿಕೊಡಲಾಗಿದೆ. ಎಲ್.ಎನ್. ಮಿಶ್ರಾ ಅವರಿಗೆ ಕ್ಯಾಬಿನೆಟ್ ದರ್ಜೆಗೆ ಬಡ್ತಿ ನೀಡಿ ರೈಲ್ವೆ ಸಚಿವರನ್ನಾಗಿ ನೇಮಿಸಲಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಫೆಬ್ರುವರಿ 5, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ಪೂರ್ಣಿಮಾ ಗಂ. 23-59 ನಕ್ಷತ್ರ: ಪುಷ್ಯ ಗಂ. 12-13 ಯೋಗ: ಆಯುಷ್ಮಾನ್ ಗಂ. 14-41, ಕರಣ: ವಿಷ್ಟಿ ಗಂ. 10-45, ಮಕರ ಮಾಸದ 22 ನೇ ದಿನ. ರಾಹುಕಾಲ : ಸಾಯಂಕಾಲ 04-30 –06-00 ಸೂರ್ಯೋದಯ : 07-00 ಸೂರ್ಯಾಸ್ತ : 06-29 ಮುಸ್ಲಿಂ ದಿನಾಂಕ : 13 ರಜಬ್ ದಿನ ವಿಶೇಷ : ಗುರು ರವಿದಾಸರ ಜನ್ಮದಿನ, ಮಾಘಿ ಪೂರ್ಣಿಮಾ, ಫ್ಲೋಟಿಂಗ್ ಫೆಸ್ಟಿವಲ್/ ತೈಪೋಸಮ್, ಹಜರತ್ ಅಲಿಯವರ ಜನ್ಮದಿನ (ಮುಸ್ಲಿಂ), ಸೆಪ್ಟುಗೇಶಿಯಾ ಸಂಡೆ (ಕ್ರಿಶ್ಚಿಯನ್) ಅದೃಷ್ಟ ಸಂಖ್ಯೆ : 5, 10

ಮೇಷ: ದಿನಸಿ ವರ್ತಕರಿಗೆ ಉತ್ತಮ ಲಾಭ ಪ್ರಾಪ್ತಿಯಾಗುವುದರ ಜೊತೆಗೆ ಹೊಸ ವ್ಯಾಪಾರಿಗಳ ಬಳಕೆಯಾಗುವುದು. ಸಂಜೆಯ ಸಮಯದಲ್ಲಿ ಆಲಸ್ಯವಾಗಬಹುದು. ಆರೋಗ್ಯದಲ್ಲಿ ಸಣ್ಣ ಪುಟ್ಟ ವ್ಯತ್ಯಯಗಳು ಕಾಣಲಿದೆ.

ವೃಷಭ: ಕೌಟುಂಬಿಕವಾಗಿ ಕೆಟ್ಟುಹೋದಂತಹ ಸಂಬಂಧಗಳು ಮತ್ತೆ ಸರಿಯಾಗಬಹುದು. ಸಹೋದರರಿಗೋಸ್ಕರವಾಗಿ ತ್ಯಾಗ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಿ. ಹೈನು ಉತ್ಪನ್ನಗಳಿಂದ ಉತ್ತಮ ಆದಾಯ.

ಮಿಥುನ: ಈ ದಿನದ ಪರಿಸ್ಥಿತಿಗಳು ಕೊಂಚ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕವಾಗಿರುವುದು. ಯಾವ ನಿರ್ಧಾರದಲ್ಲಿಯೂ ಆತುರ ಬೇಡ. ಹಣಕಾಸಿನ ವ್ಯಾಮೋಹ ತೊಂದರೆಗಳಿಗೆ ಕಾರಣವಾಗದಂತೆ ನೋಡಿಕೊಳ್ಳಿ.

ಕರ್ಕಾಟಕ: ನಿಮ್ಮಲ್ಲಿನ ಬತ್ತದ ಉತ್ಸಾಹ, ಹುಮ್ಮಸ್ಸಿನಿಂದಾಗಿ ಹೊಸ ಅವಕಾಶಗಳನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಹಿರಿಯ ಸಹೋದ್ಯೋಗಿಗಳಿಂದ ಆರ್ಥಿಕ ಸಹಾಯ ಒದಗಲಿದೆ. ಔಷಧ ವ್ಯಾಪಾರಿಗಳಿಗೆ ಲಾಭದ ದಿನ.

ಸಿಂಹ: ಸಂದಿಗ್ಧ ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸುವ ತೀರ್ಮಾನವನ್ನು ತೆಗೆದುಕೊಳ್ಳಿ. ಅನಿರೀಕ್ಷಿತ ಕೆಲಸಗಳು ನಿಮ್ಮ ಕೈಸೇರಿ ಅವುಗಳನ್ನು ನಿಭಾಯಿಸಲೇಬೇಕಾದ ಅನಿವಾರ್ಯತೆ ಎದುರಾಗಬಹುದು. ಹಣದ ಚಿಂತೆ ಇರುವುದಿಲ್ಲ.

ಕನ್ಯಾ: ನಿಮ್ಮಿಂದ ಪ್ರಯೋಜನ ಪಡೆದ, ಜೀವನಾನುಭವ ಪಡೆದ ವ್ಯಕ್ತಿಗಳು ನಿಮ್ಮನ್ನು ದೂಷಿಸುವರು. ಈ ಘಟನೆಯನ್ನು ನಂಬುವುದು ಕಷ್ಟಕರವಾಗಲಿದೆ. ಮಾನಸಿಕ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಸಮಯ ಕಳೆಯಿರಿ.

ತುಲಾ: ವಿದ್ಯಾರ್ಥಿಗಳಿಗೆ ಮಿತ್ರವರ್ಗದವರ ಸಹವಾಸ ಅನುಕೂಲವಾಗಿ ಕಂಡುಬರುವುದು. ರಚನಾತ್ಮಕ ಕೆಲಸಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದರಿಂದ ಸಂತಸ ಪ್ರಾಪ್ತಿ. ವ್ಯಾಪಾರ ವ್ಯವಹಾರಗಳಲ್ಲಿ ತೃಪ್ತಿಕರ ಆದಾಯವಿದೆ.

ವೃಶ್ಚಿಕ: ಇಂದು ಹಣ ಅಥವಾ ಗೌರವ ಈ ಎರಡರಲ್ಲಿ ಒಂದನ್ನು ಸಂಪಾದಿಸಬಹುದು. ತೀರ್ಮಾನ ನಿಮ್ಮದ್ದಾಗಿರುತ್ತದೆ. ಮನೆಯಲ್ಲಿ ಸಣ್ಣ-ಪುಟ್ಟ ವಿಚಾರಕ್ಕೆ ಭಿನ್ನಾಭಿಪ್ರಾಯ ಮೂಡಿ ಅಶಾಂತಿಯ ವಾತಾವರಣ ಕಂಡುಬರಲಿದೆ.

ಧನು: ಹಿರಿಯರು ಹೇಳಿದಂತೆ ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದನ್ನು ಕಲಿತುಕೊಳ್ಳಿ. ಛಾಯಾಗ್ರಾಹಕರಿಗೆ ಹೆಚ್ಚಿನ ಅವಕಾಶಗಳು ಸಿಗಲಿವೆ. ಮನೆಯವರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅನಿವಾರ್ಯ.

ಮಕರ: ಕೌಟುಂಬಿಕ ಸಮಸ್ಯೆಗಳು ಹೊಸದೊಂದು ಆಯಾಮ ಪಡೆಯಲಿದೆ. ಎಷ್ಟೇ ಕಷ್ಟ ಬಂದರೂ ನೀವು ನಿಮ್ಮ ಗುರಿಯನ್ನು ಸಾಧಿಸಿಯೇ ತೀರುತ್ತೀರಿ. ಪರಿಣಾಮವಾಗಿ ನಿಮ್ಮ ಜೀವನದ ಮುಂದಿನ ಹಾದಿಯು ಸುಗಮವಾಗಲಿದೆ.

ಕುಂಭ: ಯೋಜನಾಬದ್ಧ ಕೆಲಸವನ್ನು ರೂಪಿಸದಿದ್ದರೆ ಈ ದಿನದ ನಿಮ್ಮ ಶ್ರಮವು ವ್ಯರ್ಥವಾಗಲಿದೆ. ಕಟ್ಟಡ ನಿರ್ಮಾಣದ ಕೆಲಸಗಾರರಿಗೆ ವೃತ್ತಿಯಲ್ಲಿ ಬೇಸರ ಹುಟ್ಟಬಹುದು. ಕುಲ ಕಸುಬುಗಳು ನಿಮ್ಮ ಅಭ್ಯುದಯಕ್ಕೆ ಕಾರಣವಾಗುತ್ತದೆ.

ಮೀನ: ಹೂವು-ಹಣ್ಣು, ತರಕಾರಿ ಮಾರಾಟಗಾರರಿಗೆ ತಾವು ನಿರೀಕ್ಷಿಸಿದಕ್ಕಿಂತ ಹೆಚ್ಚಿನ ಲಾಭವನ್ನು ಪಡೆದಕೊಳ್ಳುವುದರಿಂದ ಸಂತೋಷ ಇರುವುದು. ಹಲವು ದಿನಗಳಿಂದ ಇದ್ದ ಮಾನಸಿಕ ವ್ಯಥೆಗಳು ನಿವಾರಣೆಯಾಗುತ್ತದೆ.

ಪದಬಂಧ 5221


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ನಲ್ವತ್ತೆಂಟನೆಯ ಸಂವತ್ಸರ ಸಂತೋಷವನ್ನೂ ತಂದಿದೆ (3)
5. ಹಸನ್ಮುಖ ವದನವಿದು (4)
6. ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
8. ಜರಿಯದಿರಿ! ಇದು ಮುಸಲ್ಮಾನರ ಕಾಲಗಣನೆ! (3)
11.ಕುದುರೆಯನ್ನೇರುವ ಬಳೆ (3)
13.ಮಣಿ ಧರಿಸಿರುವ ಸೂರ್ಯ! (4)
17.ಈತ ದನಗಳನ್ನು ಕಾಯುವವನು (4)
18.ಅಲೆ ಇಲ್ಲಿ ಕಾಣುತ್ತಿದೆ (3)

ಮೇಲಿಂದ ಕೆಳಕ್ಕೆ

1.ದೇವ್ರೋಭವ ಎನಿಸಿಕೊಳ್ಳುವ ಗುರು (3)
2.ಈತ ದನಗಳನ್ನು ಕಾಯುವವನು (4)
3.ಗರ ಬಡಿದಿರುವ ಷಹರು (3)
4.ಕಾವ್ಯದ ನವರಸಗಳಲ್ಲಿ ಇದು ಜಿಗುಪ್ಸೆಯನ್ನುಂಟು ಮಾಡಿದೆ (3)
7.ವರ್ಣದಿಂದಲೇ ವಿಸ್ತಾರವಾದ ನಿರೂಪಣೆ (3)
9.ಪೇರಿ ಕಿತ್ತಾಗಲೇ ಮಾಡಿರುವ ದುರಸ್ತಿ (3)
10.ವಿಷಯದ ಕ್ರಮಬದ್ಧವಾದ ನಿರೂಪಣೆ (3)
12.ವೇದೋಕ್ತ ವಿಧಿಗಳನ್ನು ಮಾಡಿಸುವವನು (4)
14.ಹಿತವಾದ ಮಾತು (3)
15.ದಣಿವರಿಯದೆ ನೆರೆದ ಗುಂಪು ಉಲ್ಟಾ ಕಾಣುತ್ತಿದೆ (3)
16.ಹೂವಿನಲ್ಲಿರುವ ಹುಡಿ ಇಲ್ಲಿದೆ (3)



5220ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತೋರುಬೆರಳು 3.ಭವಿಷ್ಯ
5.ತಲೆಬರಹ 7.ಸುಪಥ
9.ಸಂವಾದ 11.ವಿವಾಹ
13.ವಿಮಾನಯಾನ 15.ಜವಳಿ
16.ವರದಿಗಾರ

ಮೇಲಿಂದ ಕೆಳಕ್ಕೆ:
1.ತೋರ್ಪಡಿಸು 2.ರಹಿತ
4.ವಿದ್ರೋಹ 6.ಬಲ್ಲಿದ
8.ಪಟ್ಟ 9.ಸಂಧಾನ
10.ಗ್ರೀವಾ 12.ಹಸ್ತಾಂತರ
13.ವಿಪ್ಲವ 14.ನಗರ

ಸುಡೊಕು 5607

		6			8	5		1
	5		2	1				
1		2			5			8
6		9				8		
			5		6		1	
3		5				2		7
		4				1		2
	2		1	5				9
9		1			2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5606 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದಾವಣಗೆರೆ: 'ಪ್ರಜಾವಾಣಿ' ಅಮೃತ ಮಹೋತ್ಸವದ ಅಂಗವಾಗಿ ಸಾವಿರಾರು ಜನರ ನಡಿಗೆ

ಕ್ಯಾನ್ಸರ್ ಜಾಗೃತಿ ಜಾಥಾಗೆ ಅಮೋಘ ಬೆಂಬಲ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಪ್ರಜಾವಾಣಿ' ಅಮೃತ ಮಹೋತ್ಸವ ಹಾಗೂ ವಿಶ್ವ ಕ್ಯಾನ್ಸರ್ ಜಾಗೃತಿ ದಿನಾಚರಣೆ ಅಂಗವಾಗಿ ಶನಿವಾರ ಬೆಳಿಗ್ಗೆ ನಗರದಲ್ಲಿ ನಡೆದ 'ಕ್ಯಾನ್ಸರ್ ಜಾಗೃತಿ ಜಾಥಾ'ಗೆ ಅಮೋಘ ಬೆಂಬಲ ದೊರೆಯಿತು.

ದಾವಣಗೆರೆ ಕ್ಯಾನ್ಸರ್ ಫೌಂಡೇಷನ್ ಹಾಗೂ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಹೈಸ್ಕೂಲ್ ಮೈದಾನದಿಂದ ಹಮ್ಮಿಕೊಂಡಿದ್ದ ಜಾಥಾದಲ್ಲಿ ಬಹುತೇಕ ಕಾಲೇಜು ಹಾಗೂ ದಾವಣಗೆರೆ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕಗಳ ವಿದ್ಯಾರ್ಥಿಗಳು, ಸಂಘ–ಸಂಸ್ಥೆಗಳ ಸದಸ್ಯರು, ಸಾರ್ವಜನಿಕರು ನಗರದ ಪ್ರಮುಖ ಬೀದಿಗಳಲ್ಲಿ ಸಾಗುವ ಮೂಲಕ ಕ್ಯಾನ್ಸರ್ ಕುರಿತು ಜನಜಾಗೃತಿ ಮೂಡಿಸಿದರು.

ಜಿಲ್ಲಾ ಅಂಗವಿಕಲರ ಸಂಘದ ಸದಸ್ಯರು, ಆಶಾ ಕಾರ್ಯಕರ್ತೆಯರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವ–ಸಹಾಯ ಸಂಘಗಳ ಸದಸ್ಯೆಯರು ಸೇರಿ ಎರಡು ಸಾವಿರಕ್ಕೂ ಹೆಚ್ಚು ಮಂದಿ ಜಾಥಾದಲ್ಲಿ ಹೆಜ್ಜೆ ಹಾಕಿದರು. 'ಕ್ಯಾನ್ಸರ್ ಓಡಿಸಿ– ಜೀವ ಉಳಿಸಿ', 'ಕ್ಯಾನ್ಸರ್‌ಗೆ ಭಯ ಬೇಡ', 'ದುಶ್ಚಟದಿಂದ ದೂರವಿರಿ–ಕ್ಯಾನ್ಸರ್ ಹತ್ತಿರ ಬಿಟ್ಟುಕೊಳ್ಳದಿರಿ' ಸೇರಿದಂತೆ ಅನೇಕ ಘೋಷಣೆಗಳನ್ನು ಕೂಗುತ್ತ, ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವ ಘೋಷಣೆಗಳಿರುವ ಫಲಕಗಳನ್ನು ಹಿಡಿದು ಗಮನ ಸೆಳೆದರು.

ದಾವಣಗೆರೆ ಮೂಲದ ನಟರಾದ 'ಪದವಿಪೂರ್ವ' ಚಿತ್ರದ ನಾಯಕ ಪೃಥ್ವಿ ಶಾಮನೂರು, 'ಡೈಮಂಡ್ ಕ್ರಾಸ್' ಚಿತ್ರದ ನಾಯಕ ರಜತ್ ಅಪ್ಪಣ್ಣ, 'ಹೊಂದಿಸಿ ಬರೆಯಿರಿ' ಮತ್ತು 'ದಿ' ಚಿತ್ರ ತಂಡದ ಸದಸ್ಯರೂ ಸ್ವಯಂ ಪ್ರೇರಣೆಯಿಂದಲೇ ಜಾಥಾದಲ್ಲಿ ಪಾಲ್ಗೊಂಡು ಕ್ಯಾನ್ಸರ್ ವಿರುದ್ಧದ ಹೋರಾಟಕ್ಕೆ ಸಾಥ್ ನೀಡಿದರು.

ಜಾಥಾ ಆರಂಭಕ್ಕೆ ಮುನ್ನ ನಗರದ ರಿದಂ ಫಿಟ್‌ನೆಸ್ ಸಂಸ್ಥೆಯ ನುರಿತ ತರಬೇತುದಾರ ಅನಿಲ್ ಹಾಗೂ ಫಿಟ್‌ನೆಸ್ ಟ್ರೈನರ್ ಫೇರಿ ಅವರು ಜುಂಬಾ ನೃತ್ಯದ ಮೂಲಕ ಜಾಥಾಕ್ಕೆ ಹುರುಪು ತುಂಬಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್ ಜಾಥಾಗೆ ಹಸಿರು ನಿಶಾನೆ ತೋರಿಸಿದರು. 75 ವರ್ಷಗಳನ್ನು ಪೂರೈಸಿರುವ 'ಪ್ರಜಾವಾಣಿ' ಅಮೃತ ಮಹೋತ್ಸವದ ಅಂಗವಾಗಿ ಜಾಗೃತಿ ಜಾಥಾ ಆಯೋಜಿಸಿರುವುದು ಅಭಿನಂದನೀಯ ಎಂದರು.

ಜಿಲ್ಲಾ ಪಂಚಾಯಿತಿ ಸಿಇಒ ಎ. ಚನ್ನಪ್ಪ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ನಾಗರಾಜ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ. ರಾಘವನ್, ಕ್ಯಾನ್ಸರ್ ತಜ್ಞರು, ಸ್ವಯಂ ಸೇವಾ ಸಂಘಟನೆಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.



ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ 'ಪ್ರಜಾವಾಣಿ' ಅಮೃತ ಮಹೋತ್ಸವ ಅಂಗವಾಗಿ ಆಯೋಜಿಸಿದ್ದ ಕ್ಯಾನ್ಸರ್ ನಡೆ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ವಿವಿಧ ಶಾಲಾ– ಕಾಲೇಜುಗಳ ಮತ್ತು ಸಂಘ– ಸಂಸ್ಥೆಗಳ ಸದಸ್ಯರು ಭಾಗವಹಿಸಿ ಮೆರವಣಿಗೆಯಲ್ಲಿ ಸಾಗಿದರು –ಪ್ರಜಾವಾಣಿ ಚಿತ್ರ



ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ತಿಂಥಣಿ ಮೌನೇಶ್ವರ ಜಾತ್ರೆಯ ಅಂಗವಾಗಿ ಅದ್ದೂರಿ ರಥೋತ್ಸವ ಶನಿವಾರ ನಡೆಯಿತು. ಪ್ರಜಾವಾಣಿ ಚಿತ್ರ: ರಾಜಕುಮಾರ ನಳ್ಳಿಕರ

ಜಿಮ್ಸ್ ಫಾರ್ಮಸಿ ಅಧಿಕಾರಿ ಲೋಕಾಯುಕ್ತ ಬಲೆಗೆ

ಕಲಬುರಗಿ: ಔಷಧ ವಿತರಕರೊಬ್ಬರಿಗೆ ಬಿಲ್ ಪಾವತಿಸಲು ಲಂಚಕ್ಕೆ ಬೇಡಿಕೆ ಇಟ್ಟು, ₹ 5 ಸಾವಿರ ಹಣ ಪಡೆಯುತ್ತಿದ್ದ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಜಿಮ್ಸ್)ಯ ಫಾರ್ಮಸಿ ವಿಭಾಗದ ಸಹಾಯಕ ನಿರ್ದೇಶಕ ವರಶಂಕರ ಅಮರಶೆಟ್ಟಿ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಗ್ರೀನ್ ಫಾರ್ಮಾ ಔಷಧಿ ಕಂಪನಿಯ ಮ್ಯಾನೇಜರ್ ಅಫಜಲ ಪುರ ತಾಲ್ಲೂಕಿನ ಕರಜಗಿ ಗ್ರಾಮದ ತಿರುಪತಿ ವೆಂಕಣ್ಣ ಬೊಜ್ಜ ಎಂಬುವವರು ನಾಯಿ ಕಡಿತಕ್ಕೆ ಔಷಧಿ ಪೂರೈಸಿದ್ದರು. ₹ 1.60 ಲಕ್ಷ ಮೌಲ್ಯದ ಬಿಲ್ ಮಂಜೂರು ಮಾಡಲು ವರಶಂಕರ ₹ 5 ಸಾವಿರ ನೀಡುವಂತೆ ಬೇಡಿಕೆ ಇಟ್ಟಿದ್ದರು.

ಇದರಿಂದ ಬೇಸತ್ತ ತಿರುಪತಿ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.



'ಪ್ರಜಾವಾಣಿ' ಅಮೃತ ಮಹೋತ್ಸವ ಮತ್ತು ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಮೈಸೂರಿನ ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯ ದೇವಸ್ಥಾನದ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ರಸ್ತೆ ಓಟದ ಸ್ಪರ್ಧೆಯಲ್ಲಿ ಪ್ರೌಢಶಾಲಾ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಕ್ಯಾನ್ಸರ್ ಜಾಗೃತಿಗೆ ಓಟದ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಪ್ರಜಾವಾಣಿ' ಅಮೃತ ಮಹೋತ್ಸವ ಅಂಗವಾಗಿ ನಗರದ ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ರಸ್ತೆ ಓಟದ ಸ್ಪರ್ಧೆಯಲ್ಲಿ ಕ್ರೀಡಾಪಟುಗಳೂ ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದ್ದರು.

ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಜಾಗೃತಿ ಮೂಡಿಸುವ ಉದ್ದೇಶದಿಂದ ಕ್ಲಿಯರ್‌ಮೆಡಿ ರೇಡಿಯಂಟ್ ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದಲ್ಲಿ ನಡೆದ ಸ್ಪರ್ಧೆಯಲ್ಲಿ, ಚುಮುಚುಮು ಚಳಿಯನ್ನೂ ಲೆಕ್ಕಿಸದೇ ಮಕ್ಕಳು, ಯುವಕರು, ಯುವತಿಯರು, ಮಹಿಳೆಯರು ಹಾಗೂ ವೃದ್ಧರು ಉತ್ಸಾಹದಿಂದ ಓಡಿದರು.

4 ವಿಭಾಗಗಳಲ್ಲಿ ನಡೆದ ಸ್ಪರ್ಧೆಗೆ 400ಕ್ಕೂ ಹೆಚ್ಚು ಮಂದಿ ನೋಂದಾಯಿಸಿದ್ದರು. 1ರಿಂದ 5ನೇ ತರಗತಿ ಬಾಲಕರು ಹಾಗೂ ಬಾಲಕಿಯರಿಗೆ 1 ಕಿ.ಮೀ., 6ರಿಂದ 10ನೇ ತರಗತಿಯ ಬಾಲಕರು ಮತ್ತು ಬಾಲಕಿಯರಿಗೆ 3 ಕಿ.ಮೀ., ಪಿಯುಸಿ ಮತ್ತು ಪದವಿ ಕಾಲೇಜುಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ 5 ಕಿ.ಮೀ. ಓಟದ ಸ್ಪರ್ಧೆ ನಡೆಯಿತು. ಮುಕ್ತ ವಿಭಾಗದಲ್ಲಿ (5.ಕಿ.ಮೀ.) ಸಾರ್ವಜನಿಕರು ಭಾಗವಹಿಸಿದ್ದರು. ಪ್ರತಿ ವಿಭಾಗದಲ್ಲೂ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ವಿಜೇತರಿಗೆ ಕ್ರಮವಾಗಿ ₹1ಸಾವಿರ, ₹ 750 ಹಾಗೂ ₹500 ಬಹುಮಾನ ನೀಡಲಾಯಿತು. ಪಾಲ್ಗೊಂಡು ಗುರಿ ಮುಟ್ಟಿದ ಎಲ್ಲರಿಗೂ ಪ್ರಮಾಣಪತ್ರ ವಿತರಿಸಲಾಯಿತು.

ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಚಿತ್ರನಟ ನಾಗಭೂಷಣ ಎನ್.ಎಸ್. ಸ್ಪರ್ಧೆಗೆ ಚಾಲನೆ ನೀಡಿದರು. ನಗರ ಪಾಲಿಕೆ ಆರೋಗ್ಯಾಧಿಕಾರಿ ಡಾ.ಡಿ. ಜಿ.ನಾಗರಾಜ್ ಪ್ರಮಾಣಪತ್ರಗಳನ್ನು ವಿತರಿಸಿದರು.

ಕ್ಯಾನ್ಸರ್ ಬಾರದಂತೆ ಎಚ್ಚರ ವಹಿಸುವುದು ಹೇಗೆ? ಎಂಬ ಕುರಿತು ಸೀನಿಯರ್ ಕನ್ಸಲ್ಟಂಟ್ ಮೆಡಿಕಲ್ ಆಂಕಾಲಜಿಸ್ಟ್ ಡಾ.ಅವಿನಾಶ್ ಸಿ.ಬಿ. ಮಾತನಾಡಿದರು.

ಕ್ಷೇತ್ರದ ಜನರನ್ನು ಕಾಶಿ ಯಾತ್ರೆಗೆ ಕಳುಹಿಸಿದ ಶಾಸಕ!

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್ ಡಿಬಿ) ಅಧ್ಯಕ್ಷರೂ ಆದ ಬಿಜೆಪಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಕ್ಷೇತ್ರದ ಜನರನ್ನು ಕಾಶಿ ಯಾತ್ರೆಗೆ ಕಳುಹಿಸಿ ಕೊಟ್ಟಿದ್ದಾರೆ.

ಇದಕ್ಕಾಗಿ ತಮ್ಮ ತಂದೆ ಹೆಸರಿನಲ್ಲಿರುವ ದಿ. ಚಂದ್ರಶೇಖರ ಪಾಟೀಲ ರೇವೂರ ಫೌಂಡೇಷನ್ ಮೂಲಕ ವಿಶೇಷ ರೈಲಿನ ವ್ಯವಸ್ಥೆ ಮಾಡಿದ್ದು, ಶನಿವಾರ ವಿವಿಧ ಮಠಾಧೀಶರ ನೇತೃತ್ವದಲ್ಲಿ ರೈಲಿಗೆ ಹಸಿರು ನಿಶಾನೆ ತೋರಿಸಿದರು. ಯಾತ್ರಿಕರೊಂದಿಗೆ ದತ್ತಾತ್ರೇಯ ಅವರ ತಾಯಿ, ಮಾಜಿ ಶಾಸಕಿ ಅರುಣಾದೇವಿ ಪಾಟೀಲ, ಪತ್ನಿ ಲಕ್ಷ್ಮಿ ಪಾಟೀಲ, ಸಹೋದರ ಡಾ. ಅಲೋಕ್ ಪಾಟೀಲ ಸೇರಿದಂತೆ ಅವರ ಕುಟುಂಬ ಸದಸ್ಯರು ತೆರಳಿದ್ದಾರೆ.

'ಸುಮಾರು 2 ಸಾವಿರ ಜನರನ್ನು ಕರೆದೊಯ್ಯಲು ತೀರ್ಮಾನಿಸಲಾಗಿತ್ತು. ಆದರೆ, ಕೊನೆಕ್ಷಣದಲ್ಲಿ 3,600ಕ್ಕೂ ಅಧಿಕ ಜನರು ರೈಲು ನಿಲ್ದಾಣಕ್ಕೆ ದೌಡಾಯಿಸಿದರು. ದತ್ತಾತ್ರೇಯ ಪಾಟೀಲ ಪ್ರತಿನಿಧಿಸುವ ಕ್ಷೇತ್ರದವರಲ್ಲದವರೂ ಕಾಶಿಯಾತ್ರೆಗೆ ಬಂದಿದ್ದಾರೆ. ಹೀಗಾಗಿ, ಯಾರನ್ನೂ ವಾಪಸ್ ಕಳಿಸಿಲ್ಲ' ಎಂದು ಯಾತ್ರಿಕರೊಂದಿಗೆ ತೆರಳಿರುವ ಬಿಜೆಪಿ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಭಾವದ ಹೂವು ಅರಳಿಸಿದ ವಾಣಿ ಜಯರಾಂ

ನುಡಿ ನಮನ

• ವಿಶಾಖ ಎನ್.

‘ತೆರೆದಿದೆ ಮನೆ ಓ ಬಾ ಅತಿಥಿ’ ಹಾಡಿನಲ್ಲಿ ಇರುವುದು ಜುಗಲ್‌ಬಂದಿಯಂಥ ಅನುಭವ. ಎಸ್. ಜಾನಕಿ ಅವರೊಟ್ಟಿಗೆ ವಾಣಿ ಜಯರಾಂ ಶಾರೀರ ಕೊಟ್ಟ ಮಜಾ. ಆ ಹಾಡು ಬರೆದವರು ಕುವೆಂಪು. ಅದು ಜನಪ್ರಿಯವಾದದ್ದು ‘ಹೊಸಬೆಳಕು’ ಸಿನಿಮಾದಲ್ಲಿ ಬಳಕೆಯಾದ ಮೇಲೆ. ಸ್ವರ ಸಂಯೋಜನೆ ಮಾಡಿದ್ದವರು ಎಂ. ರಂಗರಾವ್.

ಶಾಸ್ತ್ರೀಯ ಸಂಗೀತದ ಸಂಸ್ಕಾರದ ವಾತಾವರಣದಲ್ಲೇ ಹುಟ್ಟಿ ಬೆಳೆದ ವಾಣಿ ಜಯರಾಂ ಅವರೀಗ ನೆನಪು.

ವಾಣಿ ಅವರ ಗಾಯನದಲ್ಲಿ ಅನುರಣಿಸುವುದು ಕರ್ನಾಟಕ, ಹಿಂದೂಸ್ತಾನಿ, ಪಾಶ್ಚಾತ್ಯ ಮೂರೂ ಶಾಸ್ತ್ರೀಯ ಪ್ರಕಾರಗಳ ಸಿದ್ಧಿ. ‘ಬಿಳಿ ಹೆಂಡ್ತಿ’ ಸಿನಿಮಾದಲ್ಲಿ ಅವರು ಹಾಡಿರುವ ಶೀರ್ಷಿಕೆ ಗೀತೆಯಲ್ಲಿನ ಇಂಗ್ಲಿಷ್ ಸಾಲುಗಳ ಅಭಿವ್ಯಕ್ತಿ ಗಮನಿಸಿದರೆ ಇದು ಸುಸ್ಪಷ್ಟ. ‘ಭಾವವೆಂಬ ಹೂವು ಅರಳಿ’ ಎನ್ನುವ, ‘ಉಪಾಸನೆ’ ಸಿನಿಮಾದ ಹಾಡನ್ನು ಕೇಳಿದವರ ಹೃದಯ ಅರಳದಿದ್ದರೆ ಹೇಳಿ.

ವಾಣಿ ಅವರ ಮೂಲ ಹೆಸರು ಕಲೈವಾಣಿ. ತಮಿಳುನಾಡಿನ ವೆಲ್ಲೋರ್ ತವರು. ಆರು ಹೆಣ್ಣುಮಕ್ಕಳಲ್ಲಿ ಅವರು ಐದನೆಯವರು. ಮೂವರು ಗಂಡುಮಕ್ಕಳೂ ಇದ್ದ ತುಂಬು ಕುಟುಂಬದ ಕುಡಿ. ತಂದೆ ದುರೈಸ್ವಾಮಿ ಅಯ್ಯಂಗಾರ್ ಹಾಗೂ ತಾಯಿ ಪದ್ಮಾವತಿ ಇಬ್ಬರೂ ಶಾಸ್ತ್ರೀಯ ಸಂಗೀತ ಕಲಿತಿದ್ದವರೇ. ರಂಗರಾಮಾನುಜ ಅಯ್ಯಂಗಾರ್ ಅವರಲ್ಲಿ ಕಲಿಯಲು ಮಗಳನ್ನು ಹಚ್ಚಿದರು. ಮುತ್ತುಸ್ವಾಮಿ ದೀಕ್ಷಿತರ ಕೃತಿಗಳ ಪರಿಚಯ ಆದದ್ದು ಅಲ್ಲಿ. ಕಡಲೂರು ಶ್ರೀನಿವಾಸ ಅಯ್ಯಂಗಾರ್, ಟಿ.ಆರ್. ಬಾಲಸುಬ್ರಮಣಿಯನ್ ತರಹದ ಗುರುಗಳಿಂದಾಗಿ ಕಲಿಕೆಯನ್ನು ವಿಸ್ತರಿಸಿಕೊಳ್ಳುವ ಅವಕಾಶ ಸಿಕ್ಕಿತು.

ಬಾಲ್ಯದಲ್ಲಿಯೇ ರೇಡಿಯೊ ಸಿಲೋನ್‌ಗೆ ವಾಣಿ ಕಿವಿ ಅಂಟಿಸಿಕೊಂಡು ಕೂರುತ್ತಿದ್ದರು. ಸಿನಿಮಾ ಹಾಡುಗಳ ಮೋಹ ಹುಟ್ಟಿದ್ದು ಹಾಗೆ. ಇಪ್ಪತ್ತೆರಡನೇ ವಯಸ್ಸಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕೆಲಸ ಸಿಕ್ಕಿತು. ಎರಡು ವರ್ಷ ಕಳೆಯುವಷ್ಟರಲ್ಲೆ ಜಯರಾಂ ಎಂಬುವವರನ್ನು ಮದುವೆಯಾಗಿ, ಮುಂಬೈನಲ್ಲಿ ಸಂಸಾರ ಹೂಡಿದರು. ಜಯರಾಂ ಕೂಡ ಸಂಗೀತ ಪ್ರೇಮಿ. ಉಸ್ತಾದ್ ಅಬ್ದುಲ್ ರೆಹಮಾನ್ ಖಾನ್ ಅವರಲ್ಲಿ ಹಿಂದೂಸ್ತಾನಿ ಸಂಗೀತ ಕಲಿಯಲು ಹೆಂಡತಿಯನ್ನು ಪ್ರೇರೇಪಿಸಿದ್ದೆ ಅವರು. ಠುಮ್ರಿ, ಗಜಲ್, ಭಜನೆ ಇವೆಲ್ಲದರ ಸೂಕ್ಷ್ಮಗಳನ್ನು ವಾಣಿ ಕಲಿಯಲು ಇದು ಕಾರಣವಾಯಿತು.

ಕಛೇರಿಯೊಂದನ್ನು ನೀಡುವ ಸಂದರ್ಭದಲ್ಲೇ ಸಂಗೀತ ನಿರ್ದೇಶಕ ವಸಂತ ದೇಸಾಯಿ ಅವರ ಪರಿಚಯವಾಯಿತು. ಕುಮಾರ ಗಂಧರ್ವ ಅವರ ಕಂಠದಲ್ಲಿ ಮರಾಠಿ ಆಲ್ಬಂ ಅನ್ನು ಅವರು ಆಗ ಸಿದ್ಧಪಡಿಸುತ್ತಿದ್ದರು. ವಾಣಿ ಅವರ ಕಂಠಮಾಧುರ್ಯ ಅವರನ್ನೂ ಕರಗಿಸಿದ್ದೇ, ಕುಮಾರ ಗಂಧರ್ವ ಅವರೊಟ್ಟಿಗೆ ಹಾಡಲು ಅವಕಾಶ ಕೊಟ್ಟರು. ಆ ಗೀತೆ ಹಿಟ್ ಆಯಿತು. ಪಂಡಿತ್ ರವಿಶಂಕರ್ ಸ್ವರ ಸಂಯೋಜನೆ ಮಾಡಿದ್ದ ‘ಮೀರಾ’ ಎಂಬ ಸಿನಿಮಾದಲ್ಲಿ ಹಾಡುವ ಅವಕಾಶವೂ ಹುಡುಕಿಕೊಂಡು ಬಂತು. ‘ಎಪ್ಪಟವಲೆಕಾದುರ ಸ್ವಾಮಿ’ ಎಂಬ ಭಕ್ತಿಗೀತೆ ಅವರ ಶಾಸ್ತ್ರೀಯ ಪ್ರಜ್ಞೆಯನ್ನು ತೆಲುಗಿನಲ್ಲಿ ಪಸರಿಸಿತು. ಅದು ಅಲ್ಲಿನ ಚಲನಚಿತ್ರ ಲೋಕ ಅವರನ್ನು ಒಳಗೊಳ್ಳಲು ಸ್ಫೂರ್ತಿ. ತಮಿಳು, ಮಲಯಾಳಂ, ಹಿಂದಿ, ಕನ್ನಡ, ಗುಜರಾತಿ, ಒಡಿಯಾ ಹೀಗೆ ಎಲ್ಲ ಭಾಷೆಗಳಲ್ಲಿ ವಾಣಿ ಅವರ ಗಾನಸುಧೆ ಹರಿಯಿತು.

ಗುರುವಾರವಷ್ಟೆ ನಿಧನರಾದ ನಿರ್ದೇಶಕ ಕೆ. ವಿಶ್ವನಾಥ್ ನಿರ್ದೇಶನದ ‘ಶಂಕರಾಭರಣಂ’ ಸಿನಿಮಾದ ಎಲ್ಲ ಹಾಡುಗಳಿಗೂ ಸೇರಿ ರಾಷ್ಟ್ರಪ್ರಶಸ್ತಿ ಸಂದಿತ್ತು. ವಾಣಿ ಜಯರಾಂ ಕಾಣ್ಕೆಯೂ ಅದರಲ್ಲಿ ಇತ್ತು. ಅದೇ ಸಿನಿಮಾ ಹಾಡುಗಳಿಗೆ ನಂದಿ ಪ್ರಶಸ್ತಿಗೂ ವಾಣಿ ಭಾಜನರಾಗಿದ್ದರು.

ಕೆ.ವಿ. ಮಹದೇವನ್, ರಾಜನ್–ನಾಗೇಂದ್ರ, ಸತ್ಯಂ, ಚಕ್ರವರ್ತಿ, ಎಂ.ಎಸ್. ವಿಶ್ವನಾಥನ್ ಅಷ್ಟೇ ಅಲ್ಲದೆ ಇಳಯರಾಜಾ ಸಂಯೋಜನೆಯಲ್ಲಿ ವಾಣಿ ಅವರ ಶಾಸ್ತ್ರೀಯ ಸಂಗೀತದ ಪಲುಕುಗಳು ಅರಳಿದವು. ಹಿಂದಿಯ ‘ಗುಡ್ಡಿ’ ಸಿನಿಮಾದಲ್ಲಿ ಅವರು ಹಾಡಿದ ‘ಬೋಲೆ ರೆ ಪಪೀ ಹರಾ’ ಹಾಡನ್ನು ಈಗಲೂ ಗುನುಗುನಿಸುವ ಅಭಿಮಾನಿಗಳಿದ್ದಾರೆ. ಇದೇ ವರ್ಷ ವಾಣಿ ಅವರಿಗೆ ಪದ್ಮಭೂಷಣ ಪ್ರಶಸ್ತಿ ಪುರಸ್ಕಾರ ಒಲಿದಿತ್ತು. ಅಪೂರ್ವ ರಾಗಂಗಳ್ (ತಮಿಳು), ಸ್ವಾತಿ ಕಿರಣಂ (ತೆಲುಗು) ಸಿನಿಮಾ ಹಾಡುಗಳಿಗೆ ರಾಷ್ಟ್ರ ಪ್ರಶಸ್ತಿಗಳು ಸಂದವು. 2013ರಲ್ಲಿ ಜೀವನ ಶ್ರೇಷ್ಠ ಸಾಧನೆಗಾಗಿ ‘ಫಿಲ್ಮ್‌ಫೇರ್’ ಪ್ರಶಸ್ತಿಯ ಗರಿ ಎಲ್ಲಕ್ಕೂ ಭಾಜನರಾದರು.

‘ಪ್ರಿಯತಮ ಕರುಣೆಯ ತೋರೆಯಾ’, ‘ಲಾಲಿ ಲಾಲಿ ಸುಕುಮಾರ’, ‘ಸವಿ ನೆನಪುಗಳು ಬೇಕು’, ‘ಕನಸಲೂ ನೀನೆ ಮನಸಲೂ ನೀನೆ’, ‘ಕಣ್ಣು ಕಣ್ಣು ಕಲೆತಾಗ’, ‘ಬೆಸುಗೆ ಬೆಸುಗೆ’... ಹೀಗೆ ಹಲವು ಕಾಡುವ ಹಾಡುಗಳ ಮೂಲಕ ವಾಣಿ ಜೀವಂತ. ಹತ್ತು ಸಾವಿರಕ್ಕೂ ಹೆಚ್ಚು ಸಿನಿಮಾ ಹಾಡುಗಳಲ್ಲಿ ಅವರ ದನಿಯ ಬನಿ ಇದೆ. ಐದು ದಶಕಗಳ ಕಾಲ ಹಾಡಿ, ಅವರು ಉಳಿಸಿಹೋಗಿರುವ ಗಾನಮಾಧುರ್ಯ ಕಿವಿಯಲ್ಲಿ ಹಾಗೆಯೇ ಗುಂಯ್‌ಗುಡುತ್ತಿರುತ್ತದೆ.

ರಾಹುಲ್ ಆಪ್ತನ ವಿಚಾರಣೆ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಪ್ತ ಅಲಂಕಾರ್ ಸವಾಯಿ ಅವರನ್ನು ವಿಚಾರಣೆಗೆ ಒಳಪಡಿಸಿರುವ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು, ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದಾರೆ. ಟಿಎಂಸಿ ವಕ್ತಾರ ಸಾಕೇತ್ ಗೋಖಲೆ ಅವರನ್ನು ಇತ್ತೀಚೆಗೆ ಗುಜರಾತ್‌ನಲ್ಲಿ ಬಂಧಿಸಲಾಗಿದೆ. ಈ ಪ್ರಕರಣದಲ್ಲಿ ಅಲಂಕಾರ್ ಸವಾಯಿ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ

ಸಂಕ್ಷಿಪ್ತ ಸುದ್ದಿ

ಮಹದಾಯಿ: ಗೋವಾ ಸಿಎಂಗೆ ವಾರದ ಗಡುವು

ಪಣಜಿ (ಪಿಟಿಐ): ಮಹದಾಯಿ ನದಿ ವಿವಾದವನ್ನು ಬಿಜೆಪಿ ಬಗೆಹರಿಸಿ ಕರ್ನಾಟಕಕ್ಕೆ ನೀರು ನೀಡಿದೆ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಯನ್ನು ಒಂದು ವಾರದೊಳಗೆ ಖಂಡಿಸುವಂತೆ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರನ್ನು ಪ್ರತಿಪಕ್ಷ ಕಾಂಗ್ರೆಸ್ ಒತ್ತಾಯಿಸಿದೆ.

‘ಅಮಿತ್ ಶಾ ಹೇಳಿಕೆಯನ್ನು ಶುಕ್ರವಾರದೊಳಗೆ ಗೋವಾ ಮುಖ್ಯಮಂತ್ರಿ ಖಂಡಿಸದಿದ್ದರೆ, ರಾಜಕೀಯಕ್ಕಾಗಿ ಮಹದಾಯಿ ನೀರನ್ನು ಗೋವಾ ಕರ್ನಾಟಕಕ್ಕೆ ಮಾರಾಟ ಮಾಡಿದೆ ಎಂದು ಸಾಬೀತಾಗುತ್ತದೆ’ ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಅಮಿತ್ ಪಾಟ್ಕರ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕಾದ ಕಬ್ಬಿಣದ ಸರಳಿನಿಂದ ಬರೆ: ಹಸುಳೆ ಸಾವು

ಶಹಡೋಲ್, ಮಧ್ಯಪ್ರದೇಶ (ಪಿಟಿಐ): ಶಹಡೋಲ್ ಜಿಲ್ಲೆಯಲ್ಲಿ ಎರಡೂವರೆ ತಿಂಗಳ ಹೆಣ್ಣುಮಗುವಿನ ಮೈಮೇಲೆ ಕಾದ ಕಬ್ಬಿಣದ ಸರಳಿನಿಂದ 50ಕ್ಕೂ ಹೆಚ್ಚು ಬಾರಿ ಬರೆ ಹಾಕಿದ ಪರಿಣಾಮ, ಮಗು ಮೃತಪಟ್ಟಿರುವ ಘಟನೆ ಶನಿವಾರ ವರದಿಯಾಗಿದೆ.

‘ಪ್ರಾಥಮಿಕ ವರದಿಯ ಪ್ರಕಾರ, ಮಗು ನ್ಯೂಮೋನಿಯಾದಿಂದ ಬಳಲುತ್ತಿದ್ದು ಎನ್ನಲಾಗಿದೆ. ಆದರೆ, ಮಗುವಿನ ಸಾವಿನ ಹಿಂದಿನ ನಿಖರ ಕಾರಣ ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕವೇ ತಿಳಿಯಲಿದೆ’ ಎಂದು ಜಿಲ್ಲಾಧಿಕಾರಿ ವಂದನಾ ವೈದ್ಯ ತಿಳಿಸಿದ್ದಾರೆ.

ಮೊರ್ಬಿ ಸೇತುವೆ: 7 ಮಂದಿ ಜಾಮೀನು ಅರ್ಜಿ ತಿರಸ್ಕೃತ

ಮೊರ್ಬಿ:ಗುಜರಾತ್‌ನ ಮೊರ್ಬಿಯ ತೂಗು ಸೇತುವೆ ಕುಸಿತ ಪ್ರಕರಣದಲ್ಲಿ ಆರೋಪಿಗಳಾಗಿರುವ ಒರೆವಾ ಗ್ರೂಪ್‌ನ ಇಬ್ಬರು ವ್ಯವಸ್ಥಾಪಕರು ಸೇರಿದಂತೆ ಒಟ್ಟು ಏಳು ಮಂದಿ ಸಲ್ಲಿಸಿದ್ದ ಜಾಮೀನು ಅರ್ಜಿಗಳನ್ನು ಇಲ್ಲಿನ ಸೆಷನ್ಸ್ ನ್ಯಾಯಾಲಯ ಶನಿವಾರ ತಿರಸ್ಕರಿಸಿದೆ.

ಇಲ್ಲಿನ ಜಿಲ್ಲಾ ಪ್ರಧಾನ ಹಾಗೂ ಸೆಷನ್ಸ್ ಕೋರ್ಟ್ ನ್ಯಾಯಾಧೀಶ ಪಿ.ಸಿ.ಜೋಶಿ ಅವರು ಆರೋಪಿಗಳ ಜಾಮೀನು ಅರ್ಜಿ ತಿರಸ್ಕರಿಸಿ ಆದೇಶ ಹೊರಡಿಸಿದ್ದಾರೆ.

ಸನ್ನಿ ಲಿಯೋನ್ ಭಾಗವಹಿಸಲಿದ್ದ ಸ್ಥಳದಲ್ಲಿ ಸ್ಫೋಟ

ಇಂಫಾಲ್ (ಪಿಟಿಐ): ಬಾಲಿವುಡ್ ನಟಿ ಸನ್ನಿ ಲಿಯೋನ್ ಭಾಗವಹಿಸಬೇಕಿದ್ದ ಮಣಿಪುರದ ಇಂಫಾಲ್‌ನ ಫ್ಯಾಶನ್ ಷೋ ಸ್ಥಳದ ಸಮೀಪದಲ್ಲಿ ಶನಿವಾರ ಪ್ರಬಲ ಸ್ಫೋಟ ಸಂಭವಿಸಿದೆ.

ಇಲ್ಲಿ ಭಾನುವಾರ ಕಾರ್ಯಕ್ರಮದಲ್ಲಿ ನಟಿ ಲಿಯೋನ್ ಭಾಗವಹಿಸಬೇಕಿತ್ತು.

ಇಂಫಾಲ್‌ನ ಹತ್ತಾ ಕಂಗ್‌ಜೇಲ್‌ಬಂಗ್ ಪ್ರದೇಶದಲ್ಲಿ ಈ ಸ್ಫೋಟ ಸಂಭವಿಸಿದೆ. ಸುಧಾರಿತ ಸ್ಫೋಟಕ ಸಾಧನ (ಐಇಡಿ) ಅಥವಾ ಗ್ರೆನೇಡ್‌ನಿಂದಾಗಿ ಸ್ಫೋಟ ಸಂಭವಿಸಿದೆಯೇ ಎಂಬುದು ಗೊತ್ತಾಗಿಲ್ಲ. ಈವರೆಗೆ ಯಾವುದೇ ಭಯೋತ್ಪಾದಕ ಸಂಘಟನೆ ಸ್ಫೋಟದ ಹೊಣೆ ಹೊತ್ತುಕೊಂಡಿಲ್ಲ.

ದಿಗ್ವಿಜಯ ಸಿಂಗ್‌ಗೆ ಜಾಮೀನು

ಭೋಪಾಲ್ (ಪಿಟಿಐ): ಮಾನನಷ್ಟ ಮೊಕದ್ದಮೆ ಪ್ರಕರಣವೊಂದರಲ್ಲಿ ಕಾಂಗ್ರೆಸ್ ರಾಜ್ಯಸಭಾ ಸದಸ್ಯ ದಿಗ್ವಿಜಯ ಸಿಂಗ್ ಅವರಿಗೆ ಇಲ್ಲಿನ ವಿಶೇಷ ನ್ಯಾಯಾಲಯವು ಶನಿವಾರ ಜಾಮೀನು ಮಂಜೂರು ಮಾಡಿದೆ.

ವೃತ್ತಿಪರ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಹಾಗೂ ಸರ್ಕಾರಿ ಸೇವೆಗಳಿಗೆ ನೇಮಕಾತಿ ಸಂಬಂಧ ಮಧ್ಯಪ್ರದೇಶ ವ್ಯವಸಾಯಿಕ್ ಮಂಡಳಿ (ವ್ಯಾಪಂ) ನಡೆಸಿದ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮದಲ್ಲಿ ಬಿಜೆಪಿ ಮುಖಂಡ ವಿ.ಡಿ. ಶರ್ಮಾ ಅವರು ಭಾಗಿಯಾಗಿದ್ದಾರೆ ಎಂದು ದಿಗ್ವಿಜಯ್ ಸಿಂಗ್ ಅವರು ಆರೋಪಿಸಿದ್ದರು. 2014ರಲ್ಲಿ ಶರ್ಮಾ ಅವರು ಸಿಂಗ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದರು.

‘ಜೆಡಿಎಸ್: ಕೆಲವೆಡೆ ಅಭ್ಯರ್ಥಿ ಬದಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷದ 93 ಅಭ್ಯರ್ಥಿಗಳನ್ನು ಈಗಾಗಲೇ ಆಯ್ಕೆ ಮಾಡಿದ್ದೇವೆ. ಘೋಷಿತ ಕ್ಷೇತ್ರಗಳ ಆರೇಳು ಅಭ್ಯರ್ಥಿಗಳನ್ನು ಬದಲಾವಣೆ ಮಾಡಲಾಗುತ್ತಿದ್ದು, ವಾರದಲ್ಲಿ 2ನೇ ಪಟ್ಟಿ ಬಿಡುಗಡೆ ಮಾಡುತ್ತೇವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.

ಮೊದಲ ಪಟ್ಟಿಯಲ್ಲಿರುವ 93 ಅಭ್ಯರ್ಥಿಗಳ ಜತೆ ಶನಿವಾರ ಸಭೆ ನಡೆಸಿದ ಅವರು, ಇನ್ನಷ್ಟು ಶ್ರಮ ಹಾಕಿ ಕೆಲಸ ಮಾಡಲು ಸೂಚಿಸಿದರು.

61 ಕ್ಷೇತ್ರಗಳಲ್ಲಿ ಪಂಚರತ್ನ ರಥಯಾತ್ರೆ ಪೂರ್ಣಗೊಂಡಿದೆ. ಮನೆ ಮನೆಗೂ ಪಂಚರತ್ನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮದ ಮೂಲಕ ಜನರ ಬಳಿಗೆ ತಲುಪಲು ಅಭ್ಯರ್ಥಿಗಳಿಗೆ ಗುರಿ ನೀಡಲಾಗಿದೆ. ಮುಂದಿನ ಎರಡೂವರೆ ತಿಂಗಳು ಅಭ್ಯರ್ಥಿಗಳು ವಾರಕ್ಕೆ ಮೂರು ದಿನ ಗ್ರಾಮ ವಾಸ್ತವ್ಯ ಮಾಡಲು ಸೂಚಿಸಲಾಗಿದೆ. ಪಕ್ಷದ ನಿರೀಕ್ಷೆಗಳಿಗೆ ತಲುಪದ ಅಭ್ಯರ್ಥಿಗಳ ಬದಲಾವಣೆ ಮಾಡುತ್ತೇವೆ ಎಂದರು.

‘ಬಿಜೆಪಿ ನಾಯಕರು ವಿಜಯ ಸಂಕಲ್ಪ ಯಾತ್ರೆ ಬದಲು ‘ಸಿ.ಡಿ ಸಂಕಲ್ಪ ಯಾತ್ರೆ’ ಮಾಡಲಿ. ಆಗ ನಾನು ನವಗ್ರಹ ಅಂತ ಹೆಸರು ಬದಲಾಯಿಸುತ್ತೇನೆ. ಪಂಚರತ್ನ ರಥಯಾತ್ರೆ ವೇಳೆ ಪ್ರತಿನಿತ್ಯ ನೂರಾರು ಜನರ ಸಮಸ್ಯೆ ಆಲಿಸಿದ್ದೇನೆ. ನಿಮ್ಮ ಮನೆಯ ಮುಂದೆ ಬರುವವರು ಯಾರು ಅಂತ ಗೊತ್ತಿದೆ. ಬ್ಯಾಂಕ್‌ಗಳನ್ನು ಮುಳುಗಿಸಿದ ನಿಮ್ಮ ಸಹೋದರನ ಕಥೆ ಯಾರಿಗೆ ಗೊತ್ತಿಲ್ಲ ಹೇಳಿ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ವಿರುದ್ಧ ಹರಿಹಾಯ್ದರು.

ಜೆಡಿಎಸ್ ಮಿಷನ್ 123 ಬಗ್ಗೆ ಲಘುವಾಗಿ ಮಾತನಾಡುವ ಕಾಂಗ್ರೆಸ್ ನಾಯಕರು 140 ಗುರಿ ಇಟ್ಟುಕೊಂಡು ಹೋಗಿದ್ದಾರೆ. ಆ 140ರಲ್ಲಿ ಒಂದು ತೆಗೆದುಬಿಡಿ ಎಂದರು.

ಚಿತ್ತಾಪುರದಲ್ಲಿ ಸಿವಿಲ್ ನ್ಯಾಯಾಧೀಶರಾಗಿ ಸ್ವಯಂ ನಿವೃತ್ತರಾದ ಸುಭಾಷ್ ಚಂದ್ರ ರಾಥೋಡ್ ಅವರನ್ನು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಪಕ್ಷಕ್ಕೆ ಬರಮಾಡಿಕೊಂಡರು.

ಎಟಿಆರ್ ಬದಲು ಎ. ಮಂಜು

ಅರಕಲಗೂಡು ಕ್ಷೇತ್ರಕ್ಕೆ ಎ.ಟಿ.ರಾಮಸ್ವಾಮಿ ಬದಲು ಮಾಜಿ ಸಚಿವ ಎ.ಮಂಜು ಅವರಿಗೆ ಜೆಡಿಎಸ್ ಟಿಕೆಟ್ ನೀಡುವುದು ಖಚಿತವಾಗಿದೆ. ಅವರ ಜತೆ ರೇವಣ್ಣ ಕೂಡ ಚರ್ಚಿಸಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದರು.

ಶಾಸಕರಾದ ಎ.ಟಿ.ರಾಮಸ್ವಾಮಿ, ಶಿವಲಿಂಗೇಗೌಡ ಅವರು ಎರಡು ವರ್ಷಗಳಿಂದ ಪಕ್ಷದ ಚಟುವಟಿಕೆಗಳಿಂದ ದೂರ ಇದ್ದಾರೆ. ಪಕ್ಷದ ಸಭೆ ಕರೆದಾಗಲೂ ಅವರು ಬಂದಿಲ್ಲ ಎಂದರು. ಕಾಂಗ್ರೆಸ್‌ನಿಂದ ಗೆದ್ದು ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದ ಎ.ಮಂಜು 2019ರ ಲೋಕಸಭೆ ಚುನಾವಣೆ ವೇಳೆ ಬಿಜೆಪಿ ಸೇರಿ, ಹಾಸನ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಇತ್ತೀಚೆಗೆ ಕಾಂಗ್ರೆಸ್ ಸೇರಲು ಮುಂದಾಗಿದ್ದ ಅವರು, ನಾಯಕರನ್ನು ಭೇಟಿ ಮಾಡಿದ್ದರು. ಆದರೆ, ಸಕಾರಾತ್ಮಕ ಸ್ಪಂದನೆ ಸಿಕ್ಕಿರಲಿಲ್ಲ.

ಕೇಜ್ರಿವಾಲ್ ರಾಜೀನಾಮೆಗೆ ಬಿಜೆಪಿ ಪಟ್ಟು

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ದೋಷಾರೋಪ ಪಟ್ಟಿಯಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಹೆಸರಿದ್ದು, ಅವರು ತಕ್ಷಣ ರಾಜೀನಾಮೆ ನೀಡಬೇಕು ಎಂದು ಬಿಜೆಪಿ, ಕಾಂಗ್ರೆಸ್ ಆಗ್ರಹಿಸಿವೆ.

ಬಿಜೆಪಿ ಕಾರ್ಯಕರ್ತರು ದೆಹಲಿಯ ಎಎಪಿ ಕಚೇರಿಯ ಎದುರು ಶನಿವಾರ ಪ್ರತಿಭಟನೆ ನಡೆಸಿದರು. ಕೇಜ್ರಿವಾಲ್ ಅವರಿಗೆ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯುವ ನೈತಿಕತೆ ಇಲ್ಲ ಎಂದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ಹೇಳಿದ್ದಾರೆ.

ಕಾಂಗ್ರೆಸ್ ಆಗ್ರಹ: ಆರೋಪಿಗಳಾಗಿರುವ ಮುಖ್ಯಮಂತ್ರಿ ಕೇಜ್ರಿವಾಲ್, ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಹಾಗೂ ಸಚಿವ ಸತ್ಯೇಂದ್ರ ಜೈನ್ ತಕ್ಷಣ ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಮುಖಂಡ ಅಜಯ್ ಮಾಕನ್ ಆಗ್ರಹಿಸಿದ್ದಾರೆ.

ಜಾಮಿಯಾ ನಗರ ಹಿಂಸಾಚಾರ: 11 ಆರೋಪಿಗಳು ಖುಲಾಸೆ

ನವದೆಹಲಿ: ಜಾಮಿಯಾ ನಗರ ಹಿಂಸಾಚಾರ ಪ್ರಕರಣದಲ್ಲಿ ವಿದ್ಯಾರ್ಥಿ ಕಾರ್ಯಕರ್ತರಾದ ಶರ್ಜೀಲ್ ಇಮಾಮ್ ಮತ್ತು ಆಸಿಫ್ ಇಕ್ಬಾಲ್ ತನ್ಹಾ ಸೇರಿದಂತೆ 11 ಜನರನ್ನು ದೆಹಲಿ ನ್ಯಾಯಾಲಯ ಶನಿವಾರ ಖುಲಾಸೆಗೊಳಿಸಿದೆ. ಪೊಲೀಸರು ಅವರನ್ನು ಬಲಿಪಶುಗಳನ್ನಾಗಿಸಿದ್ದರು ಎಂದು ಹೇಳಿದೆ.

ಆರೋಪಿಗಳಲ್ಲಿ ಒಬ್ಬನಾದ ಮೊಹಮ್ಮದ್ ಇಲ್ಯಾಸ್ ವಿರುದ್ಧದ ಆರೋಪಪಟ್ಟಿ ಸಿದ್ದಪಡಿಸಲು ನ್ಯಾಯಾಲಯ ಆದೇಶಿಸಿದೆ.

2019ರ ಡಿಸೆಂಬರ್‌ನಲ್ಲಿ ಜಾಮಿಯಾ ನಗರ ಪ್ರದೇಶದಲ್ಲಿ ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ವಿರುದ್ಧದ ಪ್ರತಿಭಟನೆಯ ಸಂದರ್ಭದಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಲಾಗಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಅರುಳ್ ವರ್ಮಾ, ‘ಕೃತ್ಯಕ್ಕೆ ಕಾರಣರಾದ ದುಷ್ಕರ್ಮಿಗಳನ್ನು ಬಂಧಿಸಲು ಪೊಲೀಸರಿಗೆ ಸಾಧ್ಯವಾಗಲಿಲ್ಲ ಎಂಬ ತೀರ್ಮಾನಕ್ಕೆ ಬರದೆ ಇರಲು ಸಾಧ್ಯವಿಲ್ಲ. ಆದರೆ, ಇವರನ್ನು ಬಲಿಪಶುಗಳನ್ನಾಗಿ ಮಾಡಲಾಗಿದೆ’ ಎಂದು ಹೇಳಿದರು.

‘ಸ್ಥಳದಲ್ಲಿ ಹಲವಾರು ಪ್ರತಿಭಟನಕಾರರು ಇದ್ದರು. ಗುಂಪಿನೊಳಗೆ ಕೆಲ ಕಿಡಿಗೇಡಿಗಳು ಕೆಟ್ಟ ವಾತಾವರಣವನ್ನು ಸೃಷ್ಟಿಸಿರಬಹುದು. ಆರೋಪಿಗಳು ಗಲಭೆಯಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆಯೇ ಎಂಬುದು ಚರ್ಚಾಸ್ಪದ ಪ್ರಶ್ನೆಯಾಗಿ ಉಳಿದಿದೆ. ಉತ್ತರ ಒಕ್ಕೊರಲಿನಿಂದ ಇಲ್ಲ ಎಂದೇ ಆಗುತ್ತದೆ’ ಎಂದು ಅವರು ಹೇಳಿದರು.

ಭಿನ್ನಮತ ಮತ್ತು ದಂಗೆಯ ನಡುವಿನ ವ್ಯತ್ಯಾಸವನ್ನು ತನಿಖಾ ಸಂಸ್ಥೆಗಳು ಗ್ರಹಿಸುವ ಅಗತ್ಯವಿದೆ ಎಂದು ನ್ಯಾಯಾಲಯವು ಹೇಳಿದೆ.

ತ್ರಿಪುರಾ ವಿಧಾನಸಭೆ: ತ್ರಿಕೋನ ಸ್ಪರ್ಧೆ ಸಾಧ್ಯತೆ

ಟಿಪ್ರಮೋಥಾ ಪಕ್ಷ ‘ಕಿಂಗ್ ಮೇಕರ್’?

ಅಗರ್ತಲಾ (ಪಿಟಿಐ): ಹೊಸದಾಗಿ ರಚನೆಯಾಗಿರುವ ಟಿಪ್ರಮೋಥಾ ಪಕ್ಷವು ತ್ರಿಪುರಾ ವಿಧಾನಸಭಾ ಚುನಾವಣೆಯಲ್ಲಿ ‘ಕಿಂಗ್ ಮೇಕರ್’ ಆಗುವ ಸಾಧ್ಯತೆಗಳಿವೆ. ಬಿಜೆಪಿ–ಐಪಿಎಫ್‌ಟಿ ಮೈತ್ರಿಕೂಟ ಹಾಗೂ ಕಾಂಗ್ರೆಸ್–ಎಡಪಕ್ಷಗಳ ಮೈತ್ರಿಕೂಟದ ವಿರುದ್ಧ ಟಿಪ್ರಮೋಥಾ ಸ್ಪರ್ಧಿಸಲಿದ್ದು, ರಾಜ್ಯದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಡುವ ಸಾಧ್ಯತೆಯಿದೆ.

ರಾಜಮನೆತನಕ್ಕೆ ಸೇರಿದ ಪ್ರದ್ಯೋತ್ ಮಾಣಿಕ್ಯ ದೇಬಬರ್ಮಾ ನೇತೃತ್ವದ ಟಿಪ್ರಮೋಥಾ, ಬಿಜೆಪಿ ಮೈತ್ರಿಕೂಟ ಅಥವಾ ಕಾಂಗ್ರೆಸ್ ಮೈತ್ರಿಕೂಟದ ಜೊತೆ ಚುನಾವಣಾ ಪೂರ್ವ ಹೊಂದಾಣಿಕೆ ಮಾಡಿಕೊಳ್ಳಲು ನಿರಾಕರಿಸಿದೆ. ಆದರೆ, ಚುನಾವಣೋತ್ತರ ಮೈತ್ರಿಯನ್ನು ಅಲ್ಲಗಳೆದಿಲ್ಲ. ಪ್ರತ್ಯೇಕ ‘ಗ್ರೇಟರ್ ಟಿಪ್ರಲ್ಯಾಂಡ್’ ರಾಜ್ಯ ರಚಿಸುವ ತನ್ನ ಬೇಡಿಕೆಗೆ ಬೆಂಬಲ ನೀಡುವ ಯಾವುದೇ ಪಕ್ಷವನ್ನು ಅದು ಬೆಂಬಲಿಸುವ ಸಾಧ್ಯತೆಯಿದೆ.

ತ್ರಿಪುರಾ ಬುಡಕಟ್ಟು ಪ್ರದೇಶಗಳ ಸ್ವಾಯತ್ತ ಜಿಲ್ಲಾ ಮಂಡಳಿಗೆ (ಟಿಟಿಎಡಿಸಿ) 2021ರಲ್ಲಿ ನಡೆದ ಚುನಾವಣೆಯಲ್ಲಿ 30ರ ಪೈಕಿ 18 ಸ್ಥಾನಗಳನ್ನು ಗೆದ್ದುಕೊಂಡ ಬಳಿಕ, ವಿಧಾನಸಭಾ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲು ಟಿಪ್ರಮೋಥಾ ಮುಂದಾಗಿದೆ. 60 ವಿಧಾನಸಭಾ ಕ್ಷೇತ್ರಗಳ ಪೈಕಿ ಬುಡಕಟ್ಟು ಪ್ರಾಬಲ್ಯದ 20 ಕ್ಷೇತ್ರಗಳನ್ನು ಗೆಲ್ಲುವ ಉತ್ಸಾಹದಲ್ಲಿದೆ.

ಸ್ಥಳೀಯ ಪಕ್ಷ ಇಂಡಿಜಿನಿಯಸ್ ಪೀಪಲ್ಸ್ ಫ್ರಂಟ್ ಆಫ್ ತ್ರಿಪುರಾ (ಐಪಿಎಫ್‌ಟಿ) ಜತೆ ಆಡಳಿತಾರೂಢ ಬಿಜೆಪಿ ಮೈತ್ರಿ ಮಾಡಿಕೊಂಡಿದ್ದು, ಮಿತ್ರಪಕ್ಷಕ್ಕೆ 5 ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದೆ. 2018ರ ಚುನಾವಣೆಯಲ್ಲಿ ಬಿಜೆಪಿ 36 ಕಡೆ, ಐಪಿಎಫ್‌ಟಿ 8 ಕ್ಷೇತ್ರಗಳಲ್ಲಿ ಗೆದ್ದಿದ್ದವು. ಆದರೆ ಪ್ರತ್ಯೇಕ ಟಿಪ್ರಲ್ಯಾಂಡ್ ರಚಿಸುವ ಮುಖ್ಯ ಬೇಡಿಕೆ ಈಡೇರಿಸುವಲ್ಲಿ ವಿಫಲವಾಗಿದ್ದರಿಂದ ಐಪಿಎಫ್‌ಟಿಗೆ ಜನಬೆಂಬಲ ಕಡಿಮೆಯಾಯಿತು ಎಂದು ವಿಶ್ಲೇಷಕರು ಹೇಳುತ್ತಾರೆ.

ಪ್ರತ್ಯೇಕ ರಾಜ್ಯ ಬೇಡಿಕೆಯನ್ನು ಟಿಪ್ರಮೋಥಾ ಪ್ರಮುಖ ಅಸ್ತ್ರವಾಗಿ ಬಳಸಿಕೊಂಡಿದ್ದರಿಂದ, ಅದರ ಜನಪ್ರಿಯತೆ ಹೆಚ್ಚಾಯಿತು. ಬುಡಕಟ್ಟು ಪ್ರದೇಶಗಳ ಮೇಲೆ ಐಪಿಎಫ್‌ಟಿಗೆ ಇದ್ದ ಹಿಡಿತ ಕ್ರಮೇಣ ಕಡಿಮೆಯಾಯಿತು. ದೇಬಬರ್ಮಾ ಅವರು ಪ್ರತ್ಯೇಕ ರಾಜ್ಯ ಬೇಡಿಕೆಗೆ ಪಟ್ಟು ಹಿಡಿದಿದ್ದರಿಂದ, ಟಪ್ರಮೋಥಾ ಜತೆ ಚುನಾವಣಾಪೂರ್ವ ಹೊಂದಾಣಿಕೆ ಮಾಡಿಕೊಳ್ಳುವ ಬಿಜೆಪಿಯ ಯತ್ನ ವಿಫಲವಾಯಿತು.

ರಾಜ್ಯದಲ್ಲಿ ವಿರೋಧಿಗಳಾಗಿ ಗುರುತಿಸಿಕೊಂಡಿದ್ದ ಕಾಂಗ್ರೆಸ್ ಹಾಗೂ ಸಿಪಿಎಂ ಪಕ್ಷಗಳು ಟಿಪ್ರಮೋಥಾ ಬೆಳವಣಿಗೆಯ ಬಳಿಕ ಹೊಂದಾಣಿಕೆ ಮಾಡಿಕೊಂಡಿವೆ. ಬುಡಕಟ್ಟು ಪ್ರದೇಶಗಳಲ್ಲಿ ಪಕ್ಷಕ್ಕೆ ನಿಷ್ಠಾವಂತ ಬೆಂಬಲಿಗರು ಇದ್ದಾರೆ ಎಂದು ಸಿಪಿಎಂ ವಿಶ್ವಾಸ ವ್ಯಕ್ತಪಡಿಸಿದೆ. ಸಿಪಿಎಂ 43 ಕಡೆ, ಮಿತ್ರಪಕ್ಷಗಳಾದ ಫಾರ್ವರ್ಡ್ ಬ್ಲಾಕ್, ಆರ್‌ಎಸ್‌ಪಿ, ಸಿಪಿಐ ತಲಾ ಒಂದು ಕ್ಷೇತ್ರದಲ್ಲಿ ಕಣಕ್ಕಿಳಿಯಲಿವೆ.

‘ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ತ್ರಿಕೋನ ಸ್ಪರ್ಧೆಯಿದ್ದು, ಟಿಪ್ರಮೋಥಾ ನಿರ್ಣಾಯಕ ಪಾತ್ರ ವಹಿಸಲಿದೆ’ ಎಂದು ಪಕ್ಷದ ವಕ್ತಾರ ಆಂಟನಿ ದೇಬಬರ್ಮಾ ಅವರು ಹೇಳಿದ್ದಾರೆ. ಪಕ್ಷವು 42 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಉದ್ದೇಶ ಹೊಂದಿದ್ದು, ಈ ಪೈಕಿ 25–26 ಕ್ಷೇತ್ರಗಳಲ್ಲಿ ಜಯದ ವಿಶ್ವಾಸವಿದೆ ಎಂದು ಅವರು ಹೇಳಿದ್ದಾರೆ. ಟಿಪ್ರಮೋಥಾ ಪ್ರವೇಶದಿಂದ ಬಿಜೆಪಿಗೆ ಹಿನ್ನಡೆಯಾಗಲಿದೆ ಎಂದು ಪತ್ರಕರ್ತ ಹಾಗೂ ರಾಜಕೀಯ ವಿಶ್ಲೇಷಕ ಶೇಖರ್ ದತ್ತಾ ಅಭಿಪ್ರಾಯಪಟ್ಟಿದ್ದಾರೆ. ಆದರೆ, ಪಕ್ಷದ ಶಾಸಕರ ಸಂಖ್ಯೆ ಈ ಬಾರಿ ಇನ್ನಷ್ಟು ಹೆಚ್ಚಲಿದೆ ಎಂದು ಬಿಜೆಪಿ ಹೇಳಿದೆ.

ಚುನಾವಣಾ ಕಣದಲ್ಲಿ...

- ಮೇಘಾಲಯ ಚುನಾವಣೆಗೆ ಆಡಳಿತಾರೂಢ ಎನ್‌ಪಿಪಿ ಪ್ರಣಾಳಿಕೆ ಪ್ರಕಟ: ಮುಂದಿನ ಐದು ವರ್ಷಗಳಲ್ಲಿ ಪ್ರವಾಸೋದ್ಯಮ, 5 ಲಕ್ಷ ಉದ್ಯೋಗ ಸೃಷ್ಟಿ ಭರವಸೆ; ಕೈಗೆಟುಕುವ ದರದಲ್ಲಿ ಔಷಧ, ಕಾಂಕ್ರೀಟ್ ಸೇತುವೆ ನಿರ್ಮಾಣ, ಯುವಕರಿಗೆ ಕೌಶಲ ತರಬೇತಿ ಕಾರ್ಯಕ್ರಮ ಘೋಷಣೆ; ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ನಾಮಪತ್ರ ಸಲ್ಲಿಕೆ
- ಇದೇ 27ರಂದು ನಡೆಯಲಿರುವ ನಾಗಾಲ್ಯಾಂಡ್ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್‌ನ 21 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ
- ಪ್ರತ್ಯೇಕ ರಾಜ್ಯಕ್ಕೆ ಆಗ್ರಹಿಸಿ ಚುನಾವಣೆ ಬಹಿಷ್ಕರಿಸಿದ್ದ ‘ಈಸ್ಟರ್ನ್ ನಾಗಾಲ್ಯಾಂಡ್ ಪೀಪಲ್ಸ್ ಆರ್ಗನೈಸೇಷನ್’ ತನ್ನ ನಿರ್ಧಾರ ವಾಪಸ್ ಪಡೆದಿದೆ. ಚುನಾವಣೆ ಬಳಿಕ ಬೇಡಿಕೆ ಪರಿಶೀಲಿಸುವುದಾಗಿ ಕೇಂದ್ರ ಗೃಹ ಸಚಿವಾಲಯದ ಭರವಸೆ ಸಿಕ್ಕಿದೆ
- ಶಿಲ್ಲಾಂಗ್‌ನಲ್ಲಿ ಅಭ್ಯರ್ಥಿಗಳು ಮತದಾರರಿಗೆ ಕುಕ್ಕರ್ ವಿತರಿಸಿ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದಲ್ಲಿ ಎನ್‌ಪಿಪಿ, ಯುಡಿಪಿ ಪಕ್ಷಗಳಿಗೆ ಚುನಾವಣಾ ಆಯೋಗದಿಂದ ನೋಟಿಸ್

ಪ್ರಜಾ ಮತ
ಜನತಂತ್ರದ ಹಬ್ಬ
ತ್ರಿಪುರಾ ವಿಧಾನಸಭಾ ಚುನಾವಣೆ - 2023

ಕೇರಳ: ದೇಶದಲ್ಲಿ ಮೊದಲು ಎನ್ನಲಾದ ಪ್ರಕರಣ

ಮಗು ನಿರೀಕ್ಷೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತ ದಂಪತಿ

ಕೋಯಿಕ್ಕೋಡ್, ಕೇರಳ (ಪಿಟಿಐ): ಕೇರಳದ ಲಿಂಗತ್ವ ಅಲ್ಪಸಂಖ್ಯಾತ ದಂಪತಿ ಜಿಯಾ ಪಾವಲ್ ಮತ್ತು ಜಹಾದ್ ಮಾರ್ಚ್‌ನಲ್ಲಿ ತಮ್ಮ ಮೊದಲ ಮಗುವಿನ ಜನನದ ನಿರೀಕ್ಷೆ ಹೊಂದಿದ್ದು, ದೇಶದಲ್ಲಿಯೇ ಇದು ಪ್ರಥಮ ಪ್ರಕರಣ ಎನ್ನಲಾಗಿದೆ.

ನೃತ್ಯಗಾರ್ತಿ ಜಿಯಾ ಪಾವಲ್ ಅವರು, ‘ತಮ್ಮ ಸಂಗಾತಿ ಜಹಾದ್ ಈಗ ಎಂಟು ತಿಂಗಳ ಗರ್ಭಿಣಿ’ ಎಂದು ಇನ್‌ಸ್ಟಾಗ್ರಾಂನಲ್ಲಿ ಘೋಷಿಸಿದ್ದಾರೆ.


‘ನಾನು ತಾಯಿಯಾಗುವ ಮತ್ತು ತಂದೆಯಾಗುವ ಅವನ ಕನಸನ್ನು ನನಸಾಗಿಸಲು ನಾವು ಹೊರಟಿದ್ದೇವೆ. ಎಂಟು ತಿಂಗಳ ಭ್ರೂಣವು ಈಗ ಜಹಾದ್ ಹೊಟ್ಟೆಯಲ್ಲಿ ಬೆಳೆಯುತ್ತಿದೆ. ನಮಗೆ ತಿಳಿದುಬಂದ ಮಾಹಿತಿ ಪ್ರಕಾರ, ಭಾರತದಲ್ಲಿ ಲಿಂಗಪರಿವರ್ತಿತ ಪುರುಷ (ಟ್ರಾನ್ಸ್‌ಮ್ಯಾನ್) ಗರ್ಭಧಾರಣೆ ಮಾಡಿರುವುದು ಇದೇ ಮೊದಲು’ ಎಂದು ಪಾವಲ್ ತಮ್ಮ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಮೂರು ವರ್ಷಗಳಿಂದ ಸಂಗಾತಿಯಾಗಿರುವ ಪಾವಲ್ ಮತ್ತು ಜಹಾದ್ ಇಬ್ಬರೂ ತಮ್ಮ ಲಿಂಗವನ್ನು ಬದಲಾಯಿಸಿಕೊಳ್ಳಲು ಹಾರ್ಮೋನ್ ಚಿಕಿತ್ಸೆಗೆ ಒಳಗಾಗಿದ್ದರು. ಆದರೆ, ಮಗುವನ್ನು ಹೊಂದಬೇಕೆನ್ನುವ ಉದ್ದೇಶದಿಂದ ಚಿಕಿತ್ಸೆಯನ್ನು ನಿಲ್ಲಿಸಿದ್ದಾರೆ. ಹೆಣ್ಣಾಗಿದ್ದ ಜಹಾದ್ ಪುರುಷನಾಗುವ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ, ಮಗು ಹೊಂದಬೇಕೆನ್ನುವ ಉದ್ದೇಶದಿಂದ ಅವರೀಗ ಹಾರ್ಮೋನ್ ಚಿಕಿತ್ಸೆ ನಿಲ್ಲಿಸಿದ್ದಾರೆ.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಪಾವಲ್, ‘ಲಿಂಗತ್ವ ಅಲ್ಪಸಂಖ್ಯಾತ ಸಮುದಾಯವು ಸಮಾಜದ ಭಯದಲ್ಲಿ ಬದುಕುತ್ತಿದೆ. ನಮ್ಮ ಸಮುದಾಯದ ಅನೇಕರು ತಂದೆ–ತಾಯಿಗಳಾಗಲು ಬಯಸುತ್ತಿದ್ದಾರೆ. ಅನೇಕ ಲಿಂಗ ಪರಿವರ್ತಿತ ಪುರುಷರು ಗರ್ಭಧರಿಸುವ ಸಾಧ್ಯತೆ ಇದೆ. ಆದರೆ, ಅವರು ಮುಂದೆ ಬರುತ್ತಿಲ್ಲ’ ಎಂದರು.

‘ನಾನು ಗರ್ಭಿಣಿಯಾಗುವ ಬಗ್ಗೆ ಎಂದಿಗೂ ಯೋಚಿಸಿರಲಿಲ್ಲ. ಒಂದು ವೇಳೆ ಹಾಗೆ ಮೊದಲೇ ಯೋಚಿಸಿದ್ದರೆ ಶಸ್ತ್ರಚಿಕಿತ್ಸೆಯ ಮೂಲಕ ನನ್ನ ಸ್ತನಗಳನ್ನು ತೆಗೆಸಿಕೊಳ್ಳುತ್ತಿರಲಿಲ್ಲ’ ಎಂದು ಜಹಾದ್ ತಿಳಿಸಿದರು.

ಕೋಯಿಕ್ಕೋಡ್ ವೈದ್ಯಕೀಯ ಕಾಲೇಜಿನ ವೈದ್ಯರು ಈ ದಂಪತಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಆಸ್ಪತ್ರೆಯಲ್ಲಿರುವ ತನಕ ಮಗುವಿಗೆ ಎದೆಹಾಲಿನ ಸೌಲಭ್ಯ ಕಲ್ಪಿಸುವ ಕುರಿತು ಆಸ್ಪತ್ರೆಯ ವೈದ್ಯಾಧಿಕಾರಿಗಳು ಹೇಳಿದ್ದಾರೆ.



ಜಿಯಾ ಮತ್ತು ಜಹಾದ್ ದಂಪತಿ —ಪಿಟಿಐ ಚಿತ್ರ

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟಾಂಡರ್ಡ್ ಚಿನ್ನ 10ಗ್ರಾಂ	₹58,830
ಒಡವೆ ಚಿನ್ನ ಗ್ರಾಂ	₹5,412
ಬೆಳ್ಳಿ ಕೆ.ಜಿಗೆ	₹69,600

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹14750
ಎಸಿ	₹7140
ಆರ್‌ಪಿ	₹9500
ಆರ್‌ಸಿ	₹4800

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹1150 (1162)
ಸೂರ್ಯಕಾಂತಿ (ರಿಫೈನ್ಡ್)	₹1160 (1170)
ಪಾಮೋಲಿನ್	₹921 (930)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹138
ಆರ್‌ಎಸ್‌ಎಸ್-5	₹133.50
ಗುಡ್ ಲಾಟ್	₹128.50

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹522-700
ದ್ವಿತಳಿ (ಬಿ.ವಿ)	₹333-802

ಅದಾನಿ ಎಂಟರ್‌ಪ್ರೈಸಸ್ ಎಫ್‌ಪಿಒ ರದ್ದು: ಸಚಿವೆ ನಿರ್ಮಲಾ ಹೇಳಿಕೆ

ಭಾರತದ ವರ್ಚಸ್ಸಿಗೆ ಧಕ್ಕೆ ಇಲ್ಲ

ಮುಂಬೈ (ಪಿಟಿಐ/ರಾಯಿಟರ್ಸ್): ಅದಾನಿ ಸಮೂಹವು ₹20 ಸಾವಿರ ಕೋಟಿ ಮೊತ್ತದ ಎಫ್‌ಪಿಒ ರದ್ದು ಮಾಡಿರುವುದರಿಂದ ಭಾರತದ ಆರ್ಥಿಕತೆಯ ಮೇಲೆ ಪರಿಣಾಮ ಬೀರಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ಹೇಳಿದ್ದಾರೆ.

ಎಫ್‌ಪಿಒಗಳು ಬರುವುದು, ವಿದೇಶಿ ಸಾಂಸ್ಥಿಕ ಹೂಡಿಕೆ ಹೊರಹೋಗುವುದು ಸಹಜ. ಈ ಬೆಳವಣಿಗೆಗಳಿಂದ ನಮ್ಮ ಆರ್ಥಿಕ ಶಕ್ತಿಯ ಅಥವಾ ಆರ್ಥಿಕತೆಯ ವರ್ಚಸ್ಸಿಗೆ ಯಾವುದೇ ಹಾನಿ ಆಗಿಲ್ಲ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪ್ರತಿಯೊಂದು ಮಾರುಕಟ್ಟೆಯಲ್ಲಿಯೂ ಏರಿಳಿತ ಇದ್ದೇ ಇರುತ್ತದೆ. ಕಳೆದ ಎರಡು ದಿನಗಳಲ್ಲಿಯೇ ₹65,600 ಕೋಟಿ ವಿದೇಶಿ ವಿನಿಮಯ ಬಂದಿದೆ. ಇದನ್ನು ಗಮನಿಸಿದರೆ ಭಾರತ ಮತ್ತು ಅದರ ಮೂಲಸ್ವರೂಪದ ಮೇಲೆ ಯಾವುದೇ ಪರಿಣಾಮ ಉಂಟಾಗಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಅದಾನಿ ಸಮೂಹದ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಸಮೂಹದ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ನಿಯಂತ್ರಣ ಸಂಸ್ಥೆಗಳು ತಮ್ಮದೇ ಆದ ಕ್ರಮ ಕೈಗೊಳ್ಳಲಿವೆ ಎಂದಿದ್ದಾರೆ.

ಅತ್ಯಂತ ದೊಡ್ಡ ಹಗರಣ; ಜಿಗ್ನೇಶ್ (ಅಹಮದಾಬಾದ್ ವರದಿ): 'ದೇಶದ ಕಾರ್ಪೊರೇಟ್ ಇತಿಹಾಸದ ಅತ್ಯಂತ ದೊಡ್ಡ ಹಗರಣವನ್ನು ಹಿಂಡನ್‌ಬರ್ಗ್ ಬಯಲಿಗೆಳೆದಿದೆ' ಎಂದು ಗುಜರಾತ್ ಕಾಂಗ್ರೆಸ್ ಶಾಸಕ ಜಿಗ್ನೇಶ್ ಮೆವಾನಿ ಹೇಳಿದರು.

ಅದಾನಿ ಸಮೂಹದ ವಿರುದ್ಧ ಕೂಡಲೇ ತನಿಖೆಗೆ ಆದೇಶಿಸಬೇಕು ಎಂದು ಆಗ್ರಹಿಸಿ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಸೋಮವಾರ ಪ್ರತಿಭಟನೆ ನಡೆಸುವುದಾಗಿ ಗುಜರಾತ್ ಕಾಂಗ್ರೆಸ್ ಶನಿವಾರ ತಿಳಿಸಿದೆ.

ಮಾರುಕಟ್ಟೆ ಭದ್ರತೆಗೆ ಬದ್ಧ: ಸೆಬಿ

ನವದೆಹಲಿ: ಮಾರುಕಟ್ಟೆಯ ಭದ್ರತೆ ಕಾಯ್ದುಕೊಳ್ಳಲು ಬದ್ಧವಾಗಿರುವುದಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಶನಿವಾರ ಹೇಳಿದೆ. ಉದ್ಯಮ ಸಮೂಹವೊಂದಕ್ಕೆ ಸೇರಿದ ಷೇರುಗಳ ಬೆಲೆಯಲ್ಲಿ ಅತಿಯಾದ ಏರಿಳಿಕೆ ಕಾಣುತ್ತಿರುವುದನ್ನು ತಡೆಯಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುವುದಾಗಿಯೂ ಅದು ತಿಳಿಸಿದೆ.

ಒಂದು ವಾರದಿಂದ ಉದ್ಯಮ ಸಂಸ್ಥೆಯೊಂದರ ಷೇರುಗಳ ಬೆಲೆಯಲ್ಲಿ ಅಸಹಜವಾದ ಚಲನೆ ಆಗುತ್ತಿರುವುದನ್ನು ಗಮನಿಸಿರುವುದಾಗಿ ಎಂದು ಹೇಳಿಕೆಯಲ್ಲಿ ತಿಳಿಸಿದೆ. ಆದರೆ, ನಿರ್ದಿಷ್ಟವಾಗಿ ಅದಾನಿ ಸಮೂಹದ ಹೆಸರನ್ನು ಉಲ್ಲೇಖಿಸದೇ ಈ ಹೇಳಿಕೆ ನೀಡಿದೆ.

ಆದರೆ, ಅದಾನಿ ವಿಷಯದ ಹಿನ್ನೆಲೆಯಲ್ಲಿಯೇ ಸೆಬಿ ಈ ಹೇಳಿಕೆ ನೀಡಿದೆ ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ.

ಶೇ 0.94ರಷ್ಟು ಸಾಲ: ಎಕ್ಸಿಸ್ ಬ್ಯಾಂಕ್

ಅದಾನಿ ಸಮೂಹಕ್ಕೆ ನೀಡಿರುವ ಸಾಲವು ಬ್ಯಾಂಕ್‌ನ ಒಟ್ಟು ಸಾಲದ ಶೇ 0.94ರಷ್ಟು ಮಾತ್ರ ಇದೆ ಎಂದು ಎಕ್ಸಿಸ್ ಬ್ಯಾಂಕ್ ಶನಿವಾರ ತಿಳಿಸಿದೆ.

ಆಸ್ತಿ ಭದ್ರತೆ ಮತ್ತು ನಗದು ಹರಿವು ಮೌಲ್ಯಮಾಪನ ನಿಯಮಗಳಿಗೆ ಅನುಗುಣವಾಗಿ ಮರುಪಾವತಿ ಕರಾರು ಮಾಡಿಕೊಂಡೇ ಸಾಲ ನೀಡಲಾಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಬಂದರು, ವಿದ್ಯುತ್, ತೈಲ ವಿತರಣೆ, ರಸ್ತೆ ಮತ್ತು ವಿಮಾನ ನಿಲ್ದಾಣ ವಲಯಗಳಲ್ಲಿ ಕಾರ್ಯ-ನಿರ್ವಹಿಸುತ್ತಿರುವ ಸಮೂಹದ ಕಂಪನಿಗಳಿಗೆ ಸಾಲ ನೀಡಲಾಗಿದೆ ಎಂದು ಬ್ಯಾಂಕ್ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಬೆಟ್ಟೆ	36881-44229	ಕೋಕ	8799-23989
ಕೋಕ	12500-25000	ಬಿಳಿಗೋಟು	24109-34269	ಗೊರಬಲು	4199-33209
ಹಳತು	48000-54500	ಚಾಲಿ	32209-41501	ರಾಶಿ	30989-46269
ಹೊಸತು	22500-40000	ಕೆಂಪುಗೋಟು	32860-33531	**ತಿಪಟೂರು ಕೊಬ್ಬರಿ**	
ಕಾರ್ಕಳ		ರಾಶಿ	40639-45869	ಕನಿಷ್ಠ	10000
ಹೊಸತು	30000-40000	**ಸೊರಬ**		ಗರಿಷ್ಠ	11150
ಹಳತು	40000-50000	ಬೆಟ್ಟೆ	32989-36809	ಮಾದರಿ	11000
ಶಿರಸಿ		ಚಾಲಿ	33091-34891		

ಮತ್ತೊಂದು ಚೀನಿ ಶಂಕಿತ ಬೇಹುಗಾರಿಕೆ ಬಲೂನ್ ಪತ್ತೆ

ವಾಷಿಂಗ್ಟನ್ (ಪಿಟಿಐ): ಲ್ಯಾಟಿನ್ ಅಮೆರಿಕದಲ್ಲಿ ಚೀನಾದ ಮತ್ತೊಂದು ಶಂಕಿತ ಬೇಹುಗಾರಿಕೆಯ ಬಲೂನು ಹಾರಾಟ ನಡೆಸುತ್ತಿದೆ ಎಂದು ಪೆಂಟಗನ್ ತಿಳಿಸಿದೆ.

ಮೊಂಟಾನಾದ ವಾಯು ಪ್ರದೇಶದಲ್ಲಿ ಚೀನಿ ಬೇಹುಗಾರಿಕೆಯ ಬಲೂನ್ ಪತ್ತೆಯಾದ ಒಂದು ದಿನದ ಬಳಿಕ ಚೀನಾದ ಮತ್ತೊಂದು ಬಲೂನ್ ಲ್ಯಾಟಿನ್ ಅಮೆರಿಕದಲ್ಲಿ ಹಾದು ಹೋಗುತ್ತಿರುವುದನ್ನು ಪೆಂಟಗನ್ ಪತ್ತೆ ಹಚ್ಚಿದೆ.

ಇದರ ಬೆನ್ನಲ್ಲೆ ಪ್ರತಿಭಟನಾರ್ಥವಾಗಿ ಅಮೆರಿಕವು ತನ್ನ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರ ಉದ್ದೇಶಿತ ಚೀನಾ ಪ್ರವಾಸ ಮುಂದೂಡಿದೆ.

'ಬಲೂನ್ ಲ್ಯಾಟಿನ್ ಅಮೆರಿಕದಲ್ಲಿ ಹಾರಾಟ ನಡೆಸುತ್ತಿರುವ ವರದಿಗಳನ್ನು ನೋಡುತ್ತಿದ್ದೇವೆ. ಇದು ಚೀನಾದ ಮತ್ತೊಂದು ಶಂಕಿತ ಬೇಹುಗಾರಿಕೆಯ ಬಲೂನ್ ಎಂದು ನಿರ್ಣಯಿಸಿದ್ದೇವೆ. ಈಗ ಹೆಚ್ಚಿನ ಮಾಹಿತಿ ನೀಡಲು ಸಾಧ್ಯವಿಲ್ಲ' ಎಂದು ಪೆಂಟಗನ್ ಪತ್ರಿಕಾ ಕಾರ್ಯದರ್ಶಿ ಬ್ರಿಗೇಡಿಯರ್ ಜನರಲ್ ಪ್ಯಾಟ್ ರೈಡರ್ ಶುಕ್ರವಾರ ಹೇಳಿದ್ದಾರೆ.

ದಕ್ಷಿಣ ಕೊರಿಯಾದ ವಿದೇಶಾಂಗ ಸಚಿವ ಪಾರ್ಕ್ ಜಿನ್ ಜತೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬ್ಲಿಂಕನ್, 'ಅಮೆರಿಕದಲ್ಲಿ ಬೇಹುಗಾರಿಕೆ ಬಲೂನ್ ಹಾರಾಟ ಮಾಡುತ್ತಿರುವುದು ದೇಶದ ಸಾರ್ವಭೌಮತ್ವ ಮತ್ತು ಅಂತರರಾಷ್ಟ್ರೀಯ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಕಿಡಿಕಾರಿದ್ದಾರೆ.

ಬೇಹುಗಾರಿಕೆ ಆರೋಪ ನಿರಾಕರಿಸಿದ ಚೀನಾ (ತೈಪೆ, ತೈವಾನ್ ವರದಿ) (ಎಪಿ): ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಚೀನಾ ಪ್ರವಾಸ ಮುಂದೂಡಿರುವುದಕ್ಕೆ ಅಷ್ಟೇನು ಮಹತ್ವ ನೀಡದ ಚೀನಾ, ತನ್ನ ಮೇಲಿನ ಬೇಹುಗಾರಿಕೆ ಆರೋಪವನ್ನು ನಿರಾಕರಿಸಿದೆ.

'ಇದು ನಾಗರಿಕ ಹವಾಮಾನ ಪರೀಕ್ಷೆ ಮತ್ತು ಇತರ ವೈಜ್ಞಾನಿಕ ಉದ್ದೇಶಗಳಿಗೆ ಹಾರಿಬಿಟ್ಟಿರುವ ವಾಯುನೌಕೆ (ಬಲೂನ್)' ಎಂದು ಚೀನಾ ಹೇಳಿದೆ.

'ಬಲೂನ್ ಹಾರಾಟ ತನ್ನ ನಿಯಂತ್ರಣದಲ್ಲಿಲ್ಲ. ಚೀನಾ ಯಾವಾಗಲೂ ಅಂತರರಾಷ್ಟ್ರೀಯ ಕಾನೂನನ್ನು ಕಟ್ಟುನಿಟ್ಟಾಗಿ ಅನುಸರಿಸಿದೆ' ಎಂದು ಅದು ಪ್ರಕಟಣೆಯಲ್ಲಿ ತಿಳಿಸಿದೆ.

ವಿಕಿಪೀಡಿಯಾಗೆ ಪಾಕಿಸ್ತಾನ ನಿರ್ಬಂಧ

ಇಸ್ಲಾಮಾಬಾದ್ (ಪಿಟಿಐ): ಆಕ್ಷೇಪಾರ್ಹ ಅಥವಾ ಧರ್ಮನಿಂದನೆಯ ಮಾಹಿತಿ ತೆಗೆದುಹಾಕದ ಕಾರಣ, ಆನ್‌ಲೈನ್ ವಿಶ್ವಕೋಶ 'ವಿಕಿಪೀಡಿಯಾ'ವನ್ನು ಪಾಕಿಸ್ತಾನ ನಿರ್ಬಂಧಿಸಿದೆ ಎಂದು ಪಾಕ್‌ನ ದೂರಸಂಪರ್ಕ ಪ್ರಾಧಿಕಾರ (ಪಿಟಿಎ) ಶನಿವಾರ ತಿಳಿಸಿದೆ.

48 ಗಂಟೆಗಳ ಕಾಲ ವಿಕಿಪೀಡಿಯಾ ಸೇವೆಯನ್ನು ಅಮಾನತ್ತಿನಲ್ಲಿಟ್ಟಿದ್ದ ಪಿಟಿಎ, ಆಕ್ಷೇಪಾರ್ಹ ಮಾಹಿತಿಯನ್ನು ತೆಗೆಯದಿದ್ದರೆ ಸೇವೆಯನ್ನು ನಿರ್ಬಂಧಿಸುವುದಾಗಿ ಎಚ್ಚರಿಕೆ ನೀಡಿತ್ತು. ಈ ಎಚ್ಚರಿಕೆಯನ್ನು ವಿಕಿಪೀಡಿಯಾ ಪಾಲಿಸದ ಕಾರಣ ನಿರ್ಬಂಧ ಹೇರಲಾಗಿದೆ. ಆಕ್ಷೇಪಾರ್ಹ ಮಾಹಿತಿಯನ್ನು ವಿಕಿಪೀಡಿಯಾ ತೆಗೆದ ಬಳಿಕ ಈ ನಿರ್ಧಾರವನ್ನು ಪುನರ್‌ವಿಮರ್ಶೆಗೆ ಒಳಪಡಿಸಲಾಗುವುದು ಎಂದು ಪಿಟಿಎ ವಕ್ತಾರರು ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ವಿಕಿಪೀಡಿಯಾ ಫೌಂಡೇಷನ್, 'ವಿಕಿಪೀಡಿಯಾದಲ್ಲಿ ಯಾವ ಮಾಹಿತಿ ಸೇರಿಸಲಾಗಿದೆ ಅಥವಾ ಅದನ್ನು ಹೇಗೆ ನಿರ್ವಹಿಸಬೇಕು ಎಂಬ ಕುರಿತು ನಿರ್ಧರಿಸಿಲ್ಲ' ಎಂದು ತಿಳಿಸಿದೆ.

ವಿಕಿಪೀಡಿಯಾ ತಾಣದಲ್ಲಿ ಯಾವ ಮಾಹಿತಿಯನ್ನು ಪಡೆಯಲು ಹೆಚ್ಚಿನ ಜನರು ಆಸಕ್ತಿ ತೋರುತ್ತಾರೋ ಅಂಥ ಮಾಹಿತಿಗಳು ತಾಣದಲ್ಲಿ ಪ್ರಕಟವಾಗುತ್ತವೆ. ಇವು ಹೆಚ್ಚಾಗಿ ನಿಷ್ಪಕ್ಷಪಾತ ಮಾಹಿತಿ ಆಗಿರುತ್ತವೆ.

ಪಾಕಿಸ್ತಾನದ ಜನರಿಗೆ ವಿಕಿಪೀಡಿಯಾ ಮತ್ತು ವಿಕಿಮೀಡಿಯಾಗಳ ಲಭ್ಯವಾಗುತ್ತಿಲ್ಲ ಎಂದು ಆಂತರಿಕ ವರದಿಗಳಿಂದ ಶುಕ್ರವಾರ ತಿಳಿಯಿತು. ಪಾಕಿಸ್ತಾನದ ಜನರಿಗೆ ಮಾಹಿತಿಗಳು ಉಚಿತವಾಗಿ ಲಭ್ಯವಾಗುವ ನಿಟ್ಟಿನಲ್ಲಿ ಸರ್ಕಾರವು ವಿಕಿಪೀಡಿಯಾ ಫೌಂಡೇಷನ್ ಜೊತೆ ಕೈಜೋಡಿಸುತ್ತದೆ ಎಂಬ ವಿಶ್ವಾಸವಿದೆ ಎಂದು ವಿಕಿಪೀಡಿಯಾ ಹೇಳಿದೆ.

'ಕುಸಿತದ ಅಂಚಿನಲ್ಲಿ ಪಾಕ್ ತೈಲೋದ್ಯಮ'

ಇಸ್ಲಾಮಾಬಾದ್ (ಪಿಟಿಐ): ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ಪಾಕಿಸ್ತಾನದಲ್ಲಿ ತೈಲೋದ್ಯಮ ಪತನದ ಅಂಚಿನಲ್ಲಿದೆ ಎಂದು ಇಂಧನ ತೈಲ ಸಂಸ್ಥೆಗಳು ಸರ್ಕಾರಕ್ಕೆ ಎಚ್ಚರಿಕೆ ನೀಡಿವೆ. ಪಾಕಿಸ್ತಾನದ ರೂಪಾಯಿ ಬೆಲೆ ಕುಸಿಯುತ್ತಲೇ ಇರುವುದು ಇದಕ್ಕೆ ಕಾರಣ ಎಂದು ತೈಲೋದ್ಯಮ ಹೇಳಿದೆ.

ಪಾಕಿಸ್ತಾನಕ್ಕೆ ಹಣಕಾಸು ನೆರವನ್ನು ಪುನಃ ನೀಡಲು ಐಎಂಎಫ್ ಕೆಲ ಷರತ್ತುಗಳನ್ನು ವಿಧಿಸಿದೆ.

ಎಫ್‌ಐಐ: ವಾರದಲ್ಲಿ ₹ 14,106 ಕೋಟಿ ಹಿಂತೆಗೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಭಾರತದ ಷೇರುಪೇಟೆಯಿಂದ ಬಂಡವಾಳ ಹಿಂದಕ್ಕೆ ಪಡೆಯುವುದನ್ನು ಮುಂದುವರಿಸಿದ್ದಾರೆ. ಶುಕ್ರವಾರಕ್ಕೆ ಕೊನೆಗೊಂಡ ವಾರದಲ್ಲಿ ₹ 14,106 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಇದರಿಂದಾಗಿ ಜನವರಿ 2 ರಿಂದ ಫೆಬ್ರುವರಿ 3ರವರೆಗೆ ನಡೆದಿರುವ ವಹಿವಾಟಿನಲ್ಲಿ ಒಟ್ಟಾರೆ ₹43,338 ಕೋಟಿ ಮೊತ್ತದ ಷೇರುಗಳನ್ನು ಮಾರಾಟ ಮಾಡಿದಂತಾಗಿದೆ.


'ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಭಾರತದ ಮಾರುಕಟ್ಟೆಯಲ್ಲಿ ಲಾಭ ಗಳಿಸಿಕೊಂಡು ಆ ಮೊತ್ತವನ್ನು ಮಾರುಕಟ್ಟೆ ಬಂಡವಾಳ ಮೌಲ್ಯ ಕಡಿಮೆ ಇರುವ ದೇಶಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಹೀಗಾಗಿ ಭಾರತದ ಷೇರುಪೇಟೆಯು ಈ ವರ್ಷದಲ್ಲಿ ಈವರೆಗಿನ ವಹಿವಾಟಿನಲ್ಲಿ ಶೇ 1.89ರಷ್ಟು ಇಳಿಕೆ ಕಂಡಿದೆ. ಇದೇ ಅವಧಿಯಲ್ಲಿ ಚೀನಾದ ಮಾರುಕಟ್ಟೆ ಶೇ 4.71, ಹಾಂಗ್‌ಕಾಂಗ್ ಶೇ 7.52 ಮತ್ತು ದಕ್ಷಿಣ ಕೊರಿಯಾ ಷೇರುಪೇಟೆ ಶೇ11.45ರಷ್ಟು ಗಳಿಕೆ ಕಂಡುಕೊಂಡಿವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಸಾಲಪತ್ರ ಮಾರುಕಟ್ಟೆ ಮೇಲೆಯೂ ಬಂಡವಾಳ ತೊಡಗಿಸಲು ವಿದೇಶಿ ಹೂಡಿಕೆದಾರರು ಅಷ್ಟಾಗಿ ಆಸಕ್ತಿ ತೋರಿಸುತ್ತಿಲ್ಲ' ಎಂದು ಹೇಳಿದರು.

'ಈ ಬಾರಿಯ ಕೇಂದ್ರ ಬಜೆಟ್ ಮಾರುಕಟ್ಟೆಯ ಪಾಲಿಗೆ ನಿರೀಕ್ಷೆಗಿಂತಲೂ ಉತ್ತಮವಾಗಿತ್ತು. ಆದರೆ, ಅದಾನಿ ಸಮೂಹ ಕಂಪನಿಗಳ ಷೇರು ಕುಸಿತದಿಂದಾಗಿ ಮಾರುಕಟ್ಟೆಗೆ ಗಳಿಕೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಸಮೂಹದ ಕಂಪನಿಗಳಿಗೆ ಸಾಲ ನೀಡಿರುವ ಬ್ಯಾಂಕ್‌ಗಳ ಷೇರುಗಳ ಮೌಲ್ಯ ಇಳಿಕೆ ಕಾಣುವಂತಾಯಿತು. ಭಾರತದ ಬ್ಯಾಂಕಿಂಗ್ ವ್ಯವಸ್ಥೆಯು ಸ್ಥಿರವಾಗಿದೆ ಎನ್ನುವ ಆರ್‌ಬಿಐನ ಹೇಳಿಕೆಯು ಬ್ಯಾಂಕಿಂಗ್ ಷೇರುಗಳಲ್ಲಿ ತುಸು ಚೇತರಿಕೆಗೆ ನೆರವಾಯಿತು' ಎಂದು ವಿಜಯಕುಮಾರ್ ತಿಳಿಸಿದರು.

ದೇಶಿ ಸಾಂಸ್ಥಿಕ ಹೂಡಿಕೆದರರು ಜನವರಿ 2 ರಿಂದ ಫೆಬ್ರುವರಿ 3ರವರೆಗಿನ ವಹಿವಾಟಿನಲ್ಲಿ ₹37,490 ಕೋಟಿಗೂ ಅಧಿಕ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಎಫ್‌ಐಐ ಹೂಡಿಕೆ ವಿವರ (ಕೋಟಿಗಳಲ್ಲಿ)



ಮುಂಬೈ ಧಾರಣೆ

ಶೇಂಗಾ

4–2-2023

ಜಾವಾ 70/80(ಹೊಸ)	12250-12300
ಜಾವಾ 80/90(ಹೊಸ)	11250-11300
ದಪ್ಪ ಮಧ್ಯಪ್ರದೇಶ(ಹೊಸ)	10650-10750
ದಪ್ಪ ಗುಜರಾತ್(ಹೊಸ)	11700-11800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1060 (1070)
ಪಾಮ್ ವಾರದ ಡೆಲಿವರಿ	919 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	1060 (1060)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,850 (57,200)
ಬೆಳ್ಳಿ ಕೆ.ಜಿ 67,350 (69,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಬೆಂಗಲೂರು	₹12000-15000
ಕೆ.ಆರ್. ಪೇಟೆ	₹8308-8308
ತುರುವೇಕೆರೆ	₹11000-11000

ಗೋಧಿ ಬೆಲೆ ಶೇ 10ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಗೋಧಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ನಿರ್ಧಾರ ತೆಗೆದುಕೊಂಡ ಬಳಿಕ ಒಂದು ವಾರದಲ್ಲಿ ಬೆಲೆಯು ಶೇ 10ಕ್ಕೂ ಹೆಚ್ಚು ಇಳಿಕೆ ಕಂಡಿದೆ ಎಂದು ಸರ್ಕಾರ ಹೇಳಿದೆ.

ಸರ್ಕಾರದ ಸಂಗ್ರಹದಲ್ಲಿ ಇರುವ 30 ಲಕ್ಷ ಟನ್ ಗೋಧಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ನಿರ್ಧರಿಸಲಾಗಿದೆ.

ಭಾರತೀಯ ಆಹಾರ ನಿಗಮವು ಈವರೆಗೆ 9.2 ಲಕ್ಷ ಟನ್ ಗೋಧಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದೆ. ಪ್ರತಿ ಕ್ವಿಂಟಲ್‌ಗೆ ಸರಾಸರಿ ₹2,474ರಂತೆ ಮಾರಾಟ ಮಾಡಲಾಗಿದೆ.

ತಗ್ಗಿದ ಪೇಟಿಎಂ ನಷ್ಟ

ನವದೆಹಲಿ (ಪಿಟಿಐ): ಪೇಟಿಎಂನ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್ಸ್ ಡಿಸೆಂಬರ್ ತ್ರೈಮಾಸಿಕದಲ್ಲಿ ₹392 ಕೋಟಿ ನಷ್ಟ ಅನುಭವಿಸಿದೆ.


ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಷ್ಟವು ₹778 ಕೋಟಿಯಷ್ಟು ಇತ್ತು. ಇದಕ್ಕೆ ಹೋಲಿಸಿದರೆ ನಷ್ಟವು ಕಡಿಮೆ ಆಗಿದೆ.

ಕಂಪನಿಯ ವರಮಾನ ₹1,456 ಕೋಟಿಯಿಂದ ₹2,062 ಕೋಟಿಗೆ ಶೇ42ರಷ್ಟು ಹೆಚ್ಚಾಗಿದೆ.

ಪ್ರಜಾವಾಣಿ

ಭಾನುವಾರದ ಪುರವಣಿ

ಭಾನುವಾರ, 5 ಫೆಬ್ರುವರಿ 2023




‘ಕಲಾಸರಸ್ವತಿಯ ಮುಂದೆ ನಾನೊಬ್ಬ ಜ್ಞಾನದಾಹಿ’ 12



ಸಮನಾರ್ & ಜಿಗರ್‌ಥಂಡಾ! 13

ಅಲೆ ಬುಡಿಯೆರ್...



ಮೂಡುಬಿದಿರೆ ಕೋಟಿ–ಚೆನ್ನಯ ಜೋಡುಕೆರೆ ಕಂಬಳದ ರೋಚಕ ನೋಟ
ಚಿತ್ರ : ಲಕ್ಷ್ಮೀಕಾಂತ್ ಆರ್.

ತುಳುನಾಡಿನಲ್ಲಿ ಈಗ ಕಂಬಳದ ಋತು. ಅಲೆ ಬುಡಿಯೆರ್ (ಅಗೋ ಬಿಟ್ಟರು) ಎಂಬ ಘೋಷವಾಕ್ಯ ಜೋರಾಗಿ ಕೇಳಿಬರುತ್ತಿರುವ ಈ ಹೊತ್ತಿನಲ್ಲಿ ಕಂಬಳದ ನೈಜ ‘ಸೆಲೆಬ್ರಿಟಿ’ಗಳ ಲೋಕದಲ್ಲಿ ಒಂದು ಸುತ್ತು...

ಗಣೇಶ ಚಂದನಶಿವ

ಹಸಿರ ಸಿರಿಯ ಮಧ್ಯದಲ್ಲಿ ವಿಶಾಲ ಪ್ರದೇಶದಲ್ಲಿ ಹರಡಿಕೊಂಡಿರುವ ಗುತ್ತು ಮನೆ (ವಾಡೆ) ಮಾದರಿಯ ಸುಂದರ ಕಟ್ಟಡ. ಶುಭ್ರ ನೀರಿನಿಂದ ಕಂಗೊಳಿಸುವ ದೊಡ್ಡ ಈಜುಗೊಳ. ಪಕ್ಕದಲ್ಲೇ ವಾಕಿಂಗ್ ಟ್ರ್ಯಾಕ್ (ಕರೆ – ಕಂಬಳ ಮಾದರಿ ಟ್ರ್ಯಾಕ್). ಅಲ್ಲಿರುವ ‘ಸೆಲಿಬ್ರಿಟಿ’ಗಳಿಗೆ ಸೇವಕರಿಂದ ಅಚ್ಚುಕಟ್ಟಿನ ಮತ್ತು ಶ್ರದ್ಧೆಯ ಸೇವೆ. ಊಟಕ್ಕೆ ಪೌಷ್ಟಿಕ ಆಹಾರದ ಜೊತೆ ಋತುಮಾನಕ್ಕೆ ತಕ್ಕಂತೆ ಹಣ್ಣು–ಹಂಪಲು ಸಮಾರಾಧನೆ ಬೇರೆ. ಬೆಳಿಗ್ಗೆ–ಸಂಜೆ ‘ವ್ಯಾಯಾಮ’. ಅಷ್ಟೇ ಅಲ್ಲ ಮಾರ್ರೆ, ನಿತ್ಯವೂ ಎಣ್ಣೆಯ ಮಸಾಜ್ ಸಹ ಉಂಟು.

ತುಳುನಾಡಿನಲ್ಲಿ ಈಗ ಕಂಬಳ ಸಂಭ್ರಮ. ಕಂಬಳದ ಕೋಣಗಳೇ ಇಲ್ಲಿಯ ‘ಸೆಲಿಬ್ರಿಟಿ’ಗಳು; ಕೋಣ ಓಡಿಸುವವರಿಗೋ ‘ಜಾಕಿ’ಗಳ ಪಟ್ಟ. ಕಂಬಳಕ್ಕಾಗಿ ಕೋಣ ಸಾಕುವುದು ಮಾಲೀಕರಿಗೆ ಪ್ರತಿಷ್ಠೆಯ ವಿಷಯ; ಶ್ರೀಮಂತಿಕೆಯ ಸಂಕೇತವೂ ಹೌದು. ಆ ಕೋಣಗಳು ಕಂಬಳದಲ್ಲಿ ಪದಕ ಗೆದ್ದುಕೊಟ್ಟಂತೆಲ್ಲ ಅವರ ಕೀರ್ತಿಯ ಕಿರೀಟಕ್ಕೆ ಗರಿಗಳು ಸೇರುತ್ತ ಹೋಗುತ್ತವೆ.

ಕೋಣ ಸಾಕುವ ಮಾಲೀಕರಿಗೆ ಕೆಲಸಗಾರರು ‘ಧಣಿ’ ಎಂದೇ ಕರೆಯುತ್ತಾರೆ. ಕೋಣ ಸಾಕಲು ಜಾತಿ–ಧರ್ಮದ ಸೋಂಕಿಲ್ಲ. ಆದರೂ, ಇವರಲ್ಲಿ ಗುತ್ತು ಮನೆತನದವರೇ ಹೆಚ್ಚು.

ಈ ಕೋಣಗಳ ಮೇಲೆ ಮಾಲೀಕರಿಗೋ ತಮ್ಮ ಮಕ್ಕಳಿಗಿಂತ ಹೆಚ್ಚು ಪ್ರೀತಿ. ಒಂದೊಮ್ಮೆ ಮಕ್ಕಳು–ಮನೆಯವರಿಗೆ ಏನಾದರೂ ಕೊರತೆ ಮಾಡಬಹುದು. ಆದರೆ, ತಾವು ಸಾಕುವ ಕೋಣಗಳಿಗೆ ಯಾವುದೂ ಕಡಿಮೆಯಾಗದಂತೆ ಕಾಳಜಿ ವಹಿಸುತ್ತಾರೆ. ಒಂದು ಜೋಡಿ ಕೋಣಗಳ ನಿರ್ವಹಣೆಗೆ ವರ್ಷಕ್ಕೆ ಅಂದಾಜು ₹15 ಲಕ್ಷದವರೆಗೆ ಖರ್ಚಾಗುತ್ತದೆ ಎನ್ನುವುದು ಕೆಲ ಕೋಣಗಳ ಮಾಲೀಕರು ಹೆಮ್ಮೆಯಿಂದ ಹೇಳುವ ಮಾತು.

ಉತ್ತರ ಕರ್ನಾಟಕ ಭಾಗದ ಮನೆಗಳಲ್ಲಿ ಪೈಲ್ವಾನರನ್ನು ಬೆಳೆಸುವಂತೆ ಕರಾವಳಿ ಭಾಗದಲ್ಲಿ ಕಂಬಳದ ಕೋಣಗಳನ್ನು ಸಲಹುತ್ತಾರೆ. ಉಡುಪಿ, ದಕ್ಷಿಣ ಕನ್ನಡ, ಕೇರಳದ ಕಾಸರಗೋಡು ಜಿಲ್ಲೆಗಳಲ್ಲಿ ಕಂಬಳದ ಸ್ಪರ್ಧೆಗಾಗಿಯೇ ಕೋಣಗಳನ್ನು ಸಾಕುವ 250ಕ್ಕೂ ಹೆಚ್ಚು ಮನೆತನಗಳು ಇವೆ. ಇನ್ನು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೆಸರುಗದ್ದೆಯಲ್ಲಿ ಓಡಿಸುವ ಸಾಂಪ್ರದಾಯಿಕ ಕಂಬಳಗಳೂ ನಡೆಯುತ್ತವೆ. ಇಂತಹ ಸಾಂಪ್ರದಾಯಿಕ ಕಂಬಳಗಳಲ್ಲಿ ಪಾಲ್ಗೊಳ್ಳುವ 500ಕ್ಕೂ ಹೆಚ್ಚು ಜೋಡಿ ಕೋಣಗಳು ಈ ಭಾಗದಲ್ಲಿವೆ. ಈ ಜಿಲ್ಲೆಗಳಲ್ಲಿ ಒಟ್ಟಾರೆ 1,500ಕ್ಕೂ ಹೆಚ್ಚು ಕೋಣಗಳನ್ನು ಸಾಕಲಾಗುತ್ತದೆ ಎಂಬುದು ಅಂದಾಜು.

ಕೋಣ ಸಾಕುವ ಪ್ರಮುಖ ಮನೆತನಗಳು ತಮ್ಮದೇ ಆದ ಲಾಂಛನ ಹೊಂದಿವೆ. ಉದಾಹರಣೆಗೆ ಉಡುಪಿ ಜಿಲ್ಲೆ ಮಣಿಪಾಲ ಬಳಿಯ ತಮ್ಮ ತೋಟದಲ್ಲಿ ಕೋಣ ಸಾಕಿರುವ ನಂದಳಿಕೆ ಶ್ರೀಕಾಂತ ಭಟ್ ಅವರ ಲಾಂಛನ ‘ಮಹಾಲಿಂಗೇಶ್ವರ ನಂದಳಿಕೆ’ ಎಂದಿದೆ. ಬೆಳ್ಳಿಯಿಂದ ತಯಾರಿಸಿದ ಲಾಂಛನವನ್ನು ಕೋಣಗಳಿಗೆ ಕಟ್ಟುವ ಹಣೆಪಟ್ಟಿಯಲ್ಲಿ ಅಳವಡಿಸಲಾಗಿರುತ್ತದೆ. ಸ್ಪರ್ಧೆಯ ವೇಳೆ ಕೋಣಗಳನ್ನು ಸಿಂಗಾರ ಮಾಡುವಾಗ ಇದನ್ನು ತೊಡಿಸಲಾಗುತ್ತದೆ.

11ನೇ ಪುಟಕ್ಕೆ...



ಮಣಿಪಾಲ ಬಳಿಯ ನಂದಳಿಕೆ ಶ್ರೀಕಾಂತ ಭಟ್ ಅವರ ತೋಟದ ಈಜುಗೊಳದಲ್ಲಿ ಕೋಣ ಈಜುತ್ತಿರುವುದು ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.



ಶ್ರೀನಿವಾಸ ಗೌಡ

ಜಾತಿಯೆಂಬ ನೋವಿಗೆ ಮುಲಾಮು ಹಚ್ಚುತ್ತಾ...

ಮಂಜುಶ್ರೀ ಎಂ. ಕಡಕೋಳ

ಜಾತಿ ಜಾತಿ ಅಂತ ಜಗಳ ಮಾಡ್ತೇವ್ರಿ
ಆದ್ರ, ಜಾತಿಯೊಳಗ ನಾವು ನೀತಿಮಾರ್ಗ ಮರ್ತೇ ಬಿಡ್ತೇವ್ರಿ (ಜನಪದ ಹಾಡು)

***

ನಗರ– ಪಟ್ಟಣಗಳಲ್ಲಿ ‘ಸಸ್ಯಾಹಾರಿಗಳಿಗೆ ಮಾತ್ರ’ ಎಂದು ಬಾಡಿಗೆ ಮನೆಗಳಿಗೆ ತಗಲಿ ಹಾಕಿರುವ ಬೋರ್ಡ್‌ಗಳು ತಿನ್ನುಣ್ಣುವ ಜಾತಿಗಳ ಜನರನ್ನು ಅವರ ಆಹಾರ ಪದ್ಧತಿಯ ಮೂಲಕ ಸಾಮಾಜಿಕ ಅಸ್ಪೃಶ್ಯರನ್ನಾಗಿ ಮಾಡಿದ್ದರೆ, ಗ್ರಾಮೀಣ ಭಾಗದಲ್ಲಿ ಈ ಅಸ್ಪೃಶ್ಯತೆ ಕಣ್ಣಿಗೆ ರಾಚುವಷ್ಟು ಢಾಳಾಗಿ ಗೋಚರಿಸುತ್ತದೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸದಿದ್ದರೂ ಚಿಂತೆಯಿಲ್ಲ. ಯಾಕಪ್ಪಾ ಹೀಗೆ ಮಾಡಿದೆ ಎಂದು ಕೇಳೋಣವೆಂದರೆ ಎಷ್ಟೋ ಕಡೆ ಪರಿಶಿಷ್ಟರಿಗೆ ದೇವಸ್ಥಾನ ಪ್ರವೇಶವೂ ನಿಷಿದ್ಧ.

ರಾಜ್ಯದ ಅಂಥದೊಂದ್ದು ಹಳ್ಳಿಯ ಯುವಕ ಡಿ.ಡಿ. ಸಂತೋಷ್ ತಮ್ಮ ಗ್ರಾಮದಲ್ಲಿ ಜಾತೀಯತೆಯ ವಿಷವರ್ತುಲವನ್ನು ಸದ್ದಿಲ್ಲದೇ ಮೀರಿದ ಬಗ್ಗೆ, ಅದು ಬೀರಿದ ಪರಿಣಾಮಗಳ ಬಗೆಗಿನ ಕಥನವಿದು. ಬದಲಾವಣೆಯ ಹರಿಕಾರ ಎಂದು ಈ ಬಾರಿ ‘ಡೆಕ್ಕನ್ ಹೆರಾಲ್ಡ್’ನ ಗೌರವಕ್ಕೆ ಪಾತ್ರವಾಗಿರುವ ಸಂತೋಷ್ ಅವರ ಬದುಕಿನ ಪುಟವೊಂದು ಇಲ್ಲಿದೆ.

***

ಬಾಲ್ಯದಿಂದಲೂ ಜಾತಿ ತಾರತಮ್ಯ ಮತ್ತು ಅದರ ನಿಗೂಢತೆಗಳ ಬಗ್ಗೆ ಆತಂಕವಿಟ್ಟುಕೊಂಡೇ ಬೆಳೆದವರು ಹಾಸನದ ಚನ್ನರಾಯಪಟ್ಟಣ ತಾಲ್ಲೂಕಿನ ದಿಂಡಗೂರಿನ ಸಂತೋಷ್. ಶಾಲೆಯಲ್ಲಿ ಪರಿಶಿಷ್ಟರ ಮಕ್ಕಳನ್ನು ನೋಡುವ ರೀತಿ, ಇತರ ಜಾತಿಗಳವರ ಮನೆಯ ಜಗಲಿ ಮೇಲೆ ಆಡುವಾಗ ಅಲ್ಲಿನ ಹಿರಿಯರು ವರ್ತಿಸುತ್ತಿದ್ದ ರೀತಿ, ಟಿ.ವಿ. ಇದ್ದವರ ಮನೆಯಲ್ಲಿ ‘ಚಿತ್ರಮಂಜರಿ’ ನೋಡಲು ಇತರ ಜಾತಿಯ ಮಕ್ಕಳು ಮನೆಯೊಳಗೆ ಹೋದರೆ, ಪರಿಶಿಷ್ಟರ ಹೈಕಳಿಗೆ ಬಾಗಿಲು, ಕಿಟಕಿಗಳೇ ಟಿ.ವಿ. ವಿಂಡೋಗಳಾದದ್ದು... ಇಂಥ ನೂರಾರು ಅನುಭವಗಳಾದರೂ ಅದನ್ನು ವಿಶ್ಲೇಷಿಸದ, ಹೊಟ್ಟೆ ತುಂಬಾ ಅನ್ನ ಸಿಕ್ಕರೆ ಸಾಕಪ್ಪ ಅನ್ನುವ ಮುಗ್ಧತೆ ಬಾಲ್ಯದಲ್ಲಿ ಅವರದಾಗಿತ್ತು.

ಆದರೆ, ಅದೇ ಮುಗ್ಧತೆ ಹಬ್ಬ–ಹರಿದಿನಗಳ ಹೊತ್ತಿಗೆ ಅವಮಾನವಾಗಿ ಬದಲಾಗುತ್ತಿತ್ತು. ಹಬ್ಬಗಳಲ್ಲಿ ಹೆತ್ತವರು ಇಲ್ಲವೆ ತಾನೇ ದೊಡ್ಡವರ ಮನೆಗಳಿಂದ ಊಟ ಇಸ್ಕೊಂಡು ಬರ್ತಾ ಇದ್ದದ್ದು ಖುಷಿಯ ಬದಲಿಗೆ ನೋವು ತರುತ್ತಿತ್ತು. ರಾತ್ರಿ ಯಾರ ಮನೆಯಲ್ಲಿ ಊಟ ಇಸ್ಕೊಂಡು ಬರ್ತಾ ಇದ್ರೋ ಅದೇ ಮನೆಯ ಹುಡುಗ ಮರುದಿನ ಬೆಳಿಗ್ಗೆ ಶಾಲೆಯಲ್ಲಿ ಸಹಪಾಠಿಯಾಗಿರುತ್ತಿದ್ದ. ಸ್ನೇಹಿತನ ಪಕ್ಕದಲ್ಲಿ ಕೂರಲು ಅವಮಾನದ ಭಾವ ಹಿಂದೇಟು ಹಾಕುತ್ತಿತ್ತು. ಆದರೆ, ಅದೇ ಹೊತ್ತಿಗೆ ನಾವೂ ಆರ್ಥಿಕವಾಗಿ ಸಬಲರಾದರೆ, ಇವರ ರೀತಿಯೇ ಬದುಕಬಹುದೆಂಬ ಕನಸನ್ನು ಮನಸು ಬಿತ್ತುತ್ತಿತ್ತು. ಇದಕ್ಕೆ ಏಕೈಕ ಮದ್ದು ಶಿಕ್ಷಣ ಎಂದು ತಿಳಿದ ಸಂತೋಷ, ಆಗಿನಿಂದಲೇ ಬಾಬಾಸಾಹೇಬ್ ಅಂಬೇಡ್ಕರ್ ಅವರ ಓದಿಗೆ ತೆರೆದುಕೊಂಡರು. 7ನೇ ತರಗತಿಯಲ್ಲಿ ಇಡೀ ದಿಂಡಗೂರಿಗೇ ಮೊದಲಿಗನಾಗಿ ತೇರ್ಗಡೆಯಾದರೂ ಮುಂದಿನ ವರ್ಷಗಳಲ್ಲಿ ಊರಿನ ಜಾತೀಯತೆಯ ಚಹರೆ ಮತ್ತಷ್ಟು ದಟ್ಟವಾಗಿ ಪ್ರತಿಭೆಗೆ ಕಂಟಕವಾಯಿತು.

ಅದೇ ಹೊತ್ತಿಗೆ ಗ್ರಾಮದಲ್ಲಿ ದಲಿತ ಚಳವಳಿಯ ಗಾಳಿ ಪಸರಿಸತೊಡಗಿತ್ತು. ಹೋರಾಟದ ಹಾಡುಗಳಿಗೆ ದನಿಯಾಗುತ್ತಿದ್ದ ಸಂತೋಷ್, ಗ್ರಾಮದ ಇತರರಂತೆ ಉನ್ನತ ಹುದ್ದೆಯ ಕನಸು ಕಾಣದೇ ಸಾಹಿತ್ಯದ ಓದಿಗೆ ತೆರೆದುಕೊಂಡು ಪದವಿಯಲ್ಲಿ ಇಂಗ್ಲಿಷ್ ಮೇಜರ್ ಆರಿಸಿಕೊಂಡರು. ಪಿಯುಸಿ ಓದುವಾಗಲೇ ತಾಯಿ ತೀರಿಹೋಗಿದ್ದರಿಂದ ಮನೆಯ ಆರ್ಥಿಕ ಪರಿಸ್ಥಿತಿಯೂ ಅಷ್ಟಕಷ್ಟೆ ಇತ್ತು. ಆದರೆ ಏನಾದರೂ ಮಾಡಬೇಕೆಂಬ ತುಡಿತ ಅವರನ್ನು ನೀನಾಸಂನತ್ತ ಕರೆದೊಯ್ಯಿತು. ಮುಂದೆ ನೀನಾಸಂ ಗಣೇಶ್ ಅವರ ‘ಜನಮನದಾಟ’ದಲ್ಲಿ ಅಂಬೇಡ್ಕರ್ ಪಾತ್ರವನ್ನೇ ಮಾಡುವ ಅವಕಾಶ ಸಿಕ್ಕಾಗ ಆಕಾಶವೇ ಕೈಗೆ ಸಿಕ್ಕಷ್ಟು ಸಂತಸ. ಈ ನಡುವೆ ಮೈಸೂರಿನ ರಂಗಾಯಣದಲ್ಲಿ ಒಂದು ವರ್ಷ ಉಪನ್ಯಾಸಕ ವೃತ್ತಿ. ನಾಟಕ ಕಲೆಯಲ್ಲಿ ಸ್ನಾತಕೋತ್ತರ ಪದವಿ. ರಂಗಕರ್ಮಿ ಯತೀಶ್ ಕೊಳ್ಳೇಗಾಲ ಅವರ ಸಲಹೆಯಂತೆ ಸ್ವಗ್ರಾಮದಲ್ಲೇ ಸಾಧನೆ ಮಾಡುವ ತವಕ. ‘ನೆಲದನಿ’ ಸಂಘಟನೆ ಕಟ್ಟಿ, ಮನೆಮನೆಗೆ ಅಂಬೇಡ್ಕರ್ ಅನ್ನುವ ವಿನೂತನ ಪ್ರಯೋಗದ ಮೂಲಕ ಜನಜಾಗೃತಿ. ದೇವನೂರ ಮಹಾದೇವ, ಪಿ. ಲಂಕೇಶ್ ಅವರ ಕಥೆಗಳನ್ನು ‘ಕಥಾದನಿ’ಯ ಮೂಲಕವೂ ತಲುಪಿಸಿದ್ದಾಯಿತು.

ಬದಲಾವಣೆಯ ಹರಿಕಾರರು ಎಂದು ‘ಡೆಕ್ಕನ್ ಹೆರಾಲ್ಡ್’ನಿಂದ ಗುರುತಿಸಲ್ಪಟ್ಟ ಚನ್ನರಾಯಪಟ್ಟಣದ ಸಂತೋಷ್, ತಮ್ಮೂರಿನಲ್ಲಿ ಜಾತಿ ತಾರತಮ್ಯದ ವಿರುದ್ಧ ಸದ್ದಿಲ್ಲದೆ ಕ್ರಾಂತಿ ಮಾಡಿದವರು. ದುರ್ಬಲ ವರ್ಗದವರಲ್ಲಿ ಸ್ವಾವಲಂಬನೆಯ ಕೆಚ್ಚನ್ನೂ ಮೂಡಿಸಿದವರು



ಹೋಟೆಲ್, ದೇಗುಲಕ್ಕಿಲ್ಲ ಪ್ರವೇಶ: 2020ರ ದಿನಗಳವು. ಹಳ್ಳಿಯಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ರಂಗೇರತೊಡಗಿತ್ತು. 15 ವರ್ಷಗಳಿಂದಲೂ ಪರಿಶಿಷ್ಟ ಜಾತಿಗೆ ಸಿಗದ ಪ್ರಾತಿನಿಧ್ಯ ಈ ಬಾರಿಯಾದರೂ ದಕ್ಕೀತೇ ಎಂಬ ಕನಸು ಮತ್ತೆ ನುಚ್ಚುನೂರು ಆಯಿತು. ಪರಿಶಿಷ್ಟ ಪಂಗಡಕ್ಕೆ ಮೀಸಲು ದೊರೆತ ಹಿಂದಿನ ಮರ್ಮ ಅವರು ಸ್ಪೃಶ್ಯರು ಎಂಬುದಾಗಿತ್ತು. ಅವರಿಗಿರುವ ದೇವಸ್ಥಾನಗಳ ಪ್ರವೇಶದ ಹಕ್ಕು ನಮಗೇಕಿಲ್ಲ ಎಂಬ ಪ್ರಶ್ನೆ ಮೂಡಿದ್ದೇ ತಡ, ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರ ಜತೆಗೆ ಚರ್ಚೆಯೂ ನಡೆಯಿತು. ಎಲೆಕ್ಷನ್ ಮುಗಿದ ಬಳಿಕ ಗ್ರಾಮಸ್ಥರೊಂದಿಗೆ ಚರ್ಚಿಸುವ ಭರವಸೆ ಸಿಕ್ಕಿತು. ಅಷ್ಟರೊಳಗೇ ನಡೆಯಬಾರದ್ದು ನಡೆದು ಹೋಯಿತು.

ಚುನಾವಣೆಯ ದಿನ ಗ್ರಾಮದ ಲಿಂಗಾಯತರ ಕ್ಯಾಂಟೀನ್‌ನಲ್ಲಿ ಚಹಾ ಕುಡಿಯುತ್ತಿದ್ದ ತಮ್ಮ ಸ್ನೇಹಿತರನ್ನು ಮಾತನಾಡಿಸಲೆಂದು ಸಂತೋಷ್ ಒಳಹೋಗಬೇಕೆನ್ನುವಷ್ಟರಲ್ಲಿ ಕೈಯೊಂದು ತಡೆದು, ದೊಡ್ಡ ದನಿಯೊಂದು ಕೇಳಿದ ನೆನಪಷ್ಟೆ. ‘ನಿಮ್ಮ ಜಾತಿಯವರಿಗೇನಿದ್ರೂ ಹೊರಗೆ ಮಾತ್ರ ಚಹಾ. ಒಳಗಲ್ಲ’ ಎಂದ ಕ್ಯಾಂಟೀನ್ ಮಾಲೀಕನ ಜಾತಿ ತಾರತಮ್ಯದ ನುಡಿಗಳು ನಡುರಾತ್ರಿಯಲ್ಲೂ ಸಂತೋಷ್ ಅವರನ್ನು ಬೆಚ್ಚಿಬೀಳಿಸುವಂತಾಯಿತು. ಅವಮಾನ, ನೋವಿನಿಂದ ಕುಗ್ಗಿಹೋದ ಸಂತೋಷ್ ಅವರ ಮನದಲ್ಲಿ ಉಳ್ಳವರ ಹೊಲದಲ್ಲಿ ಅಪ್ಪ–ಅಮ್ಮ ಜೀತದಾಳುಗಳಾಗಿ ದುಡಿದದ್ದು, ಜಗುಲಿಯಲ್ಲಿ ಅವರಿಗೆ ಪ್ರತ್ಯೇಕವಾಗಿ ಊಟ ನೀಡಿದ್ದು... ಹೀಗೆ ಒಂದೊಂದೇ ಘಟನೆಗಳ ಮೆರವಣಿಗೆ. ದೇವಸ್ಥಾನದ ಜತೆಗೆ ಹೋಟೆಲ್ ಪ್ರವೇಶವೂ ಆಗಲಿ ಎಂದು ಸಮುದಾಯದವರ ಜತೆಗೆ ತೀರ್ಮಾನಿಸಿ, ಸಂತೋಷ್ ಮತ್ತು ಇತರ ಯುವಕರ ಗುಂಪು ತಹಶೀಲ್ದಾರ್, ಪೊಲೀಸ್ ಅಧಿಕಾರಿಗಳ ಮೊರೆ ಹೋಯಿತು. ಗ್ರಾಮಕ್ಕೆ ಬಂದ ಅಧಿಕಾರಿಗಳ ಮುಂದೆ ಗ್ರಾಮಸ್ಥರಿಂದ ಮೌನವೇ ಉತ್ತರ. ಅಂದು 2021ರ ಸೆಪ್ಟೆಂಬರ್ 28. ಅಂತೂ– ಇಂತೂ ದೇವಸ್ಥಾನಗಳ ಪ್ರವೇಶ ನಡೆದೇ ಬಿಟ್ಟಿತು. ಆ ದಿನ ದಿಂಡಗೂರಿನ ಪರಿಶಿಷ್ಟ ಜಾತಿಯ ಹಿರಿಯ ಜೀವಗಳು ತಮ್ಮ ತಾತ, ಮುತ್ತಾತನ ಕಾಲದಿಂದಲೂ ತಮ್ಮ ಸಮುದಾಯದನ್ನು ದೇಗುಲ ಪ್ರವೇಶದಿಂದ ಜಾತೀಯ ವಿಷಕಾರುವ ಮನಸುಗಳು ತಡೆದಿದ್ದನ್ನು ನೆನಪಿಸಿಕೊಂಡು ಬಿಕ್ಕಿದವು. ಇತ್ತ ಜಾತಿ ತಾರತಮ್ಯಕ್ಕೆ ಕಾರಣವಾಗಿದ್ದ ಹೋಟೆಲ್ ಅನ್ನು ತಹಶೀಲ್ದಾರ್ ಮುಚ್ಚಿಸಿದರು.

‘ಪ್ರವೇಶ’ದ ಅಡ್ಡಪರಿಣಾಮಗಳು: ದೇಗುಲಕ್ಕೆ ಪ್ರವೇಶ ದೊರೆತ ಸಂತಸ ಸಂತೋಷ್ ಮತ್ತವರ ಗೆಳೆಯರ ಪಾಲಿಗೆ ಹೆಚ್ಚು ದಿನ ಉಳಿಯಲಿಲ್ಲ. ದೇಗುಲ ಪ್ರವೇಶದ ಅಡ್ಡಪರಿಣಾಮಗಳು ನಿಧಾನಕ್ಕೆ ಬೆಳಕಿಗೆ ಬರತೊಡಗಿದವು. ಆಗ ಮೂಗಷ್ಟೇ ಹಿಡಿದಿದ್ದ ಜಾತೀಯತೆ ಈಗ ಮೂಗಿನ ಜತೆಗೆ ಬಾಯನ್ನೂ ಒತ್ತಿ ಹಿಡಿದಿತ್ತು. ಹೊರಗಿನವರ ಕಣ್ಣಿಗೆ ಆದರ್ಶ ಗ್ರಾಮವಾಗಿದ್ದ ಊರು ಬೂದಿ ಮುಚ್ಚಿದ ಕೆಂಡದಂತಾಗಿತ್ತು. ಪರಿಶಿಷ್ಟ ಹೆಣ್ಣುಮಕ್ಕಳ ಕೂಲಿಗೆ ಕತ್ತರಿ ಬಿತ್ತು. ಸರ್ಕಾರದ ಮರ್ಜಿ ಬಿಟ್ಟು, ಕೆಲ ಹಿತೈಷಿಗಳ ನೆರವಿನಿಂದ ತನ್ನೂರಿನ ಹೆಣ್ಣುಮಕ್ಕಳಿಗೆ ಸ್ವಾಭಿಮಾನದ ಬದುಕು ಕಟ್ಟಿಕೊಡಲು ಯತ್ನಿಸುತ್ತಿರುವ ಸಂತೋಷ್ ಅವರ ಮನದಲ್ಲಿ ಜಾತಿಯೆಂಬ ಗಾಯ ಇನ್ನೂ ಮಾದಿಲ್ಲ.



ಅಂಬೇಡ್ಕರ್ ಕುರಿತ ನಾಟಕದಲ್ಲಿ ಬಾಬಾ ಸಾಹೇಬರಾಗಿ...

‘ನನಗೆ, ಸೀತೆ ಸಿಂಗಲ್ ಪೇರೆಂಟ್ ಆಗಿ ಕಾಣ್ತಾಳೆ’



ವಿಶಾಖ ಎನ್.

ಸಂದರ್ಶನ

ಅನಾಮಿಕಾ ಹಿಂದಿ ಕಾದಂಬರಿಕಾರ್ತಿ, ಕವಯಿತ್ರಿ. ದೆಹಲಿ ವಿಶ್ವವಿದ್ಯಾಲಯದ ವ್ಯಾಪ್ತಿಯ ಕಾಲೇಜಿನಲ್ಲಿ ಅವರು ಇಂಗ್ಲಿಷ್ ಪಾಠ ಹೇಳುವ ಪ್ರೊಫೆಸರ್. ದೇಶದ ಹಲವು ಬಗೆಯ ಸಾಹಿತ್ಯದ ಕುತೂಹಲಿ. ಕನ್ನಡದಲ್ಲಿ ಗಿರೀಶ ಕಾರ್ನಾಡರು ಬರೆದಿದ್ದ ‘ನಾಗಮಂಡಲ’ ನಾಟಕವನ್ನು ಹಿಂದಿಗೆ ಜರ್ನಲ್ ಒಂದಕ್ಕಾಗಿ ಅನುವಾದಿಸಿರುವ ಅನಾಮಿಕಾ, ವೈದೇಹಿ ಅವರ ಸಣ್ಣಕಥೆಗಳನ್ನೂ ಆ ಭಾಷೆಗೆ ಅನುವಾದಿಸಿದ್ದಾರೆ. ರಂಗಕರ್ಮಿ, ಚಳವಳಿಕಾರ ಪ್ರಸನ್ನ ಅವರ ಕೆಲವು ಬರಹಗಳನ್ನೂ ಹಿಂದಿಗೆ ತಂದ ಖುಷಿ ಅವರದ್ದು. ‘ತೃನ್ ಧರಿ ಓಟ್’ ಎಂಬ ತಮ್ಮ ಕೃತಿಯಲ್ಲಿ ಅವರು ಸೀತೆಯ ಪಾತ್ರವನ್ನು ಸ್ತ್ರೀ ನೆಲೆಗಟ್ಟಿನಲ್ಲಿ ಕಟ್ಟಿಕೊಟ್ಟಿದ್ದಾರೆ. ಜೈಪುರ ಸಾಹಿತ್ಯೋತ್ಸವದಲ್ಲಿ ಅದರ ಒಂದಿಷ್ಟು ಹೂರಣವನ್ನು ಕೂಡ ಅವರು ಹಂಚಿಕೊಂಡರು. ಅನುವಾದ, ಕಾವ್ಯ ಹಾಗೂ ಹೊಸ ಕಾದಂಬರಿಯ ಕುರಿತು ಅವರು ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಂಡರು.

- **ಇಂಗ್ಲಿಷ್ ಭಾಷೆ ಹಾಗೂ ಭಾರತೀಯ ಭಾಷೆಗಳ ಕೃತಿಗಳ ಸಮಕಾಲೀನ ಸ್ಥಿತಿಯನ್ನು ಅನುವಾದಕಿಯಾಗಿ ಹೇಗೆ ವಿಶ್ಲೇಷಿಸುವಿರಿ?**

ಭಾರತೀಯರಲ್ಲಿ ನಾವು ಬಹುತೇಕರು ಶಾಲಾ ಶಿಕ್ಷಣವನ್ನು ತಮ್ಮ ಶಕ್ತ್ಯಾನುಸಾರ ಹತ್ತಿರದ ಶಾಲೆಗಳಲ್ಲಿ ಪಡೆಯುತ್ತೇವೆ. ಇಂಗ್ಲಿಷ್ ಮುಖ್ಯವಾಗಿರುವ ಕಡೆ ಇರುವ ಪಬ್ಲಿಕ್ ಶಿಕ್ಷಣ ವ್ಯವಸ್ಥೆಯ ಏಕರೂಪತೆ ನಮ್ಮಲ್ಲಿ ಇರಲು ಸಾಧ್ಯವಿಲ್ಲ. ನಾವೆಲ್ಲ ಇಂಗ್ಲಿಷ್ ಅನ್ನು ಸ್ವಲ್ಪ ದೂರದಲ್ಲೇ ನಿಂತು ಕಲಿಯುತ್ತೇವೆ. ಅದನ್ನು ಸಂವಹನ ಭಾಷೆಯಾಗಿ ಸ್ವೀಕರಿಸುತ್ತೇವೆ. ನಮ್ಮ ಮಾತೃಭಾಷೆಯಂತೂ ಸಿದ್ಧಿಸುತ್ತದೆ. ಅನುವಾದ ಮಾಡುವಾಗ ನಮಗೆ ಇಂಗ್ಲಿಷ್ ಅಥವಾ ಇನ್ನೊಂದು ಪ್ರಾದೇಶಿಕ ಭಾಷೆಗೆ ಧ್ವನ್ಯಾರ್ಥವನ್ನೆಲ್ಲ ಹಿಡಿದು, ಸೋಸಿ, ಹೊಸತೇ ಆಗಿ ನೀಡಬೇಕಾದ ಸವಾಲು ಎದುರಾಗುತ್ತದೆ. ನಮ್ಮ ಕಲಿಕೆ ಇಂಗ್ಲಿಷ್ ಹಾಗೂ ಪ್ರಾದೇಶಿಕ ಭಾಷೆ ಎರಡರಲ್ಲಿಯೂ ಆಗಿರುವುದರಿಂದ ಅನುವಾದದ ಕೆಲಸಕ್ಕೆ ಪೂರಕವೇ ಹೌದಾಗಿದೆ ಎನ್ನುವುದು ನನ್ನ ಅನುಭವ.

ಇಂಗ್ಲಿಷ್ ಕೃತಿಗಳ ಜತೆಗಿನ ಒಡನಾಟದಿಂದ ನಾವು ವಿಶ್ವಮಟ್ಟದ ಹಲವು ಸಾಂಸ್ಕೃತಿಕ, ರಾಜಕೀಯ ಸ್ಥಿತ್ಯಂತರಗಳನ್ನೆಲ್ಲ ಗ್ರಹಿಸಲು ಸಾಧ್ಯವಿದೆ. ವಿಶ್ವ ಸಾಹಿತ್ಯ ಜಗತ್ತನ್ನು ಹೇಗೆ ನೋಡುತ್ತಿದೆ ಎನ್ನುವುದೂ ಅರಿವಿಗೆ ಬರುತ್ತದೆ.

- **ಜೈಪುರ ಸಾಹಿತ್ಯೋತ್ಸವದ ಗೋಷ್ಠಿಯೊಂದರಲ್ಲಿ ತಮಗೆ ಒಬ್ಬರು ಪ್ರಶ್ನೆ ಕೇಳುವಾಗ, ಈ ಸೀತೆ ಯಾಕೆ ತನ್ನ ಕೋಪವನ್ನು ಒಂದೇ ಸಲ ಜೋರುದನಿಯಲ್ಲಿ ಹೊರಹಾಕಲಿಲ್ಲ ಎಂದಿದ್ದರು. ಅದಕ್ಕೆ ತುಸು ವಿವರವಾದ ಉತ್ತರ ನೀಡಿ.**

ನಾವು ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕುತ್ತೇವೆ. ಭಾರತೀಯ ನೆಲೆಗಟ್ಟಿನಲ್ಲಿಯೇ ನಾನು ಸೀತೆಯ ಪಾತ್ರ ರೂಪಿಸಬೇಕು. ಮೌಲ್ಯ ವ್ಯವಸ್ಥೆಯನ್ನು ನಾವು ದೂರಬೇಕೇ ವಿನಾ ವ್ಯಕ್ತಿಗಳನ್ನಲ್ಲ. ಕೋಪವನ್ನು ಸ್ಫೋಟಗೊಳ್ಳುವ ಮೂಲಕ ಹೊರಹಾಕುವುದು ಸಮಸ್ಯೆಗೆ ಪರಿಹಾರ ಕೊಡಬಲ್ಲದು ಎಂದು ನನಗೆ ಅನಿಸುವುದಿಲ್ಲ. ಅದಕ್ಕೇ ನನ್ನ ಸೀತೆ ಪ್ರಶ್ನಿಸುವುದಾಗಲೀ, ವಾದ ಮಾಡುವುದಾಗಲೀ, ಹಟ ಮಾಡುವುದಾಗಲೀ, ಒಲವ ಸುರಿಸುವುದಾಗಲೀ ಎಲ್ಲವೂ ತಣ್ಣಗೆ. ಒಬ್ಬರ ನೋವನ್ನು ಇನ್ನೊಬ್ಬರ ಮೇಲೆ ಆರೋಪಿಸಿ ಪ್ರತಿಕ್ರಿಯಿಸುವುದು ಪ್ರತಿಭಟನೆ ಆಗಲಾರದು ಎನ್ನುವುದು ನನ್ನ ಭಾವನೆ.

- **‘ಶೋಕ್ರಿ ಮೈ ದಿಗಂತ್’ ಕೃತಿಗೆ ಹಿಂದಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ಮಹಿಳೆ ಎಂಬ ಗೌರವ 65 ವರ್ಷಗಳ ಇತಿಹಾಸದಲ್ಲಿ ನಿಮ್ಮದಾಯಿತು. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?**

ಸೃಜನಶೀಲ ರಚನೆಗಳು ಆಗುತ್ತಿರುತ್ತವೆ. ನನ್ನ ಕೃತಿಗೆ ಗೌರವ ಸಂದಿತಷ್ಟೆ. ಅದನ್ನು ಗುರುತಿಸುವ ಸಂವೇದನೆ ಈ ಸಂದರ್ಭದಲ್ಲಿ ಪ್ರಕಟವಾಗಿರಬಹುದಷ್ಟೆ. ಹಿಂದಿ ಭಾಷೆ ಹಾಗೂ ಪ್ರಾದೇಶಿಕ ಭಾಷೆಗಳಲ್ಲಿ ಉತ್ತಮ ಸಾಹಿತ್ಯವನ್ನು ಬಹುಕಾಲದಿಂದಲೂ ಹೆಣ್ಣುಮಕ್ಕಳು ರಚಿಸುತ್ತಾ ಬಂದಿದ್ದಾರೆ. ಪ್ರಶಸ್ತಿ ಸಿಕ್ಕಾಗ ಖುಷಿ, ಜವಾಬ್ದಾರಿ ಎರಡೂ ಹೆಚ್ಚಾದಂತೆ.

- **‘ಮೈ ಟೈಪ್‌ರೈಟರ್ ಈಸ್ ಮೈ ಪಿಯಾನೊ’ ಎಂಬ ನಿಮ್ಮ ಕಾವ್ಯದ ದನಿ ಹುಟ್ಟಿದ್ದು ಹೇಗೆ?**

ಅದು ನನ್ನ ಅನುಭವವೇ ಆಗಬೇಕಂದೇನೂ ಇಲ್ಲ. ಪ್ರತೀ ಹೆಣ್ಣುಮಗಳೂ ನಮ್ಮ ಭಾರತೀಯ ಮೌಲ್ಯ ವ್ಯವಸ್ಥೆಯಲ್ಲಿ ಇಂತಹ ರೂಪಕಗಳನ್ನು ಕಟ್ಟಿ ಕೊಡುತ್ತಾ ಇರುತ್ತಾಳೆ. ಕವಯಿತ್ರಿಯಾಗಿ ಅದನ್ನು ನಾನು ಹಿಡಿದೆ. ಭವದ ನಡುವೆಯೂ ಸೃಜಿಸುವ ಆಶಾವಾದದ ಭಾವವಿದು.

- **ಹೊಸಕಾಲದ ಯುವಕ-ಯುವತಿಯರ ಅಭಿವ್ಯಕ್ತಿ ಹೇಗಿದೆ?**

ನಾನು ಯಾವತ್ತೂ ಆಶಾವಾದಿ. ಓದುವವರು, ಬರೆಯುವವರು, ಧೈರ್ಯ ತುಳುಕಿಸುತ್ತಲೇ ಟೀಕಿಸುವವರು ನಮ್ಮ ನಡುವೆ ಇದ್ದಾರೆ. ಈಗಿನವರಿಗೆ ಓದಿನಲ್ಲಿ, ಬರಹದಲ್ಲಿ ಆಸಕ್ತಿ ಇಲ್ಲ ಎನ್ನುವುದೆಲ್ಲ ಸುಳ್ಳು.

- **ನೀವು ಸೀತೆಯನ್ನು ಯಾಕೆ ಕಥಾನಾಯಕಿ ಮಾಡಿಕೊಂಡಿರಿ?**

ಇದು ರಿಮೋಟ್ ಕಂಟ್ರೋಲ್ ವೈವಾಹಿಕ ಜೀವನದ ಕಾಲ. ಗಂಡ ಎಲ್ಲೋ ಕೆಲಸದಲ್ಲಿರುತ್ತಾನೆ. ಹೆಂಡತಿ ಮತ್ತೆಲ್ಲೊ. ಇಬ್ಬರ ನಡುವಿನ ಸಂಬಂಧ ರಿಮೋಟ್ ಕಂಟ್ರೋಲ್‌ನಂತೆ. ರಾಮ ಹಾಗೂ ಸೀತೆ ಆ ಕಾಲದಲ್ಲೇ ಇಂತಹ ಬದುಕನ್ನು ಜೀವಿಸಿದ್ದರು. ಅಂದಮೇಲೆ ಸೀತೆ ನನಗೆ ಸಮಕಾಲೀನ ಪಾತ್ರವೂ ಹೌದು. ಅವಳು ನನಗೆ ಸಿಂಗಲ್ ಪೇರೆಂಟ್ ಆಗಿ ಕಾಣುತ್ತಾಳೆ. ಹಾಗಿದ್ದೂ ಹಲುಬುವುದಿಲ್ಲ. ಅವಳು ಕಷ್ಟಗಳ ನಡುವೆಯೂ ಆಶಾವಾದಿ. ಉತ್ಕಟ ಪ್ರೇಮಿ.

- **ಕಾದಂಬರಿಯ ಸೀತೆ ಪಾತ್ರದ ರೂಹು ಹೇಗಿದೆ?**

ಅವಳು ಚಿತ್ತವಿಸ್ತಾರದ ಕೇಂದ್ರಪಾತ್ರ. ಅಲೆಮಾರಿಗಳ ನಡುವೆ ಬದುಕುತ್ತಾಳೆ. ಅವರ ಬದುಕನ್ನು ಹತ್ತಿರದಿಂದ ಕಾಣುತ್ತಲೇ ಅಲ್ಲಿನ ಹೆಣ್ಣುಮಕ್ಕಳಿಗೂ ಮಾತೃಸ್ವರೂಪಿಯಾಗುತ್ತಾಳೆ. ಅವಳು ಅಲ್ಲಿಂದಲೇ ರಾಮನಿಗೆ ಪತ್ರ ಬರೆಯುವ ಪ್ರಸಂಗವೊಂದನ್ನು ನಾನು ಸೃಷ್ಟಿಸಿರುವೆ. ಅದರಲ್ಲಿ ಅವಳು ರಾಮನ ಕುರಿತ ಪ್ರೀತಿ, ತನ್ನೊಳಗಿನ ಪ್ರಶ್ನೆಗಳು, ಹೊಸ ಬದುಕಿನ ಅರಿವು ಇವೆಲ್ಲವನ್ನೂ ಬರೆಯುತ್ತಾಳೆ. ಈ ಸೀತೆ ಹಸಿರು ಕ್ರಾಂತಿಗೂ ಸಾಕ್ಷಿಯಾಗುತ್ತಾಳೆ. ಅಲೆಮಾರಿಗಳ ಬದುಕಿನ ತುಮುಲಗಳನ್ನು ತಲಸ್ಪರ್ಶಿಯಾಗಿ ನೋಡುತ್ತಾಳೆ. ನನ್ನ ಸೀತೆ ವಿಪರೀತ ತರ್ಕ ಮಾಡುವವಳು. ಹಾಗೆ ವಿಚಾರ ಮಂಥನ ಮಾಡುವ ಸ್ವಭಾವದಿಂದಲೇ ನನಗೆ ಹಲವು ಸೂಕ್ಷ್ಮ ಹೆಣ್ಣುದನಿಗಳನ್ನು ಅವಳಲ್ಲಿ ತರುವುದು ಸಾಧ್ಯವಾಯಿತು.

ಮುನ್ನೋಟ 05-02-2023 ರಿಂದ 11-02-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ವಿದ್ಯಾರ್ಥಿಗಳಿಗೆ ಹೆಚ್ಚಿನ ಶ್ರೇಯಸ್ಸು ಇರುತ್ತದೆ ಹಾಗೂ ಮೇಧಾಶಕ್ತಿ ಹೆಚ್ಚುತ್ತದೆ. ಮಕ್ಕಳ ಆಟಿಕೆಗಳನ್ನು ತಯಾರಿಸಿ ಮಾರುವವರಿಗೆ ವ್ಯಾಪಾರ ವಿಸ್ತರಣೆ ಇದೆ. ಕ್ರೀಡಾ ವಸ್ತುಗಳನ್ನು ಮಾರಾಟ ಮಾಡುವವರಿಗೆ ಹೆಚ್ಚು ವ್ಯವಹಾರವಿರುತ್ತದೆ. ಹೊಸ ಯೋಜನೆಯನ್ನು ಜಾರಿಗೊಳಿಸುವ ಮುನ್ನ ಅವುಗಳ ಬಗ್ಗೆ ಎಲ್ಲಾ ಮಾಹಿತಿ ಕಲೆ ಹಾಕಿ ತೀರ್ಮಾನ ತೆಗೆದುಕೊಳ್ಳಿರಿ. ಅಧಿಕ ಓಡಾಟ ಹೆಚ್ಚು ಆಯಾಸ ತರಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಕೈಗೊಂಡ ಕಾರ್ಯಗಳಲ್ಲಿ ಸಫಲತೆ ಕಾಣುವಿರಿ. ಹಳೆಯ ಸಾಲಗಳನ್ನು ತೀರಿಸಿ ನೆಮ್ಮದಿಯನ್ನು ಕಾಣುವಿರಿ. ರೈತರು ಕೃಷಿ ಕಾರ್ಯಗಳಲ್ಲಿ ಹೆಚ್ಚಿನ ಗಮನ ಕೊಡುವರು. ಆಹಾರ ವ್ಯತ್ಯಾಸದಿಂದ ಸ್ವಲ್ಪ ಆರೋಗ್ಯ ವ್ಯತ್ಯಾಸವಾಗಬಹುದು. ಕೆಲವೊಂದು ಸ್ವಂತ ವ್ಯವಹಾರಗಳಿಗೆ ಮಧ್ಯವರ್ತಿಗಳನ್ನು ದೂರವಿಡುವುದು ಒಳ್ಳೆಯದು. ಸಿದ್ಧಪಡಿಸಿದ ಆಹಾರವನ್ನು ತಯಾರಿಸುವವರಿಗೆ ಮಾರುಕಟ್ಟೆ ವಿಸ್ತರಣೆಯ ಯೋಗವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಇತರರ ಕಷ್ಟಗಳಿಗೆ ನೆರವಾಗುವುದನ್ನು ಬೆಳೆಸಿಕೊಳ್ಳಿರಿ. ವೈದ್ಯರಿಗೆ ತಮ್ಮ ವೃತ್ತಿಯಲ್ಲಿ ಹೆಚ್ಚಿನ ಸಮಯವನ್ನು ಕಳೆಯಬೇಕಾದ ಅನಿವಾರ್ಯವಿದೆ. ಕೆಲವರಿಗೆ ಸಂಸ್ಥೆ ಮುಖಾಂತರ ತರಬೇತಿಗಾಗಿ ದೂರ ಪ್ರಯಾಣ ಮಾಡಬೇಕಾಗಬಹುದು. ರಾಜಕೀಯ ವ್ಯಕ್ತಿಗಳಿಗೆ ಓಡಾಟ ಹೆಚ್ಚಾಗಿ, ಹೆಚ್ಚು ಜನಸಂಪರ್ಕ ಮಾಡಬೇಕಾದ ಅನಿವಾರ್ಯವಿರುತ್ತದೆ. ಧನ ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸರ್ಕಾರಿ ಕಚೇರಿಗಳಿಗೆ ಹೆಚ್ಚು ಅಲೆದಾಟವಾದರೂ ಕೆಲಸಗಳಾಗುತ್ತವೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ಮುಟ್ಟುತ್ತದೆ. ನಿಮ್ಮ ಬಂಧುಗಳು ಹಣಕಾಸಿನ ಸಹಾಯಕ್ಕಾಗಿ ನಿಮ್ಮಲ್ಲಿಗೆ ಬರುವರು. ಕಾರ್ಯದೊತ್ತಡಗಳ ನಡುವೆ ಕುಟುಂಬದಲ್ಲಿನ ಆಗು ಹೋಗುಗಳತ್ತ ಗಮನಹರಿಸುವುದು ಒಳ್ಳೆಯದು. ಹಳೆಯ ಸ್ನೇಹಿತರ ಸಂಪರ್ಕ ದೊರೆತು ಸಂತೋಷಪಡುವಿರಿ. ಷೇರು ವ್ಯವಹಾರಗಳಲ್ಲಿ ಅಷ್ಟು ಏಳಿಗೆ ಇರುವುದಿಲ್ಲ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವೃತ್ತಿಯಲ್ಲಿ ಬರುವ ಯಾವುದೇ ಹೊಸ ಜವಾಬ್ದಾರಿಗಳನ್ನು ಸಂಕೋಚವಿಲ್ಲದೆ ಒಪ್ಪಿಕೊಳ್ಳಿರಿ, ಅದು ನಿಮ್ಮ ಏಳಿಗೆಗೆ ಕಾರಣವಾಗುತ್ತದೆ. ಪ್ರಭಾವಶಾಲಿ ವ್ಯಕ್ತಿಯೊಬ್ಬರ ಭೇಟಿಯಾಗಬಹುದು. ಓದಿನಲ್ಲಿ ಆಸಕ್ತಿ ಹೆಚ್ಚಾಗುತ್ತದೆ. ಸಾಮಾಜಿಕ ಕಾರ್ಯಕ್ರಮಗಳ ಬಗ್ಗೆ ಆಸಕ್ತಿ ಮೂಡುತ್ತದೆ. ಆಹಾರ ವ್ಯತ್ಯಾಸದಿಂದ ಅನಾರೋಗ್ಯ ಕಾಡಬಹುದು. ಧನ ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಸ್ನೇಹಿತರೊಡನೆ ವ್ಯವಹಾರ ಮಾಡುವಾಗ ಸಂಶಯ, ಅಪನಂಬಿಕೆ ಬಾರದಂತೆ ಸಾಕಷ್ಟು ಎಚ್ಚರವಹಿಸಿರಿ. ನಿಮ್ಮ ಸ್ವಂತ ವ್ಯವಹಾರದಲ್ಲಿ ನಷ್ಟವಾದರೂ ತೀವ್ರ ಸಂಕಷ್ಟ ಇರುವುದಿಲ್ಲ. ನೀವಾಡುವ ಮಾತು ನಿಮಗೆ ಗೌರವ ತರುವಂತಿರಲಿ. ನಿಮ್ಮ ಉದಾಸೀನ ಮನೋಭಾವದಿಂದ ವ್ಯಾಪಾರದಲ್ಲಿ ನಷ್ಟ ಆದರೂ ಪಾಲುದಾರರಲ್ಲಿ ವಿನಂತಿಸಿದರೆ ಸುಮ್ಮನಿರುವರು. ಲಲಿತ ಕಲಾವಿದರಿಗೆ ಹೆಚ್ಚಿನ ಸಂಭಾವನೆ ಸಿಗುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಮಹಿಳೆಯರ ಅನಾರೋಗ್ಯಕರ ಚಿಂತನೆ ಅವರಿಗೆ ಕುಂದು ತರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಂದ ಶತ್ರುಗಳು ಹೆಚ್ಚಾಗಬಹುದು. ಕೆಲವೊಂದು ಸಾಂಪ್ರದಾಯಿಕ ವೈದ್ಯರಿಗೆ ಬೇಡಿಕೆ ಹೆಚ್ಚಾಗುತ್ತದೆ. ಹೊಸ ಅಧಿಕಾರಿಗಳನ್ನು ಭೇಟಿ ಮಾಡುವ ಮೂಲಕ ಉದ್ಯೋಗದಲ್ಲಿ ವರ್ಚಸ್ಸನ್ನು ಹೆಚ್ಚು ಮಾಡಿಕೊಳ್ಳುವಿರಿ. ಆದಾಯವು ನಿರೀಕ್ಷಿತ ಮಟ್ಟದಲ್ಲಿದ್ದರೂ ಖರ್ಚು ಅದನ್ನು ಮೀರಿರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಲೇವಾದೇವಿ ವ್ಯವಹಾರಗಳು ಸಾಧಾರಣ ಮಟ್ಟದಲ್ಲಿ ಇದ್ದರೆ ಮಾತ್ರ ನಡೆಯುತ್ತವೆ. ಪೊಲೀಸ್ ಹುದ್ದೆಯಲ್ಲಿರುವ ಕೆಲವರಿಗೆ ಮುಂಬಡ್ತಿ ದೊರೆಯುವ ಸಾಧ್ಯತೆ ಇದೆ. ವಾಹನ ಚಾಲನೆ ವೇಳೆ ಅವಸರ ಖಂಡಿತ ಬೇಡ. ಹಣದ ಹರಿವು ಸಾಮಾನ್ಯವಾಗಿದ್ದರೂ ಖರ್ಚು ನಿಭಾಯಿಸುವುದು ಬಹಳ ಉತ್ತಮ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಪೆಟ್ರೋಲ್ ಮಾರಾಟಗಾರರಿಗೆ ಉತ್ತಮ ವ್ಯವಹಾರ ನಡೆಯುವ ಸಾಧ್ಯತೆ ಇದೆ. ಸರ್ಕಾರದಿಂದ ಬರಬೇಕಾದ ಹಳೆ ಬಾಕಿಗಳು ಈಗ ಬಂದು ಸೇರುತ್ತವೆ. ನಿಮ್ಮ ಕೆಲಸಗಳಿಗೆ ಹೆಚ್ಚು ಆದ್ಯತೆ ನೀಡಿರಿ. ಸಾಹಸ ಕಲಾವಿದರಿಗೆ ಯಶಸ್ಸು ಸಿಗುತ್ತದೆ. ಹಣದ ಒಳಹರಿವು ತೃಪ್ತಿಕರವಾಗಿರುತ್ತದೆ. ಸರ್ಕಾರದಿಂದ ಬರಬೇಕಾಗಿದ್ದ ಎಲ್ಲ ರೀತಿಯ ಸಹಾಯಧನ ಬರುತ್ತದೆ. ವೃತ್ತಿಯಲ್ಲಿ ಬಹಳ ಜಾಣ್ಮೆಯಿಂದ ಕೆಲಸವನ್ನು ನಿಭಾಯಿಸುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಲೇವಾದೇವಿ ವ್ಯವಹಾರದವರಿಗೆ ಕೆಲವು ಸಂದರ್ಭಗಳಲ್ಲಿ ನಂಬಿಕೆ ದ್ರೋಹ ಆಗಬಹುದು. ದಾಂಪತ್ಯದಲ್ಲಿ ಅನ್ಯೋನ್ಯತೆ ಮೂಡುತ್ತದೆ. ನಡವಳಿಕೆಯಿಂದ ಎಲ್ಲರ ಮನಗೆದ್ದು ನಿಮ್ಮ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವಿರಿ. ಕೆಲವು ರಾಜಕೀಯ ವ್ಯಕ್ತಿಗಳಿಗೆ ಸಂಘ ಸಂಸ್ಥೆಗಳಲ್ಲಿ ಉತ್ತಮ ಹುದ್ದೆ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಕೂಡಿಟ್ಟ ಠೇವಣಿಯ ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬಳಸುವಿರಿ. ಒಡಹುಟ್ಟಿದವರು ನಿಮಗೆ ಸಾಕಷ್ಟು ವಿರೋಧವನ್ನು ಮಾಡುವರು. ಖರ್ಚಿಗೆ ತಕ್ಕಂತೆ ಆದಾಯ ಬರುವುದರಿಂದ ಹಣಕಾಸಿನ ಸ್ಥಿತಿ ಸಮತೋಲನವಾಗಿರುತ್ತದೆ. ಪಿತ್ರಾರ್ಜಿತ ಆಸ್ತಿಗಾಗಿ ಬಂಧುಗಳ ನಡುವೆ ಭಿನ್ನಾಭಿಪ್ರಾಯ ಮೂಡಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಕೆಲವು ನ್ಯಾಯಮೂರ್ತಿಗಳಿಗೆ ಉತ್ತಮ ನ್ಯಾಯದಾನ ನೀಡಿದ ಸಂತೋಷವಿರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಮಾರುಕಟ್ಟೆ ವಿಸ್ತರಿಸಲು ಬಹಳ ಶ್ರಮಪಡುವಿರಿ. ಕೆಲವರಿಗೆ ಸಂಸ್ಥೆಯೊಂದರ ಸಲಹೆಗಾರರಾಗಿ ನೇಮಕಗೊಳ್ಳುವ ಅವಕಾಶವಿದೆ. ವೃತ್ತಿಯಲ್ಲಿ ನಿಮ್ಮ ಕೆಲಸವನ್ನು ನಿಯಮ ಬದ್ಧವಾಗಿ ಮಾಡಿ ಮುಗಿಸುವುದು ಉತ್ತಮ. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ಕಡಿಮೆಯಾಗುತ್ತದೆ.

ಓಡಿಯೇರ್...

10ನೇ ಪುಟದಿಂದ...

ಸ್ಪರ್ಧೆ ವೇಳೆ ಕೋಣಗಳಿಗೆ ಕಟ್ಟುವ ಮರದ ನೊಗಕ್ಕೆ ತಾಮ್ರ ಮತ್ತು ಬೆಳ್ಳಿಯ ಲೇಪನ ಮಾಡಲಾಗಿರುತ್ತದೆ. ಬೆಳ್ಳಿಯ ಹೊದಿಕೆ (ಲೇಪನ) ಇರುವ ಒಂದು ನೊಗದ ಮೌಲ್ಯ ₹50 ಸಾವಿರಕ್ಕೂ ಅಧಿಕ! ರಾಜಗಾಂಭೀರ್ಯದ ದ್ಯೋತಕವಾಗಿ ಸ್ಪರ್ಧೆ ವೇಳೆ ಬೆತ್ತಗಳನ್ನು ಹಿಡಿದುಕೊಳ್ಳಲಾಗುತ್ತದೆ. ಕೋಣಗಳ ಮಾಲೀಕರು ಬೆಳ್ಳಿಯ ಹಿಡಿಕೆಯುಳ್ಳ ಬೆತ್ತ ಹಿಡಿದುಕೊಂಡಿರುತ್ತಾರೆ.

ಇನ್ನು ಕೋಣಗಳನ್ನು ಕಂಬಳ ಸ್ಪರ್ಧೆ ನಡೆಯುವ ಸ್ಥಳಕ್ಕೆ ಕರೆದೊಯ್ಯುವ ನೋಟ ಮದುವೆಯ ದಿಬ್ಬಣ ಹೊರಟಂತೆ ಭಾಸವಾಗುತ್ತದೆ; ಅಷ್ಟೊಂದು ಸಡಗರ ಅಲ್ಲಿ ಮನೆ ಮಾಡಿರುತ್ತದೆ. ಸಂಪ್ರದಾಯಬದ್ಧ ಪೂಜಾವಿಧಿ ವಿಧಾನಗಳೂ ನೆರವೇರುತ್ತವೆ. ಒಂದು ತಂಡದೊಂದಿಗೆ 50ರಿಂದ 200ರವರೆಗೂ ಜನ ಹೊರಡುತ್ತಾರೆ. ಕೋಣಗಳ ಸೇವಕರು ಅಷ್ಟೇ ಅಲ್ಲ, ಆ ಕೋಣಗಳ ಅಭಿಮಾನಿಗಳೂ ಜೊತೆಗಿರುತ್ತಾರೆ. ಕಂಬಳ ಸ್ಪರ್ಧೆ ರಾತ್ರಿ-ಹಗಲು ನಡೆಯುವುದರಿಂದ ಆ ಸ್ಥಳದಲ್ಲಿ ಮಾಲೀಕರು ಪ್ರತ್ಯೇಕವಾಗಿ ಟೆಂಟ್ ಹಾಕಿರುತ್ತಾರೆ. ಇಬ್ಬರು ಅಡುಗೆಯವರು ಟೀ, ಕಾಫಿ, ಉಪಾಹಾರ ಸಿದ್ಧಪಡಿಸುತ್ತಾರೆ, ನಿರಂತರ ದಾಸೋಹ ಸೇವೆ ಇರುತ್ತದೆ. ಪದಕ ಗೆದ್ದರೆ ಅಲ್ಲಿ ‘ಸಂಭ್ರಮಾಚರಣೆ’ಯೂ ಇರುತ್ತದೆ. ಇದಕ್ಕಾಗಿಯೇ ಒಂದು ಕಂಬಳ ಸ್ಪರ್ಧೆಗೆ ₹2 ಲಕ್ಷದ ವರೆಗೆ ಖರ್ಚು ಮಾಡುವ ಮಾಲೀಕರೂ ಇದ್ದಾರೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ವರ್ಷಕ್ಕೆ ಸರಾಸರಿ 20 ಕಂಬಳ ನಡೆಯುತ್ತವೆ. ಕಂಬಳ ಸಂಘಟಿಸುವುದೂ ಪ್ರತಿಷ್ಠೆ ಮತ್ತು ಹೆಮ್ಮೆಯ ಸಂಕೇತ. ಒಂದು ಕಂಬಳ ಸ್ಪರ್ಧೆಗಾಗಿ ಕನಿಷ್ಠ ಎಂದರೂ ₹20 ಲಕ್ಷದವರೆಗೆ ವೆಚ್ಚವಾಗುತ್ತದೆ. ಊರವರು, ಸಮಿತಿಗಳು ಇದನ್ನು ಸಂಘಟಿಸುತ್ತಿದ್ದು, ಇದಕ್ಕೆ ದೇಣಿಗೆ ನೀಡಿ ಪ್ರೋತ್ಸಾಹಿಸುವವರೂ ಸಾಕಷ್ಟು ಜನ ಇದ್ದಾರೆ. ಕಂಬಳ ಸ್ಪರ್ಧೆಯಲ್ಲಿ ಕೋಣಗಳನ್ನು ಓಡಿಸಲು ನೋಂದಣಿ ಮಾಡಿಸಬೇಕು ಎಂದೇನಿಲ್ಲ. ಆಯಾ ವಿಭಾಗಕ್ಕೆ ತಕ್ಕಂತೆ, ಷರತ್ತುಗಳನ್ನು ಪಾಲಿಸಿ ಯಾರು ಬೇಕಾದರೂ ತಮ್ಮ ಕೋಣಗಳನ್ನು ಓಡಿಸಬಹುದು. ಕಂಬಳ ಟ್ರ್ಯಾಕ್‌ಗಳು ಸಾಮಾನ್ಯವಾಗಿ 120ರಿಂದ 145 ಮೀಟರ್ ಉದ್ದ ಇರುತ್ತವೆ.

ಪಾಂಡು, ತಾಟೆ, ಚೆನ್ನ, ಬೊಲ್ಲ, ಕಾಟಿ, ಮೋಡೆ ಮುಂತಾದ ಹೆಸರಿನ ಖ್ಯಾತನಾಮ ಕೋಣಗಳೂ ಇಲ್ಲಿವೆ. ಅವುಗಳಿಗೆ ದೊಡ್ಡ ಅಭಿಮಾನಿ ಬಳಗವೂ ಇದೆ. ಅವು ಸ್ಪರ್ಧೆಗೆ ಇಳಿದರೆ ನೋಡಲು ಅವರೆಲ್ಲ ಮುಗಿಬೀಳುತ್ತಾರೆ.

‘ಚೆನ್ನ’ ಕೋಣದ ಹೆಸರಲ್ಲಿ ಅಂಚೆ ಇಲಾಖೆಯು ಅಂಚೆಚೀಟಿ ಹೊರ ತಂದಿದ್ದರೆ, ಇರುವೈಲು ತಂಡದ ಕೋಣ ‘ತಾಟೆ’ಯ ಅಭಿಮಾನಿ ಜಯಂತ್ ಅಂಚನ್ ಅವರು ಶಂಭೂರು ಗ್ರಾಮದಲ್ಲಿರುವ ತಮ್ಮ ಹೋಟೆಲ್‌ಗೆ ‘ಇರುವೈಲ್ ತಾಟೆ’ ಎಂದು ಕೋಣದ ಹೆಸರಿಟ್ಟು ಪ್ರೀತಿ ತೋರಿದ್ದಾರೆ.

ಕಂಬಳದ ಋತುವಿನ ಸಮಯದಲ್ಲಿ ಅಂದರೆ ನವೆಂಬರ್‌ನಿಂದ ಮಾರ್ಚ್‌ವರೆಗೆ ಕೋಣಗಳನ್ನು ಸಾಕುವ ಸ್ಥಳಕ್ಕೆ ಮನೆಯವರು ಹಾಗೂ ಕೆಲಸಗಾರನ್ನು ಹೊರತುಪಡಿಸಿದರೆ ಉಳಿದವರಿಗೆ ಪ್ರವೇಶ ಇಲ್ಲ ಎಂಬ ನಿಯಮವನ್ನು ಬಹುತೇಕ ಕೋಣಗಳ ಮಾಲೀಕರು ಪಾಲಿಸಿಕೊಂಡುಬರುತ್ತಿದ್ದಾರೆ. ದೃಷ್ಟಿತಾಗಬಾರದು, ಮಾಟ-ಮಂತ್ರ ಮಾಡಿಸಬಾರದು ಅಥವಾ ಬಂದವರು ಏನಾದರೂ ತಿನ್ನಿಸಿದರೆ ಸ್ಪರ್ಧೆಯ ವೇಳೆ ಅವುಗಳ ಆರೋಗ್ಯ ಹದಗೆಡಬಾರದು ಎಂಬ ವಿಶೇಷ ಕಾಳಜಿಯೇ ಇದಕ್ಕೆ ಕಾರಣವಂತೆ.

ಕೋಣ ಉಂಡರೆ... ‘ಮಳೆ ಬಂದರೆ ಕೇಡಲ್ಲ; ಮಗ ಉಂಡರೆ ಕೇಡಲ್ಲ’ ಎಂಬ ನಾಣ್ಣುಡಿಗೆ ಇಲ್ಲಿ ‘...ಕೋಣ ಉಂಡರೆ ಕೇಡಲ್ಲ’ ಎಂಬುದನ್ನೂ ಸೇರಿಸಬಹುದೇನೋ!

ಕೋಣಗಳ ಆರೈಕೆ; ಆಹಾರದ ವಿಷಯದಲ್ಲಿ ಕಟ್ಟುನಿಟ್ಟಿನ ನಿಯಮ ಪಾಲಿಸಲಾಗುತ್ತದೆ. ಒಣ ಹುಲ್ಲು ಹಾಗೂ ಪೌಷ್ಟಿಕಾಂಶ ಹೇರಳವಾಗಿರುವ ಹುರುಳಿ ಧಾನ್ಯ ನಿತ್ಯದ ಆಹಾರದಲ್ಲಿ ಇರಲೇಬೇಕು. ನಸುಕಿನಲ್ಲಿ ಒಣಗಿದ ಭತ್ತದ ಹುಲ್ಲು (ಬೈಹುಲ್ಲು) ನೀಡಲಾಗುತ್ತದೆ. ಬೆಳಿಗ್ಗೆ 8ರಿಂದ 10ರವರೆಗೆ ಹಾಗೂ ಸಂಜೆಯ ಹೊತ್ತಿನಲ್ಲಿ ಅವುಗಳನ್ನು ಕೊಟ್ಟಿಗೆಯಿಂದ ಹೊರಗೆ ಎಳೆಬಿಸಿಲಿಗೆ ಕಟ್ಟಲಾಗುತ್ತದೆ. 10 ಗಂಟೆ ವೇಳೆಗೆ ಹುರುಳಿ (ಮೊಳಕೆ ಬಂದಿದ್ದು ಅಥವಾ ಬೇಯಿಸಿ ರುಬ್ಬಿದ್ದು) ನೀಡಲಾಗುತ್ತದೆ. ಋತುಮಾನಕ್ಕೆ ತಕ್ಕಂತೆ ಕಲ್ಲಂಗಡಿ, ಗಜ್ಜರಿ, ಕುಂಬಳಕಾಯಿ, ವಿವಿಧ ಬಗೆಯ ಹಣ್ಣುಗಳನ್ನು ತಿನ್ನಿಸಲಾಗುತ್ತದೆ. ಭೂರಿ ಭೋಜನ ಸವಿದು ಧಡೂತಿ ದೇಹ ಬೆಳೆಯಬಾರದು ಎಂಬ ಕಾರಣಕ್ಕೆ ದೈಹಿಕ ಕಸರತ್ತು ಮಾಡಿಸಲಾಗುತ್ತದೆ. ಚರ್ಮದ ಕಾಂತಿ ಹೆಚ್ಚಿಸಲು ನಿತ್ಯವೂ ಪೊನ್ನೆ (ಹೊನ್ನೆ)ಎಣ್ಣೆಗೆ ತೆಂಗಿನ ಎಣ್ಣೆ ಬೆರೆಸಿ ಮಸಾಜ್ ಮಾಡಲಾಗುತ್ತದೆ. ಪಶುವೈದ್ಯರಿಂದ ಆರೋಗ್ಯ ತಪಾಸಣೆ, ಮೇಲ್ವಿಚಾರಣೆಯೂ ನಿಯಮಿತವಾಗಿ ನಡೆಯುತ್ತದೆ. ಕೊಟ್ಟಿಗೆಯಲ್ಲಿ ಫ್ಯಾನ್, ಕೂಲರ್ ಅಳವಡಿಸಲಾಗುತ್ತದೆ.

ಕಂಬಳಕ್ಕೆ ಸರಿ ಹೊಂದುತ್ತದೆಯೇ ಎಂದು ಎಲ್ಲ ಆಯಾಮಗಳಲ್ಲಿಯೂ ಪರಿಶೀಲನೆ ನಡೆಸಿಯೇ ಉತ್ತರ ಕರ್ನಾಟಕ, ಹಳೆ ಮೈಸೂರು ಭಾಗದಿಂದ ಹೆಚ್ಚಿನವರು ಕರುಗಳನ್ನು ಖರೀದಿಸುತ್ತಾರೆ. ಪ್ರಕೃತಿ ಸಹಜ ಪ್ರಕ್ರಿಯೆಯಲ್ಲಿ ಹುಟ್ಟಿದ (ಕೃತಕ ಗರ್ಭಧಾರಣೆಯಿಂದ ಜನಿಸಿದ ಕರು ಖರೀದಿಸುವುದಿಲ್ಲ) ಕರುವನ್ನು ಅದರ ಮೈಬಣ್ಣ, ಮೈಕಟ್ಟು, ಚುರುಕುತನ, ಕಾಲು ಮತ್ತು ತಲೆಯ ಗಾತ್ರ, ಚೂಪಾದ ಬಾಲ... ಇಂತಹ ಅಂಶಗಳನ್ನು ನೋಡಿ ಖರೀದಿಸುತ್ತಾರೆ. ಕೆಲ ಮಾಲೀಕರು ಕಂಬಳದ ಸ್ಪರ್ಧೆಗೆ ಬರುವ ‘ಕಿರಿಯ ವಿಭಾಗದ’ ಕೋಣಗಳನ್ನು ಓಡುವ ಶೈಲಿ, ಮೈಕಟ್ಟು ನೋಡಿ ₹10 ಲಕ್ಷದಿಂದ ₹15 ಲಕ್ಷ ಕೊಟ್ಟು ಖರೀದಿಸುತ್ತಾರೆ. ಇಂತಹ ಕೋಣಗಳು 20 ವರ್ಷದವರೆಗೂ ಓಡುತ್ತವೆ.

‘ಕೊಂಬು, ಮೈಕಟ್ಟು ನೋಡಿ, ರಾಕೆಟ್ ಮೋಡ, ನಂದಳಿಕೆ ಕುಟ್ಟಿ, ನಂದಳಿಕೆ ಕಂಜಿ, ಪಾಂಡು ಹೀಗೆ ವಿಭಿನ್ನ ಹೆಸರುಗಳನ್ನು ನಾಮಕರಣ ಮಾಡಿದ್ದೇವೆ. ಇತರರೂ ಹೀಗೇ ಅನುಸರಿಸುತ್ತಾರೆ’ ಎನ್ನುತ್ತಾರೆ ಮಣಿಪಾಲದಲ್ಲಿಯ ಕೋಣ ಸಾಕಾಣಿಕೆಯ ಮೇಲುಸ್ತುವಾರಿ ನೋಡಿಕೊಳ್ಳುತ್ತಿರುವ ನಿತಿನ್.

ಕಂಬಳಕ್ಕಾಗಿಯೇ ಸಾಕುವುದರಿಂದ ಅವುಗಳನ್ನು ಸ್ಪರ್ಧೆಗೆ ಅಣಿಗೊಳಿಸುವ ಕೆಲಸ ವರ್ಷಪೂರ್ತಿ ನಡೆದೇ ಇರುತ್ತದೆ. ಮಾಲೀಕರು ಇದಕ್ಕಾಗಿಯೇ ತಮ್ಮ ಗದ್ದೆಯಲ್ಲಿ ಕೆಸರಿನ ಟ್ರ್ಯಾಕ್ (ಕರೆ) ನಿರ್ಮಿಸಿಕೊಂಡಿರುತ್ತಾರೆ. ಅವುಗಳನ್ನು ನಿತ್ಯವೂ ಅಲ್ಲಿ ಓಡಿಸಿ ತರಬೇತಿ ನೀಡುತ್ತಾರೆ. ಇನ್ನು ಕೆಲ ಮಾಲೀಕರು ತಮ್ಮ ಜಮೀನಿನಲ್ಲಿಯೇ ದೊಡ್ಡ ದೊಡ್ಡ ಈಜುಗೊಳ ನಿರ್ಮಿಸುತ್ತಾರೆ. ಅಲ್ಲಿ ಕೆಲಗಂಟೆ ಈಜಾಡಲು ಬಿಡುತ್ತಾರೆ. ಹೀಗೆ ಅವುಗಳಿಗೆ ದೈಹಿಕ ಕಸರತ್ತು ಮಾಡಿಸಲಾಗುತ್ತದೆ. ಹಲ್ಲುಗಳ ಆಧಾರದ ಮೇಲೆ ಕಿರಿಯ-ಹಿರಿಯ ವಿಭಾಗದ ಸ್ಪರ್ಧೆಗೆ ಪರಿಗಣಿಸಲಾಗುತ್ತದೆ.

ಹಗ್ಗ ಕಿರಿಯ- ಹಗ್ಗ ಹಿರಿಯ, ನೇಗಿಲು ಕಿರಿಯ-ನೇಗಿಲು ಹಿರಿಯ, ಅಡ್ಡ ಹಲಗೆ, ಕನೆ ಹಲಗೆ.. ಹೀಗೆ 6 ವಿಭಾಗಳ ಸ್ಪರ್ಧೆಗಳು ಕಂಬಳದಲ್ಲಿ ಇವೆ. ಮರದ ಸಣ್ಣ ನೇಗಿಲನ್ನು ಕೋಣದ ನೊಗಕ್ಕೆ ಕಟ್ಟಿ ಓಡುವುದು ನೇಗಿಲು ಸ್ಪರ್ಧೆಯಾದರೆ, ಎರಡೂ ಕೋಣಗಳ ಕೊಂಬಿಗೆ ಸ್ಟೀಲ್ ರಾಡ್ ಕಟ್ಟಿ ಒಂದೇ ವೇಗದಲ್ಲಿ ಕೋಣ ಓಡಿಸುವುದು ಹಗ್ಗ ಸ್ಪರ್ಧೆಯ ಬಗೆ. ಹಲಗೆ ಕಟ್ಟಿ ನೀರು ಎತ್ತರಕ್ಕೆ ಚಿಮ್ಮಿಸುವುದು ಕನೆಹಲಗೆ ಸ್ಪರ್ಧೆಯ ಬಗೆ. ಹಾಯಿಸಿದ ನೀರು ಕಾಣಲೆಂದೇ 6.5 ಕೋಲು (ಮೀ) ಮತ್ತು 7.5 ಕೋಲು ಎತ್ತರದಲ್ಲಿ ಬಳಿ ಬಟ್ಟೆಯನ್ನು ಕಟ್ಟಲಾಗುತ್ತದೆ. ಅಡ್ಡ ಹಲಗೆ ವಿಭಾಗದಲ್ಲಿ ಹಲಗೆ ಕಟ್ಟಿ ವೇಗದ ಓಟದ ಸ್ಪರ್ಧೆ ನಡೆಸಲಾಗುತ್ತದೆ.



ನಂದಳಿಕೆ ಶ್ರೀಕಾಂತ ಭಟ್ ಅವರ ಕೋಣ ಸಾಕಾಣಿಕೆಯ ತೋಟದ ಮನೆ

ಕಂಬಳ ಸಂಭ್ರಮ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಕಂಬಳದಲ್ಲಿ ಓಟಗಾರರಿಗೆ ಬಲು ಬೇಡಿಕೆ

ಕಂಬಳ ಸ್ಪರ್ಧೆಯಲ್ಲಿ ಕೋಣಗಳಷ್ಟೇ ಮಹತ್ವ ಅವುಗಳನ್ನು ಓಡಿಸುವವರಿಗೆ. ಈಗ ಅವರಿಗೆ ‘ಜಾಕಿ’ ಎಂದು ಪ್ರೀತಿಯಿಂದ ಕರೆಯಲಾಗುತ್ತಿದೆ. ಕಂಬಳದ ಕೋಣಗಳ ಮಾಲೀಕರು ಅವರನ್ನು ಗುರುತಿಸಿ, ಒಂದು ಋತುವಿನ ಕಂಬಳಕ್ಕೆ ಇಂತಿಷ್ಟು ಎಂದು ಸಂಭಾವನೆ ನಿಗದಿ ಮಾಡುತ್ತಾರೆ. ಶ್ರೀನಿವಾಸ ಗೌಡ, ನಿಶಾಂತ್ ಶೆಟ್ಟಿ, ಗುರುಚರಣ ಪಟ್ಟೆ, ವಂದಿತ್ ಶೆಟ್ಟಿ ಅವರಂತಹ ಖ್ಯಾತನಾಮ ಓಟಗಾರರಿಗೆ ಸಂಭಾವನೆ ಹೆಚ್ಚು. ಸಾಮಾನ್ಯವಾಗಿ ₹3 ಲಕ್ಷದಿಂದ ಆರಂಭವಾಗುವ ಈ ಸಂಭಾವನೆ ₹10 ಲಕ್ಷದ ವರೆಗೂ ಇರುತ್ತದೆಯಂತೆ. ಆದರೆ, ಯಾರೂ ಇದನ್ನು ಅಧಿಕೃತವಾಗಿ ಹೇಳುವುದಿಲ್ಲ. ಇನ್ನು ಸ್ಪರ್ಧೆಗಳಲ್ಲಿ ಪದಕ ಗೆದ್ದುಕೊಟ್ಟರೆ ಪ್ರತಿ ಸ್ಪರ್ಧೆಗೆ ₹10 ಸಾವಿರದಿಂದ ₹15 ಸಾವಿರ ಬಹುಮಾನವನ್ನೂ ಮಾಲೀಕರು ಕೊಡುತ್ತಾರೆ.

ಕಂಬಳ ಸ್ಪರ್ಧೆ ಹಾಗೂ ಕೋಣಗಳ ಲಾಲನೆ, ಪಾಲನೆ ಹಾಗೂ ಉಪಕರಣಗಳ ತಯಾರಿಗಾಗಿ ಪ್ರೊ.ಗುಣಪಾಲ ಕಡಂಬ ಹಾಗೂ ಇತರೆ 10 ಜನ ಸಮಾನ ಮನಸ್ಕರು ಸೇರಿ ‘ಕಂಬಳ ಸಂರಕ್ಷಣೆ, ನಿರ್ವಹಣೆ ಮತ್ತು ತರಬೇತಿ ಅಕಾಡೆಮಿ’ಯನ್ನು 2011ರಲ್ಲಿ ಆರಂಭಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ, ಉಡುಪಿಯ ಮೀಯಾರಿನಲ್ಲಿ ತರಬೇತಿ ನೀಡಲಾಗುತ್ತದೆ.

‘ಕಂಬಳ ಓಟಗಾರರಿಗೆ ಇಲ್ಲಿ ವೈಜ್ಞಾನಿಕ ತರಬೇತಿ ನೀಡುತ್ತೇವೆ. 18ರಿಂದ 23 ವಯೋಮಾನದ, ದೈಹಿಕ-ಮಾನಸಿಕ ಸಾಮರ್ಥ್ಯ ಹೊಂದಿರುವ ಅರ್ಹರನ್ನು ಆಯ್ಕೆ ಮಾಡುತ್ತೇವೆ. ಆರಂಭದಲ್ಲಿ ಬಂದವರಿಗೆಲ್ಲರಿಗೂ ತರಬೇತಿ ನೀಡಿದೆವು. ಅವರಲ್ಲಿ ಅರ್ಧದಷ್ಟು ಜನ ದುಡಿಯಲು ವಿದೇಶಗಳಿಗೆ ಹೋಗಿದ್ದಾರೆ. ಆದಾದ ನಂತರ ನಾವು ಆಯ್ಕೆ ಪ್ರಕ್ರಿಯೆಯನ್ನು ಬಿಗಿಗೊಳಿಸಿದ್ದು, ಒಂದು ತಂಡದಲ್ಲಿ 25 ಜನರಿಗೆ ಮಾತ್ರ ಅವಕಾಶ ಕಲ್ಪಿಸುತ್ತಿದ್ದೇವೆ. ವೈದ್ಯಕೀಯ ಸೇರಿ 16 ತರಹದ ಪರೀಕ್ಷೆಗಳನ್ನು ನಡೆಸುತ್ತೇವೆ. ಎರಡು ವಾರದ ವಸತಿಯುತ ತರಬೇತಿ ಸಂಪೂರ್ಣ ಉಚಿತವಾಗಿದ್ದು, ಎರಡು ಜೊತೆ ಬಟ್ಟೆಗಳನ್ನೂ ಉಚಿತವಾಗಿ ಕೊಡುತ್ತೇವೆ. ಕೆಲ ಕಂಬಳ ಮಾಲೀಕರು, ಕಂಬಳ ಪ್ರೇಮಿಗಳು ದೇಣಿಗೆ ನೀಡಿದರೆ, ಉಳಿದ ವೆಚ್ಚವನ್ನು ನಮ್ಮ ಅಕಾಡೆಮಿಯಲ್ಲಿರುವವರೇ ಭರಿಸುತ್ತೇವೆ’ ಎಂಬುದು ಪ್ರೊ. ಕಡಂಬ ಅವರ ವಿವರಣೆ.

‘ಎರಡು ವಾರಗಳಲ್ಲಿ ಇವರಿಗೆ ಪರಿಪೂರ್ಣ ತರಬೇತಿ ನೀಡುತ್ತೇವೆ. ಮುಖ್ಯವಾಗಿ ಯೋಗ, ಪೌಷ್ಟಿಕ ಆಹಾರ ಸೇವನೆ, ದೈಹಿಕ ಕ್ಷಮತೆ ಕಾಪಾಡಿಕೊಳ್ಳುವ ಬಗೆಯನ್ನು ಪ್ರಾಯೋಗಿಕವಾಗಿ ಹೇಳಿಕೊಡುತ್ತೇವೆ. ಈವರೆಗೆ ನಾವು 150 ಜನರಿಗೆ ತರಬೇತಿ ನೀಡಿದ್ದು, ಅವರಲ್ಲಿ ಅಂದಾಜು 90 ಜನರು ಕಂಬಳ ಕೋಣ ಓಡಿಸುವ ಕಾಯಕದಲ್ಲಿ ತೊಡಗಿದ್ದಾರೆ’ ಎನ್ನುತ್ತಾರೆ ಅವರು.

ಕೋಣ ಓಡಿಸುವವರಲ್ಲಿ ಕಾರ್ಮಿಕರೇ ಹೆಚ್ಚು. ಕೆಸರಿನಲ್ಲಿ ಕೆಲಸ ಮಾಡಿ ಅನುಭವ ಇರುವ, ದೈಹಿಕ ಕ್ಷಮತೆ ಕಾಯ್ದುಕೊಳ್ಳುವ, ಓಟದಲ್ಲಿ ಚುರುಕಾಗಿರುವವರು ಹೆಚ್ಚು ಸಾಧನೆ ಮಾಡುತ್ತಾರೆ. ಕೆಲಸ ಜೊತೆಗೆ ಇವರು ಸಾಮಾನ್ಯವಾಗಿ ನಿತ್ಯವೂ ಪೌಷ್ಟಿಕ ಆಹಾರ ಸೇವನೆ, ದೈಹಿಕ ಕಸರತ್ತು ಮಾಡುವುದು, ಅಡಿಕೆ ಮರ-ತೆಂಗಿನ ಮರ ಹತ್ತಿ ಇಳಿಯುವ ಮತ್ತಿತರ ಚಟುವಟಿಕೆಯಲ್ಲಿ ನಿರತರಾಗಿರುತ್ತಾರೆ.


ಕಂಬಳ ಋತು ಆರಂಭವಾಗುವ ಮುನ್ನವೇ ಮಾಲೀಕರು ಇಂತಹ ಕೋಣಗಳ ಓಟಗಾರರನ್ನು ಸಂಪರ್ಕಿಸಿ, ಅವರೊಟ್ಟಿಗೆ ಒಂದು ವರ್ಷದ ಒಪ್ಪಂದ ಮಾಡಿಕೊಂಡಿರುತ್ತಾರೆ. ಮುಂದಿನ ವರ್ಷ ಅದು ಮುಂದುವರೆಯಬಹುದು ಇಲ್ಲವೇ ಅವರು ಬೇರೆ ಮಾಲೀಕರ ಜೊತೆಗೆ ಹೋಗಬಹುದು. ಇವರಿಗೆ ಸದಾ ಬೇಡಿಕೆ ಇದ್ದೇ ಇರುತ್ತದೆ. ಒಪ್ಪಂದದ ನಂತರ ಇವರು ಆಗಾಗ ತಮ್ಮ ಮಾಲೀಕರ ಕೋಣಗಳ ಬಳಿಗೆ ಬಂದು ಹೋಗುತ್ತಿರುತ್ತಾರೆ. ಅವುಗಳೊಂದಿಗೆ ತಾಲೀಮು ನಡೆಸುತ್ತಾರೆ.

ವೇಗದ ಓಟದಲ್ಲಿ ವಿಶ್ವಚಾಂಪಿಯನ್ ಆಗಿರುವ ಉಸೇನ್ ಬೋಲ್ಟ್ ಅವರಿಗಿಂತ ವೇಗವಾಗಿ ಓಡಿ ಕೀರ್ತಿ ಗಿಟ್ಟಿಸಿರುವ ಕಂಬಳ ಓಟಗಾರ ಶ್ರೀನಿವಾಸ್ ಗೌಡ ಅವರು ಆಭರಣ ಜ್ಯುವೆಲರ್ಸ್‌ನ ರೂಪದರ್ಶಿಯೂ ಆಗಿದ್ದಾರೆ. ಕೋಣ ಓಡಿಸುವವರಿಗೆ ಈಗ ಕೀರ್ತಿ, ಹಣ ಎರಡೂ ಹರಿದು ಬರುತ್ತಿದೆ.

ಇದು ಕೋಣದ ಮೆನು

ಕಂಬಳದ ಋತುವಿನಲ್ಲಿ ನವೆಂಬರ್‌ನಿಂದ ಮಾರ್ಚ್‌ವರೆಗೆ: ನಿತ್ಯ ಒಣಹುಲ್ಲು. ಒಂದು ಕೋಣಕ್ಕೆ ನಿತ್ಯ ಸರಾಸರಿ 5 ಕೆ.ಜಿ. ಹುರುಳಿ ಕಾಳು. ಹಣ್ಣು, ತರಕಾರಿ. ಮಾರ್ಚ್ ತಿಂಗಳಲ್ಲಿ ಒಣಹುಲ್ಲು, ಹುರುಳಿ ಜೊತೆಗೆ ದೇಹ ತಂಪಾಗಿಸಲು ಕುಂಬಳಕಾಯಿ, ಬಿಟ್‌ರೂಟ್, ಗಜ್ಜರಿ.

ಮಳೆಗಾಲದಲ್ಲಿ: ಹಸಿ ಹುಲ್ಲು (ಎಷ್ಟು ಬೇಕೋ ಅಷ್ಟು ತಿನ್ನಿಸಬಹುದು). ಹುರುಳಿಯನ್ನು ರುಬ್ಬಿ ಹಿಟ್ಟಿನ ರೂಪದಲ್ಲಿ ಕೊಡಲಾಗುತ್ತದೆ. ಮೊಳಕೆ ಕಾಳುಗಳನ್ನು ಕೊಡಲಾಗುತ್ತದೆ. ಬೇಸಿಗೆಯಲ್ಲಿ ದೇಹ ತಂಪಾಗಿಸಲು ಹುರುಳಿ ಹಿಟ್ಟಿನಲ್ಲಿ 180 ಮಿಲಿ ಲೀಟರ್ ಒಳ್ಳೆಣ್ಣೆ ಮಿಶ್ರಣ ಮಾಡಿ ವಾರದಲ್ಲಿ ಎರಡು ಬಾರಿ ಕೊಡಲಾಗುತ್ತದೆ. ವರ್ಷವಿಡೀ ನೈಸರ್ಗಿಕ ಆಹಾರ ಮಾತ್ರ ಕೊಡಲಾಗುತ್ತಿದ್ದು, ಯಾವುದೇ ಬಗೆಯ ಸಿದ್ಧ ಪಶು ಆಹಾರ ನೀಡುವುದಿಲ್ಲ. ಪ್ರೋಟಿನ್ ಹೆಸರಲ್ಲಿ ಯಾವುದೇ ಪೇಯವನ್ನು ಕುಡಿಸುವುದಿಲ್ಲ.




ಕೋಣಗಳ ಫಿಟ್‌ನೆಸ್ ಮಂತ್ರ

ಎಳೆಬಿಸಿಲು ಕಾಯಿಸುವುದು, ಈಜು, ಎಣ್ಣೆಯಲ್ಲಿ ಮಸಾಜ್ ಇವು ನಿತ್ಯ ಇರಲೇಬೇಕು. ಕಂಬಳ ಋತು ಮೂರು ತಿಂಗಳು ಇರುವಂತೆ ಫಿಟ್‌ನೆಸ್‌ಗೆ ಹೆಚ್ಚು ಒತ್ತು ನೀಡಲಾಗುತ್ತದೆ. ಈ ಅವಧಿಯಲ್ಲಿ ಬಿಸಿನೀರ ಸ್ನಾನ ಹೆಚ್ಚುವರಿ ಸೇರ್ಪಡೆ. ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ ನಿತ್ಯ ಎರಡು ಗಂಟೆ ನೇಗಿಲಿನ ಮೂಲಕ ಭೂಮಿ ಉಳುಮೆ ಮಾಡಿಸಲಾಗುತ್ತದೆ. ಕಂಬಳದ ವೇಳೆ ವಾರಕ್ಕೆ ಮೂರು ದಿನ ಹೀಗೆ ನೇಗಿಲಿನಿಂದ ಉಳುಮೆ ಕಡ್ಡಾಯ. ಗದ್ದೆಯಲ್ಲಿ ಉಳುಮೆಯ ಕೆಲಸ ಮುಗಿದ ನಂತರ ಸ್ನಾನ ಮಾಡಿಸಿ, ಕೊಟ್ಟಿಗೆಯಲ್ಲಿ ಕಟ್ಟಲಾಗುತ್ತದೆ. ಕಂಬಳ ಸ್ಪರ್ಧೆ ಹತ್ತಿರವಾಗುತ್ತಿದ್ದಂತೆ ಕುದಿ ಕಂಬಳದಲ್ಲಿ ಓಡಿಸಿ, ಸ್ಪರ್ಧೆಗೆ ಅಣಿಗೊಳಿಸಲಾಗುತ್ತದೆ. ಎರಡು ಮೂರು ವಾರ ಕುದಿ ಕಂಬಳದಲ್ಲಿ ಜೋಡಿಯಲ್ಲಿಯ ಕೋಣಗಳನ್ನು ಅದಲು ಬದಲು ಮಾಡಿ ಓಟದ ವೇಗ, ಒಟ್ಟಾಗಿ ಸಾಗುವ ರೀತಿ ಮತ್ತಿತರ ಅಂಶ ಗಮನಿಸುತ್ತೇವೆ ಎನ್ನುತ್ತಾರೆ ಕೋಣ ಸಾಕಾಣಿಕೆಯ ಕೆಲಸ ಮಾಡುವ ಸಾಯಿರಾಮ ರೈ.

ನಿತ್ಯ ಬೆಳಿಗ್ಗೆ ಸುಮಾರು 6ರಿಂದ ಆರಂಭವಾಗುವ ಕೋಣಗಳ ದಿನಚರಿ ಬಹುತೇಕ ಸಂಜೆ 6ರ ಹೊತ್ತಿಗೆ ಮುಗಿಯುತ್ತದೆ.

ಪದಬಂಧ 2775



ಮೇಲಿನಿಂದ ಕೆಳಕ್ಕೆ

1. ಬರುವ ಗಳಿಕೆ ಬದುಕಿಗೆ ಆಧಾರ 3
2. ಅನೇಕ ಸಲ ವಿರಳವಾಗುವ ಪ್ರಯತ್ನ 3
3. ಚಿಂತೆಯಿಂದ ಮುಕ್ತವಾದ ಮನಸ್ಸು ಹೀಗೆ ಭಾರ ರಹಿತವಾಗುತ್ತದೆ 3
4. ಒಳ್ಳೆಯ ವಿದ್ಯಾರ್ಥಿಯನ್ನು ಹೀಗೆನ್ನಬಹುದೆ? 3
6. ಎಲೆ ಅಡಿಕೆಯ ಜೊತೆ ಸ್ವಲ್ಪ ಮತ್ತು ಬರಿಸುವ ಪದಾರ್ಥ 3
7. ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆಯುತ್ತಿರುವ ನಮ್ಮ ಭಾರತದ ನಾಣ್ಯ 3
8. ಒಂದು ಜಾಗದಲ್ಲಿ ನೆಲೆಸಿರುವವಳು 3
9. ವಿರಹದಿಂದ ಗಜಿಬಿಜಿಗೊಂಡಾಗ ಶಾಂತಿಗಾಗಿ ದೀರ್ಘ ತಿರುಗಾಟ 3
12. ಸಂತೋಷದಿಂದ ಸಂಚರಿಸುವವ 3
14. ಇಷ್ಟೊಂದು ಸಾಮ್ಯವಿದ್ದಾಗ ವ್ಯತ್ಯಾಸದ ಪ್ರಶ್ನೆಯೇ ಇಲ್ಲ 3
16. ಹಾಡಿನಲ್ಲಿ ಅಂಕುರಿಸುವ ಮೊದಲೆರಡು ಸಾಲು 3
17. ಹಿಂದಿಯವರು ಹಾಸಿ ಹೊದ್ದುಕೊಳ್ಳುವ ಕಂಬಳಿ 3
18. ಮನುವಿನಿಂದಲೇ ಹುಟ್ಟಿ ಬಂದವ 3
19. ದಂತಮಂಜನಕ್ಕೆ ಬರುವ ಮಸಾಲೆ ಪದಾರ್ಥ 3
21. ಬಿಚ್ಚಿ ಬಿಡಿಸಿ ಮುಕ್ತಗೊಳಿಸು 3
22. ಮಧ್ಯದಲ್ಲಿ ಜಾಗವೇ ಇಲ್ಲದಂತೆ ಕಿಕ್ಕಿರಿದದ್ದು 3
24. ಮನಃಪೂರ್ವಕ ನಮಸ್ಕಾರ 3
25. ಅರ್ಥವನ್ನು ವಕ್ರಮಾಡಿ ಹೇಳು 3

ಎಡದಿಂದ ಬಲಕ್ಕೆ

1. ಹಣದಲ್ಲಿ ಬಂದದ್ದು ಹೋದದ್ದು 4
3. ಆರ್ಥಿಕತೆಯ ಮೂಲವಾಗಿರುವ ದುಡ್ಡು 4
5. ಒಂದು ಸಂಸ್ಥೆಯ ಅಥವಾ ವ್ಯವಸ್ಥೆಯ ಮುಖ್ಯಸ್ಥರು 5
8. ಮುಂದಿನ ಏಳು ದಿನಗಳಲ್ಲಿ ಆಗಬಹುದಾದನ್ನು ತಿಳಿಸುವ ಪತ್ರಿಕಾ ಅಂಕಣ 5
10. ಜೀವವಿಮೆಯ ದಾಖಲು ಪತ್ರ 3
11. ಯಾವಾಗಲೂ ಗೆಲ್ಲುವವ 5
13. ಪ್ರತಿದಿನ ಬದುಕಿಗಾಗಿ ನಡೆಸುವ ಹೊಡೆದಾಟ 5
15. ವಾರಕ್ಕೊಮ್ಮೆ ಕುಟುಂಬ ಸಮೇತ 4
18. ಬೆಳಗ್ಗಿನಿಂದ ರಾತ್ರಿಯವರೆಗು ಮುಗಿಯದ ಗೃಹ ಕಾರ್ಯ 5
20. ಜಮೀನು ವಿಸ್ತಾರಗೊಂಡಾಗ ಸಾಲಕ್ಕೆ ಹೊಣೆಗಾರರಾಗಬೇಕು 3
21. ಕಲ್ಪನೆಯ ಸಾಲುಗಳಲ್ಲಿ ಬದುಕುವ ಭಾವುಕ 5
23. ಮಂದಿಯ ಔನತ್ಯದ ದ್ಯೋತಕ 5
26. ಇನ್ನೇನು ಬರುತ್ತಿದೆ ನಮ್ಮನ್ನಾಳುವವರನ್ನು ಆಯ್ಕೆಮಾಡುವ ಪ್ರಕ್ರಿಯೆ 4
27. ತುಸು ನಾಚಿಕೆಯಿಂದ ತಲೆ ತಗ್ಗಿಸು 4

ಪದಬಂಧ ಉತ್ತರ -2774

ಮೇಲಿಂದ ಕೆಳಕ್ಕೆ


1. ನಾಡೋಜ 2.ಕವಿತಾಗೊಷ್ಠಿ 3.ಉಕ್ತಲೇಕನ 4.ಖರಡು 7.ಲಷ್ಕರ 9.ಡಿವಕಾ 11.ಕುಸುಮ 12.ಷಹರು 14.ರಕ್ಷಕ 15.ರಸೀದಿ 17.ಮುರುಗ 18.ಕನಸುಗಾರ 19.ಸಹಯಾತ್ರಿಕ 20.ಲಕೀವ 22.ಕಥನ 24.ಶಕುನ

ಎಡದಿಂದ ಬಲಕ್ಕೆ

1. ನಾಗಚಂಪಕ 3.ಉದಯೋನ್ಮುಖ 5.ವಿಮುಕ್ತ 6.ಜಯಲಲಿತಾ 8.ಲೇವಡಿಮಾಡು 10.ಗೋಮುಖ 11.ಕುಮಾರಷಷ್ಠಿ 13.ನರಕಾಸುರ 16.ಮನೆಮುರುಕ 19.ಸಕಮಂದಿ 21.ನವಹ 22.ಕಡೆಗಣಿಸು 23.ಯಾದವವಂಶ 25.ಗಾಯತ್ರಿ 26.ಕನಕಧಾರ 27. ಕದಳಿವನ

‘ಕಲಾಸರಸ್ವತಿಯ ಮುಂದೆ ನಾನೊಬ್ಬ ಜ್ಞಾನದಾಹಿ’

ವಿದ್ವಾಂಸ, ಯಕ್ಷಗಾನ ಕಲಾವಿದ ಡಾ.ಎಂ. ಪ್ರಭಾಕರ ಜೋಶಿ ಅವರು ಇದೇ 11 ಮತ್ತು 12ರಂದು ಉಡುಪಿಯಲ್ಲಿ ನಡೆಯುವ ಪ್ರಥಮ ಯಕ್ಷಗಾನ ಸಮ್ಮೇಳನದ ಸರ್ವಾಧ್ಯಕ್ಷರು. ಎಪ್ಪತ್ತೇಳರ ಹರೆಯದ ಡಾ.ಜೋಶಿಯವರ ಬದುಕು, ಅಧ್ಯಯನ ಸಾಗಿ ಬಂದ ಬಗೆ ಬಹುವಿಸ್ತಾರವಾದುದು. ಅವರೊಡನೆ ನಡೆಸಿದ ಮಾತುಕತೆಯ ಆಯ್ದಭಾಗ ಇಲ್ಲಿದೆ



ಸಂದರ್ಶನ: ಕೋಡಿಬೆಟ್ಟು ರಾಜಲಕ್ಷ್ಮಿ

• ತತ್ತ್ವಶಾಸ್ತ್ರದ ಆಸಕ್ತಿ, ಯಕ್ಷಗಾನದ ಪ್ರೀತಿಯ ಕಡೆಗೆ ನೀವು ನಡೆದು ಬಂದ ದಾರಿಯ ಬಗ್ಗೆ ಕೇಳುವ ಕುತೂಹಲ..

ಕಾರ್ಕಳದ ಮಾಳ ಎಂಬ ಒಂದು ದಟ್ಟ ಹಸಿರಿನ ಸುಗ್ರಾಮದಲ್ಲಿ ನಾನು ಹುಟ್ಟಿದ್ದು. ಅಪ್ಪ ನಾರಾಯಣ ಜೋಶಿ ವಾಗ್ಮಿಗಳು. ಹಾಗಾಗಿ ಮನೆಯಲ್ಲಿಯೇ ಓದು, ಸಂವಾದ, ಕಲಿಕೆಯ ವಾತಾವರಣವಿದ್ದುದರಿಂದ ಈ ಹಾದಿಗೆ ಬರುವುದು ಸುಲಭವಾಯಿತೇನೋ. ಶಾಲಾಶಿಕ್ಷಣದಲ್ಲಿ ನಾನು ಮುಂದುವರೆದು ಉದ್ಯೋಗಸ್ಥನಾದೆ. ವೈದಿಕ ಆಚರಣೆಗಳಲ್ಲಿ ಬರುವ ಮಂತ್ರಗಳ ಬಗ್ಗೆ ಕುತೂಹಲ ತಾಳಿ ಅವುಗಳ ಅರ್ಥ ತಿಳಿದುಕೊಳ್ಳುವ ಪ್ರಯತ್ನವನ್ನು ಬಾಲ್ಯದಲ್ಲಿ ಮಾಡಿದೆ. ಜೊತೆಗೆ ಸಂಸ್ಕೃತ ಭಾಷೆಯ ಕಲಿಕೆ ಸಹಕಾರಿಯಾಯಿತು. ಕಾರ್ಕಳದಲ್ಲಿರುವಾಗ ಒಮ್ಮೆ ಗ್ರಂಥಾಲಯದಲ್ಲಿ ವಾಣಿಜ್ಯ ಪಠ್ಯವೊಂದನ್ನು ಹುಡುಕುವಾಗ ತತ್ತ್ವಶಾಸ್ತ್ರದ ಪುಸ್ತಕವೊಂದು ಕೈಗೆ ಸಿಕ್ಕಿತು. ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಬರೆದ ಪುಸ್ತಕವನ್ನು ಮನೆಗೆ ಕೊಂಡುಹೋಗಿ ಓದಲುಶುರು ಮಾಡಿದೆ. ಮೊದಲ ಓದಿಗೆ ಹೆಚ್ಚೇನೂ ದಕ್ಕಲಿಲ್ಲವಾದರೂ, ಕುತೂಹಲವು ಮತ್ತಷ್ಟು ಅರಳಿ, ಇದೇ ದಿಸೆಯಲ್ಲಿ ಓದು ಮುಂದುವರೆಯಿತು. ಹೀಗೆ ನಮ್ಮ ದೇಶದ ತತ್ತ್ವಶಾಸ್ತ್ರ ಕೃತಿಗಳು, ವಿದೇಶದಲ್ಲಿರುವ ಪರಿಕಲ್ಪನೆಗಳು, ಮಾರ್ಕ್ಸ್‌ವಾದ, ಗ್ರೀಕ್ ಪುರಾಣ... ಓದಿನ ಯಾತ್ರೆ ದಶಕಗಳ ಕಾಲ ನಿರಂತರವಾಗಿ ಸಾಗಿತು. ಈ ದೀರ್ಘ ಬೆಂಬತ್ತುವಿಕೆಯ ಫಲವಾಗಿ ನಾನು ಪ್ರೊ.ಎಂ.ಎ. ಹೆಗಡೆ ಅವರ ಜೊತೆಯಾಗಿ ‘ಭಾರತೀಯ ತತ್ತ್ವಶಾಸ್ತ್ರ ಪ್ರವೇಶ’ ಎಂಬ ಪುಸ್ತಕ ಬರೆಯುವುದು ಸಾಧ್ಯವಾಯಿತು.

ತತ್ತ್ವಶಾಸ್ತ್ರ ಎಂಬುದು ಒಂದು ವಿಷಯವಲ್ಲ. ಅದು ಜೀವನವನ್ನು ನೋಡುವ ಒಂದು ವಿಧಾನ. ಪ್ರತಿಯೊಬ್ಬನೂ ತತ್ತ್ವಜ್ಞಾನಿಯೇ ಆಗಿರುತ್ತಾನೆ. ಯಕ್ಷಗಾನವೆನ್ನುವುದು ಜನಪ್ರಿಯ ವೇದಾಂತದ ಒಂದು ಸ್ವರೂಪ. ಅರ್ಥಗಾರಿಕೆಯಲ್ಲಿ ಹಾಸ್ಯಗಾರ ದೇವರನ್ನು ತಮಾಷೆ ಮಾಡುತ್ತಾನೆ. ಬಹುಭಾಷೆ, ಗಾದೆ, ಕತೆಗಳು ಸೇರಿಕೊಂಡು ಅದೊಂದು ತತ್ತ್ವಜ್ಞಾನವನ್ನು ಹೇಳಬಲ್ಲಂಥದ್ದು. ತತ್ತ್ವಶಾಸ್ತ್ರವನ್ನು ಸಾಮಾನ್ಯವಾಗಿ ಕಷ್ಟಕರ ವಿಷಯ ಎಂದೋ, ಮುಪ್ಪಿನ ಕಾಲದಲ್ಲಿ ಓದಬೇಕಾದ ಪುಸ್ತಕವೆಂದೋ ದೂರ ಇಡುವುದುಂಟು. ಆದರೆ ತತ್ವಜ್ಞಾನ ಬದುಕಿಗೆ ತೀರ ಹತ್ತಿರವಾದ ವಿಚಾರ. ಅದರ ಕುರಿತ ಆಸಕ್ತಿ ಯೌವ್ವನದಲ್ಲೇ ಮೂಡಿದರೆ, ಅರಿತ ವಿಚಾರವನ್ನು ಅನ್ವಯಿಸಿಕೊಳ್ಳಲು, ಪರೀಕ್ಷಿಸಿಕೊಳ್ಳಲು ಜೀವನದಲ್ಲಿ ಬಹಳಷ್ಟು ದೀರ್ಘ ಸಮಯವು ಲಭಿಸುತ್ತದೆ. ಭಾರತೀಯರು ಹೊಂದಿರುವ ತತ್ತ್ವಜ್ಞಾನದ ಅರಿವು ವಿಸ್ತಾರವಾದುದು. ಅದನ್ನು ಜನಪ್ರಿಯ ರೂಪದಲ್ಲಿ ಯಕ್ಷಗಾನವು ಜನರಿಗೆ ಕೊಡುತ್ತದೆ.



ಪತ್ನಿ ಸುಚೇತಾ ಜೊತೆಗೆ.... ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

• ಭಾರತೀಯ ಇತರ ಕಲಾಪ್ರಕಾರಗಳ ಕಡೆಗೂ ನಿಮ್ಮ ಆಸಕ್ತಿ ವ್ಯಾಪಿಸಿದ್ದು ಹೇಗೆ ?

ಭಾರತೀಯ ರಂಗಭೂಮಿಯ ಅಗಾಧತೆಯನ್ನು ಅರ್ಥಮಾಡಿಕೊಳ್ಳುವುದು ಸರಳವಲ್ಲ. ಯಕ್ಷಗಾನ ಸರ್ವಶ್ರೇಷ್ಠ ಕಲೆ ಎಂದು ನಾವು ಹೇಳುವಾಗ, ಅಸ್ಸಾಂನಿಂದ ಹಿಡಿದು ದಕ್ಷಿಣ ಭಾರತದ ತುದಿಯವರೆಗೆ ಹರಡಿಕೊಂಡಿರುವ ಕಲಾಪ್ರಕಾರಗಳನ್ನು ಒಮ್ಮೆ ಗ್ರಹಿಸಲು ಪ್ರಯತ್ನಿಸಬೇಕು. ಆಂಧ್ರದಲ್ಲಿ ಯಕ್ಷಗಾನದ್ದೇ ರೀತಿಯ ಹತ್ತು ಪ್ರಕಾರಗಳಿವೆ. ಕೂಚಿಪುಡಿ, ಅಂಕಿಯಾ ನಾಟ್ಯಂ, ತಿರುಕೂತ್ತು, ನೀತಿನಾಟಕ, ಕಥಕ್ಕಳಿ, ಮರಾಠಿ ದಶಾವತಾರಿ, ಪ್ರಹ್ಲಾದ ನಾಟಂ, ಭಾಗವತಮೇಳ, ದೊಡ್ಡಾಟ... ಇನ್ನೂ ನೂರಾರು ಬಗೆಗಳು. ಭಾರತವು ಎಷ್ಟು ವೈವಿಧ್ಯಪೂರ್ಣವೋ, ಅಷ್ಟೇ ಪ್ರಮಾಣದಲ್ಲಿ ಒಂದಾಗಿಯೂ ಇದೆ. ಉತ್ತರದಿಂದ ದಕ್ಷಿಣದ ವರೆಗಿನ ಕಲಾಪ್ರಕಾರಗಳ ಸಮಗ್ರ ಅಧ್ಯಯನ ನಡೆಯಬೇಕು. ಕಲೆಯೆಂದರೆ ಜನಜೀವನದ ಉತ್ಪನ್ನ. ಆ ದೃಷ್ಟಿಯಿಂದ ನೋಡಿದ್ರೆ ದಕ್ಕುವ ಜ್ಞಾನವು ಅಪಾರವಾದುದು.

• ಯಕ್ಷಗಾನ ಕ್ಷೇತ್ರದಲ್ಲಿ ಇತ್ತೀಚೆಗೆ ಅಗಾಧವಾದ ಬದಲಾವಣೆಗಳು ಕಾಣಿಸಿವೆ. ನಿಮ್ಮ ಅನಿಸಿಕೆಗಳೇನು ?

ತಾಳಮದ್ದಳೆಯಾಗಲೀ, ಯಕ್ಷಗಾನವಾಗಲೀ, ಕಾಲದ ದೆಸೆಯಿಂದ ಅನೇಕ ಮಾರ್ಪಾಟುಗಳಿಗೆ ಸಹಜವಾಗಿ ಒಡ್ಡಿಕೊಂಡಿದೆ. ಪ್ರಸಂಗಗಳ ಬಳಕೆ ಜಾಸ್ತಿಯಾಗಿದ್ದು, ಜನರ ಅಪೇಕ್ಷೆಗಳು ಹೆಚ್ಚಾಗಿವೆ. ದೀರ್ಘವಾದ ಪ್ರಸಂಗಗಳನ್ನು ಸಮಯಮಿತಿಯಲ್ಲಿ ನಿರ್ವಹಿಸುವ ಸವಾಲನ್ನು ಬಗೆಹರಿಸುವುದು ಸುಲಭವಲ್ಲ. ಹೀಗೆ ನಿರ್ವಹಿಸುವಾಗ ಮಾಡಿಕೊಳ್ಳಬೇಕಾದ ‘ಎಡಿಟಿಂಗ್’ ಏನೇನು ಎಂಬ ಪೂರ್ವತಯಾರಿಯೊಂದು ಬೇಕಾಗುತ್ತದೆ. ಇದು ರಂಗತಂತ್ರ, ವೇಷಗಾರಿಕೆ, ಬಣ್ಣಗಾರಿಕೆ ಎಲ್ಲದಕ್ಕೂ ಅನ್ವಯಿಸುವಂತಹ ಮಾತು. ಹಾಗೆ ನೋಡಿದರೆ ಇಡೀ ಯಕ್ಷಗಾನ ರಂಗಭೂಮಿಯ ಸಮಸ್ಯೆಯನ್ನು ಅಸಮತೋಲನ ಸಮಸ್ಯೆ ಎನ್ನಬಹುದು.

ಭಾರತೀಯ ಸಾಂಪ್ರದಾಯಿಕ ಕಲೆಗಳು ರೂಪನಿಷ್ಠ ಕಲೆಗಳು. ಶೈಲಿಯನ್ನು ಆಧರಿಸಿ ನಡೆಯುವಂಥವು. ಹಾಗಾದರೆ ಪ್ರಯೋಗಗಳು ಬೇಡವೇ ? ಬೇಕು. ಸಾಂಪ್ರದಾಯಿಕ ಕಲೆಗಳಲ್ಲಿ ಹೊಸತನವು ಸೇರ್ಪಡೆಯಾಗುವಾಗ ಅದು ಹಾಲು ಜೇನಿನಂತೆ ಸೇರಿಕೊಳ್ಳಬೇಕಾಗುತ್ತದೆ. ಈ ಸೌಂದರ್ಯಜ್ಞಾನವನ್ನು ಹೊಸ ತಲೆಮಾರಿಗೆ ತಿಳಿಸುವುದು ಯಾಕೋ ಕಷ್ಟವಾಗಿದೆ. ಈ ಸಮಸ್ಯೆ ಯಕ್ಷಗಾನಕ್ಕೆ ಸೀಮಿತವಾದದ್ದಲ್ಲ. ಸಾಮಾಜಿಕವಾಗಿಯೂ ಸೌಂದರ್ಯಜ್ಞಾನದ ಬಗ್ಗೆ ಒಂದು ಬಗೆಯ ನಿರ್ಲಕ್ಷ್ಯ ಇದಾಗಿದೆ.

• ನಿಮ್ಮ ಸಿಟ್ಟು ಮತ್ತು ವ್ಯಂಗ್ಯದ ಬಗ್ಗೆಯೂ ಮಾತುಗಳನ್ನು ಕೇಳಿದ್ದುಂಟು...

ನನ್ನನ್ನು ಚೆನ್ನಾಗಿ ಬಲ್ಲವರಿಗೆ ಇದರ ಮೂಲ ತಿಳಿದಿದೆ. ವ್ಯಕ್ತಿಗಿಂತ ಕಲಾಪ್ರಕಾರ ಮುಖ್ಯ, ಕಲಾಜ್ಞಾನವು ಮುಖ್ಯ ಎಂದು ನಂಬಿದ ಎಲ್ಲರನ್ನೂ ಹೀಗೆಯೇ ಹೇಳುತ್ತಾರೇನೋ. ಯಾರು ಸರಿ ಎನ್ನುವುದಕ್ಕಿಂತ ಯಾವುದು ಸರಿ ಎಂಬ ಉದ್ದೇಶದಿಂದ ನಾನು ಜನರೊಡನೆ ಮಾತನಾಡುತ್ತೇನೆ. ಹಾಗಾಗಿ ನನ್ನ ಮಾತುಗಳು ಅಪ್ರಿಯವೆನಿಸಿರಬಹುದು. ಈ ಪುರಾತನವಾದ, ಅಗಾಧ ಸ್ವರೂಪಿಯಾದ ಕಲೆಯಾಗಿರುವ ಈ ಯಕ್ಷಗಾನದ ಮುಂದೆ ನಾನೊಬ್ಬ ಸಾಮಾನ್ಯ ವ್ಯಕ್ತಿ.

• ಇದನ್ನು ಬಗೆಹರಿಸುವ ಪ್ರಯತ್ನವನ್ನು ಹೇಗೆ ಮಾಡಬಹುದು?

ಯಕ್ಷಗಾನ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಎಲ್ಲರೂ, ಅಂದರೆ ಕಲಾವಿದರು, ರಂಗತಜ್ಞರು, ಮೇಳದ ಯಜಮಾನರು, ದೇವಸ್ಥಾನಗಳು ಹಾಗೂ ಸರ್ಕಾರದ ಪ್ರತಿನಿಧಿಗಳು ಸೇರಿ, 25 ವರ್ಷಗಳ ಅವಧಿಗೆ ಒಂದು ವಿಶನ್ ಡಾಕ್ಯುಮೆಂಟ್ ಸಿದ್ಧಪಡಿಸಬೇಕು. ದೇವಸ್ಥಾನಗಳು ಕೂಡ ಹಣಸಂಗ್ರಹಕ್ಕೆ ಸೀಮಿತಗೊಳ್ಳದೇ ಕಲಾನೀತಿ ರೂಪಿಸಿಕೊಳ್ಳಬೇಕು. ಎಲ್ಲ ಮೇಳಗಳಿಗೆ ಅನ್ವಯವಾಗುವ ಸಾಮಾನ್ಯ ನಿಯಮವೊಂದನ್ನು ರೂಪಿಸಬೇಕು. ಇಂದು ಯಕ್ಷಗಾನದ ಪ್ರಸಿದ್ಧಿ ಗಡಿಗಳನ್ನು ಮೀರಿ ಸಾಕಷ್ಟು ವಿಸ್ತರಿಸಿದೆ. ಹಾಗಿದ್ದರೆ ವಿದೇಶಗಳಲ್ಲಿ ನಮ್ಮ ಕಲೆಯನ್ನು ಪ್ರಸ್ತುತಪಡಿಸುವಾಗ, ಅವುಗಳು ಹೇಗಿರಬೇಕು? ಅದು ನಮ್ಮಕಲೆಯ ವರ್ಚಸ್ಸನ್ನು ವೃದ್ಧಿಸಿ ಪ್ರಸ್ತುತಪಡಿಸಬೇಕು ಅಲ್ಲವೇ? ಅಲ್ಲಿನ ಪ್ರೇಕ್ಷಕರು ಅದನ್ನು ಭಾರತದ ಕಲೆಯೆಂದು ಗುರುತಿಸುತ್ತಾರೆ. ಆ ಜವಾಬ್ದಾರಿ ಯಕ್ಷಗಾನ ಕ್ಷೇತ್ರದಲ್ಲಿರುವ ಎಲ್ಲರ ಹೆಗಲ ಮೇಲೂ ಇದೆ.

ಯಕ್ಷಗಾನಕ್ಕೆ ಭಾಗವತರಿರುವಾಗ ಸಂಪ್ರದಾಯವು ನಿರ್ದೇಶಕನ ಸ್ಥಾನದಲ್ಲಿರುತ್ತದೆ. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಚೌಕಿ, ವೇಷ, ಬಣ್ಣಗಾರಿಕೆ, ಅರ್ಥಗಾರಿಕೆ ಸೇರಿದಂತೆ ಈ ರಂಗಭೂಮಿಯ ಎಲ್ಲ ತತ್ತ್ವಗಳನ್ನು ಅರಿತ, ಕಲಾನಿಷ್ಠೆಯಿರುವ ಒಂದು ನಿರ್ದೇಶನ ವ್ಯವಸ್ಥೆ ಬೇಕಾಗಿದೆ. ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ತಕ್ಕಂತಿರುವ ಒಂದು ಸಮಗ್ರ ಆರ್ಕೈವ್ಸ್ ಮಾಡುವುದರಿಂದ, ಮಲ್ಟಿ ಮೀಡಿಯಾ ಸ್ಟೋರೇಜ್ ರೂಪಿಸುವುದರಿಂದ ಹೊಸಬರಿಗೆ ಅದನ್ನು ಕಲಿಯಲು ಸುಲಭವಾಗುತ್ತದೆ. ಇಂದಿನ ಯುವ ಕಲಾವಿದರು ಹೊಸದನ್ನು ಕಲಿಯುವ ಉತ್ಸಾಹದಲ್ಲಿದ್ದಾರೆ. ಅವರು ಇತರ ಕಲಾಪ್ರಕಾರಗಳನ್ನು ನೋಡುವುದಕ್ಕೆ ಅವಕಾಶಗಳನ್ನು ಕಲ್ಪಿಸಬಹುದು. ಅಂದರೆ ಕಥಕ್ಕಳಿಯನ್ನು ನೋಡಿ, ಆ ಕಲಾಪ್ರಕಾರವನ್ನು ಗಮನಿಸಬೇಕೇ ಹೊರತು, ರಂಗಸ್ಥಳಕ್ಕೇ ಅದನ್ನು ನೇರವಾಗಿ ತರುವುದಲ್ಲ. ಈ ಅಗೋಚರ ಗೆರೆಯೊಂದನ್ನು ಕಲಾವಿದ ಅರ್ಥ ಮಾಡಿಕೊಳ್ಳಬೇಕು

• ಈ ನಿರಂತರ ಓಡಾಟ, ಅಧ್ಯಯನದ ಹಿನ್ನೆಲೆಯಲ್ಲಿರುವ ಸ್ಫೂರ್ತಿಯೇನು ?

ನನ್ನ ಪತ್ನಿ ಸುಚೇತಾ ನನ್ನ ಬದುಕನ್ನು ಒಪ್ಪ ಓರಣಗೊಳಿಸಲು ಸದಾ ಸಹಾಯ ಮಾಡಿದವಳು. ಕ್ರೀಡೆ, ಕೃಷಿ, ಓದು, ಬರಹ, ತಾಳಮದ್ದಳೆಗಳು, ಯಕ್ಷಗಾನ ಪ್ರದರ್ಶನಗಳೆಂದು ನನ್ನ ಓಡಾಟ ನಿರಂತರವಾಗಿರುವಾಗ ಅಂತಂಗದ ಸ್ರೋತವಾಗಿ ಅವಳು ನನ್ನೊಡನೆ ನಿಂತಿದ್ದಾಳೆ. ನಾನು ಉಪನ್ಯಾಸಕನಾಗಿ ಕೆಲಸ ಮಾಡಿದ ಬೆಸೆಂಟ್ ಶಿಕ್ಷಣ ಸಂಸ್ಥೆಯು ನನ್ನನ್ನು ಪೋಷಿಸಿದೆ. ಇನ್ನಷ್ಟು ಅಧ್ಯಯನ ಮಾಡಬೇಕಿತ್ತು, ಕೆಲಸಗಳನ್ನು ನಿರ್ವಹಿಸಬೇಕಿತ್ತು ಎಂಬ ಜ್ಞಾನ–ಹಸಿವು ಸದಾ ಇದ್ದದ್ದೇ.

ಆಫ್ರಿಕಾ ನೆಲದ ಪಲ್ಲಟಗಳಿಗೆ ಕೈಗನ್ನಡಿ

ಎಚ್. ದಂಡಪ್ಪ

ವಿಮರ್ಶೆ

ಚಿನುವ ಅಚಿಬೆಯವರ ‘Girls at war’ ಎಂಬ ಕಥಾ ಸಂಕಲನವನ್ನು ಚನ್ನಪ್ಪ ಕಟ್ಟಿಯವರು ‘ಯುದ್ಧ ಕಾಲದ ಹುಡುಗಿಯರು’ ಎಂಬ ಶೀರ್ಷಿಕೆಯಡಿಯಲ್ಲಿ ಅನುವಾದಿಸಿದ್ದಾರೆ. ಅಚಿಬೆಯವರ ಕಥೆಗಳಲ್ಲಿ ಜನಾಂಗದ ಹಿರಿಯರ, ವಿವೇಕಿಗಳ ಧ್ವನಿಯಾಗಿ ಕಾಣುವ ನಿರೂಪಕನಿದ್ದಾನೆ. ಜೊತೆಗೆ ಅಲ್ಲಲ್ಲಿ ಬೇರೆ ಧ್ವನಿಗಳೂ ಕಾಣುತ್ತವೆ. ವಸಾಹತುಶಾಹಿ ಪ್ರವೇಶದಿಂದಾಗಿ ಶಿಕ್ಷಣ, ಹಣ, ಧರ್ಮಗಳ ಮೂಲಕ ಆಧುನಿಕತೆಯತ್ತ ಹೊರಳಲು ಸಾಧ್ಯವಾಯಿತು ಎಂದು ಹೇಳುವ ಸುಶಿಕ್ಷಿತ ವಿಮರ್ಶಕನೊಬ್ಬನ ಧ್ವನಿಯೂ ಇಲ್ಲಿದೆ.

ಇಲ್ಲಿನ ಕಥೆಗಳಲ್ಲಿ ಸಂಪ್ರದಾಯಕ್ಕೆ ಅಂಟಿಕೊಂಡವರಿದ್ದಾರೆ, ಐರೋಪ್ಯ ಪ್ರಜ್ಞೆಯನ್ನು ಬೆಳೆಸಿಕೊಂಡು ಆಧುನಿಕ ಮೌಲ್ಯಗಳನ್ನು ಅಳವಡಿಸಿಕೊಂಡವರಿದ್ದಾರೆ. ಜೊತೆಗೆ ನಿಧಾನವಾಗಿ ಪರಂಪರೆಯಿಂದ ವರ್ತಮಾನಕ್ಕೆ ಬದಲಾಗುವ ಒಂದು ಪ್ರಜ್ಞೆ ಇದೆ. ಸಮುದಾಯದ ಸಂಸ್ಕೃತಿಯು ಮೌನವಾಗಿರುವಂತೆ, ಕ್ಷೀಣವಾಗಿರುವಂತೆ ಕಂಡರೂ ಅದು ಚಲಿಸುತ್ತಿದೆ ಎಂಬಂತೆ ಓದುಗರಿಗೆ ಭಾಸವಾಗುವಂತೆ ಕಥೆಗಳ ನಿರೂಪಕ ಕಥೆಯನ್ನು ನಿರೂಪಿಸುತ್ತಾನೆ.

ಆಫ್ರಿಕಾದ ಸಂಸ್ಕೃತಿಯಲ್ಲಿ ವಸಾಹತುಶಾಹಿ ಬರುವುದಕ್ಕಿಂತ ಮುಂಚೆ ಬಿರುಕುಗಳಿದ್ದವು. ಕ್ರೈಸ್ತ ಧರ್ಮ ಬಂದಾಗ ಅವರ ಸಂಸ್ಕೃತಿಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳುಂಟಾದವು. ಕೆಟ್ಟ ಪರಿಣಾಮಗಳಲ್ಲಿ ಭ್ರಷ್ಟಾಚಾರವೂ ಒಂದು. ಎರಡನೇ ಪೀಳಿಗೆಯಲ್ಲಿ ಇದರ ವಿರಾಟ್ ದರ್ಶನವನ್ನು ಕಾಣಬಹುದು. ಇಲ್ಲಿನ ಕೆಲವು ಕಥೆಗಳಲ್ಲಿ ಈ ಭ್ರಷ್ಟತೆಯ ಸ್ವರೂಪವನ್ನು ಕಾಣಬಹುದು.

ಪಾರಂಪರಿಕ ಜೀವನ ವಿಧಾನ, ನಗರದ ಆಕರ್ಷಣೆ, ರಾಜಕೀಯ ಹಾಗೂ ಆರ್ಥಿಕ ಭ್ರಷ್ಟಾಚಾರ, ಸ್ವಾತಂತ್ರ್ಯ ಬಂದ ನಂತರದ ಭ್ರಮನಿರಸನ, ಬುಡಕಟ್ಟು ಗ್ರಾಮಕ್ಕೂ ನಗರಕ್ಕೂ ಇರುವ ವೈದೃಶ್ಯ, ಭ್ರಷ್ಟತೆಗೆ ಇವೆರಡೂ ಪರಸ್ಪರ ಪೂರಕವಾಗಿರುವುದರ ಸ್ವರೂಪದ ಅನಾವರಣವೂ ಈ ಕಥೆಗಳ ನಿರೂಪಣೆಯಲ್ಲಿದೆ.



ಪು: 186 ₹180

ಯುದ್ಧ ಕಾಲದ ಹುಡುಗಿಯರು
ಕನ್ನಡಕ್ಕೆ: ಚನ್ನಪ್ಪ ಕಟ್ಟಿ
ಪ್ರ: ನೆಲೆ ಪ್ರಕಾಶನ ಸಂಸ್ಥೆ, ಸಿಂಧಗಿ
ಸಂ: 9481082518

ಈ ಕಥೆಗಳಲ್ಲಿ ಸಾಮಾಜಿಕ ಬದಲಾವಣೆಯನ್ನು ಒಪ್ಪಿಕೊಳ್ಳುವ ಮನೋಭಾವವಿದೆ. ಪರಿಶುದ್ಧ ಆಫ್ರಿಕಾಕ್ಕೆ ಮರುಳುವ ಹಂಬಲ ಇಲ್ಲಿಲ್ಲ. ಸಾಮಾಜಿಕ ಬದಲಾವಣೆ, ರಾಷ್ಟ್ರ ನಿರ್ಮಾಣ, ಸ್ವಾತಂತ್ರ್ಯ, ವರ್ಗಗಳ ಉದಯ, ಹೋರಾಟಗಳು ಒಂದು ಗುರಿಯತ್ತ ಚಲಿಸುತ್ತಿರುವ ಸ್ವರೂಪವನ್ನು ಇಲ್ಲಿನ ಕಥೆಗಳಲ್ಲಿ ಕಾಣಬಹುದು. ಆದ್ದರಿಂದ ಇಲ್ಲಿನ ಕಥೆಗಳಲ್ಲಿ ಸಂಕ್ರಮಣಾವಸ್ಥೆಯ ಸ್ಥಿತಿಯ ಸ್ವರೂಪವನ್ನು, ನಿರ್ವಸಾಹತೀಕರಣದ ಲಯಗಳನ್ನು ಕಾಣಬಹುದು.

‘ಮದುವೆಯೆಂಬುದು ಖಾಸಗೀ ಸಂಗತಿ’ ಎಂಬ ಕಥೆಯಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷದ ಸ್ವರೂಪವಿದೆ, ಸಂಪ್ರದಾಯ ನಿಯಂತ್ರಿಸಿದರೆ ಆ ನಿಯಂತ್ರಣವನ್ನು ಮುರಿಯುವ ಕೆಲಸವನ್ನು ಆಧುನಿಕತೆಯ ಮೌಲ್ಯಗಳು ಮಾಡುತ್ತವೆ. ಆಧುನಿಕತೆಯ ಲಕ್ಷಣವೇ ಸ್ವಾತಂತ್ರ್ಯ ಮತ್ತು ಬದಲಾವಣೆಗಳು. ಆಧುನಿಕತೆಗೆ ಸಂಪ್ರದಾಯ ಮಣಿಯುತ್ತದೆ. ಇದಕ್ಕೆ ಕಾರಣ ಮಾನವ ಸಂಬಂಧಗಳು. ತಂದೆ ಮತ್ತು ಮಗನ ನಡುವೆ ನಡೆಯುವ ಸಂಘರ್ಷದಲ್ಲಿ ತಂದೆ ಶರಣಾಗುವುದು ತನ್ನ ಮಗನಿಗಲ್ಲ, ತನ್ನ ಸೊಸೆ ಮತ್ತು ಮೊಮ್ಮಕ್ಕಳಿಗೆ. ಮಳೆ, ಈ ಕಥೆಯಲ್ಲಿ ಬದಲಾವಣೆ ಮತ್ತು ಆಧುನಿಕತೆಯನ್ನು ಸ್ವಾಗತಿಸುವ ಸಂಕೇತವಾಗಿ ಬಂದಿದೆ. ಭಾರತದಂತಹ ಎಲ್ಲಾ ಸಂಪ್ರದಾಯ ನಿಷ್ಠ ಸಮಾಜಗಳಿಗೆ ಅನ್ವಯವಾಗುವ ಕಥೆ ಇದು.

‘ಯುದ್ಧಾನಂತರದ ಶಾಂತಿ’ ಈ ಸಂಕಲನದ ಎಲ್ಲಾ ದೃಷ್ಟಿಯಿಂದಲೂ ಬಹಳ ಯಶಸ್ವಿಯಾದ ಕಥೆ. ನೈಜೀರಿಯಾದ ಅಂತರ್ಯುದ್ಧದ ನಂತರ ಬರೆಯಲಾಗಿರುವ ಈ ಕಥೆಯಲ್ಲಿ ದೇಶದಲ್ಲಿ ಹಾಳಾಗಿರುವ ಮೂಲಸೌಕರ್ಯ ಮತ್ತು ಆರ್ಥಿಕತೆಯನ್ನು ಅನಾವರಣಗೊಳಿಸುತ್ತಾ ಅಮಾಯಕ ಜೀವಗಳ ಸಾವು ಮತ್ತು ಜನರ ಶೋಚನೀಯ ಸನ್ನಿವೇಶಗಳನ್ನು ಸಾಂಕೇತಿಕವಾಗಿ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

ಯುದ್ಧದಲ್ಲಿ ಜೊನದನ್ ಮತ್ತು ಇವೆಗ್ಬು ದಂಪತಿಯ ಮನೆ, ಆಸ್ತಿ ಧ್ವಂಸವಾಗುತ್ತದೆ. ತನ್ನ ಮಗನನ್ನೂ ಕಳೆದುಕೊಂಡಿರುವ ಅವರು ಧ್ವಂಸಗೊಂಡ ತಮ್ಮ ಮನೆಯ ಅವಶೇಷಗಳ ಅಡಿಯಲ್ಲಿದ್ದ ಸೈಕಲ್ಲನ್ನು ತೆಗೆದು ರಿಪೇರಿ ಮಾಡಿ ಬಾಡಿಗೆ ಟ್ಯಾಕ್ಸಿಯನ್ನಾಗಿ ಪರಿವರ್ತಿಸಿ ಹಣ ಸಂಪಾದನೆ ಮಾಡಿ ಬದುಕನ್ನು ಕಟ್ಟಿಕೊಳ್ಳುವ ಬಗೆ ಇಲ್ಲಿದೆ. ‘ಯುದ್ಧಾನಂತರದ ಶಾಂತಿ’ ಶೀರ್ಷಿಕೆಯೇ ವ್ಯಂಗ್ಯದಿಂದ ಕೂಡಿದೆ. ಅಧಿಕಾರಿಗಳ ಅಸಮರ್ಥತೆ, ಹಿಂಸಾಚಾರ, ಅದರ ಪರಿಣಾಮಗಳನ್ನು ಚಿತ್ರಿಸುವ ಈ ಕಥೆಯಲ್ಲಿ ಬೈಸಿಕಲ್, ಭರವಸೆ ಮತ್ತು ಬದುಕನ್ನು ಪುನರ್‌ರೂಪಿಸಿಕೊಳ್ಳುವ ಸಂಕೇತವಾಗಿ ಬರುತ್ತದೆ. ‘ನಥಿಂಗ್ ಪಜಲ್ಸ್ ಗಾಡ್’ ಎಂಬ ಪದ ಅನುರಣನಗೊಳ್ಳುತ್ತದೆ.

‘ಯುದ್ದ ಕಾಲದ ಹುಡುಗಿಯರು’ ಕಥೆಯಲ್ಲಿಯೂ ಯುದ್ಧದ ಪರಿಣಾಮಗಳು ತೀವ್ರವಾಗಿ ಚಿತ್ರಣಗೊಂಡಿವೆ.

‘ಹುಚ್ಚ’ ಕಥೆಯು, ನೈಜೀರಿಯಾದ ಆದಿವಾಸಿ ಜನಾಂಗದ ಜೀವನವು ವಸಾಹತುಶಾಹಿಯ ಪ್ರಭಾವದಿಂದ ಛಿದ್ರವಾದವಾಗುವ ಸ್ವರೂಪವನ್ನು ಸಾಂಕೇತಿಕವಾಗಿ ಚಿತ್ರಿಸಿದರೆ ‘ಸಕ್ಕರೆಯ ಹುಡುಗಿ’ ಕಥೆ ಆಧುನಿಕತೆಯ ಸೆಳೆತದ ಅಪಾಯಕಾರಿ ನಿಲುವುಗಳನ್ನು ಹಿಡಿದಿಟ್ಟಿದೆ. ‘ಅಂಕಲ್‌ಬೆನ್‌ನ ಆಯ್ಕೆ’, ‘ನಿವಾಳಿಸಿದ ಮೊಟ್ಟೆ’, ‘ಸೇಡಿನ ಸಾಲಗಾರ’, ‘ಚಾಯಿಕನ ಶಾಲಾದಿನಗಳು’ ಕಥೆಗಳಲ್ಲಿ ಆಧುನಿಕತೆ, ಇಂಗ್ಲಿಷ್ ಶಿಕ್ಷಣ, ಪ್ರಗತಿ ಎಂಬ ಪರಿಕಲ್ಪನೆಗಳ ಸತ್ಯಾಸತ್ಯಗಳು ಓದುಗನನ್ನು ಆಲೋಚಿಸುವಂತೆ ಮಾಡುವಂತೆ ನಿರೂಪಿತವಾಗಿವೆ.

ವಸಾಹತುಶಾಹಿಯ ಪರಿಣಾಮಗಳು ಸಮಕಾಲೀನ ಆಫ್ರಿಕನ್ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಯಾವ ರೀತಿ ಬದಲಾಣೆ ತಂದವು ಎಂಬುದನ್ನು ಅನಾವರಣಗೊಳಿಸುವ ನಿರೂಪಣೆ ಇಲ್ಲಿದೆ. ಭಾಷೆ ಸರಳವಾಗಿದ್ದು ವಾಕ್ಯಗಳು ಅರ್ಥಹೀನ ಅಲಂಕಾರಗಳಿಂದ ದೂರವಾಗಿವೆ. ಚಿತ್ರಗಳು, ಸಂಕೇತಗಳನ್ನು ಅರ್ಥಪೂರ್ಣವಾಗಿ ಬಳಸುವ ಅಚಿಬೆಯವರ ಈ ಕಥೆಗಳು ಭಾರತದ ಇಂದಿನ ಸಾಂಸ್ಕೃತಿಕ ಸಂದರ್ಭಕ್ಕೂ ಪ್ರಸ್ತುತವಾಗುತ್ತವೆ. ಇಂತಹ ಕಥೆಗಳನ್ನು ಕಟ್ಟಿಯವರು ಅಲ್ಲಲ್ಲಿ ಕಲ್ಯಾಣ ಕರ್ನಾಟಕದ ಭಾಷೆಯ ಪದಗಳನ್ನು ಬಳಸಿ ಮೂಲದಲ್ಲಿನ ಸಂಕೇತಗಳನ್ನು, ಚಿತ್ರಗಳನ್ನು, ಧ್ವನಿಯನ್ನು ಹಿಡಿದು ಅನುವಾದಿಸಿದ್ದಾರೆ.

ಅಪೂರ್ವ ತತ್ತ್ವಶಾಸ್ತ್ರಜ್ಞನ ಅರಿವಿಗೊಂದು ಪ್ರವೇಶಿಕೆ


ಎಸ್. ದಿವಾಕರ್

ಒಳನೋಟ

ಆನಂದ ಕುಮಾರಸ್ವಾಮಿ ಒಬ್ಬ ತತ್ತ್ವಶಾಸ್ತ್ರಜ್ಞರು, ಇತಿಹಾಸಕಾರರು, ಭಾರತೀಯ ಕಲೆ ಮತ್ತು ಸಂಸ್ಕೃತಿಯ ಆರಾಧಕರು. ಅನೇಕ ಗ್ರಂಥಗಳ ಮತ್ತು ಲೇಖನಗಳ ಮೂಲಕ ಪ್ರಾಚೀನ ಭಾರತೀಯ ಕಲೆಯ ಸಾರವನ್ನೂ ಅದರ ತತ್ತ್ವವನ್ನೂ ಪಾಶ್ಚಾತ್ಯ ಜಗತ್ತಿಗೆ ಪರಿಚಯಿಸಿದವರು. ಎಲ್ಲಕ್ಕಿಂತ ಮಿಗಿಲಾಗಿ ಭಾರತೀಯ ಕಲಾಚರಿತ್ರೆಯನ್ನು ಒಂದು ಜ್ಞಾನಶಿಸ್ತನ್ನಾಗಿ ರೂಪಿಸಿದ ಮಹಾನುಭಾವರು.

‘ನಾನು ಯಾವುದೇ ನೂತನ ತತ್ತ್ವವನ್ನಾಗಲೀ, ನನ್ನದೆ ಸಿದ್ಧಾಂತವನ್ನಾಗಲೀ ಮಂಡಿಸುತ್ತಿಲ್ಲ. ನಿರ್ವಿಕಾರಸತ್ಯವೆಂದು ನಾನು ತಿಳಿದುಕೊಂಡಿರುವುದನ್ನು ಅರ್ಥಮಾಡಿಕೊಳ್ಳಲು ಜೀವನದುದ್ದಕ್ಕೂ ಪ್ರಯತ್ನಿಸುವುದಷ್ಟೆ ನನ್ನ ಕೆಲಸ. ಇದರಲ್ಲೂ, ಮೊದಲನೆಯ ಆದ್ಯತೆಯೆಂದರೆ ನನ್ನ ಆತ್ಮೋನ್ನತಿಯೇ; ಅನಂತರದಲ್ಲಿ ಈ ನನ್ನ ಫಲಿತಾಂಶಗಳನ್ನು ಬೇರೆಯವರೂ ಬಳಸಿಕೊಳ್ಳಬಹುದಷ್ಟೆ. ನನ್ನ ದೃಷ್ಟಿಯಲ್ಲಿ ಕೆಲವು ಸೂತ್ರಗಳು, ಸಿದ್ಧಾಂತಗಳು, ಮೌಲ್ಯಗಳು ಪ್ರಶ್ನಾತೀತವಾದಂಥವು. ನನ್ನ ಆಸಕ್ತಿಯಿರುವುದು ಹೊಸ ಹೊಸದಾದ ಸಿದ್ಧಾಂತಗಳನ್ನು ಕುರಿತು ಚಿಂತಿಸುವುದರಲ್ಲಿ ಅಲ್ಲ, ನಿದಿಧ್ಯಾಸನದಲ್ಲಿ’ ಎಂಬ ಮಾತುಗಳು ಅವರ ವಿಶಿಷ್ಟ ಚಿಂತನಕ್ರಮದ ಮೇಲೆ ಬೆಳಕು ಚೆಲ್ಲುತ್ತವೆ. ಸೂರ್ಯಪ್ರಕಾಶ ಪಂಡಿತ್ ಬರೆದಿರುವ ‘ಭಾರತೀಯ ಪ್ರಜ್ಞಾವಾಹಿನಿ ಆನಂದ ಕುಮಾರಸ್ವಾಮಿ’ ಎಂಬ ಈ ಪುಸ್ತಕ ಅವರ ಕೆಲವು ಅಪೂರ್ವ ವಿಚಾರಗಳ ವ್ಯಾಖ್ಯಾನವಾಗಿರುವುದರಿಂದ ಓದುಗರಿಗೊಂದು ಉತ್ತಮ ಪ್ರವೇಶಿಕೆಯಾಗಿದೆ.

ಭಾರತೀಯ ಸಾಂಪ್ರದಾಯಿಕ ಕಲೆ ಜ್ಞಾನದ ಒಂದು ಸ್ರೋತವೇ ಆಗಿದ್ದು ಅದು ವ್ಯಕ್ತಿಯನ್ನು ಪರಿವರ್ತಿಸುವಷ್ಟು ಶಕ್ತವಾಗಿದೆ ಎಂದರಿತ ಆನಂದ ಕುಮಾರಸ್ವಾಮಿ ಸ್ವತಃ ಅದರ ಬಹುಮುಖ್ಯ ವಕ್ತಾರರಾದರು. ಅವರು ಭಾರತೀಯ ಕಲೆಯನ್ನು ಗ್ರಹಿಸಿದ್ದು ‘ಫಿಲಸಾಫಿಯಾ ಪೆರೆನ್ನಿಸ್’ ಎಂಬ ಪರಿಕಲ್ಪನೆಯ ಬೆಳಕಿನಲ್ಲಿ. ‘ಫಿಲಸಾಫಿಯಾ ಪೆರೆನ್ನಿಸ್’ ಪ್ರಕಾರ ಒಂದು ಸಾಂಪ್ರದಾಯಿಕ ಕಲೆ ಸೌಂದರ್ಯಾನುಭೂತಿಗೆ ಕಾರಣವಾಗುವ ಕೃತಿಯಷ್ಟೇ ಅಲ್ಲ, ಅದೊಂದು ಮರೆವಿಗೆ ಸಂದ ಜನ್ಮಭೂಮಿಯನ್ನು ನೆನಪಿಗೆ ತಂದುಕೊಡಬಲ್ಲ ಸ್ಫೂರ್ತಿಮೂಲ.



ಪು: 128 ₹150

ಭಾರತೀಯ ಪ್ರಜ್ಞಾವಾಹಿನಿ ಆನಂದ ಕುಮಾರಸ್ವಾಮಿ
ಲೇ: ಎಸ್. ಸೂರ್ಯಪ್ರಕಾಶ ಪಂಡಿತ್
ಪ್ರ: ಅಭಿಜ್ಞಾನ, ಬೆಂಗಳೂರು
ಸಂ: 9448494949

1877ರಲ್ಲಿ ಶ್ರೀಲಂಕಾದ ಕೊಲಂಬೊದಲ್ಲಿ ಹುಟ್ಟಿದವರು ಆನಂದ ಕುಮಾರಸ್ವಾಮಿ. ಅವರ ತಂದೆ ಸರ್ ಮುತ್ತು ಕುಮಾರಸ್ವಾಮಿ; ತಮಿಳು ಭಾಷಿಕರು. ತಾಯಿ ಎಲಿಜಬೆತ್ ಕ್ಲೇ; ಇಂಗ್ಲೆಂಡಿನವರು. ಮುತ್ತು ಕುಮಾರಸ್ವಾಮಿ ತಮ್ಮ ನಲವತ್ತಾರನೆಯ ವಯಸ್ಸಿನಲ್ಲಿ ನಿಧನರಾದ ಮೇಲೆ ಆನಂದ ಕುಮಾರಸ್ವಾಮಿ ಇಂಗ್ಲೆಂಡಿಗೆ ಹೋಗಿ ಭೂವಿಜ್ಞಾನದಲ್ಲಿ ಪದವೀಧರರಾದರು. ಶ್ರೀಲಂಕಾಕ್ಕೆ ಹಿಂತಿರುಗಿ ಮೂರು ವರ್ಷ ‘ಮಿನರಲಾಜಿಕಲ್ ಸರ್ವೆ ಆಫ್ ಸಿಲೋನ್’ನ ನಿರ್ದೇಶಕರಾಗಿದ್ದರು.

ಭಾರತದಲ್ಲಿ ಅವರ ಸಂಪರ್ಕಕ್ಕೆ ಬಂದವರು ಬಾಲಗಂಗಾಧರ ತಿಲಕ್, ಗೋಪಾಲಕೃಷ್ಣ ಗೋಖಲೆ, ಅರವಿಂದ ಘೋಷ್ ಮತ್ತು ವಿಪಿನಚಂದ್ರ ಪಾಲ್. ಈ ಸಂಪರ್ಕದಿಂದಾಗಿ ಅವರು ಭಾರತದ ರಾಷ್ಟ್ರೀಯ ಚಳವಳಿಯ ನಿಜವಾದ ಮಹತ್ವವೇನೆಂದು ತಿಳಿದುಕೊಳ್ಳಲು ಪ್ರಯತ್ನಿಸಿದರು. ಅವರ ದೃಷ್ಟಿಯಲ್ಲಿ ರಾಷ್ಟ್ರೀಯ ಚಳವಳಿ ಪಾಶ್ಚಾತ್ಯ ಆದರ್ಶದ ದಬ್ಬಾಳಿಕೆಯಿಂದ ಅಧ್ಯಾತ್ಮಿಕ ಹಾಗೂ ಮಾನಸಿಕ ಸ್ವಾತಂತ್ರ್ಯ ಗಳಿಸಿಕೊಳ್ಳುವ ಹೋರಾಟವನ್ನೂ ಪ್ರತಿನಿಧಿಸಿತು.

ಇತರ ವಿಷಯಗಳ ಜೊತೆಗೆ ಜೀವನದ ಆಳವಾದ ಸೂತ್ರಗಳನ್ನು ಆಧರಿಸಿದ ಕಲಾ ಅಧ್ಯಯನವೂ ನಮ್ಮ ಶಿಕ್ಷಣ ನೀತಿಯಾಗಬೇಕು ಎಂದು 1909ರಷ್ಟು ಹಿಂದೆಯೇ ಪ್ರತಿಪಾದಿಸಿದರು.

1917ರಿಂದ 1947ರಲ್ಲಿ ನಿಧನರಾಗುವವರೆಗೂ ಬೋಸ್ಟನ್ ಮ್ಯೂಸಿಯಂನಲ್ಲಿ ಕ್ಯುರೇಟರ್ ಆಗಿದ್ದವರು ಕುಮಾರಸ್ವಾಮಿ. ಅವರ ಗ್ರಂಥಗಳು ಕೆಲವೇ ಪಾಶ್ಚಾತ್ಯರು ಗ್ರಹಿಸಿದ, ಆದರೆ ಬಹುಮಂದಿ ಅಪಾರ್ಥ ಮಾಡಿಕೊಂಡ ಭಾರತೀಯ ಮನೋಧರ್ಮದ ಅನನ್ಯತೆಯನ್ನು ಸಮಗ್ರವಾಗಿ ಚರ್ಚಿಸಿದವು.

ಆನಂದ ಕುಮಾರಸ್ವಾಮಿಯವರದು ಅಭಿವ್ಯಕ್ತಿಯಲ್ಲಿ ಸಂಕೀರ್ಣತೆಯಿದ್ದೂ ಸಂದಿಗ್ಧತೆಗೆ ಎಡೆಮಾಡಿಕೊಡದ ನಿಷ್ಕೃಷ್ಟವೂ ವಿಚಾರಸ್ಪಷ್ಟವೂ ಆದ ಗದ್ಯ. ಅದು ಎಷ್ಟು ಸಾಂದ್ರವಾಗಿರುತ್ತದೆಯೆಂದರೆ ಸಾಮಾನ್ಯ ಓದುಗರು ಉದ್ದೇಶಿತ ಅರ್ಥವನ್ನು ಗ್ರಹಿಸುವುದಕ್ಕಾಗಿ ಕೆಲವು ವಾಕ್ಯಗಳನ್ನು ಮತ್ತೆ ಮತ್ತೆ ಓದಬೇಕಾಗಬಹುದು. ಓದುಗರ ಮೇಲೆ ಯಾವುದೇ ಆಲಂಕಾರಿಕ ಪರಿಣಾಮ ಬೀರದ, ಅವರ ಮನಸ್ಸನ್ನು ಸೆಳೆಯುವುದಕ್ಕಾಗಿ ಯಾವುದೇ ಚಿತ್ರಕಶೈಲಿಯನ್ನು ಉಪಯೋಗಿಸದ, ಆದರೆ ತೀರ ಗಂಭೀರವಾಗಿದ್ದು ತನ್ನಷ್ಟಕ್ಕೇ ಪ್ರಕಾಶಮಾನವಾಗಿರುವ ಗದ್ಯ ಅದು. ಸೂರ್ಯಪ್ರಕಾಶ ಪಂಡಿತರು ಆನಂದ ಕುಮಾರಸ್ವಾಮಿಯವರನ್ನು ಎಷ್ಟು ಆಳವಾಗಿ, ಎಷ್ಟು ಸಮಗ್ರವಾಗಿ ಗ್ರಹಿಸಿದ್ದಾರೆಂಬುದಕ್ಕೆ ಈ ಪುಸ್ತಕದ ಉದ್ದಕ್ಕೂ ಹಾಗೂ ಕೊನೆಯಲ್ಲೂ ಇರುವ ಆನಂದ ಕುಮಾರಸ್ವಾಮಿಯವರ ಸೂಕ್ತಿಗಳಂಥ ಕೆಲವು ಬಹುಮುಖ್ಯ ಮಾತುಗಳ ಅನುವಾದವನ್ನು ನೋಡಬೇಕು. ಅದು ಮೂಲ ಪಠ್ಯವನ್ನು ಸಂಕ್ಷೇಪಗೊಳಿಸದ, ಅದರ ಧಾಟಿಯನ್ನೇ ಕನ್ನಡಕ್ಕೆ ತಂದಿರುವ, ಹಾಗೆ ತಂದೂ ಎಲ್ಲಿಯೂ ಅಸಹಜ ಎನ್ನಿಸದ ಸೊಗಸಾದ ಅನುವಾದವಾಗಿದೆ.

ಆನಂದ ಕುಮಾರಸ್ವಾಮಿಯವರದು ಬಹುಆಯಾಮಗಳಿದ್ದ ಪ್ರತಿಭೆ. ಅವರು ಭಾರತೀಯ ಕಲೆಯ ಅಗ್ರಗಾಮಿ ಇತಿಹಾಸಕಾರರಷ್ಟೇ ಅಲ್ಲ, ಅದರ ಅಪೂರ್ವ ವ್ಯಾಖ್ಯಾನಕಾರರೂ ಹೌದು. ಅವರದು ಎಲ್ಲೆಯಿರದ ಜ್ಞಾನ ಮತ್ತು ಪಾಂಡಿತ್ಯ. ಸ್ವತಃ ಭಾರತೀಯ ರಾಷ್ಟ್ರೀಯತೆಯ ಮೊದಲ ಪ್ರತಿಪಾದಕರಾಗಿದ್ದೂ ಅವರ ದೃಷ್ಟಿ ಸಂಕುಚಿತವಾಗಿರಲಿಲ್ಲ. ಅದಕ್ಕೆ ವಿಶ್ವಾತ್ಮಕತೆಯ ಆಯಾಮವಿತ್ತು.

ಈ ಕೃತಿಯ ಮೊದಲಲ್ಲೇ, ಭಾರತಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ಆನಂದ ಕುಮಾರಸ್ವಾಮಿ ಭಾರತೀಯರಿಗೆ ಕೊಟ್ಟ ಸಂದೇಶವನ್ನು ಉಲ್ಲೇಖಿಸಿದ್ದಾರೆ ಸೂರ್ಯಪ್ರಕಾಶ್ ಪಂಡಿತ್. ಅದರ ಮೊದಲ ವಾಕ್ಯಗಳಿವು: ‘ನೀವು ನೀವಾಗಿರಿ. ಮಹಾತ್ಮ ಗಾಂಧಿ, ಭರತನ್ ಕುಮಾರಪ್ಪ, ಡಿ.ವಿ.ಗುಂಡಪ್ಪ, ಅಬುಲ್ ಕಲಾಮ್ ಆಜಾದ್, ಅಬ್ದುಲ್ ಗಾಫರ್ ಖಾನ್ ಮತ್ತು ಶ್ರೀ ರಮಣ ಮಹರ್ಷಿ, ಇವರನ್ನು ಅನುಸರಿಸಿ. ಕೆಳದರ್ಜೆಯ ತತ್ತ್ವಶಾಸ್ತ್ರಜ್ಞರನ್ನು ಲೆಕ್ಕಿಸುವುದೇಕೆ? ಮೋಸ ಹೋಗದಿರಿ: ಕೇಡಿನ ಸಂಪರ್ಕದಿಂದ ಒಳಿತು ಕೂಡ ಕೆಟ್ಟುಹೋಗುತ್ತದೆ.’ ಕುತೂಹಲದ ಸಂಗತಿಯೆಂದರೆ ಆನಂದ ಕುಮಾರಸ್ವಾಮಿಯವರು ಡಿ.ವಿ.ಜಿ.ಯವರ ಇಂಗ್ಲಿಷ್ ಪುಸ್ತಕಗಳನ್ನು ಓದಿದ್ದರೆನ್ನುವುದು.

ಮೊದಲ ಓದು


ವಸ್ತುವಿನಿಂದ ಗಮನ ಸೆಳೆವ ಕವಿತೆಗಳು

ವೃತ್ತಿಯಲ್ಲಿ ಶಿಕ್ಷಕಿಯಾಗಿರುವ ಕವಯತ್ರಿ ಮಮತ ಅರಸೀಕೆರೆ ಆರು ವರ್ಷಗಳ ಬಳಿಕ ‘ನೀರ ಮೇಲಿನ ಮುಳ್ಳು’ ಎಂಬ ಮತ್ತೊಂದು ಕವನ ಸಂಕಲನದೊಂದಿಗೆ ಬಂದಿದ್ದಾರೆ. ಇದು 50 ಕವನಗಳ ಗುಚ್ಛ.

ಪ್ರತೀ ಕವನದ ವಸ್ತುವಿನ ಆಯ್ಕೆಯೇ ಗಮನ ಸೆಳೆಯುವ ಮೊದಲ ವಸ್ತು. ‘ಅಮ್ಮ’ನಿಂದ ಹಿಡಿದು ‘ಗಾಂಧೀಜಿ’ಯವರೆಗೆ ನಾನಾ ವಿಷಯಗಳು ಕವಯತ್ರಿಯನ್ನು ಕಾಡಿವೆ. ‘ಸದ್ದುಗಳು’ ಎಂಬ ಕವನದಲ್ಲಿ ‘ಕೇಳದ ಸದ್ದುಗಳ’ನ್ನು ಮಮತ ಸೂಕ್ಷ್ಮವಾಗಿ ಆಲಿಸಿದ್ದಾರೆ. ಪಿಡುಗಿನ ತಲ್ಲಣದ ನಡುವೆ ‘ವೈರಸ್ಸಿಗೊಂದು ಮನವಿ’ ಮಾಡಿ ಮತ್ತೆ ನಗಬೇಕಾಗಿದೆ ಈ ಜಗ ನಿರುಮ್ಮಳವಾಗಿ ಎಂದಿದ್ದಾರೆ.

‘ವ್ಯತ್ಯಾಸವೇನಿಲ್ಲ ಬಿಡಿ, ತಾರತಮ್ಯವೂ ಇಲ್ಲ
ಎಲ್ಲರೂ ಒಂದೆ ನಾವಿಲ್ಲಿ, ಜಾತಿ ವರ್ಗ ಧರ್ಮವೂ
ತೂಗುತ್ತದೆ ಒಂದೇ ಸಮಾನತೆಯ ತಕ್ಕಡಿಯಲ್ಲಿ
ನಿತ್ಯ ಹೊಡೆದಾಟ ಸಂಘರ್ಷದ ಹೊಂದಾಣಿಕೆಯಲ್ಲಿ’

ಹೀಗೆನ್ನುತ್ತಾ ‘ಗಾಂಧಿಯ ಹೊಸ ಕನ್ನಡಕ’ ದೇಶದ ಪ್ರಸಕ್ತ ಸ್ಥಿತಿಯನ್ನು, ಅಭಿವೃದ್ಧಿಯ ತಾರತಮ್ಯವನ್ನು ವಿವರಿಸುವ ಪ್ರಯತ್ನವಾಗಿದೆ. ಹೀಗಾಗಿಯೇ ಇಲ್ಲಿನ ಕವಿತೆಗಳು ಆರೋಗ್ಯಕರವಾದ ಚರ್ಚೆಗೆ ಒಳಗಾಗಲಿ ಎನ್ನುತ್ತಾರೆ ಬೆನ್ನುಡಿ ಬರೆದ ಕವಯತ್ರಿ ಎಚ್.ಎಲ್.ಪುಷ್ಪ. ರೈತರ ಜೀವನ, ಸಂಕಷ್ಟ, ಆತ್ಮಹತ್ಯೆಯನ್ನು ಪ್ರಶ್ನಿಸುತ್ತಾ ಸಾಗುವ ‘ಜಗದ ಕಣಜ’ ಕವನ ರೈತನ ಜೀವನ ಸುಭದ್ರವಾಗಲಿ ಎನ್ನುವ ಆಶಯ ಹೊತ್ತಿದೆ. ನಗರೀಕರಣ, ತಂತ್ರಜ್ಞಾನದ ಹಸಿವನ್ನು ಪ್ರಶ್ನಿಸುವ ‘ಹಟ್ಟಿ ಮತ್ತು ಆತ್ಮ’ ಆರ್ಥಿಕ ಸ್ಥಿತ್ಯಂತರದ ಪರಿಣಾಮಗಳನ್ನು ನಿರೂಪಿಸಿದೆ. ಇಲ್ಲಿನ ಪದ್ಯಗಂಧಿ ಭಾಷೆ ಗಮನಸೆಳೆಯುತ್ತದೆ. ಕವಿತೆ ಕಟ್ಟುವಲ್ಲಿ ರೂಪಕಗಳ ಧಾರಾಳ ಬಳಕೆಯನ್ನು ಇಲ್ಲಿ ಕಾಣಬಹುದು. ವೈಯಕ್ತಿಕ ಯೋಚನೆಗಳಿಂದ ಹಿಡಿದು ಸಾಮಾಜಿಕ ಸ್ವರೂಪದ ರಚನೆಗಳು ಇಲ್ಲಿ ಅಡಕವಾಗಿದೆ. ‘ಕೃತಿಯ ಶೀರ್ಷಿಕೆ ಇಲ್ಲಿನ ಬಹುಪಾಲು ಕವಿತೆಗಳ ವಸ್ತುವಿನ್ಯಾಸವನ್ನು ಪ್ರತಿನಿಧೀಕರಿಸುತ್ತದೆ’ ಎನ್ನುತ್ತಾರೆ ಮುನ್ನುಡಿ ಬರೆದ ಬರಗೂರು ರಾಮಚಂದ್ರಪ್ಪ.



ಪು: 117 ₹150

ನೀರ ಮೇಲಿನ ಮುಳ್ಳು
ಲೇ: ಬಿ.ಎ.ಮಮತ ಅರಸೀಕೆರೆ
ಪ್ರ: ಸಪ್ನ ಇಂಕ್
ಸಂ: info@sapnaink.com

‘ತುಂಟ’ ಕವಿಯ ಜೀವನಮಥನ

‘ತುಂಟ’ ಕವಿಯ ಜೀವನಾನುಭವ ಮಥನ ಮಾಡಿದೆ ಈ ಕೃತಿ. ಬರಿಯ ಅನುಭವವಲ್ಲ. ಅನುಭಾವದ ಛಾಯೆಯೂ ಅಲ್ಲಿ ಕಾಣಿಸಿದೆ. ಉದಾಹರಣೆಗೆ ‘ಬದುಕು ರೂಪುಗೊಳ್ಳುವ ಬಗೆ’ ಲೇಖನದಲ್ಲಿ ‘ತ್ರಿಕಾಲ ಜ್ಞಾನಿಯಾದ ಗೀತಾಚಾರ್ಯನಿಗೇ (ಶ್ರೀಕೃಷ್ಣ) ಯಾವ ದುರಂತವನ್ನೂ ತಪ್ಪಿಸಲಾಗಲಿಲ್ಲ. ಯಾದವರೆಲ್ಲಾ ತಮ್ಮ ತಮ್ಮಲ್ಲೇ ಕಾದಾಡಿಕೊಂಡು ಸತ್ತಾಗ ಭ್ರಮ ನಿರಸನಗೊಳ್ಳುತ್ತಾನೆ. ಸಾಮಾನ್ಯ ಬೇಡನ ಬಾಣದಿಂದ ಅವನ ಸಾವು ಸಂಭವಿಸುತ್ತದೆ...’ ಎನ್ನುವ ವಿಶ್ಲೇಷಣೆ.

ಭವಿಷ್ಯ ಪೂರ್ವನಿಶ್ಚಿತವಾದದ್ದು ಎಂಬ ಚಿಂತನೆಯನ್ನು ಮೇಲಿನ ಸಾಲುಗಳ ಮೂಲಕ ಚರ್ಚೆಗೆ ಒಳಪಡಿಸಿದ್ದಾರೆ ಲೇಖಕ. ನಮ್ಮ ಅಂತರಾತ್ಮಕ್ಕೆ ನಿಷ್ಠರಾದರೆ ಬೇರೆಯವರಿಗೆ ಅಪ್ರಾಮಾಣಿಕರಾಗಲು ಸಾಧ್ಯವೇ ಇಲ್ಲ ಎಂದು ‘ಅಂತರಂಗಕ್ಕೊಂದು ಒಳ್ಳೆಯತನದ ಬೆಳಕು’ ಹಿಡಿದಿದ್ದಾರೆ. ವಿದ್ಯಾರ್ಥಿನಿಯೊಬ್ಬಳ ಸಾವಿಗೆ ಮರುಗುವ ಮೇಷ್ಟ್ರು, ಮೊದಲ ಬರಹವು ‘ಸುಧಾ’ದಲ್ಲಿ ಪ್ರಕಟವಾದಾಗಿನ ಸಂಭ್ರಮವನ್ನು ನೆನಪಿಸಿದ್ದಾರೆ. ಕಾಮಕುತೂಹಲದ ವಿವರಣೆಯಲ್ಲಿ ಕೊನೆಯ ಸಾಲು (ಲೇಖನ: ಲಿಬಿಡೋ ಬಿಡುವುದಿಲ್ಲ) ಆಸಕ್ತಿದಾಯಕವಾಗಿದೆ. ತೀರಾ ಸಡಿಲ ಬಿಟ್ಟರೆ ತಂತಿ ಮಿಡಿಯುವುದಿಲ್ಲ. ತೀರಾ ಬಿಗಿ ಮಾಡಿದರೆ ತಂತಿ ಹರಿದು ಹೋದೀತು. ವೀಣೆಯನ್ನು ಹದವರಿತು ಶ್ರುತಿ ಮಾಡುವ ವಿದ್ಯೆಯನ್ನು ಪೋಷಕರು ಕಲಿಯಬೇಕಾದದ್ದು ಇಂದಿನ ಅಗತ್ಯ ಎಂದಿದ್ದಾರೆ.

ತುಂಟ ಕಣ್ಣುಗಳು ಜೀವನವನ್ನೊಮ್ಮೆ ಹಿಂತಿರುಗಿ ನೋಡಿವೆ. ಹಾಗಾಗಿ ಈ ಕೃತಿ ನಿಜ ಅರ್ಥದ ಮನಸ್ಸಿನ ಮಾತಾಗಿದೆ. ಹಿರಿದಾದ ಅರ್ಥವನ್ನೂ ಅಂತರಾಳದಲ್ಲಿ ಇರಿಸಿಕೊಂಡಿದೆ.



ಪು: 139 ₹125

ಮನಸೇ ನನ್ನ ಮನಸೇ
ಲೇ: ಬಿ.ಆರ್. ಲಕ್ಷ್ಮಣರಾವ್
ಪ್ರ: ಸಪ್ನ ಬುಕ್ ಹೌಸ್
ಸಂ: 080- 40114455

ಸಮನಾರ್ & ಜಿಗರ್‌ಥಂಡಾ!

ಡಾ.ಕೆ.ಎಸ್. ಚೈತ್ರಾ



ಸಮನಾರ್ ಬೆಟ್ಟದ ವಿಹಂಗಮ ನೋಟ

ಬೆಳಿಗ್ಗೆ ಬೇಗನೆದ್ದು ಮದುರೈ ಮೀನಾಕ್ಷಿಯ ದರ್ಶನ ಪಡೆದು ಪರಿಮಳ ಬೀರುವ ಮಲ್ಲಿಪೂ ತಲೆಗೇರಿಸಿದ್ದಾಗಿತ್ತು. ದೇಗುಲದಲ್ಲೇ ಸಿಗುವ ಬಿಸಿಬಿಸಿ ಪೊಂಗಲ್ ಮತ್ತು ಕೀರೈವಡೆ ತಿಂದು ಕಾರಲ್ಲಿ ಕುಳಿತಿದ್ದಷ್ಟೆ. 'ಸಮನಾರ್ ಮಲ್ಲೈ ಪೋಲಾಮ್ ವಾಂಗೋ... (ಸಮನಾರ್ ಬೆಟ್ಟಕ್ಕೆ ಹೋಗೋಣ ಬನ್ನಿ)' ಎಂದು ದೊರೈ ಕರೆದಾಗ ಹೊಟ್ಟೆ ಭಾರವಾಗಿ ಕಣ್ಣು ಎಳೆಯುತ್ತಿತ್ತು. ಸಮನಾರ್ ಹೆಸರು ಕೇಳಿ ಬಹುಶಃ ಕಡಿದಾದ ಬೆಟ್ಟ ಮಾನವರಿಗೆ 'ಎನ್ನ ಸಮನಾರ್' ಎಂದು ಸವಾಲು ಹಾಕಿ ನಿಂತಿದೆ ಎಂದು ನಾನು ಊಹಿಸಿದೆ. ಹೆಸರೇ ಹೀಗಿದೆ. ಇನ್ನು ಬಿಸಿಲೇರಿದರೆ ಬೆಟ್ಟ ಹತ್ತುವುದು ಕಷ್ಟ ಎಂದು ಕೂಡಲೇ ಹೊರಟಿದ್ದಾಯ್ತು.

ಜಿಗರ್ ಥಂಡಾ

ಜನಜಂಗುಳಿ ದಟ್ಟವಾಗಿದ್ದ ಕಿರಿದಾದ ದಾರಿಯಲ್ಲಿ ಚಲಿಸುತ್ತಿದ್ದ ಕಾರು ಪುಟ್ಟ ಅಂಗಡಿ ಬಳಿ ನಿಂತಿತು. ಅಂಗಡಿಯ ಹೆಸರೇ ಫೇಮಸ್! ದಪ್ಪ ಅಕ್ಷರಗಳಲ್ಲಿ ಜಿಗರ್ ಥಂಡಾ ಎಂಬ ಹೆಸರು ಕಾಣುತ್ತಿತ್ತು. ದೊರೈ, ಮದುರೈ ಸ್ಪೆಷಲ್ 'ಜಿಲ್ ಜಿಲ್ ಜಿಗರ್ ಥಂಡಾ' ತರುತ್ತೇನೆ ಎಂದಾಗ ಆಶ್ಚರ್ಯವಾಗಿತ್ತು. ಕಡೆಗೆ ಸಿಕ್ಕಿದ್ದು ಬಿಸಿಲಿಗೆ ಅಮೃತವೇ ಎನಿಸಿದ ನಮ್ಮ ಫಲೂದಾಕ್ಕೆ ಹತ್ತಿರವೆನಿಸಿದ ವಿಶಿಷ್ಟ ರುಚಿಯ ತಂಪುಪಾನೀಯ!

ಎಲ್ಲೆಲ್ಲೂ ತಮಿಳು ಭಾಷೆಯೇ ಕಿವಿಗೆ, ಕಣ್ಣಿಗೆ ಬೀಳುವ ಈ ಊರಲ್ಲಿ ಹೀಗೆ ಜಿಗರ್ ಥಂಡಾ (ಜಿಗರ್ -ಹೃದಯ, ಥಂಡಾ-ತಣ್ಣಗೆ, ಜಿಲ್ ಎಂಬುದು ಚಿಲ್ ಎಂಬುದರ ಅಪಭ್ರಂಶ!) ಎಂಬ ಹೆಸರಿನ ಪಾನೀಯ ಬಂದದ್ದರ ಬಗ್ಗೆ ಅನೇಕ ವಾದಗಳಿವೆ. ಹದಿನೇಳನೇ ಶತಮಾನದಲ್ಲಿ ಮೊಘಲ್ ದೊರೆಗಳ ಕಾಲದಲ್ಲಿ ಆವಿಷ್ಕಾರಗೊಂಡಿದ್ದು ಎಂಬುದು ಅನೇಕರ ವಾದ. ಇನ್ನು ಕೆಲವರು ಇದಕ್ಕೆ ಆರಂಭದಲ್ಲಿ ಕಡಲ್‌ಪಾಸಿ (ಚೈನಾ ಗ್ರಾಸ್) ಸೇರಿಸುತ್ತಿದ್ದರು. ತಮಿಳುನಾಡಿನಲ್ಲಿ ಸಮುದ್ರದ ಮಾರ್ಗದ ಮೂಲಕ ಸಾಕಷ್ಟು ವ್ಯಾಪಾರ ವಹಿವಾಟು ನಡೆಯುತ್ತಿತ್ತು. ಹಾಗೆ ಬಹುದಿನ ಪ್ರಯಾಣ ಮಾಡುವ ವ್ಯಾಪಾರಿಗಳಿಗೆ ಶಕ್ತಿ ನೀಡುವ (ಪ್ರೋಟೀನ್ ಅಂಶ ಹೊಂದಿದ) ಪಾನೀಯ ಇದಾಗಿತ್ತು ಎನ್ನುತ್ತಾರೆ.

ಬಹುಜನರ ಅಭಿಪ್ರಾಯದಲ್ಲಿ ಈ ಪಾನೀಯ ಹತ್ತೊಂಬತ್ತನೇ ಶತಮಾನದಲ್ಲಿ ಮದುರೈಯಲ್ಲಿ ಬಂದು ನೆಲೆಸಿದ ಮುಸ್ಲಿಂ ಸಮುದಾಯದ ಕೊಡುಗೆ. ಜಿಗರ್ ಥಂಡಾದಲ್ಲಿ ನನ್ನಾರಿ ಎಂಬ ಬೇರಿನ ಶರಬತ್, ಬಾದಾಮಿಯ ಅಂಟು, ಹಾಲು, ಸಕ್ಕರೆ, ಕೆನೆ ಮತ್ತು ಐಸ್‌ಕ್ರೀಂ ಇರುತ್ತದೆ. ಆಗಷ್ಟೇ ಕರೆದ ಹಸುವಿನ ಹಾಲನ್ನು ಕಾಯಿಸಿ ತಣಿಸಿ, ಕೆನೆ ತೆಗೆಯಲಾಗುತ್ತದೆ. ಐಸ್‌ಕ್ರೀಂ ಅನ್ನು ಮಶೀನ್ ಬಳಸಿಯಲ್ಲ ಕೈಯಿಂದ ತಯಾರಿಸುವುದು ಪದ್ಧತಿ. ಬಾದಾಮಿಯ ಅಂಟನ್ನು ರಾತ್ರಿಯೇ ನೆನೆಸಿ ಮೆತ್ತಗೆ ಮಾಡಲಾಗುತ್ತದೆ. ನನ್ನಾರಿಯ ಬೇರನ್ನು ಕುದಿಸಿ, ಸಕ್ಕರೆಯೊಂದಿಗೆ ಸೇರಿಸಿ ಶರಬತ್ ತಯಾರಿಸಲಾಗುತ್ತದೆ. ಕಡೆಯಲ್ಲಿ ಎಲ್ಲವನ್ನೂ ಬೆರೆಸಿ ಮೇಲೆ ಸ್ವಲ್ಪ ವೆನಿಲಾ ಐಸ್‌ಕ್ರೀಂ ಸೇರಿಸಿದರೆ ಜಿಲ್ ಜಿಲ್ ಜಿಗರ್ ಥಂಡಾ ರೆಡಿ. ದೇಹವನ್ನು ತಣಿಸುವ ಶಕ್ತಿ ಇರುವ ಈ ಪೇಯದ ಬಗ್ಗೆ ಮದುರೈ ಜನರಿಗೆ ಎಲ್ಲಿಲ್ಲದ ಹೆಮ್ಮೆ! ಅಂತೂ ಶಕ್ತಿ ಹೆಚ್ಚಿಸಿಕೊಂಡು ಸಮನಾರ್ ಮಲ್ಲೈಗೆ ಪಯಣ ಮುಂದುವರಿಯಿತು.



ಬೇಕಾ ಜಿಗರ್‌ಥಂಡಾ?

ತಮಿಳುನಾಡಿನಲ್ಲಿ ಜೈನಧರ್ಮ

ಸಮನಾರ್ ಬೆಟ್ಟಕ್ಕೆ ಹೆಸರು ಬರಲು ಕಾರಣ ಶ್ರಮಣರು-ಸಮಣರು ಅಂದರೆ ಈ ಬೆಟ್ಟ, ಜೈನ ಮುನಿಗಳು ಇದ್ದ ಸ್ಥಳ! ಮದುರೈಯಿಂದ ಹದಿನೈದು ಕಿ.ಮೀ. ದೂರದಲ್ಲಿರುವ ಕೀಲಕುಯಿಲ್ಕುಡಿ ಹಳ್ಳಿಯ ಹತ್ತಿರದಲ್ಲಿದೆ. ಇತಿಹಾಸವನ್ನು ಅವಲೋಕಿಸಿದರೆ ದಕ್ಷಿಣ ಭಾರತದಲ್ಲಿ ಜೈನಧರ್ಮ ಮೌರ್ಯರ ಕಾಲದಲ್ಲಿ ನೆಲೆ ಕಂಡುಕೊಂಡಿತು. ಚಾಣಕ್ಯನ ಸಹಾಯದಿಂದ ಮೌರ್ಯ ಸಾಮ್ರಾಜ್ಯ ಸ್ಥಾಪಿಸಿದ ಚಂದ್ರಗುಪ್ತಮೌರ್ಯ ಅನೇಕ ವರ್ಷಗಳ ಯಶಸ್ವಿ ಆಳ್ವಿಕೆ ನಡೆಸಿದ. ತದನಂತರ ಕಾಣಿಸಿಕೊಂಡ ಹನ್ನೆರಡು ವರ್ಷಗಳ ಭೀಕರ ಬರದ ನಂತರ ಈ ಲೌಕಿಕ ವ್ಯವಹಾರಗಳಲ್ಲಿ ಭ್ರಮನಿರಸನಗೊಂಡ. ಮಗ ಬಿಂದುಸಾರನಿಗೆ ರಾಜ್ಯಭಾರ ವಹಿಸಿ ಆಚಾರ್ಯ ಭದ್ರಬಾಹುವಿನಲ್ಲಿ ದೀಕ್ಷೆ ಪಡೆದು ಜೈನಸನ್ಯಾಸಿಯಾದ. ಅಲ್ಲಿಂದ ಕರ್ನಾಟಕದ ಶ್ರವಣಬೆಳಗೊಳಕ್ಕೆ ಪಯಣಿಸಿದ. ಭದ್ರಬಾಹುವಿನ ಅನುಯಾಯಿಗಳು ತಮಿಳುನಾಡಿನಲ್ಲಿ ಜೈನಧರ್ಮ ಪಸರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು ಎನ್ನಲಾಗುತ್ತದೆ.

ಸಾವಿರ್ದೈನೂರು ವರ್ಷಗಳ ಹಿಂದೆ ರಚಿತವಾದ ತಮಿಳಿನ ಪ್ರಾಚೀನ ಕಾವ್ಯ ಶಿಲಪ್ಪದಿಕಾರಂ ಬರೆದವರು ಇಳಂಗೋ ಅಡಿಗಳ್ ಎಂಬ ಜೈನ ಕವಿ. ಕೋವಲನ್, ಆತನ ಪತ್ನಿ ಕನ್ನಗಿ ಮತ್ತು ಮಾಧವಿ ಎಂಬ ನರ್ತಕಿ ಇವರನ್ನು ಒಳಗೊಂಡ ಕಾಲ್ಬಳೆಯ ಸುತ್ತ ಹೆಣೆದ ಪ್ರೇಮ ಕಥೆ ಇದು. ಇದರಲ್ಲಿ ಮದುರೈನ ಶ್ರೀಮಂತ ವರ್ತಕರ ಬಗ್ಗೆಯೂ ಉಲ್ಲೇಖಗಳಿವೆ. ಬಹುಶಃ ಈ ವರ್ತಕರು ಜೈನ ಶ್ರಾವಕರಿರಬಹುದು (ಮುನಿಗಳ ಸೇವೆಮಾಡಿ, ಪುಣ್ಯ ಗಳಿಸುವ ಸಂಸಾರಸ್ಥರು). ಇದೆಲ್ಲರಿಂದ ತಮಿಳುನಾಡಿನಲ್ಲಿ ವಿಶೇಷವಾಗಿ ಮದುರೈ ಸುತ್ತಮುತ್ತ ಜೈನಧರ್ಮ ಸಾಕಷ್ಟು ಪ್ರಬಲವಾಗಿತ್ತು ಎಂದು ಊಹಿಸಬಹುದಾಗಿದೆ. ಅದಕ್ಕೆ ಸಾಕ್ಷಿಯಾಗಿ ಪುರಾತತ್ವಶಾಸ್ತ್ರಜ್ಞರು ಈ ಸಮನಾರ್ ಬೆಟ್ಟವೂ ಸೇರಿದಂತೆ ಮದುರೈ ಸುತ್ತಮುತ್ತ ಜೈನಮುನಿಗಳು ಧ್ಯಾನಕ್ಕೆ ಬಳಸುವ ಇಪ್ಪತ್ತಕ್ಕೂ ಹೆಚ್ಚು ಗುಹೆ, ಸಲ್ಲೇಖನಕ್ಕೆ ಇನ್ನೂರು ಕಲ್ಲಿನ ಮಂಚ, ಐವತ್ತು ಶಾಸನಗಳು ಹಾಗೂ ನೂರು ಜೈನ ಶಿಲ್ಪಗಳನ್ನು ಈವರೆಗೆ ಪತ್ತೆಹಚ್ಚಿದ್ದಾರೆ.



ಪೆಚ್ಚಿಪೆಳ್ಳಂನಲ್ಲಿ ಕಾಣಸಿಗುವ ಕೆತ್ತನೆಗಳು

ಮದುರೈ ಮತ್ತು ಸಮನಾರ್ ಬೆಟ್ಟದಲ್ಲಿ ಈಗ ಕಾಣುತ್ತಿರುವ ಜೈನ ಬಸದಿಗಳನ್ನು ಎಂಟನೇ ಶತಮಾನದಲ್ಲಿ ಜೈನ ವಿದ್ವಾಂಸ ಅಕಲಂಕ ನಿರ್ಮಿಸಿದ ಎನ್ನಲಾಗುತ್ತದೆ. ಈ ಬೆಟ್ಟದಲ್ಲಿ ನೋಡಬೇಕಾದ ಎರಡು ಮುಖ್ಯ ತಾಣಗಳು ಸೆಟ್ಟಿಪೊಡವು ಮತ್ತು ಪೆಚ್ಚಿಪೆಳ್ಳಂ. ಇವುಗಳಲ್ಲಿ ಜೈನ ಮುನಿಗಳು ಕೆತ್ತಿದ ಶಿಲ್ಪಗಳನ್ನು ಕಾಣಬಹುದು. ಸಮನಾರ್ ಬೆಟ್ಟದ ತಪ್ಪಲಲ್ಲಿ ಆಧುನಿಕವಾಗಿ ಕಟ್ಟಿಸಲಾದ ಸ್ಥಳೀಯ ದೈವ ಕರುಪ್ಪುಸಾಮಿಯ ಕೋಯಿಲ್ ಇದೆ. ಶಾಸನಗಳ ಪ್ರಕಾರ ಇಲ್ಲಿ ಮಾದೇವಿಪೆರುಪಲ್ಲಿ ಎಂಬ ಜೈನಮಠವಿತ್ತು. ಪಾಂಡ್ಯ ದೊರೆ ಪರಾಂತಕ ವೀರ ನಾರಾಯಣ ಒಂಬತ್ತನೇ ಶತಮಾನದಲ್ಲಿ ಈ ಜಾಗವನ್ನು ಜೈನಮಠಕ್ಕೆ ದಾನವಾಗಿ ನೀಡಿದ್ದ. ಆತನ ಪತ್ನಿ ಮಾದೇವಿಯ ಹೆಸರಿನಿಂದ ಈ ಮಠ ಪ್ರಸಿದ್ಧವಾಗಿತ್ತು. ಇಲ್ಲಿ ಜೈನ ಸನ್ಯಾಸಿ/ ಸನ್ಯಾಸಿನಿಯರು ಧಾರ್ಮಿಕ ಶಿಕ್ಷಣ ಪಡೆಯುತ್ತಿದ್ದರು.

ಪ್ರವಾಸ

ನಮ್ಮ ಕರ್ನಾಟಕದ ಶ್ರವಣಬೆಳಗೊಳದ ಅನೇಕ ಕನ್ನಡ ವಿದ್ಯಾರ್ಥಿಗಳು, ಹಿರಿಯ ಆಚಾರ್ಯರೂ ಇಲ್ಲಿ ವಾಸವಾಗಿದ್ದರಂತೆ! ಮದುರೈ ಆಳುತ್ತಿದ್ದ ಪಾಂಡ್ಯ ದೊರೆಗಳು ಇಲ್ಲಿ ಭೇಟಿ ನೀಡುತ್ತಿದ್ದುದು ಅದರ ಮಹತ್ವಕ್ಕೆ ಸಾಕ್ಷಿ. ಈಗ ಈ ದೇಗುಲದಲ್ಲಿ ಕರುಪ್ಪುಸಾಮಿಯ ವಿಗ್ರಹದ ಜತೆ ಜೈನಮುನಿಗಳು ಕೆತ್ತಿದ ಅನೇಕ ಪ್ರಾಚೀನ ವಿಗ್ರಹಗಳನ್ನೂ ಇಡಲಾಗಿದೆ. ಇಲ್ಲೇ ಸಮೀಪದಲ್ಲಿರುವ ಕೊಳ ತಾವರೆಗಿಡಗಳಿಂದ ತುಂಬಿದ್ದು ಹೂಗಳು ಅರಳಿ ನಿಂತಾಗ ಇಡೀ ಕೊಳಕ್ಕೆ ಗುಲಾಬಿ ಹಚ್ಚಡ ಹೊದೆಸಿದಂತಾಗಿ ಬಹಳ ಆಕರ್ಷಣೀಯವಾಗಿದೆ.

ಸೆಟ್ಟಿಪೊಡವು: ಬೆಟ್ಟದ ಇಳಿಜಾರಿನಲ್ಲಿರುವ ಸುಲಭವಾಗಿ ಹತ್ತಬಹುದಾದ ಪುಟ್ಟ ಗುಹೆ ಇಲ್ಲಿದೆ. ಈ ಗುಹೆಯನ್ನು ಪ್ರವೇಶಿಸುವಾಗಲೇ ಹೊರಭಾಗದಲ್ಲಿ ತೀರ್ಥಂಕರನ ಕೆತ್ತನೆ ಮತ್ತು ಶಾಸನ ಕಾಣುತ್ತದೆ. ಗುಹೆಯೊಳಗೆ ಮೂವರು ತೀರ್ಥಂಕರರು ಮತ್ತು ಎಡ, ಬಲ ಭಾಗಗಳಲ್ಲಿ ಜೈನ ದೇವತೆಯರ ಕೆತ್ತನೆ ಇದೆ. ಕೆಳಗೆ ಗುಂಡಗಿನ ಅಕ್ಷರಗಳಲ್ಲಿ ಕೆತ್ತಿದ ಶಾಸನಗಳಿವೆ. ಇವು ವಟ್ಟೆಲುಟ್ಟು ಲಿಪಿಯಲ್ಲಿವೆ (ದಕ್ಷಿಣ ಭಾರತ ಮತ್ತು ಶ್ರೀಲಂಕಾದಲ್ಲಿ ಪ್ರಚಲಿತವಾಗಿದ್ದ ತಮಿಳು/ ಮಲೆಯಾಳಂ ಭಾಷೆಗಳ ಲಿಪಿ ಇದು, ತಮಿಳುಬ್ರಾಹ್ಮಿಯಿಂದ ಹುಟ್ಟಿದ ಈ ಲಿಪಿ ಸುಮಾರು ನಾಲ್ಕರಿಂದ ಹನ್ನೊಂದನೇ ಶತಮಾನದಲ್ಲಿ ಬಳಕೆಯಲ್ಲಿತ್ತು ಎನ್ನಲಾಗುತ್ತದೆ).

ಪೆಚ್ಚಿಪೆಳ್ಳಂ: ನೂರೈವತ್ತಕ್ಕೂ ಹೆಚ್ಚು ಮೆಟ್ಟಿಲುಗಳನ್ನು ಹೊಂದಿರುವ ಬೆಟ್ಟದ ಮೇಲಿನ ಈ ತಾಣಕ್ಕೆ ಬಿಸಿಲಲ್ಲಿ ಹತ್ತುವುದು ಕಷ್ಟವೇ. ಆಧಾರಕ್ಕಾಗಿ ಬದಿಕಂಬಿಗಳನ್ನು ಹಾಕಿದ್ದರೂ ಕಿರಿದಾದ ಮೆಟ್ಟಿಲುಗಳನ್ನು ಏರುವಾಗ ಜಾಗರೂಕರಾಗಿರಬೇಕು. ಅಲ್ಲಲ್ಲಿ ಮಂಗಗಳ ಹಾವಳಿಯೂ ಸಾಮಾನ್ಯ. ಮೇಲೇರಿದಂತೆ ಪುಟ್ಟ ಕೊಳ ಮತ್ತು ಅದರ ಎದುರಿನಲ್ಲಿ ಎಂಟು ಜೈನ ಶಿಲ್ಪಗಳು ಕಣ್ಣಿಗೆ ಬೀಳುತ್ತವೆ. ಅವುಗಳಲ್ಲಿ ನಾಲ್ಕು ಸರ್ಪದ ಹೆಡೆಯಿರುವ ಪಾರ್ಶ್ವನಾಥರು, ಬಾಹುಬಲಿ ಮೂರ್ತಿಗಳು ಮತ್ತು ಉಳಿದ ಮೂರು ತೀರ್ಥಂಕರರದ್ದೆಂದು ಊಹಿಸಲಾಗಿದೆ. ಇವುಗಳ ಕೆಳಗೆ ದಾನಿಗಳು ಬರೆಸಿರುವ ಶಾಸನಗಳಿವೆ.

ಸಮನಾರ್ ಮಲೈ ತುತ್ತತುದಿಯಲ್ಲಿ ಕಲ್ಲಿನ ದೀಪಸ್ತಂಭವಿದೆ. ಇದರ ಸಮೀಪದಲ್ಲೇ ಹನ್ನೊಂದು ಹನ್ನೆರಡನೆಯ ಶತಮಾನದ್ದೆಂದು ಹೇಳಲಾಗುವ ಬಹುಪಾಲು ಕನ್ನಡದಲ್ಲಿ ಇರುವ ಶಾಸನವಿದೆ. ಆದರೆ ಕಾಲನ ಪ್ರಭಾವಕ್ಕೆ ಸಿಲುಕಿ ಓದಲು ಸ್ಪಷ್ಟವಾಗಿಲ್ಲ. ಇರುವಷ್ಟರಿಂದಲೇ ಅದನ್ನು ಅರ್ಥೈಸಿರುವ ಶಾಸನತಜ್ಞರ ಪ್ರಕಾರ ಜೈನಮುನಿಯೊಬ್ಬನ ಸಾವಿನ ಸ್ಥಳ ಎಂದು ಸೂಚಿಸುತ್ತದೆ. ಹಾಗೆಯೇ ಇಲ್ಲಿದ್ದ ಸುಮಾರು ಹನ್ನೆರಡು ಸಮತಟ್ಟಾದ ಬಂಡೆಗಳನ್ನು ಕಲ್ಲಿನ ಹಾಸಿಗೆ ಎಂದು ಗುರುತಿಸಲಾಗಿದ್ದು ಅವುಗಳನ್ನು ಸಲ್ಲೇಖನವ್ರತ ಕೈಗೊಂಡಿದ್ದ ಜೈನ ಮುನಿಗಳು ವಿಶ್ರಾಂತಿಗಾಗಿ ಬಳಸುತ್ತಿದ್ದರು ಎನ್ನಲಾಗಿದೆ.


ಸಮನಾರ್ ಬೆಟ್ಟದ ಮೇಲೆ ನಿಂತು ದೃಷ್ಟಿ ಹಾಯಿಸಿದರೆ ಬಟಾಬಯಲಲ್ಲಿ ನಿಂತ ಈ ಜೈನ ಶಿಲ್ಪಗಳು, ಕೆಳಗಿರುವ ಕರುಪಸಾಮಿಯ ಬಣ್ಣಬಣ್ಣದ ಅಲಂಕಾರಿಕ ವಿನ್ಯಾಸಗಳ ಕೋಯಿಲ್, ದೂರದಲ್ಲಿರುವ ಭವ್ಯ ಮದುರೈ ಮೀನಾಕ್ಷಿ ದೇವಸ್ಥಾನ... ಹೀಗೆ ದೇವರೆಂಬ ನಂಬಿಕೆಯ ವಿವಿಧ ರೂಪಗಳ ದರ್ಶನವಾಗುತ್ತದೆ. ಜತೆಗೇ ತಮಿಳುನಾಡು ಕರ್ನಾಟಕದ ನಡುವಿನ ಆಧ್ಯಾತ್ಮಿಕ ಜ್ಞಾನದ ವಿನಿಮಯವನ್ನು ನೆನಪಿಸುತ್ತದೆ!

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡೈಂ ಡೈಂ ಲೋಲಕ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಅದಲು ಬದಲು ಕಂಚಿ ಕದಲು

1) ಆ ಕರಿ ಚೇಳು = ...
2) ರವಿ ಚಾ ಮಾಡು = ...
3) ರಾಜನ ಗರಮ ಚಾ = ...
4) ಯಾವ ಮಾತಿಗೆ ಸಿಟ್ಟು? = ...

ಹೊಂದಿಸು ಆನಂದಿಸು

ಇಲ್ಲಿ ಕೊಟ್ಟಿರುವ ವ್ಯಕ್ತಿಗಳಿಗೂ ಅವರ ಸಾಧನಾ ಕ್ಷೇತ್ರಗಳಿಗೂ ಹೊಂದಿಸಿ

1) ಶಶಿ ಕಪೂರ್	A)ಸಾಹಿತ್ಯ
2)ಸುನಿಲ್ ಗಾವಸ್ಕರ್	B)ಸಂಗೀತ
3) ಎಸ್. ಎಂ. ಕೃಷ್ಣ	C) ವೈದ್ಯಕೀಯ ಹಾಗೂ ಸಾಹಿತ್ಯ
4) ಸಂತೋಷಕುಮಾರ ಗುಲ್ವಾಡಿ	D) ರಾಜಕಾರಣ
5) ಬಿಲ್ ಗೇಟ್ಸ್	E) ಅಧ್ಯಾತ್ಮ
6) ಥಾಮಸ್ ಅಲ್ವಾ ಎಡಿಸನ್	F)ವಿಜ್ಞಾನ
7) ರಾಮಕೃಷ್ಣ ಪರಮಹಂಸ	G) ಚಲನಚಿತ್ರ
8) ಅನುಪಮಾ ನಿರಂಜನ	H) ಕಂಪ್ಯೂಟರ್
9) ನಾ. ಡಿಸೋಜಾ	I) ಕ್ರೀಡೆ
10) ಗಂಗೂಬಾಯಿ ಹಾನಗಲ್	J) ಪತ್ರಿಕೋದ್ಯಮ


ಗಣಿತದಲ್ಲಿ ಗರ್ದಿಗಮ್ಮತ್ತು

ಲೆಕ್ಕದ ಮೋಜು

ಪ್ರಸಾದ ಮತ್ತು ವಿನೋದ ಅಣ್ಣ-ತಮ್ಮಂದಿರು. ಒಂದು ದಿನ ಅವರ ತಂದೆ ಇಬ್ಬರಿಗೂ ಚಾಕೊಲೇಟ್ ಕೊಟ್ಟರು. ಕೊಟ್ಟ ಚಾಕೊಲೇಟ್ ಎಣಿಸಿಕೊಂಡರು. ನಂತರ ಪ್ರಸಾದ, ವಿನೋದನಿಗೆ 'ನಿನ್ನ ಎರಡು ಚಾಕೊಲೇಟ್ ನನಗೆ ಕೊಡು. ಅಂದರೆ ಇಬ್ಬರ ಚಾಕೊಲೇಟ್‌ಗಳು ಸಮವಾಗುತ್ತವೆ' ಅಂದ. ಆದರೆ ವಿನೋದ 'ನೀನೇ ನನಗೆ ಎರಡು ಚಾಕೊಲೇಟ್ ಕೊಡು ಅಂದರೆ ನಿನ್ನ ಎರಡರಷ್ಟಾಗುತ್ತವೆ' ಅಂದ. ಹಾಗಾದರೆ ಅವರ ತಂದೆ ಇಬ್ಬರಿಗೂ ಕೊಟ್ಟ ಚಾಕೊಲೇಟ್‌ಗಳು ಎಷ್ಟೆಷ್ಟು?

1 ರಿಂದ 9 ಭಿನ್ನರಾಶಿಗಳ ಗಮ್ಮತ್ತು

1 ರಿಂದ 9ರ ವರೆಗಿನ ಅಂಕಿಗಳಲ್ಲಿ ಪ್ರತಿಯೊಂದನ್ನು ಬಳಸಬೇಕು. ಅಂದರೆ ಒಮ್ಮೆ ಬಳಸಿದ ಅಂಕಿಗಳನ್ನು ಮತ್ತೊಮ್ಮೆ ಬಳಸಬಾರದು. ಈ ನಿಯಮಗಳಿಗನುಸಾರವಾಗಿ ಮೂರು ಭಿನ್ನರಾಶಿಗಳನ್ನು ಬರೆಯಬೇಕು. ಮೂರೂ ಭಿನ್ನರಾಶಿಗಳ ಬೆಲೆ ಒಂದೇ ಆಗಿರಬೇಕು.
ಹೀಗೆ ಬರೆಯಬಲ್ಲಿರಾ?



ಜಾಣಪದ ಆಟ

ಇಲ್ಲಿ ಕೊಟ್ಟಿರುವ ಚಾರ ಶಬ್ದಕ್ಕೆ ಹಿಂದೆ ಒಂದು ಅಕ್ಷರ ಸೇರಿಸಿ ನಾಲ್ಕು ಪದಗಳನ್ನು ಹಾಗೂ ಹಿಂದೆ ಎರಡಕ್ಷರ ಸೇರಿಸಿ 8 ಪದಗಳನ್ನು ರಚಿಸಿರಿ. ಅಕ್ಷರಗಳನ್ನು ತುಂಬಲು ಅಕ್ಷರ ಪಟ್ಟಿ ನಿಮಗೆ ಸಹಾಯ ಮಾಡಬಲ್ಲದು.

1) – ಚಾರ
2) – ಚಾರ
3) – ಚಾರ
4) – ಚಾರ
5) – – ಚಾರ
6) – – ಚಾರ
7) – – ಚಾರ
8) – – ಚಾರ
9) – – ಚಾರ
10) – – ಚಾರ
11) – – ಚಾರ
12) – – ಚಾರ

ಅಕ್ಷರ ಪಟ್ಟಿ			
ಉ	ಕಾ	ಸಂ	ವಿ
ಅ	ಯ್ಯಾ	ಪ್ರ	ಪ
ಕಂ	ಹ	ಟಾ	ಪ
ಸ	ಅ	ದಾ	ವಾ
ಆ	ಗ್ರ	ಮಾ	ಮಾ

ಪುಟಾಣಿ ಪದಬಂಧ

1)		ರಾಜಿ		ರಾಜಿ ಮಾಡಿಕೊಂಡು ಶೋಭಿಸು
2)		ರಾಮ		ರಾಮನ ವಿಮರ್ಶೆ
3)		ರಂಗ		ರಂಗ ನಿಪುಣ
4)		ಕ್ರಮ		ಕ್ರಮವರಿತು ಮಾಡಿದ ದಾಳಿ
5)		ಮಾರ		ಮಾರಲು ಇಡಲಾಗಿದೆ ಈ ಭವ್ಯ ಕಟ್ಟಡ



ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ: 1 ಮಲತಾಯಿ 2 ಸಂಕಲಿಸು 3 ಚಿಗುರಿಸು 4 ತಾರಾಗಣ 5 ಅಮೆರಿಕ

ಅದಲು ಬದಲು: 1 ಸಹಕರಿಸು 2 ಮರಿನಾದ 3 ಸತಿಅಣ್ಣ 4 ಮೊಲದ ಬೇಟೆ

ಅಕ್ಷರ ಆಟ: 1 ದಮನ 2 ಶಮನ 3 ಗಮನ 4 ವಾಮನ 5 ವೇಮನ 6 ನಮನ

ಪಂಚ ಪ್ರಶ್ನೆಗಳು : 1 ಟೋಕಿಯೊ 2 ದಿನಾರ 3 ಫೆಸಿಫಿಕ್ 4 ಅಣ್ಣಾಮಲೈ 5 ಗೆಲಿಲಿಯೋ ಗೆಲಿಲಿ

ಹೊಂದಿಸು ಆನಂದಿಸು : 1-D 2-F 3-E 4-B 5-A 6-G 7- H 8-C

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ನಂದಿತಾ ಎಸ್.ಎಂ., ಬೆಂಗಳೂರು



ಗೋವರ್ಧನ್ ಕೆ.ಎಂ.
ಜಗಳೂರು (ದಾವಣಗೆರೆ)



ಪ್ರತೀಕ್ಷಾ ಜೋಯ್ಸ್
ಸಾಗರ (ಶಿವಮೊಗ್ಗ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಫುಟ್‌ಬಾಲ್: ಕರ್ನಾಟಕಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡದವರು ಮಧ್ಯಪ್ರದೇಶದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ.

ಶನಿವಾರ ನಡೆದ ಪಂದ್ಯದಲ್ಲಿ ಕರ್ನಾಟಕ 3–1 ಗೋಲುಗಳಿಂದ ಒಡಿಶಾ ತಂಡವನ್ನು ಮಣಿಸಿತು.

ಇಶಾನ್ ರಘುನಂದನ್ (21ನೇ ನಿ.), ಎಸ್.ಪಿ.ಅಭಿಷೇಕ್ (57ನೇ ನಿ.) ಮತ್ತು ಆದಿತ್ಯ ಕೆ. (90ನೇ ನಿ.) ಅವರು ರಾಜ್ಯ ತಂಡದ ಪರ ಗೋಲು ಗಳಿಸಿದರು. ಒಡಿಶಾ ತಂಡದ ಏಕೈಕ ಗೋಲನ್ನು ವೊಂಗ್ಡೆನ್ ಲಾಮಾ ಅವರು 61ನೇ ನಿಮಿಷದಲ್ಲಿ ಗಳಿಸಿದರು.

ಸೋಮವಾರ ನಡೆಯಲಿರುವ ತನ್ನ ಮುಂದಿನ ಪಂದ್ಯದಲ್ಲಿ ಕರ್ನಾಟಕ ತಂಡ ಮೇಘಾಲಯದ ಸವಾಲು ಎದುರಿಸಲಿದೆ.

ಕ್ರಿಕೆಟ್: ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಹೇಳಿಕೆ

ಸ್ಪಿನ್ ಬೌಲಿಂಗ್ ವಿಭಾಗ ಬಲಿಷ್ಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪಿನ್ ಬೌಲಿಂಗ್‌ಗೆ ನೆರವು ನೀಡುವ ಭಾರತದ ಪಿಚ್‌ಗಳಲ್ಲಿ ಪರಿಣಾಮಕಾರಿಯಾಗಬಲ್ಲ ಬೌಲರ್‌ಗಳು ನಮ್ಮ ತಂಡದಲ್ಲಿದ್ದಾರೆ ಎಂದು ಆಸ್ಟ್ರೇಲಿಯಾ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಹೇಳಿದ್ದಾರೆ.

'ಅನುಭವಿ ಸ್ಪಿನ್ನರ್ ನೇಥನ್ ಲಯನ್ ಅವರಿಗೆ ತಕ್ಕ ಸಾಥ್ ನೀಡಲು ಸಾಕಷ್ಟು ಆಯ್ಕೆಗಳು ಇವೆ' ಎಂದು ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗಾವಸ್ಕರ್– ಬಾರ್ಡರ್ ಟ್ರೋಫಿ ನಾಲ್ಕು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಪಾಲ್ಗೊಳ್ಳಲು ಭಾರತಕ್ಕೆ ಬಂದಿರುವ ಆಸ್ಟ್ರೇಲಿಯಾದ ಆಟಗಾರರು ಕಳೆದ ಕೆಲ ದಿನಗಳಿಂದ ಆಲೂರಿನ ಮೈದಾನದಲ್ಲಿ ಅಭ್ಯಾಸ ನಡೆಸುತ್ತಿದ್ದಾರೆ.

ನೇಥನ್ ಲಯನ್ ಅಲ್ಲದೆ, ಸ್ಪಿನ್ನರ್‌ಗಳಾದ ಆ್ಯಷ್ಟನ್ ಆಗರ್ ಮತ್ತು ಮಿಚೆಲ್ ಸ್ವೆಪ್ಸನ್ ಅವರಿಗೆ ಆಸ್ಟ್ರೇಲಿಯಾ ತಂಡದಲ್ಲಿ ಸ್ಥಾನ ನೀಡಲಾಗಿದೆ.

'ಎದುರಾಳಿ ತಂಡದ 20 ವಿಕೆಟ್‌ಗಳನ್ನು ಪಡೆಯುವ ಸಾಮರ್ಥ್ಯ ಹೊಂದಿರುವ ಬೌಲರ್‌ಗಳನ್ನು ಅಂತಿಮ ಇಲೆವೆನ್‌ನಲ್ಲಿ ಕಣಕ್ಕಿಳಿಸುತ್ತೇವೆ. ಎಷ್ಟು ಸಿನ್ನರ್‌ಗಳಿಗೆ ಅವಕಾಶ ನೀಡಬೇಕು ಎಂಬುದನ್ನು ಪಿಚ್‌ನ ಪರಿಸ್ಥಿತಿಗೆ ಅನುಗುಣವಾಗಿ ನಿರ್ಧರಿಸುತ್ತೇವೆ' ಎಂದರು.


ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ (ಎಡ) ಮತ್ತು ಕೋಚ್ ಆ್ಯಂಡ್ರ್ಯೂ ಮೆಕ್‌ಡೊನಾಲ್ಡ್ ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡರು –ಪ್ರಜಾವಾಣಿ ಚಿತ್ರ

'ಅಗರ್ ಅವರು ಹಿಂದಿನ ಸರಣಿಯಲ್ಲಿ ಆಡಿದ್ದಾರೆ. ಸ್ವೆಪ್ಸನ್ ಅವರು ವಿದೇಶದಲ್ಲಿ ನಡೆದ ಎರಡು ಸರಣಿಗಳಲ್ಲಿ ತಂಡದಲ್ಲಿದ್ದರು. ಆ ಅನುಭವ ಅವರ ನೆರವಿಗೆ ಬರಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಅನಿವಾರ್ಯ ಎನಿಸಿದರೆ ಟ್ರಾವಿಸ್ ಹೆಡ್ ಕೂಡಾ ಆಫ್‌ಸ್ಪಿನ್ ಬೌಲಿಂಗ್ ಮಾಡಬಲ್ಲರು. ಸ್ಪಿನ್ ವಿಭಾಗ ಸಮತೋಲನದಿಂದ ಕೂಡಿದ್ದು, ಸಾಕಷ್ಟು ಆಯ್ಕೆಗಳು ನಮ್ಮ ಮುಂದಿವೆ' ಎಂದರು.

'ತಂಡವು ಸ್ಪಿನ್ನರ್‌ಗಳನ್ನು ಮಾತ್ರ ನೆಚ್ಚಿಕೊಂಡಿಲ್ಲ. ಭಾರತದ ಪಿಚ್‌ಗಳಲ್ಲಿ ಪರಿಣಾಮಕಾರಿ ಎನಿಸಬಲ್ಲ ವೇಗದ ಬೌಲರ್‌ಗಳು ನಮ್ಮಲ್ಲಿದ್ದಾರೆ. ಸಿಡ್ನಿ ಕ್ರಿಕೆಟ್ ಮೈದಾನದ ಪಿಚ್, ವೇಗಿಗಳಿಗೆ ಅಷ್ಟೊಂದು ನೆರವು ನೀಡುವುದಿಲ್ಲ. ಆದರೆ ನಮ್ಮ ವೇಗಿಗಳು ಅಲ್ಲೂ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ' ಎಂಬುದನ್ನು ನೆನಪಿಸಿಕೊಂಡರು.

ಮೊದಲ ಟೆಸ್ಟ್ ನಾಗ್ಪುರದಲ್ಲಿ ಫೆ.9 ರಿಂದ 13ರ ವರೆಗೆ ನಡೆಯಲಿದೆ. ಆಸ್ಟ್ರೇಲಿಯಾ ತಂಡ ಸೋಮವಾರ ಬೆಂಗಳೂರಿನಿಂದ ನಾಗ್ಪುರಕ್ಕೆ ತೆರಳಲಿದೆ.

'ಗ್ರೀನ್ ಆಡುವುದು ಖಚಿತವಾಗಿಲ್ಲ'

ಆಲ್‌ರೌಂಡರ್ ಕೆಮರಾನ್ ಗ್ರೀನ್ ಅವರು ಮೊದಲ ಟೆಸ್ಟ್‌ನಲ್ಲಿ ಕಣಕ್ಕಿಳಿಯುವುದು ಇನ್ನೂ ಖಚಿತವಾಗಿಲ್ಲ ಎಂದು ಆಸ್ಟ್ರೇಲಿಯಾ ತಂಡದ ಕೋಚ್ ಆ್ಯಂಡ್ರ್ಯೂ ಮೆಕ್‌ಡೊನಾಲ್ಡ್ ತಿಳಿಸಿದರು.

'ಕೈಬೆರಳಿನ ಗಾಯದಿಂದ ಅವರು ಬಹಳ ಬೇಗನೇ ಚೇತರಿಸಿಕೊಳ್ಳುತ್ತಿದ್ದಾರೆ. ಆದರೂ ಅವರನ್ನು ಆಡಿಸಬೇಕೇ ಎಂಬ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ' ಎಂದರು.

ಪರ್ತ್‌ನಲ್ಲಿ ನಡೆದಿದ್ದ ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಗ್ರೀನ್ ಗಾಯಗೊಂಡಿದ್ದರು. ಎನ್ರಿಕ್ ನಾರ್ಕಿಯಾ ಅವರ ಎಸೆತದಲ್ಲಿ ಚೆಂಡು ಬಡಿದು ಕೈಬೆರಳಿನ ಮೂಳೆ ಮುರಿದಿತ್ತು.

ಡೆನ್ಮಾರ್ಕ್ ವಿರುದ್ಧ ಭಾರತಕ್ಕೆ ಸೋಲು

ಡೇವಿಸ್ ಕಪ್ ಟೆನಿಸ್: ವಿಶ್ವ ಎರಡನೇ ಗುಂಪಿಗೆ ಹಿಂಬಡ್ತಿ

ಹಿಲರ್ಡ್, ಡೆನ್ಮಾರ್ಕ್ (ಪಿಟಿಐ): ಆತಿಥೇಯ ಡೆನ್ಮಾರ್ಕ್ ವಿರುದ್ಧ ನಡೆದ ಡೇವಿಸ್ ಕಪ್ ಟೆನಿಸ್ ವಿಶ್ವ 1ನೇ ಗುಂಪು ಪ್ಲೇ ಆಫ್‌ನಲ್ಲಿ ಭಾರತದ ಆಟಗಾರರು ನಿರಾಸೆ ಅನುಭವಿಸಿದರು.

ಹೋಲ್ಗರ್ ರೂನ್ ಅವರ ಆಟದ ಬಲದಿಂದ ಡೆನ್ಮಾರ್ಕ್ 3–2ರಿಂದ ಭಾರತಕ್ಕೆ ಸೋಲುಣಿಸಿತು. ಇದರೊಂದಿಗೆ ಭಾರತ, 2019ರಲ್ಲಿ ಹೊಸ ಮಾದರಿ ಪರಿಚಯಿಸಿದ ಬಳಿಕ ಇದೇ ಮೊದಲ ಬಾರಿಗೆ ವಿಶ್ವ 2ನೇ ಗುಂಪಿಗೆ ಹಿಂಬಡ್ತಿ ಪಡೆಯಿತು.

ಸಿಂಗಲ್ಸ್ ವಿಭಾಗದ ಮೊದಲ ಸ್ಪರ್ಧೆಯಲ್ಲಿ ಶುಕ್ರವಾರ ಯೂಕಿ ಅವರು 2-6, 2-6ರಿಂದ ಹೋಲ್ಗರ್ ರೂನ್ ಎದುರು ಸೋತಿದ್ದರು. ಬಳಿಕ ಎರಡನೇ ಸಿಂಗಲ್ಸ್‌ನಲ್ಲಿ ಸುಮಿತ್ ನಗಾಲ್ 4-6, 6-4, 6-4ರಿಂದ ಆಗಸ್ಟ್ ಹೊಮ್‌ಗ್ರೇನ್ ವಿರುದ್ಧ ಗೆದ್ದು ಭಾರತ 1-1 ಸಮಬಲ ಸಾಧಿಸುವಂತೆ ಮಾಡಿದ್ದರು.

ಡಬಲ್ಸ್ ಸೆಣಸಾಟದಲ್ಲಿ ರೋಹನ್ ಬೋಪಣ್ಣ ಮತ್ತು ಯೂಕಿ ಭಾಂಬ್ರಿ 2–6, 4–6ರಿಂದ ಹೋಲ್ಗರ್–ಜೋಹಾನಸ್ ಇಂಗಿಲ್ಡ್‌ಸನ್ ಎದುರು ಸೋಲುವುದರೊಂದಿಗೆ ಭಾರತ 1–2ರಿಂದ ಹಿನ್ನಡೆ ಕಂಡಿತು. ಇದರಿಂದ ಭಾರತ ತಂಡವು, 1ನೇ ಗುಂಪಿನಲ್ಲಿ ಉಳಿಯಲು ರಿವರ್ಸ್ ಸಿಂಗಲ್ಸ್‌ನ ಎರಡೂ ಪಂದ್ಯಗಳಲ್ಲಿ ಗೆಲ್ಲುವ ಅನಿವಾರ್ಯತೆಗೆ ಸಿಲುಕಿತು. ಮೊದಲ ಸೆಣಸಾಟದಲ್ಲಿ ಸುಮಿತ್ 5-7 3-6ರಿಂದ ಹೋಲ್ಗರ್ ಎದುರು ಪರಾಭವಗೊಂಡರು. ಮತ್ತೊಂದರಲ್ಲಿ ಪ್ರಜ್ಞೇಶ್ ಗುಣೇಶ್ವರನ್ 6-4 7-6(1)ರಿಂದ ಎಲ್ಮರ್ ಮೊಯಿಲರ್ ಎದುರು ಗೆದ್ದರೂ ಪ್ರಯೋಜನವಾಗಲಿಲ್ಲ.

ಕ್ರಿಕೆಟ್: ಏಷ್ಯಾಕಪ್ ಟೂರ್ನಿ ಪಾಕಿಸ್ತಾನದಿಂದ ಸ್ಥಳಾಂತರ ಸಾಧ್ಯತೆ

ನವದೆಹಲಿ (ಪಿಟಿಐ): ಪಾಕಿಸ್ತಾನದಲ್ಲಿ ನಿಗದಿಯಾಗಿದ್ದ ಏಕದಿನ ಕ್ರಿಕೆಟ್ ಏಷ್ಯಾಕಪ್ ಟೂರ್ನಿಯನ್ನು ಏಷ್ಯಾ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಬೇರೆಡೆಗೆ ಸ್ಥಳಾಂತರಿಸುವ ಸಾಧ್ಯತೆಯಿದೆ. ಮಾರ್ಚ್‌ನಲ್ಲಿ ಪರ್ಯಾಯ ಸ್ಥಳ ನಿಗದಿಪಡಿಸುವ ನಿರೀಕ್ಷೆಯಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಮತ್ತು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮುಖ್ಯಸ್ಥ ನಜಮ್ ಸೇಥಿ ನಡುವೆ ಬಹ್ರೇನ್‌ನಲ್ಲಿ ಶನಿವಾರ ನಡೆದ ಔಪಚಾರಿಕ ಸಭೆಯಲ್ಲಿ ಈ ಕುರಿತು ಚರ್ಚೆ ನಡೆದಿದೆ.

ಎಸಿಸಿ ಬಿಡುಗಡೆ ಮಾಡಿದ ಟೂರ್ನಿಗಳ ವೇಳಾಪಟ್ಟಿಯಲ್ಲಿ ಏಷ್ಯಾಕಪ್ ಆತಿಥೇಯ ರಾಷ್ಟ್ರವಾಗಿ ಪಾಕಿಸ್ತಾನದ ಹೆಸರು ಇರಲಿಲ್ಲ. ಹೀಗಾಗಿ ಸೇಥಿ ಅವರ ಮನವಿಯ ಮೇರೆಗೆ ಎಲ್ಲ ಕೌನ್ಸಿಲ್‌ನ ಸದಸ್ಯ ತಂಡಗಳ ಪ್ರತಿನಿಧಿಗಳ ತುರ್ತು ಸಭೆ ಕರೆಯಲಾಗಿತ್ತು. ಟೂರ್ನಿಯನ್ನು ಯುಎಇಯಲ್ಲಿ ಆಯೋಜಿಸಿದರೆ ಎಲ್ಲಾ ಸದಸ್ಯ ರಾಷ್ಟ್ರಗಳು ಆದಾಯ ಗಳಿಸುವ ಎಲ್ಲಾ ಸಾಧ್ಯತೆಗಳಿವೆ.

ಏಷ್ಯಾಕಪ್ ಟೂರ್ನಿಯ ಆತಿಥ್ಯವನ್ನು ಆರಂಭದಲ್ಲಿ ಪಾಕಿಸ್ತಾನಕ್ಕೆ ನೀಡಲಾಗಿತ್ತು. ಈ ವರ್ಷದ ಸೆಪ್ಟೆಂಬರ್‌ನಲ್ಲಿ ಟೂರ್ನಿ ನಿಗದಿಯಾಗಿತ್ತು. ಆದರೆ ಉಭಯ ರಾಷ್ಟ್ರಗಳ ನಡುವಿನ ರಾಜತಾಂತ್ರಿಕ ಸಂಘರ್ಷದಿಂದಾಗಿ ಭಾರತ ತಂಡವು ಪಾಕಿಸ್ತಾನಕ್ಕೆ ತೆರಳುವುದಿಲ್ಲ ಎಂದು ಎಸಿಸಿ ಅಧ್ಯಕ್ಷರೂ ಆಗಿರುವ ಶಾ ಹೇಳಿದ್ದರು.

ಪ್ರೈಮ್ ವಾಲಿಬಾಲ್ ಲೀಗ್: ಬೆಂಗಳೂರಿಗೆ ನಿರಾಸೆ

ಕೋಲ್ಕತ್ತ ತಂಡ ಶುಭಾರಂಭ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಚುರುಕಿನ ಆಟವಾಡಿದ ಕೋಲ್ಕತ್ತ ಥಂಡರ್‌ಬೋಲ್ಟ್ಸ್ ತಂಡದವರು 'ರೂಪೇ ಪ್ರೈಮ್ ವಾಲಿಬಾಲ್ ಲೀಗ್'ನಲ್ಲಿ ಶುಭಾರಂಭ ಮಾಡಿದರು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತದ ತಂಡ 3–2 ರಲ್ಲಿ ಬೆಂಗಳೂರು ಟಾರ್ಪಿಡೋಸ್ ತಂಡವನ್ನು ಮಣಿಸಿತು.

ಕೋಲ್ಕತ್ತ ತಂಡ ಮೊದಲ ಮೂರು ಸೆಟ್‌ಗಳನ್ನು 15–11, 15–11, 15–14 ರಲ್ಲಿ ಜಯಿಸಿ ಗೆಲುವು ಖಚಿತಪಡಿಕೊಂಡಿತು. ಮಹತ್ವ ಕಳೆದುಕೊಂಡು ಕೊನೆಯ ಎರಡು ಸೆಟ್‌ಗಳನ್ನು ಟಾರ್ಪಿಡೋಸ್ ತಂಡ 15–10, 15–14 ರಲ್ಲಿ ತನ್ನದಾಗಿಸಿ ಸಮಾಧಾನಪಟ್ಟುಕೊಂಡಿತು.

ಜಂಷಾದ್, ಕೋಡಿ ಕಾಲ್ಡ್‌ವೆಲ್, ದೀಪೇಶ್ ಮತ್ತು ವಿನೀತ್ ಕುಮಾರ್ ಅವರು ಥಂಡರ್‌ಬೋಲ್ಟ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮೊದಲ ಎರಡು ಸೆಟ್‌ಗಳನ್ನು ಕೋಲ್ಕತ್ತದ ತಂಡ ಸುಲಭವಾಗಿ ತನ್ನದಾಗಿಸಿಕೊಂಡಿತು. ಮೂರನೇ ಸೆಟ್‌ನಲ್ಲಿ ತುರುಸಿನ ಹೋರಾಟ ನಡೆಯಿತು. 11–13 ರಲ್ಲಿ ಹಿನ್ನಡೆಯಲ್ಲಿದ್ದ ಬೆಂಗಳೂರು 13–13 ರಲ್ಲಿ ಸಮಬಲ ಸಾಧಿಸಿತು. ಅನಂತರ ಶಿಸ್ತಿನ ಆಟವಾಡಿದ ಕೋಲ್ಕತ್ತ ತಂಡ ಗೆದ್ದಿತು.


ಕೋಲ್ಕತ್ತ ಥಂಡರ್ ಬೋಲ್ಟ್ಸ್ ತಂಡದ ಆಟಗಾರ ವಿನೀತ್ ಕುಮಾರ್ ಹೊಡೆದ ಚೆಂಡನ್ನು ಎದುರಾಳಿ ಬೆಂಗಳೂರು ಟಾರ್ಪಿಡೋಸ್‌ನ ಸ್ವೆಟಿಲಿನ್ ಸ್ವೆಟನೊವ್ ಹಾಗೂ ಸುಧೀರ್ ಶೆಟ್ಟಿ ಬ್ಲಾಕ್ ಮಾಡುವ ಪ್ರಯತ್ನ ಮಾಡಿದರು – ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ನಾಲ್ಕನೇ ಸೆಟ್‌ನಲ್ಲಿ ಬೆಂಗಳೂರು 11–5 ರ ಮುನ್ನಡೆ ಪಡೆದು ಎದುರಾಳಿಗಳ ಮೇಲೆ ಒತ್ತಡ ಹೇರಿತು. ಆ ಬಳಿಕ ಒಂದಷ್ಟು ಪಾಯಿಂಟ್ಸ್ ಬಿಟ್ಟುಕೊಟ್ಟಿತಾದರೂ, ಸೆಟ್ ಜಯಿಸಿತು. ಕೊನೆಯ ಸೆಟ್‌ನಲ್ಲೂ ತೀವ್ರ ಪೈಪೋಟಿ ಕಂಡುಬಂತು. ಬೆಂಗಳೂರು ತಂಡದ ಸ್ವೆಟಿಲಿನ್ ಸ್ವೆಟನೊವ್, ಪಂಕಜ್ ಮತ್ತು ಸುಧೀರ್ ಮಿಂಚಿದರು.

ಇಂದಿನ ಪಂದ್ಯ: ಮುಂಬೈ ಮಿಟಿಯೋರ್ಸ್– ಕ್ಯಾಲಿಕಟ್ ಹೀರೋಸ್
ಆರಂಭ: ಸಂಜೆ 7
ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ರಣಜಿ ಕ್ರಿಕೆಟ್: ಕರ್ನಾಟಕ–ಸೌರಾಷ್ಟ್ರ ಸೆಮಿ ಸೆಣಸು

ರಾಜ್‌ಕೋಟ್: ಸೌರಾಷ್ಟ್ರ ತಂಡದವರು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಪಂಜಾಬ್ ತಂಡವನ್ನು 71 ರನ್‌ಗಳಿಂದ ಮಣಿಸಿ ಸೆಮಿಫೈನಲ್ ಪ್ರವೇಶಿಸಿದರು.

ಫೆ.8 ರಿಂದ 12ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ನಾಲ್ಕರಘಟ್ಟದ ಹಣಾಹಣಿಯಲ್ಲಿ ಸೌರಾಷ್ಟ್ರ ತಂಡ ಕರ್ನಾಟಕವನ್ನು ಎದುರಿಸಲಿದೆ. ಇಂದೋರ್‌ನಲ್ಲಿ ನಡೆಯಲಿರುವ ಇನ್ನೊಂದು ಸೆಮಿಫೈನಲ್‌ನಲ್ಲಿ ಮಧ್ಯಪ್ರದೇಶ– ಬಂಗಾಳ ಪೈಪೋಟಿ ನಡೆಸಲಿವೆ.

ರಾಜ್‌ಕೋಟ್‌ನಲ್ಲಿ ನಡೆದ ಪಂದ್ಯದಲ್ಲಿ ಗೆಲುವಿಗೆ 252 ರನ್‌ಗಳ ಗುರಿ ಪಡೆದಿದ್ದ ಪಂಜಾಬ್, ಅಂತಿಮ ದಿನವಾದ ಶನಿವಾರ 180 ರನ್‌ಗಳಿಗೆ ಆಲೌಟಾಯಿತು.

2 ವಿಕೆಟ್‌ಗಳಿಗೆ 52 ರನ್‌ಗಳಿಂದ ಆಟ ಮುಂದುವರಿಸಿದ್ದ ಪಂಜಾಬ್ ತಂಡ, ಪಾರ್ಥ್ ಭುತ್ (89ಕ್ಕೆ5) ಮತ್ತು ಧರ್ಮೇಂದ್ರಸಿನ್ಹ ಜಡೇಜ (56ಕ್ಕೆ 3) ಅವರ ಬಿಗುವಾದ ದಾಳಿಗೆ ನಲುಗಿತು. ಪುಖ್ರಾಜ್ ಮಾನ್ (42) ಹಾಗೂ ಮನ್‌ದೀಪ್ ಸಿಂಗ್ (45) ಹೊರತುಪಡಿಸಿ ಉಳಿದವರಿಗೆ ಸೌರಾಷ್ಟ್ರ ತಂಡದ ಶಿಸ್ತಿನ ಬೌಲಿಂಗ್ ಎದುರಿಸಲು ಆಗಲಿಲ್ಲ.

ಮೊದಲ ಇನಿಂಗ್ಸ್‌ನಲ್ಲಿ ಹಿನ್ನಡೆ ಅನುಭವಿಸಿದ್ದರೂ, ಸೌರಾಷ್ಟ್ರ ಅಮೋಘ ರೀತಿಯಲ್ಲಿ ಮರುಹೋರಾಟ ನಡೆಸಿ ಗೆಲುವು ಒಲಿಸಿಕೊಂಡಿತು. ಪಾರ್ಥ್ ಅವರ ಆಲ್‌ರೌಂಡ್ ಆಟ ತಂಡದ ಜಯದಲ್ಲಿ ನಿರ್ಣಾಯಕ ಪಾತ್ರ ವಹಿಸಿತು.

ಮೊದಲ ಇನಿಂಗ್ಸ್‌ನಲ್ಲಿ ಶತಕ (ಅಜೇಯ 111) ಮತ್ತು ಎರಡನೇ ಇನಿಂಗ್ಸ್‌ನಲ್ಲಿ ಅರ್ಧಶತಕ (51) ಗಳಿಸಿದ್ದ ಅವರು ಬೌಲಿಂಗ್‌ನಲ್ಲೂ ಕೈಚಳಕ ಮೆರೆದು 203 ರನ್‌ಗಳಿಗೆ ಒಟ್ಟು ಎಂಟು ವಿಕೆಟ್ ಪಡೆದುಕೊಂಡರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಸೌರಾಷ್ಟ್ರ: 303. ಪಂಜಾಬ್: 431. ಎರಡನೇ ಇನಿಂಗ್ಸ್: ಸೌರಾಷ್ಟ್ರ: 120.1 ಓವರ್‌ಗಳಲ್ಲಿ 379. ಪಂಜಾಬ್: 89.1 ಓವರ್‌ಗಳಲ್ಲಿ 180 (ಪುಖ್ರಾಜ್ ಮಾನ್ 42, ಮನ್‌ದೀಪ್ ಸಿಂಗ್ 45, ಅನ್ಮೋಲ್‌ಪ್ರೀತ್ ಸಿಂಗ್ 26, ಪಾರ್ಥ್ ಭುತ್ 89ಕ್ಕೆ 5, ಧರ್ಮೇಂದ್ರಸಿನ್ಹ ಜಡೇಜ 56ಕ್ಕೆ 3) ಫಲಿತಾಂಶ: ಸೌರಾಷ್ಟ್ರಕ್ಕೆ 71 ರನ್ ಗೆಲುವು

ಅಕಾಡೆಮಿಗೆ ಭದ್ರತೆಯಿಲ್ಲ: ಉಷಾ ಕಣ್ಣೀರು

ತಿರುವನಂತಪುರ/ ನವದೆಹಲಿ (ಪಿಟಿಐ): ಕೇರಳದ ಕೋಯಿಕ್ಕೋಡ್ ನಲ್ಲಿರುವ ತಮ್ಮ ಅಕಾಡೆಮಿಯ ಜಾಗವನ್ನು ಒತ್ತುವರಿ ಮಾಡಲಾಗುತ್ತಿದೆ ಎಂದು ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಆರೋಪಿಸಿದ್ದಾರೆ.

ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕಾಡೆಮಿಗೆ ಆಗುತ್ತಿರುವ ಅನ್ಯಾಯವನ್ನು ಹೇಳಿಕೊಂಡು ಕಣ್ಣೀರಿಟ್ಟರು.

'ಉಷಾ ಸ್ಕೂಲ್ ಆಫ್ ಅಥ್ಲೆಟಿಕ್ಸ್‌ನ ಜಾಗವನ್ನು ಅನ್ಯರು ಅತಿಕ್ರಮಿಸಿ ಕಟ್ಟಡ ನಿರ್ಮಿಸುತ್ತಿದ್ದಾರೆ. ಅವರನ್ನು ವಿಚಾರಿಸಿದರೆ ಸ್ಥಳೀಯ ಆಡಳಿತದ ಅನುಮತಿ ಇದೆ ಎಂದು ಹೇಳುತ್ತಿದ್ದಾರೆ. ಅಕಾಡೆಮಿಯಲ್ಲಿರುವ ಮಹಿಳಾ ಅಥ್ಲೀಟ್‌ಗಳಿಗೆ ರಕ್ಷಣೆ ಇಲ್ಲದಂತಾಗಿದೆ' ಎಂದು ದೂರಿದರು. ಅಕಾಡೆಮಿ ರಕ್ಷಣೆಗೆ ಕ್ರಮಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಲ್ಲಿ ಮನವಿ ಮಾಡಿದರು.

ಹಾಕಿ: ರೇನ್‌ಬೊ ಕ್ಲಬ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ರೇನ್‌ಬೊ ಹಾಕಿ ಕ್ಲಬ್ ತಂಡದವರು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ (ಕೆಎಸ್‌ಎಚ್‌ಎ) ಸೂಪರ್ ಡಿವಿಷನ್ ಹಾಕಿ ಟೂರ್ನಿಯಲ್ಲಿ ಜಯ ಗಳಿಸಿದರು.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ ರೇನ್‌ಬೊ 3-2ರಿಂದ 5ಸಿ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಮಣಿಸಿತು. ವಿಜೇತ ತಂಡದ ಪರ ಸೂರ್ಯ (15ನೇ ನಿಮಿಷ), ಕರ್ಣಶಿವ (30ನೇ ನಿ.) ಮತ್ತು ಬಾಬುಕರಣ್ (44ನೇ ನಿ.) ಗೋಲು ಗಳಿಸಿದರು.

5ಸಿ ಸ್ಪೋರ್ಟ್ಸ್ ಕ್ಲಬ್ ಪರ ಎರಡೂ ಗೋಲುಗಳನ್ನು ಅಬ್ಬಾಸ್ (16 ಮತ್ತು 39ನೇ ನಿ.) ದಾಖಲಿಸಿದರು.

ಇನ್ನೊಂದು ಪಂದ್ಯದಲ್ಲಿ ವಿ.ರಾಜಾ ಹಾಕಿ ಕ್ಲಬ್ 4–2ರಿಂದ ಶ್ಲೋಕ್ ಹಾಕಿ ಕ್ಲಬ್ ಎದುರು ಗೆದ್ದಿತು. ವಿ.ರಾಜಾ ತಂಡಕ್ಕಾಗಿ ನೀರಜ್ (20ನೇ ನಿ.), ಗುರುಪ್ರೀತ್ (36 ಮತ್ತು 40ನೇ ನಿ.) ಮತ್ತು ದೀಪಕ್ (46ನೇ ನಿ.) ಗೋಲು ದಾಖಲಿಸಿದರು.

ಶ್ಲೋಕ್ ತಂಡಕ್ಕಾಗಿ ಯಶವಂತ್ (23ನೇ ನಿ.) ಮತ್ತು ಸುಗನ್ (27ನೇ ನಿ.) ಗೋಲು ಹೊಡೆದರು.

ಭಾನುವಾರ ನಡೆಯುವ ಪಂದ್ಯದಲ್ಲಿ 5ಸಿ ಸ್ಪೋರ್ಟ್ಸ್– ಜೆಎಫ್‌ಎಚ್‌ಎ ಸೆಣಸಲಿವೆ.

ಉದ್ದೀಪನ ಮದ್ದು: ದೀಪಾಗೆ ನಿಷೇಧ

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಸೇವನೆ ಸಾಬೀತಾದ ಕಾರಣ ಭಾರತದ ಜಿಮ್ನಾಸ್ಟ್ ಸ್ಪರ್ಧಿ ದೀಪಾ ಕರ್ಮಾಕರ್ ಅವರ ಮೇಲೆ 21 ತಿಂಗಳ ನಿಷೇಧ ಹೇರಲಾಗಿದೆ.

ಅಂತರರಾಷ್ಟ್ರೀಯ ಜಿಮ್ನಾಸ್ಟಿಕ್ಸ್ ಫೆಡರೇಷನ್ (ಎಫ್‌ಐಜಿ), ಉದ್ದೀಪನ ಮದ್ದು ತಡೆಗೆ ನಿಯೋಜಿಸಿರುವ ಇಂಟರ್‌ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿಯು (ಐಟಿಎ) ದೀಪಾ ಅವರನ್ನು ಉದ್ದೀಪನ ಮದ್ದು ಪರೀಕ್ಷೆಗೆ ಒಳಪಡಿಸಿತ್ತು.

2021ರ ಅಕ್ಟೋಬರ್‌ನಲ್ಲಿ ಸಂಗ್ರಹಿಸಿದ್ದ ಸ್ಯಾಂಪಲ್‌ನಲ್ಲಿ, ವಿಶ್ವ ಉದ್ದೀಪನ ಮದ್ದು ತಡೆ ಸಂಸ್ಥೆಯ (ವಾಡಾ) ನಿಷೇಧಿತ ಮದ್ದುಗಳ ಪಟ್ಟಿಯಲ್ಲಿರುವ 'ಹಿಜೆನಮೈನ್' ಅಂಶ



ಇರುವುದು ಸಾಬೀತಾಗಿತ್ತು.

'ದೀಪಾ ಮೇಲೆ 21 ತಿಂಗಳ ನಿಷೇಧ ಹೇರಲಾಗಿದೆ. ನಿಷೇಧದ ಅವಧಿ 2021ರ ಅ. 11 ರಂದು ಆರಂಭಗೊಂಡಿದ್ದು, 2023ರ ಜುಲೈ 10 ರಂದು ಕೊನೆಗೊಳ್ಳಲಿದೆ' ಎಂದು ಐಟಿಎ ಪ್ರಕಟಣೆ ತಿಳಿಸಿದೆ. 'ದೀಪಾ ಅವರ 2021 ಅ.11ರ ಬಳಿಕದ ಎಲ್ಲ ಸ್ಪರ್ಧೆಗಳ ಫಲಿತಾಂಶಗಳನ್ನು ರದ್ದುಗೊಳಿಸಲಾಗುತ್ತದೆ' ಎಂದು ಹೇಳಿದೆ.

ದೀಪಾ ಅವರನ್ನು ಎಫ್‌ಐಜಿ ಕಳೆದ ವರ್ಷ ಫೆಬ್ರುವರಿ ತಿಂಗಳಲ್ಲೇ ಅಮಾನತಿನಲ್ಲಿಟ್ಟಿತ್ತು. ಆದರೆ ಅಮಾನತಿಗೆ ಏನು ಕಾರಣ ಎಂಬುದನ್ನು ಭಾರತ ಜಿಮ್ನಾಸ್ಟಿಕ್ ಫೆಡರೇಷನ್ (ಜಿಎಫ್‌ಐ) ಸ್ಪಷ್ಟಪಡಿಸಿರಲಿಲ್ಲ. 'ಅಮಾನತು ಕ್ರಮವು ಉದ್ದೀಪನ ಮದ್ದು ಸೇವನೆಗೆ ಸಂಬಂಧಿಸಿದ್ದಲ್ಲ. ಅಶಿಸ್ತು ಅಥವಾ ನಿಯಮ ಉಲ್ಲಂಘನೆಗಾಗಿ ಇಂತಹ ಕ್ರಮ ತೆಗೆದುಕೊಂಡಿರಬೇಕು' ಎಂದಷ್ಟೇ ಹೇಳಿತ್ತು.

'ಉದ್ದೀಪನ ಮದ್ದು ಉದ್ದೇಶಪೂರ್ವಕವಾಗಿ ತೆಗೆದುಕೊಂಡಿಲ್ಲ. ಈ ವಿವಾದ ತ್ವರಿತಗತಿಯಲ್ಲಿ ಬಗೆಹರಿಯಬೇಕೆಂಬ ಉದ್ದೇಶದಿಂದ ತಾತ್ಕಾಲಿಕ ಅಮಾನತಿಗೆ ಒಳಗಾಗಿದ್ದೆ' ಎಂದು ದೀಪಾ ಅವರು 'ಟ್ವೀಟ್' ಮಾಡಿದ್ದಾರೆ.

2016ರ ರಿಯೊ ಒಲಿಂಪಿಕ್ಸ್‌ನ ವಾಲ್ಟ್ ವಿಭಾಗದಲ್ಲಿ 4ನೇ ಸ್ಥಾನ ಪಡೆದು ದೀಪಾ ಗಮನ ಸೆಳೆದಿದ್ದರು.

ಬೆಂಗಳೂರು ಎಫ್‌ಸಿಗೆ ಎಟಿಕೆಎಂಬಿ ಸವಾಲು

ಬೆಂಗಳೂರು: ಸತತ ನಾಲ್ಕು ಪಂದ್ಯಗಳಲ್ಲಿ ಗೆದ್ದು ಆತ್ಮವಿಶ್ವಾಸದ ಗಣಿಯಾಗಿರುವ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಪಂದ್ಯದಲ್ಲಿ ಭಾನುವಾರ ಎಟಿಕೆ ಮೋಹನ್ ಬಾಗನ್ ಸವಾಲು ಸವಾಲು ಎದುರಿಸಲಿದೆ.

ಪ್ಲೇ ಆಫ್ ಪ್ರವೇಶದ ಅಂಚಿನಲ್ಲಿರುವ ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ಎಫ್‌ಸಿ (ಬಿಎಫ್‌ಸಿ), ಕೋಲ್ಕತ್ತದ ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದಲ್ಲೂ ಗೆಲುವಿನ ವಿಶ್ವಾಸದಲ್ಲಿದೆ.

ಈ ಆವೃತ್ತಿಯಲ್ಲಿ ಉಭಯ ತಂಡಗಳು ಮುಖಾಮುಖಿಯಾದ ಮೊದಲ ಪಂದ್ಯದಲ್ಲಿ ಎಟಿಕೆಎಂಬಿ 1–0ಯಿಂದ ಜಯಿಸಿತ್ತು. ಟೂರ್ನಿಯಲ್ಲಿ ತಂಡದ ಪರ ಅತಿ ಹೆಚ್ಚು (7) ಗೋಲು ಗಳಿಸಿರುವ ಡಿಮಿಟ್ರಿ ಪೆಟ್ರಾಟೊಸ್ ಅವರನ್ನು ಬೆಂಗಳೂರು ತಂಡ ಕಟ್ಟಿಹಾಕಬೇಕಿದೆ. ಉತ್ತಮ ಲಯದಲ್ಲಿರುವ ಶಿವಶಕ್ತಿ ನಾರಾಯಣನ್ ಮತ್ತು ರಾಯ್‌ಕೃಷ್ಣ ಅವರು ಬಿಎಫ್‌ಸಿ ತಂಡದ ಶಕ್ತಿಯಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಗುಜರಾತ್ ಜೈಂಟ್ಸ್‌ಗೆ ರಚೆಲ್ ಕೋಚ್


ರಚೇಲ್ ಹೇನ್ಸ್ ಎಪಿ ಚಿತ್ರ

ಅಹಮದಾಬಾದ್: ಆಸ್ಟ್ರೇಲಿಯಾದ ಮಾಜಿ ಆಟಗಾರ್ತಿ ರಚೆಲ್ ಹೇನ್ಸ್ ಅವರು ಮುಂಬರುವ ವಿಮೆನ್ಸ್ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಗುಜರಾತ್ ಜೈಂಟ್ಸ್ ತಂಡಕ್ಕೆ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದಾರೆ.

ಅದಾನಿ ಸ್ಪೋರ್ಟ್ಸ್‌ಲೈನ್ ಮಾಲೀಕತ್ವದಲ್ಲಿರುವ ಫ್ರಾಂಚೈಸ್ ಶನಿವಾರ ಕೋಚ್‌ಗಳ ತಂಡವನ್ನು ಪ್ರಕಟಿಸಿದೆ.

ಭಾರತದ ಮಾಜಿ ಸ್ಪಿನ್ನರ್ ನೂಶಿನ್ ಅಲ್ ಖಾದೀರ್ ಬೌಲಿಂಗ್ ಕೋಚ್, ಆಲ್‌ರೌಂಡರ್ ತುಷಾರ್ ಅರೋಠೆ ಅವರು ಬ್ಯಾಟಿಂಗ್ ಕೋಚ್ ಮತ್ತು ಆಸ್ಟ್ರೇಲಿಯಾದ ಗಾವನ್ ಟ್ವಿನಿಂಗ್ ಅವರನ್ನು ಫೀಲ್ಡಿಂಗ್ ತರಬೇತುದಾರರಾಗಿ ನೇಮಿಸಲಾಗಿದೆ.

ಮುಂಬೈ ರೇಸ್

ಸೂಪರ್‌ನ್ಯಾಚುರಲ್ – ಕಿಂಗ್ಸ್ ರಾನ್ಸಮ್ ನಡುವೆ ನೇರ ಸ್ಪರ್ಧೆ

ಇಂಡಿಯನ್ ಡರ್ಬಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪೆಸಿ ಶ್ರಾಫ್ ತರಬೇತಿಯಲ್ಲಿ ಪಳಗಿರುವ ಕಿಂಗ್ಸ್ ರಾನ್ಸಮ್ ಮತ್ತು ಸೂಪರ್‌ನ್ಯಾಚುರಲ್ ನಡುವೆ ನೇರ ಸ್ಪರ್ಧೆ ಇದ್ದು ರೋಚಕ ಫಲಿತಾಂಶ ಬರುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಕ್ಯಾಪಿಟೋಲಿಯಮ್ 3, ಸ್ಮೈಲ್ಸ್ ಆಫ್ ಫಾರ್ಚೂನ್ 6, ಬಿಗ್ ರೆಡ್ 2
2ನೇ ರೇಸ್: ಅಹೆಡ್ ಆಫ್ ಮೈ ಟೈಮ್ 1, ನಾರ್ದರನ್ ಲೈಟ್ಸ್ 2, ಸಕ್ಸಸರ್ 5
3ನೇ ರೇಸ್: ವೈಕಿಕಿ 2, ಎಂಡ್ಯೂರೆನ್ಸ್ 4, ಸೀ ದಿ ಸನ್ 5
4ನೇ ರೇಸ್: ಜ್ಯೂಲಿಯೆಟ್ 1, ಕ್ಯಾಪ್ರಿಸ್ಕ 4, ಇನ್ ಕಂಟೆನ್ಷನ್ 6
5ನೇ ರೇಸ್: ಫೈಟಾನ್ 4, ದಿ ಜನರಲ್ 6, ಡೆಮೊಕ್ರಸಿ 7
6ನೇ ರೇಸ್: ಕಿಂಗ್ಸ್ ರಾನ್ಸಮ್ 16, ಸೂಪರ್‌ನ್ಯಾಚುರಲ್ 12, ಒನ್ಸ್ ಯು ಗೋ ಬ್ಲಾಕ್ 9
7ನೇ ರೇಸ್: ಸನ್ ಆಫ್ ಎ ಗನ್ 1, ಬೇಬಿ ಬಜೂಕ 2, ಪ್ರೈಡ್ಸ್ ಏಂಜಲ್ 5
8ನೇ ರೇಸ್: ಫಿಂಚ್ 1, ಟೈರೋನ್ ಬ್ಲಾಕ್ 3, ಮೈ ಪ್ರಿನ್ಸೆಸ್ 2
9ನೇ ರೇಸ್: ಡೆಮೆಟ್ರಿಯಸ್ 6, ಮೊಮೆಂಟ್ ಆಫ್ ಮ್ಯಾಡ್‌ನೆಸ್ 1, ಸ್ಪಿರಿಟ್ ಬೇ 7

ಉತ್ತಮ ಬೆಟ್: ಜ್ಯೂಲಿಯೆಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	3,4,5	6,7,8	7,8,9